ಉಪನಿಷನ್ಮಾಲಾ. ೧.

ಈಶಾವಾಸ್ಯ

ಗ್ರಂಥಕರ್ತರು

ಹೆಚ್. ಎನ್. ರಾಘವೇಂದ್ರಾಚಾರ್, ಎಂ.ಎ., ಡಿ.ಒ.ಪಿ.

ಅರಮನೆ ಧರ್ಮಾಧಿಕಾರಿಗಳು

ಉಪನಿಷನ್ಮಾಲಾ. ೧.

ಈಶಾವಾಸ್ಯ

ಗ್ರಂಥಕರ್ತರು

ಹೆಚ್. ಎನ್. ರಾಘವೇಂದ್ರಾಚಾರ್, M.A.,D.O.C.
ಅರಮನೆ ಧರ್ಮಾಧಿಕಾರಿಗಳು
Retd. Assistant Professor of Philosophy
and
Assistant Director of Indology
Maharaja's College, Mysore.

ಮೊದಲನೆಯ ಮುದ್ರಣ 1957

ಬೆಲೆ: ರೂ. ೧—೮—೦

ಮುದ್ರಣ:
ವಾಣೀ ಪ್ರೆಸ್ ಮೈಸೂರು

ಉಪೋದ್ಘಾತ

ಈಶಾವಾಸ್ಯೋಪನಿಷತ್ತು ಪ್ರಸಿದ್ಧ ದಶೋಪನಿಷತ್ತುಗಳಲ್ಲಿ ಒಂದು. ದಶೋಪನಿಷತ್ತುಗಳಿಗೆ ವಿವಿಧ ವೇದಾಂತ ಮರ್ಯಾದೆಯ ಭಾಷ್ಯ ಮತ್ತು ವ್ಯಾಖ್ಯಾನ ಪರಂಪರೆ ಇದೆ. ಇವುಗಳಲ್ಲಿ ಪ್ರಕೃತ ಲೇಖಕನಿಗೆ ತೋರುವಂತೆ ಶ್ರೀಮನ್ಮಧ್ವಾಚಾರ್ಯರ ಭಾಷ್ಯವು ಕಟ್ಟಕಡೆಯ ಭಾಷ್ಯವಾಗಿ ತನಗಿಂತ ಪೂರ್ವದಲ್ಲಿ ಪ್ರಸಕ್ತವಾದ ಎಲ್ಲ ಭಾಷ್ಯಗಳ ಗುಣಭಾಗವನ್ನು ಒಳಗೊಂಡು ಉಪನಿಷತ್ತಿನ ಹೃದಯವನ್ನು ತಿಳಿಸುವುದಾಗಿ ಉಪನಿಷದ್ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗೆ ಉಪಕಾರಕವಾಗಿರುತ್ತದೆ. ಆದರೂ ಭಾಷ್ಯಭಾವವನ್ನು ಗ್ರಹಿಸಲು ಅಧ್ಯಯನದ ಬಲ ಬೇಕು. ಈ ಬಲವನ್ನು ಯಥಾಯೋಗ್ಯವಾಗಿ ಶ್ರೀ ರಾಘವೇಂದ್ರಸ್ವಾಮಿಗಳು ರಚಿಸಿದ ಖಂಡಾರ್ಥವು ಕೊಡುತ್ತದೆ.

ಈಶಾವಾಸ್ಯೋಪನಿಷನ್ಮಂತ್ರವನ್ನು ಯಥಾವತ್ತಾಗಿ ಅರ್ಥ ಮಾಡಿಕೊಳ್ಳುವುದೇ ಈ ಸ್ಮರಣಾತ್ಮಕವಾದ ಲೇಖನದ ಉದ್ದೇಶ. ಈ ಉದ್ದೇಶ ಸಾಫಲ್ಯಕ್ಕೋಸ್ಕರ ಇಲ್ಲಿ ಅನುಸರಿಸಿರುವ ಕ್ರಮವಿದು. ಮೊದಲು ಖಂಡಾರ್ಥದಂತೆ ಮಂತ್ರದ ಪರಿಚಯ; ಅನಂತರ ಮಂತ್ರಪಠನ; ಅನಂತರ ಖಂಡಾರ್ಥಾನುವಾದ; ಅನಂತರ ಮಂತ್ರ ಪದವಿಭಾಗ; ಅನಂತರ ಮಂತ್ರಸ್ಥ ಪದಗಳ ಅನ್ವಯ; ಅನಂತರ ಖಂಡಾರ್ಥದ ಅರ್ಥಾನುವಾದ; ಈ ಮಧ್ಯೆ ಅಲ್ಲಲ್ಲಿಯೇ ಸೂಚನೆ ಎಂಬ ಆಕಾರದಲ್ಲಿ ಕ್ಲಿಷ್ಟವಾಗಿ ಕಾಣಬಹುದಾದ ವಿಷಯದ ವಿವರಣೆ; ಅನಂತರ ಭಾಷ್ಯ; ಅನಂತರ ಭಾಷ್ಯಾರ್ಥ; ಅನಂತರ ಕ್ಲಿಷ್ಟವಿಷಯ ವಿವರಣೆಗಾಗಿ ಸೂಚನೆ; ಕಟ್ಟಕಡೆಯಲ್ಲಿ ಫಲಿತಮಂತ್ರಾರ್ಥ, ಹೀಗೆ ಪ್ರತಿಮಂತ್ರದ ಅರ್ಥವನ್ನು ತಿಳಿಯುವ ಸಂದರ್ಭದ ಕ್ರಮವನ್ನು ಅನುಸರಿಸಿದೆ. ಭಾಷ್ಯವು ಗಂಭೀರ ಶೈಲಿಯುಳ್ಳುದಾದುದರಿಂದ ಮೊದಲು ಖಂಡಾರ್ಥದಿಂದ ಮಂತ್ರಾರ್ಥಮಾಡಿಕೊಂಡು ಅದರ ದೃಢತೆಯನ್ನು ಭಾಷ್ಯದಿಂದ ಮಾಡಿಕೊಳ್ಳಲು ಅನುಕೂಲವಾಗುವುದೆಂಬ ಭಾವದಿಂದ ಖಂಡಾರ್ಥದ ಅಧ್ಯಯನಾನಂತರ ಭಾಷ್ಯಾಧ್ಯಯನವಿದೆ.

ಖಂಡಾರ್ಥ ಮತ್ತು ಭಾಷ್ಯಗ್ರಂಥಗಳನ್ನು ಅನುವಾದಮಾಡಿ ಪ್ರತಿಪದಾರ್ಥವನ್ನು ನಿರೂಪಿಸಿದೆ. ಸಂಸ್ಕೃತದ ಧಾಟಿಗೂ ಕನ್ನಡದ ಧಾಟಿಗೂ

ಸ್ವಲ್ಪವ್ಯತ್ಯಾಸ ಇರುವುದನ್ನು ಅಲ್ಲಲ್ಲಿಯೇ ನೋಡಬಹುದು. ಅದನ್ನು ಓದುವ ಕಾಲದಲ್ಲಿ ಸರಿಪಡಿಸಿಕೊಳ್ಳಬೇಕು.

ಇದು ಒಟ್ಟು ಪ್ರಮೇಯವನ್ನು ಪರಿಚಯಕ್ಕೆ ತಂದುಕೊಡುವ ಲೇಖನವಲ್ಲ. ಹಾಗೆ ವಿದ್ಯಾರ್ಥಿಯಾದವನು ಅದರಲ್ಲಿಯೂ ಬ್ರಹ್ಮವಿದ್ಯೆಯನ್ನು ಅಭ್ಯಾಸಿಸುವಾಗ ತಿಳಿಯುವುದಕ್ಕಿಂತಲೂ ಮೊದಲೇ ಪ್ರಮೇಯಪರಿಚಯ ಮಾಡಿಕೊಳ್ಳಬಾರದು. ಹೀಗೆ ಪ್ರಮೇಯ ಪರಿಚಯ ಮಾಡಿಕೊಳ್ಳುವುದೇ ನಾನು ತಿಳಿದಿದ್ದೇನೆ ಎಂಬ ಅಹಂಭಾವ ಹುಟ್ಟಿಸಿ ಜ್ಞಾನಕ್ಕೆ ಪ್ರಯತ್ನವೇ ಹುಟ್ಟದಹಾಗೆ ಮಾಡುವುದು. ಶಾಸ್ತ್ರವಿಚಾರದಿಂದ ಪ್ರಮೇಯ ಜ್ಞಾನವಾಗಬೇಕೇ ಹೊರತು ನಮ್ಮಲ್ಲಿಯೇ ಹುಟ್ಟಿದ ವಿಚಾರದಿಂದ ಸಿದ್ಧವಲ್ಲದ ಪ್ರಮೇಯದ ಪರಿಚಯ ಸಾಧುವಲ್ಲ ಎಂದು ಅಭಿಪ್ರಾಯ.

ಈಶಾವಾಸ್ಯೋಪನಿಷತ್ತು ಒಟ್ಟಿನಮೇಲೆ ಈಶನು ಸ್ವತಂತ್ರ, ಜಗತ್ತು ಅವನ ಆವಾಸ್ಯವಾಗಿ ಪರತಂತ್ರ ಎಂಬ ತತ್ತ್ವವನ್ನು ಪ್ರತಿಪಾದಿಸುವುದು. ಇದರಲ್ಲಿ ಒಟ್ಟು ೨೦ ಮಂತ್ರಗಳಿರುವುವು. ಇವುಗಳಲ್ಲಿ ತತ್ತ್ವವನ್ನು ಗ್ರಹಿಸಲು ಆವಶ್ಯಕವಾದ ಅಧಿಕಾರ, ತತ್ತ್ವಗ್ರಹಣಮಾಡಲು ಪ್ರಯತ್ನವಿಲ್ಲದಿರುವುದು ಅನರ್ಥಕರ ಎಂಬ ಭಾವ, ತತ್ತ್ವಸ್ವರೂಪ, ತತ್ತ್ವಜ್ಞಾನಕ್ಕೆ ವಿರೋಧಿಯಾದ ಅಜ್ಞಾನ ಮಿಥ್ಯಾಜ್ಞಾನದ ನಿರಾಕರಣೆಯ ಆವಶ್ಯಕತೆ, ತತ್ತ್ವವಿದ್ಯೆಯಿಂದ ಆಗುವ ಶ್ರೇಯಸ್ಸು, ಈ ಶ್ರೇಯಸ್ಸಾಧನ ಪರಮಾತ್ಮನ ಸರ್ವಕರ್ತೃತ್ವ ಸರ್ವಸಂಹಾರಕರ್ತೃತ್ವ ಜ್ಞಾನರೂಪವಾದ ಸ್ವತಂತ್ರ ಪರಮಾತ್ಮನ ಜ್ಞಾನ, ಈ ಜ್ಞಾನವೇ ಪರಮಾತ್ಮನ ಅನುಗ್ರಹ, ಈ ಅನುಗ್ರಹವೇ ಮೋಕ್ಷಸಾಧನ, ಈ ಅನುಗ್ರಹಕ್ಕೋಸ್ಕರ ಅಧಿಕಾರಿಯು ಮಾಡಬೇಕಾದ ಭಗವತ್ಪ್ರಾರ್ಥನೆ. ಈ ಪ್ರಾರ್ಥನೆಗಾಗಿ ಆಯಾ ಪ್ರತೀಕದಲ್ಲಿ ಸರ್ವನಿಯಾಮಕ ಪರಮಾತ್ಮನ ಧ್ಯಾನ— ಇವು ಪ್ರತಿಪಾದಿತವಾಗಿರುವುವು.

ಭಾಷ್ಯಕಾರರು ಮಂತ್ರದ ಯಥಾವತ್ತಾದ ಅರ್ಥ ಮಾಡಿಕೊಳ್ಳಬೇಕೆಂಬ ಒಂದೇ ಧ್ಯೇಯವುಳ್ಳವರು. ಈ ನಿಮಿತ್ತ ತಾವು ಮಾಡುವ ಮಂತ್ರಾರ್ಥಕ್ಕೆ ವೈದಿಕನ್ಯಾಯದ ಬೆಂಬಲದ ಜೊತೆಗೆ ವೈದಿಕವಾದ ಅರ್ಥದ ಪರಂಪರೆಯ ಬೆಂಬಲವನ್ನು ತೋರಿಸುವುದರ ಮೂಲಕ ಅಧಿಕಾರಿಗೆ

ನಿರ್ದೋಷವಾದ ಮಂತ್ರಾರ್ಥಜ್ಞಾನವನ್ನು ಹುಟ್ಟಿಸುವರು. ಇದನ್ನು ಖಂಡಾರ್ಥಕಾರರು ಅನುಷ್ಠಾನಕ್ಕೆ ತಂದುಕೊಂಡು ಶ್ರೇಯಸ್ಸಾಧನ ಮಾಡಿಕೊಳ್ಳುವ ರೂಪದಲ್ಲಿ ಖಂಡಾರ್ಥವನ್ನು ರಚಿಸಿರುವರು. ಈ ಅಧ್ಯಯನವೇ ಅಧಿಕಾರಿಯ ಶ್ರೇಯಸ್ಸಾಧನ.

ಈಶಾವಾಸ್ಯಭಾಷ್ಯದಲ್ಲಿ ಭಾಷ್ಯಕಾರರು ತಾವು ಹೇಳುವ ಮಂತ್ರಾರ್ಥವು ಅನಾದಿ ಪರಂಪರಾಪ್ರಾಪ್ತವೆಂದು ಉಪಪಾದಿಸಲು ಕೆಳಕಂಡ ಶ್ರುತಿ ಸ್ಮೃತಿಗಳನ್ನು ಉದಹರಿಸಿರುವರು. ಬ್ರಹ್ಮಾಂಡ, ಭಾಗವತ, ನಾರದೀಯ, ವಾಮನ, ತತ್ತ್ವಸಂಹಿತಾ, ಸೌಕರಾಯಣಶ್ರುತಿ, ಪಿಪ್ಪಲಾದಶಾಖಾ, ವಾರಾಹ, ಕೌರ್ಮ, ರಾಮಸಂಹಿತಾ, ಬ್ರಹ್ಮತರ್ಕ, ಸ್ಕಾಂದ ಎಂಬಿವು.

ಈಶಾವಾಸ್ಯೋಪನಿಷತ್ತು ಶ್ರುತಿಯ ಒಂದು ಭಾಗ. ಶ್ರುತಿಗೆ ಶಾಸ್ತ್ರವೆಂದು ಹೆಸರು. ಇದರಲ್ಲಿ ಅಭಿಪ್ರಾಯವಿಶೇಷವಿರುವುದು. ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದವರಿಗೆ ನ್ಯಾಯವಾದ ಶಾಸ್ತ್ರಾಧ್ಯಯನ ಮಾಡದೇ ಉಪನಿಷನ್ಮಂತ್ರವನ್ನು ಅರ್ಥ ಮಾಡಿಕೊಳ್ಳಲು ಹೊರಟರೆ ಯಾವುದೋ ಒಂದು ಅರ್ಥವಾಗುವುದು. ಆದರೆ ಇದನ್ನೆ ಮಂತ್ರಾರ್ಥವೆಂದು ತಿಳಿಯಬಾರದು. ಮಂತ್ರಾರ್ಥವಾಗುವುದು ಶಾಸ್ತ್ರರೂಪವಾಗಿ ಮಂತ್ರಾಧ್ಯಯನ ಮಾಡುವುದರಿಂದ. ಈ ರೂಪವಾಗಿ ಅಧ್ಯಯನ ಮಾಡುವುದೆಂದರೆ, ಬ್ರಹ್ಮಮೀಮಾಂಸಾಶಾಸ್ತ್ರದ ಅಧ್ಯಯನ ಸಂಪತ್ತುಳ್ಳವನಾಗಿ ಅಧಿಕಾರಿಯು ಅಲ್ಲಿ ಶ್ರುತ್ಯರ್ಥನಿರ್ಣಾಯಕವಾದ ನ್ಯಾಯವನ್ನು ಗ್ರಹಿಸಿ, ಅದರ ಬೆಳಕಿನಲ್ಲಿ ಶ್ರುತ್ಯರ್ಥಮಾಡಿಕೊಳ್ಳುವುದು. ಈ ಜ್ಞಾನವೇ ಶ್ರೇಯಸ್ಸಾಧನ. ಇದೇ ಮುಂತಾದ ಶಾಸ್ತ್ರೀಯ ಪರಿಭಾಷೆಯನ್ನು ಖಂಡಾರ್ಥಕಾರರು ಅಲ್ಲಲ್ಲಿಯೆ ಸೂಚಿಸುವರು.

ಒಟ್ಟಿನಮೇಲೆ ಈ ಲೇಖನದ ಅಧ್ಯಯನವು ವಿದ್ಯಾರ್ಥಿಗೆ ತತ್ತ್ವವಿಷಯದಲ್ಲಿ ಮುಂದಿನ ಜ್ಞಾನಬೆಳವಣಿಗೆಗೆ ಸಾಧಕವಾದ ಯಾವ ವಿಧವಾದ ರುಚಿಯನ್ನು ಹುಟ್ಟಿಸಬೇಕೋ ಅಂತಹ ರುಚಿಯನ್ನು ಹುಟ್ಟಿಸಲಿ ಎಂದು ಆಶಾಸಿಸಿದೆ. ಈ ಲೇಖನವು ವಿದ್ಯಾ ಪ್ರಧಾನವೇ ಹೊರತು ಮತ ಪ್ರಧಾನವಲ್ಲ. ಇದು ವಿದ್ಯೆಗೆ ಸಾಧಕವಾಗುನಂತೆ ಪರಮಾತ್ಮನು ಅನುಗ್ರಹಿಸಲಿ.

ಗ್ರಂಥಕರ್ತಾ

ಸ್ವಲ್ಪವ್ಯತ್ಯಾಸ ಇರುವುದನ್ನು ಅಲ್ಲಲ್ಲಿಯೇ ನೋಡಬಹುದು. ಅದನ್ನು ಓದುವ ಕಾಲದಲ್ಲಿ ಸರಿಪಡಿಸಿಕೊಳ್ಳಬೇಕು.

ಇದು ಒಟ್ಟು ಪ್ರಮೇಯವನ್ನು ಪರಿಚಯಕ್ಕೆ ತಂದುಕೊಡುವ ಲೇಖನವಲ್ಲ. ಹಾಗೆ ವಿದ್ಯಾರ್ಥಿಯಾದವನು ಅದರಲ್ಲಿಯೂ ಬ್ರಹ್ಮವಿದ್ಯೆಯನ್ನು ಅಭ್ಯಾಸಿಸುವಾಗ ತಿಳಿಯುವುದಕ್ಕಿಂತಲೂ ಮೊದಲೇ ಪ್ರಮೇಯಪರಿಚಯ ಮಾಡಿಕೊಳ್ಳಬಾರದು. ಹೀಗೆ ಪ್ರಮೇಯ ಪರಿಚಯ ಮಾಡಿಕೊಳ್ಳುವುದೇ ನಾನು ತಿಳಿದಿದ್ದೇನೆ ಎಂಬ ಅಹಂಭಾವ ಹುಟ್ಟಿಸಿ ಜ್ಞಾನಕ್ಕೆ ಪ್ರಯತ್ನವೆ ಹುಟ್ಟದಹಾಗೆ ಮಾಡುವುದು. ಶಾಸ್ತ್ರವಿಚಾರದಿಂಧ ಪ್ರಮೇಯ ಜ್ಞಾನವಾಗಬೇಕೇ ಹೊರತು ನಮ್ಮಲ್ಲಿಯೇ ಹುಟ್ಟಿದ ವಿಚಾರದಿಂದ ಸಿದ್ಧವಲ್ಲದ ಪ್ರಮೇಯದ ಪರಿಚಯ ಸಾಧುವಲ್ಲ ಎಂದು ಅಭಿಪ್ರಾಯ.

ಈಶಾವಾಸ್ಯೋಪನಿಷತ್ತು ಒಟ್ಟಿನಮೇಲೆ ಈಶನು ಸ್ವತಂತ್ರ, ಜಗತ್ತು ಅವನ ಆವಾಸ್ಯವಾಗಿ ಪರತಂತ್ರ ಎಂಬ ತತ್ತ್ವವನ್ನು ಪ್ರತಿಪಾದಿಸುವುದು. ಇದರಲ್ಲಿ ಒಟ್ಟು ೨೦ ಮಂತ್ರಗಳಿರುವುವು. ಇವುಗಳಲ್ಲಿ ತತ್ತ್ವವನ್ನು ಗ್ರಹಿಸಲು ಆವಶ್ಯಕವಾದ ಅಧಿಕಾರ, ತತ್ತ್ವಗ್ರಹಣಮಾಡಲು ಪ್ರಯತ್ನವಿಲ್ಲದಿರುವುದು ಅನರ್ಥಕರ ಎಂಬ ಭಾವ, ತತ್ತ್ವಸ್ವರೂಪ, ತತ್ತ್ವಜ್ಞಾನಕ್ಕೆ ವಿರೋಧಿಯಾದ ಅಜ್ಞಾನ ಮಿಥ್ಯಾಜ್ಞಾನದ ನಿರಾಕರಣೆಯ ಆವಶ್ಯಕತೆ, ತತ್ತ್ವ ವಿದ್ಯೆಯಿಂದ ಆಗುವ ಶ್ರೇಯಸ್ಸು, ಈ ಶ್ರೇಯಸ್ಸಾಧನ ಪರಮಾತ್ಮನ ಸರ್ವಕರ್ತೃತ್ವ ಸರ್ವಸಂಹಾರಕರ್ತೃತ್ವ ಜ್ಞಾನರೂಪವಾದ ಸ್ವತಂತ್ರ ಪರಮಾತ್ಮನ ಜ್ಞಾನ, ಈ ಜ್ಞಾನವೇ ಪರಮಾತ್ಮನ ಅನುಗ್ರಹ, ಈ ಅನುಗ್ರಹವೇ ಮೋಕ್ಷಸಾಧನ, ಈ ಅನುಗ್ರಹಕ್ಕೋಸ್ಕರ ಅಧಿಕಾರಿಯು ಮಾಡಬೇಕಾದ ಭಗವತ್ಪ್ರಾರ್ಥನೆ. ಈ ಪ್ರಾರ್ಥನೆಗಾಗಿ ಆಯಾ ಪ್ರತೀಕದಲ್ಲಿ ಸರ್ವನಿಯಾಮಕ ಪರಮಾತ್ಮನ ಧ್ಯಾನ— ಇವು ಪ್ರತಿಪಾದಿತವಾಗಿರುವುವು.

ಭಾಷ್ಯಕಾರರು ಮಂತ್ರದ ಯಥಾವತ್ತಾದ ಅರ್ಥ ಮಾಡಿಕೊಳ್ಳಬೇಕೆಂಬ ಒಂದೇ ಧ್ಯೇಯವುಳ್ಳವರು. ಈ ನಿಮಿತ್ತ ತಾವು ಮಾಡುವ ಮಂತ್ರಾರ್ಥಕ್ಕೆ ವೈದಿಕನ್ಯಾಯದ ಬೆಂಬಲದ ಜೊತೆಗೆ ವೈದಿಕವಾದ ಅರ್ಥದ ಪರಂಪರೆಯ ಬೆಂಬಲವನ್ನು ತೋರಿಸುವುದರ ಮೂಲಕ ಅಧಿಕಾರಿಗೆ

ನಿರ್ದೋಷವಾದ ಮಂತ್ರಾರ್ಥಜ್ಞಾನವನ್ನು ಹುಟ್ಟಿಸುವರು. ಇದನ್ನು ಖಂಡಾರ್ಥಕಾರರು ಅನುಷ್ಠಾನಕ್ಕೆ ತಂದುಕೊಂಡು ಶ್ರೇಯಸ್ಸಾಧನ ಮಾಡಿಕೊಳ್ಳುವ ರೂಪದಲ್ಲಿ ಖಂಡಾರ್ಥವನ್ನು ರಚಿಸಿರುವರು. ಈ ಅಧ್ಯಯನವೇ ಅಧಿಕಾರಿಯ ಶ್ರೇಯಸ್ಸಾಧನ.

ಈಶಾವಾಸ್ಯಭಾಷ್ಯದಲ್ಲಿ ಭಾಷ್ಯಕಾರರು ತಾವು ಹೇಳುವ ಮಂತ್ರಾರ್ಥವು ಅನಾದಿ ಪರಂಪರಾಪ್ರಾಪ್ತವೆಂದು ಉಪಪಾದಿಸಲು ಕೆಳಕಂಡ ಶ್ರುತಿ ಸ್ಮೃತಿಗಳನ್ನು ಉದಹರಿಸಿರುವರು. ಬ್ರಹ್ಮಾಂಡ, ಭಾಗವತ,ನಾರದೀಯ,ವಾಮನ, ತತ್ತ್ವಸಂಹಿತಾ, ಸೌಕರಾಯಣ ಶ್ರುತಿ, ಪಿಪ್ಪಲಾದಶಾಖಾ, ವಾರಾಹ, ಕೌರ್ಮ, ರಾಮಸಂಹಿತಾ, ಬ್ರಹ್ಮತರ್ಕ,ಸ್ಕಾಂದ ಎಂಬಿವು.

ಈಶಾವಾಸ್ಯೋಪನಿಷತ್ತು ಶ್ರುತಿಯ ಒಂದು ಭಾಗ. ಶ್ರುತಿಗೆ ಶಾಸ್ತ್ರವೆಂದು ಹೆಸರು. ಇದರಲ್ಲಿ ಅಭಿಪ್ರಾಯವಿಶೇಷವಿರುವುದು. ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದವರಿಗೆ ನ್ಯಾಯವಾದ ಶಾಸ್ತ್ರಾಧ್ಯಯನ ಮಾಡದೇ ಉಪನಿಷನ್ಮಂತ್ರವನ್ನು ಅರ್ಥ ಮಾಡಿಕೊಳ್ಳಲು ಹೊರಟರೆ ಯಾವುದೋ ಒಂದು ಅರ್ಥವಾಗುವುದು. ಆದರೆ ಇದನ್ನೆ ಮಂತ್ರಾರ್ಥವೆಂದು ತಿಳಿಯಬಾರದು. ಮಂತ್ರಾರ್ಥವಾಗುವುದು ಶಾಸ್ತ್ರರೂಪವಾಗಿ ಮಂತ್ರಾಧ್ಯಯನ ಮಾಡುವುದರಿಂದ. ಈ ರೂಪವಾಗಿ ಅಧ್ಯಯನ ಮಾಡುವುದೆಂದರೆ ಬ್ರಹ್ಮಮೀಮಾಂಸಾಶಾಸ್ತ್ರದ ಅಧ್ಯಯನ ಸಂಪತ್ತುಳ್ಳವನಾಗಿ ಅಧಿಕಾರಿಯು ಅಲ್ಲಿ ಶ್ರುತ್ಯರ್ಥನಿರ್ಣಾಯಕವಾದ ನ್ಯಾಯವನ್ನು ಗ್ರಹಿಸಿ, ಅದರ ಬೆಳಕಿನಲ್ಲಿ ಶ್ರುತ್ಯರ್ಥಮಾಡಿಕೊಳ್ಳುವುದು. ಈ ಜ್ಞಾನವೇ ಶ್ರೇಯಸ್ಸಾಧನ. ಇದೇ ಮುಂತಾದ ಶಾಸ್ತ್ರೀಯ ಪರಿಭಾಷೆಯನ್ನು ಖಂಡಾರ್ಥಕಾರರು ಅಲ್ಲಲ್ಲಿಯೆ ಸೂಚಿಸುವರು.

ಒಟ್ಟಿನಮೇಲೆ ಈ ಲೇಖನದ ಅಧ್ಯಯನವು ವಿದ್ಯಾರ್ಥಿಗೆ ತತ್ತ್ವ ವಿಷಯದಲ್ಲಿ ಮುಂದಿನ ಜ್ಞಾನಬೆಳವಳಿಗೆಗೆ ಸಾಧಕವಾದ ಯಾವ ವಿಧವಾದ ರುಚಿಯನ್ನು ಹುಟ್ಟಿಸಬೇಕೋ ಅಂತಹ ರುಚಿಯನ್ನು ಹುಟ್ಟಿಸಲಿ ಎಂದು ಆಶಾಸಿಸಿದೆ. ಈ ಲೇಖನವು ವಿದ್ಯಾ ಪ್ರಧಾನವೇ ಹೊರತು ಮತ ಪ್ರಧಾನವಲ್ಲ. ಇದು ವಿದ್ಯೆಗೆ ಸಾಧಕವಾಗುವಂತೆ ಪರಮಾತ್ಮನು ಅನುಗ್ರಹಿಸಲಿ.

ಗ್ರಂಥಕರ್ತಾ

ಓದುವವರಿಗೆ ಸೂಚನೆ

ಬ್ರಹ್ಮ ಎಂಬ ಪದವು ನಪುಂಸಕ ಲಿಂಗದಲ್ಲಿದೆ. ಆದರೂ 'ಬ್ರಹ್ಮನು' 'ಅವನು' ಎಂದು ಲೋಕರೂಢಿಯಂತೆ ಈ ಗ್ರಂಥದಲ್ಲಿ ನಿರ್ದೇಶವಿದೆ.

೨ನೇ ಪುಟದಲ್ಲಿ ೨೩ನೆ ಪಂಕ್ತಿಯನ್ನು 'ತೇನ' ಎಂಬ ಪದಸಹಿತ ಓದಿಕೊಳ್ಳಬೇಕು.

ಖಂಡಾರ್ಥದಲ್ಲಿ ಅಲ್ಲಲ್ಲಿ ಬರುವ 'ಆಹ' ಎಂಬ ಸಂಸ್ಕೃತ ಪದಕ್ಕೆ 'ಹೇಳುತ್ತಾನೆ' ಎಂದು ಅರ್ಥಮಾಡಿಕೊಳ್ಳಬೇಕು.

೬೦ನೇ ಪುಟದ ೫ನೇ ಪಂಕ್ತಿಯಲ್ಲಿ 'ಒಟ್ಟರ್ಥವಾಗುವುದು' ಎಂಬ ಪದದ ಅನಂತರವಿರುವ ಪೂರ್ಣವಿರಾಮವನ್ನು ತೆಗೆದು ಅದನ್ನು 'ಈ ಒಟ್ಟು ಪದ ಸಮೂಹಕ್ಕೆ' ಎಂಬುದರ ಅನಂತರ ಹಾಕಿಕೊಳ್ಳಬೇಕು.

೬೯ನೆಯ ಪುಟದಲ್ಲಿ 'ಸಂಕೀರ್ಣಾಃ' ಎಂಬುದನ್ನು 'ಸಂತೀರ್ಣಾಃ' ಎಂದು ಓದಿಕೊಳ್ಳಬೇಕು.

ಮನುಷ್ಯನಿಗೆ ಪ್ರಸಕ್ತವಾದ ಸಾಧನಗಳು ಎರಡು—ಕರ್ಮ ಮತ್ತು ಜ್ಞಾನ. ಕರ್ಮವನ್ನು ಅನುಸರಿಸಿದರೆ ಪರ್ಯವಸಾನದಲ್ಲಿ ಜ್ಞಾನವು ಲೋಪ ಹೊಂದುವುದು. ಜ್ಞಾನವನ್ನು ಅನುಸರಿಸಿದರೆ, ಕಡೆಗೆ ಈ ಗ್ರಂಥ ಪ್ರತಿಪಾದ್ಯವಾದ ವಿಚಾರಕ್ಕೆ ಬರದೇ ವಿಧಿ ಇಲ್ಲ. ಪೂರ್ವಪೂರ್ವ ಜ್ಞಾನದ ಮಟ್ಟದಲ್ಲಿ ಅಸ್ವಾರಸ್ಯ ಬುದ್ಧಿ ಹುಟ್ಟಿದರೆ ಉತ್ತರೋತ್ತರ ಮಟ್ಟದಲ್ಲಿ ಗೌರವಹುಟ್ಟಿ ಪರ್ಯವಸಾನದಲ್ಲಿ ಈ ಗ್ರಂಥ ಪ್ರತಿಪಾದ್ಯ ಪ್ರಮೇಯದ ವಿಚಾರ ಮತ್ತು ಅದು ಸಾಧು ಎಂಬ ಗ್ರಹಣವು ಅನಿವಾರ್ಯವಾಗುವುದು.

ಈ ಕಾರಣದಿಂದ ಇದು ಒಂದು ಮತದ ಗ್ರಂಥವಲ್ಲ. ಜ್ಞಾನದಲ್ಲಿ ಗೌರವವಿರುವ ಸರ್ವರಿಗೂ ಇದು ಆದರಣೀಯ.

ದುರ್ಮುಖಿ
ಮಾಘ ಶುದ್ಧ ನವಮಿ. **ಹೆಚ್. ಎನ್. ರಾಘವೇಂದ್ರಾಚಾರ್.**

ಓಂ ತತ್ ಸತ್

ಶ್ರೀ ಗುರುಭ್ಯೋ ನಮಃ ಹರಿಃ ಓಂ

ಲಕ್ಷ್ಮೀನೃಸಿಂಹಂ ಮಧ್ವಾರ್ಯಂ ನತ್ವಾತ್ಮಜ್ಞಾನಶುದ್ಧಯೇ ।
ಸ್ಮರಾಮಿ ಭಾಷ್ಯಸಹಿತಾಂ ಈಶೋಪನಿಷದಂ ಮುದಾ॥

ಈಶಾವಾಸ್ಯೋಪನಿಷತ್

ಹರಿಃ ಓಂ॥
ಈಶಾವಾಸ್ಯಮಿದ ಗ್ಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ
ಮಾ ಗೃಧಃ ಕಸ್ಯಸ್ವಿದ್ಧನಂ ॥೧॥

ಖಂಡಾರ್ಥ

ಶ್ರೀಮದ್ಧನುಮ ಭೀಮ ಮಧ್ವಾಂತರ್ಗತ ರಾಮ ಕೃಷ್ಣ ವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯ ನಮಃ।

ಶ್ರೀ ಹನುಮ, ಭೀಮ ಮತ್ತು ಮಧ್ವ ಇವರ ಅಂತರ್ನಿಯಾಮಕ ರಾಮ, ಕೃಷ್ಣ ಮತ್ತು ವೇದವ್ಯಾಸರೆಂಬ ಲಕ್ಷ್ಮೀಹಯಗ್ರೀವನಿಗೆ ನಮಸ್ಕಾರ.

ಶ್ರೀಪ್ರಾಣಪತಿಮಾನಮ್ಯ ಪೂರ್ಣಬೋಧಾದಿ ದೇಶಿಕಾನ್।
ಈಶಾವಾಸ್ಯೋಪನಿಷದಃ ಕರಿಷ್ಯಾಮ್ಯರ್ಥಸಂಗ್ರಹಂ॥

ಶ್ರೀ ಪ್ರಾಣಪತಿಯನ್ನು ನಮಸ್ಕರಿಸಿ ಪೂರ್ಣಬೋಧ ಮೊದಲಾದ ಗುರುಗಳನ್ನು ನಮಸ್ಕರಿಸಿ ಈಶಾವಾಸ್ಯೋಪನಿಷತ್ತಿನ ಅರ್ಥದ ಸಂಗ್ರಹವನ್ನು ರಚಿಸುತ್ತೇನೆ.

ಅಸ್ಯಾ ಉಪನಿಷದಃ ಸ್ವಾಯಂಭುವೋ ಮನುಃ ಋಷಿಃ। ಯಜ್ಞನಾಮಾ ಹರಿಃ ದೇವತಾ। ಅನುಷ್ಟುಬಾದಿ ಯಥಾ ಯೋಗ್ಯಂ ಛಂದೋ ಜ್ಞೇಯಂ।

ಈ ಉಪನಿಷತ್ತಿಗೆ ಸ್ವಾಯಂಭುವ ಮನು ಋಷಿ. ಯಜ್ಞ ಎಂಬ ಹೆಸರುಳ್ಳ ಹರಿಯು ದೇವತೆ. ಆಯಾ ಶ್ಲೋಕದಲ್ಲಿ ಕಂಡುಬರುವಂತೆ ಅನುಷ್ಟುಪ್ ಮೊದಲಾದುದು ಛಂದಸ್ ಎಂದು ತಿಳಿಯಬೇಕು.

ಅನೇಜದಿತ್ಯಾದಿನಾ ತತ್ತ್ವಂ ವಿವಕ್ಷುರುಪದಿಷ್ಟಂ ತತ್ತ್ವಂ ಅಧಿಕಾರಿಣ ಏವ ಹೃದಿ ಅವತಿಷ್ಠತೆ ನಾನ್ಯಸ್ಯೇತಿ ಏತದುಪನಿಷದಧಿಕಾರಸಿದ್ಧ್ಯರ್ಥಂ ವಿಚ್ಛಿನ್ನವಿಷಯತೃಷ್ಣತ್ವಂ ತಾವದಾದ್ಯೇನ ಮಂತ್ರೇಣ ಸಯುಕ್ತಿಕಂ ವಿಧತ್ತೆ । ಈಶೇತಿ ।

ಅನೇಜತ್ ಎಂಬ ಪದದಿಂದ ಆರಂಭವಾಗುವ ಮಂತ್ರಗಳಲ್ಲಿ ತತ್ತ್ವವನ್ನು ವೇದಋಷಿಯು ಹೇಳುವವನಾಗಿ ಉಪದೇಶ ವಿಷಯವಾದ ತತ್ತ್ವವು ಅಧಿಕಾರಿಯಾದವನ ಮನಸ್ಸಿನಲ್ಲಿ ಮಾತ್ರ ನಿಲ್ಲುವುದು ತದಿತರನಿಗಿಲ್ಲ ಎಂಬ ಭಾವದಿಂದ ಈ ಉಪನಿಷತ್ತಿನ ಅಧಿಕಾರಸಿದ್ಧಿಗೋಸ್ಕರ ಬಿಟ್ಟುಹೋದ ವಿಷಯಲಂಪಟೆಯನ್ನು ಮೊದಲನೆಯ ಮಂತ್ರದಿಂದ ಯುಕ್ತಿ ಸಹಿತವಾಗಿ ಸಮರ್ಥಿಸುತ್ತಾನೆ. 'ಈಶ' ಎಂಬೀ ಮುಂತಾಗಿ.

ಯತ್ಕಿಂಚ ಜಗದಿದಂ ತತ್ಸರ್ವಂ ಪ್ರವೃತ್ತ್ಯರ್ಥಂ ಆತ್ಮನಿ(ನ) ಈಶಾವಾಸ್ಯಂ। ಆವಾಸಂ ಅರ್ಹತೀತ್ಯಾವಾಸ್ಯಂ। ಈಶಸ್ಯಾವಾಸ್ಯಂ ಈಶಾವಾಸ್ಯಂ। ಈಶಾನುಪ್ರವಿಷ್ಟಮಿತ್ಯರ್ಥಃ। ತದೇವಾನುಪ್ರಾವಿಶತ್ ಇತ್ಯಾದೇಃ। ಅತೋಽಸ್ವತಂತ್ರಮಿತಿ ಭಾವಃ। ಕಿಂಚ ಜಗತ್ಯಾಂ ಪ್ರಕೃತೌ ಇದಂ ಸರ್ವಂ ಆಶ್ರಿತಂ। ಸಾ ಚೇಶಾಯತ್ತಾ ಅತೋಽಪ್ಯಸ್ವತಂತ್ರಂ ಈಶ ಏವ ಸ್ವತಂತ್ರಃ। ತೇನ ಕಾರಣೇನ ತೇನ ಈಶ್ವರೇಣ ತ್ಯಕ್ತೇನ ದತ್ತೇನ ವಿತ್ತೇನ। ಯದೃಚ್ಛಾಲಬ್ಧೇನೇತಿ ಯಾವತ್। ಭುಂಜೀಥಾಃ ಭೋಗಂಕುರ್ಯಾಃ। ಕಸ್ಯಸ್ವಿತ್ ಕಸ್ಯಾಪಿ ರಾಜಾದೇಃ ಸಕಾಶಾದ್ಧನಂ ಮಾ ಗೃಧಃ ನಾಕಾಂಕ್ಷೇಥಾಃ। ಈಶಾದನ್ಯಸ್ಯ ಅಸ್ವಾತಂತ್ರ್ಯೇಣ ತಸ್ಯ ದಾನೆ ಸಾಮರ್ಥ್ಯಾಭಾವಾದೀಶದತ್ತೇನೈವ ವರ್ತೇತೇತಿ ಭಾವಃ ॥೧॥

ಮಂತ್ರಸ್ಥ ಪದಗಳ ಅನ್ವಯ

ಯತ್ಕಿಂಚ ಜಗದಿದಂ ಸರ್ವಂ ಈಶಾವಾಸ್ಯಂ. ಜಗತ್ಯಾಂ (ಇದಂ ಸರ್ವಂ) ತ್ಯಕ್ತೇನ ಭುಂಜೀಥಾಃ। ಕಸ್ಯಸ್ವಿತ್ ಧನಂ ಮಾ ಗೃಧಃ.

ಖಂಡಾರ್ಥದಂತೆ ಈ ಪದಗಳ ಅರ್ಥ:—ಯತ್ಕಿಂಚ–ಯಾವ ರೂಪದಲ್ಲಿಯೇ ಆಗಲಿ. ಜಗತ್–ಪ್ರಪಂಚವು. ಇದಂ–ಇದು ಎಂದು ಭಾಸವಾಗುವುದೊ. ತತ್–ಆ. ಸರ್ವಂ–ಸಮಸ್ತವೂ. ಪ್ರವೃತ್ತ್ಯರ್ಥಂ ಆತ್ಮನಿ–ತನ್ನಲ್ಲಿ ತನ್ನ ಪ್ರವೃತ್ತಿಗೋಸ್ಕರ (ಅಥವಾ ಪ್ರವೃತ್ತ್ಯರ್ಥಂ ಆತ್ಮನಃ–ಪರಮಾತ್ಮನ ಸೃಷ್ಟ್ಯಾದಿ ವ್ಯಾಪಾರಕ್ಕೋಸ್ಕರ) ಈಶಾವಾಸ್ಯಂ–ಈಶನ ಆವಾಸಕ್ಕೆ ಅರ್ಹವಾದುದು ಎಂದರೆ ಈಶನ ಆವಾಸನನ್ನಪೇಕ್ಷಿಸುವುದು. ಈಶನಿಂದ ಅನುಪ್ರವಿಷ್ಟವಾದುದು ಎಂದು ಇದರ ಅರ್ಥ. ಇದು 'ತದೇವಾನುಪ್ರಾವಿಶತ್' ಸೃಷ್ಟಿಯ ಅನಂತರ ಸೃಷ್ಟವಾದ ಆ ವಸ್ತುವನ್ನೇ ಪ್ರವೇಶಿಸಿದನು. ಎಂಬೀ ಮುಂತಾದ ಉಪನಿಷದ್ವಾಕ್ಯಗಳಲ್ಲಿ ಸ್ಪಷ್ಟಪಟ್ಟಿರುವುದು. ಈ ನಿಮಿತ್ತದಿಂದ ಜಗತ್ತು ಅಸ್ವತಂತ್ರ ಎಂದು ತಾತ್ಪರ್ಯ. ಮತ್ತು ಜಗತ್ಯಾಂ–ಪ್ರಕೃತಿಯಲ್ಲಿ. ಇದಂ ಸರ್ವಂ–ಈ ಸರ್ವವೂ (ಆಶ್ರಿತವಾಗಿರುವುದು). ಪ್ರಕೃತಿಯಾದರೋ ಈಶಾಧೀನವಾದುದು. ಈ ಕಾರಣದಿಂದಲೂ ಜಗತ್ತು ಅಸ್ವತಂತ್ರ ಎಂದು ಸಿದ್ಧಿಸುವುದು. ಈಶನೇ ಸ್ವತಂತ್ರ. ಈ ಕಾರಣದಿಂದ ತೇನ–ಈಶ್ವರನಿಂದ. ತ್ಯಕ್ತೇನ–ಕೊಡಲ್ಪಟ್ಟ (ವಿತ್ತದಿಂದ) ಎಂದರೆ ಯಾದೃಚ್ಛಿಕವಾಗಿ ಲಬ್ಧವಾದ ವಿತ್ತದಿಂದ. ಭುಂಜೀಥಾಃ–ಭೋಗವನ್ನು ಅನುಭವಿಸು. ಕಸ್ಯಸ್ವಿತ್–ಯಾರೋ ರಾಜ ಮೊದಲಾದವರ ದೆಶೆಯಿಂದ ಧನವನ್ನು. ಮಾ ಗೃಧಃ–ಅಪೇಕ್ಷಿಸಬೇಡ. ಎಂದು ಮಂತ್ರಾರ್ಥ.

ಈಶನಿಂದ ಅನ್ಯನಾದವನಿಗೆ ಅಸ್ವಾತಂತ್ರ್ಯವಿರುವುದರಿಂದ ಅವನಿಗೆ ದಾನ ಮಾಡುವುದರಲ್ಲಿ ಸ್ವಾತಂತ್ರ್ಯವಿಲ್ಲವಾದುದರಿಂದ ಈಶನಿಂದ ದತ್ತವಾದ ಧನದಿಂದಲೇ ಜೀವಿಸು ಎಂದು ತಾತ್ಪರ್ಯ.

ಈಶಾವಾಸ್ಯಭಾಷ್ಯ

ಶ್ರೀಮದ್ಧನುಮಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯ ನಮಃ ॥ ಹರಿಃ ಓಂ ॥

ನಿತ್ಯಾನಿತ್ಯಜಗದ್ಧಾತ್ರೆ ನಿತ್ಯಾಯ ಜ್ಞಾನಮೂರ್ತಯೆ।
ಪೂರ್ಣಾನಂದಾಯ ಹರಯೆ ಸರ್ವಯಜ್ಞಭುಜೆ ನಮಃ॥೧॥

ನಿತ್ಯ, ಅನಿತ್ಯ ಮತ್ತು ನಿತ್ಯಾನಿತ್ಯವೆಂಬ ವಸ್ತುಗಳನ್ನೊಳಗೊಂಡ ಜಗತ್ತನ್ನು ಧರಿಸಿರುವ ನಿತ್ಯಸ್ವರೂಪನಾದ, ಜ್ಞಾನವೇ ಶರೀರವಾಗಿ ಉಳ್ಳ, ಪೂರ್ಣ ಆನಂದನಾದ, ಸರ್ವಯಜ್ಞ ಭೋಗವುಳ್ಳ ಹರಿಗೆ ನಮಸ್ಕಾರ.

ಯಸ್ಮಾದ್ಬ್ರಹ್ಮೇಂದ್ರರುದ್ರಾದಿ ದೇವತಾನಾಂ ಶ್ರಿಯೋಽಪಿ ಚ
ಜ್ಞಾನಸ್ಫೂರ್ತಿಸ್ಸದಾ ತಸ್ಮೈ ಹರಯೆ ಗುರವೆ ನಮಃ ॥೨॥

ಯಾವನ ದೆಶೆಯಿಂದ ಬ್ರಹ್ಮಾ, ಇಂದ್ರ, ರುದ್ರ ಮೊದಲಾದ ದೇವತೆಗಳಿಗೆ ಶ್ರೀ ತತ್ತ್ವಕ್ಕೂ ಸಹ ನಿರಂತರವೂ ಜ್ಞಾನ ಮತ್ತು ಸ್ಫೂರ್ತಿ ಲಭಿಸುವುವೊ ಆ ಹರಿಗೆ, ಗುರುವಿಗೆ ನಮಸ್ಕಾರ.

ಸೂಚನೆ

ಇವುಗಳಲ್ಲಿ ಮೊದಲನೆಯ ಶ್ಲೋಕವು ಉಪನಿಷತ್ಪ್ರತಿಪಾದ್ಯವಾದ ತತ್ತ್ವವನ್ನು ನಿರೂಪಿಸುವುದು. ಇದರಲ್ಲಿ ಜಗದ್ಧಾತ್ರೆ ಯಜ್ಞ ಭುಜೆ ಎಂಬ ಪದಗಳು ಆಚಾರ್ಯರ ಸಿದ್ಧಾಂತದಿಂದಲೇ ಸ್ಥಾಪಿತವಾದ ಅರ್ಥ ವಿಶೇಷವುಳ್ಳುವು. ಲೌಕಿಕಾರ್ಥವು ಎಂದರೆ ಸಾಮಾನ್ಯ ಸಂಸ್ಕೃತ ಪದಾರ್ಥವು ಸಿದ್ಧಾಂತ ದೃಷ್ಟಿಯಿಂದ ತಪ್ಪಾಗುವುದು. ಈ ವಿಶೇಷಾರ್ಥವು ಭಾಷ್ಯಕಾರರಿಂದಲೇ ಸೂಚಿತವಾಗುವುದನ್ನು ಕಾದು ತಿಳಿಯಬೇಕು.

ಭಾಷ್ಯ—ಸ್ವಾಯಂಭುವೊ ಮನುಃ ಏತೈಃ ಮಂತ್ರೈಃ ಭಗವಂತಂ
ಆಕೂತಿಸೂನುಂ ಯಜ್ಞನಾಮಾನಂ ವಿಷ್ಣುಂ ತುಷ್ಟಾವ।

ಸ್ವಾಯಂಭುವ ಎಂಬ ಮನು ಈ ಉಪನಿಷನ್ಮಂತ್ರಗಳಿಂದ ಅವ್ಯಾಹತ ಷಡ್ಗುಣೈಶ್ವರ್ಯ ಸಂಪನ್ನನಾದ ಆಕೂತಿ ಪುತ್ರನಾದ ಯಜ್ಞ ಎಂಬ ನಾಮಧೇಯವುಳ್ಳ ವಿಷ್ಣುವನ್ನು ಸಂತೋಷಪಡಿಸಿದನು.

ಇದಕ್ಕೆ ಆಧಾರ

ಭಾಷ್ಯ—ಸ್ವಾಯಂಭುವಃ ಸ್ವದೌಹಿತ್ರಂ ವಿಷ್ಣುಂ ಯಜ್ಞಾಭಿದಂ ಮನುಃ ।
ಈಶಾವಾಸ್ಯಾದಿಭಿಃ ಮಂತ್ರೈಃ ತುಷ್ಟಾವಾವಹಿತಾತ್ಮನಾ।
ರಕ್ಷೋಭಿರುಗ್ರೈಸ್ಸಂಪ್ರಾಪ್ತಃ ಖಾದಿತುಂ ಮೋಚಿತಸ್ತದಾ।
ಸ್ತೋತ್ರಂ ಶ್ರುತ್ವೈವ ಯಜ್ಞೇನ ತಾನ್ ಹತ್ವಾವಧ್ಯತಾಂ ಗತಾ೯।
ಪ್ರಾದಾದ್ಧಿ ಭಗವಾಂಸ್ತೇಷಾಂ ಅವಧ್ಯತ್ವಂ ಹರಃ ಪ್ರಭುಃ।
ತೈರ್ವಧ್ಯತ್ವಂ ತಥಾನ್ಯೇಷಾಂ ಅತಃ ಕೋನ್ಯೋ ಹರೇಃ ಪ್ರಭುಃ॥
ಇತಿ ಬ್ರಹ್ಮಾಂಡೆ॥

ಸ್ವಾಯಂಭುವ ಎಂಬ ಮನು ತನ್ನ ಮೊಮ್ಮಗ (ಮಗಳ ಮಗ) ಯಜ್ಞ ಎಂಬ ಹೆಸರುಳ್ಳ ವಿಷ್ಣುವನ್ನು ಈಶಾವಾಸ್ಯ ಎಂದು ಆರಂಭಿಸುವ ಮಂತ್ರಗಳಿಂದ ಅಂತರ್ಮುಖವಾದ ಮನೋವೃತ್ತಿಯಿಂದ ಸ್ತೋತ್ರ ಮಾಡಿ

ದನು. ಅವನನ್ನು ತಿನ್ನಲು ಬಂದ ಕ್ರೂರರಾದ ರಾಕ್ಷಸರ ಕೈಗೆ ಸಿಕ್ಕಿದ ಅವನು ಆಗ ಅವರಿಂದ ಬಿಡುಗಡೆ ಹೊಂದಿದನು. ಸ್ತೋತ್ರವನ್ನು ಕೇಳಿದ ಮಾತ್ರದಿಂದಲೇ ಅವಧ್ಯತ್ವವನ್ನು ಹೊಂದಿದ ಅವರನ್ನು ಸಂಹಾರ ಮಾಡಿದ ಪ್ರಯುಕ್ತ ಯಜ್ಞನಿಂದ ಈ ಬಿಡುಗಡೆ. ಪೂಜ್ಯನಾದ, ಸಮರ್ಥನಾದ ಹರನು ಅವರಿಗೆ ಅವಧ್ಯತ್ವವನ್ನು ಮತ್ತು ಅವರಿಂದ ಇತರರಿಗೆ ವಧ್ಯತ್ವವನ್ನು ಅನುಗ್ರಹಿಸಿದ್ದನು. ಈ ಕಾರಣದಿಂದ ಹರಿಯಲ್ಲದವನು ಪ್ರಭು ಹೇಗೆ ಆದಾನು? ಹೀಗೆಂದು ಬ್ರಹ್ಮಾಂಡದಲ್ಲಿರುವುದು.

ಭಾಗವತೇ ಚಾಯಮೇವಾರ್ಥ ಉಕ್ತಃ।

ಭಾಗವತದಲ್ಲಿಯೂ ಇದೇ ಅರ್ಥವೇ ಉಕ್ತವಾಗಿರುವುದು.

ಈಶಸ್ಯ ಆವಾಸಯೋಗ್ಯಂ ಈಶಾವಾಸ್ಯಂ। ಜಗತ್ಯಾಂ ಪ್ರಕೃತಾ। ತೇನೇಶೇನ ತ್ಯಕ್ತೇನ ದತ್ತೇನ ಭುಂಜೀಥಾಃ।

ಈಶನ ಆವಾಸವನ್ನು ಅಪೇಕ್ಷಿಸುವುದು ಈಶಾವಾಸ್ಯ. ಜಗತ್ಯಾಂ ಎಂದರೆ ಪ್ರಕೃತಿಯಲ್ಲಿ ಎಂದರ್ಥ. ತೇನ–ಈಶನಿಂದ. ತ್ಯಕ್ತೇನ–ಕೊಡಲ್ಪಟ್ಟುದುದರಿಂದ. ಭುಂಜೀಥಾಃ–ಭೋಗಿಸು.

ಈ ಅರ್ಥದಲ್ಲಿ ಯುಕ್ತಿಸೂಚಕ ಪ್ರಮಾಣ

ಭಾಷ್ಯ—ಸ್ವತಃಪ್ರವೃತ್ತ್ಯಶಕ್ತತ್ವಾದೀಶಾವಾಸ್ಯಮಿದಂ ಜಗತ್।
ಪ್ರವೃತ್ತಯೆ ಪ್ರಕೃತಿಗಂ ಯಸ್ಮಾತ್ ಸ ಪ್ರಕೃತೀಶ್ವರಃ।
ತದಧೀನಪ್ರವೃತ್ತಿತ್ವಾತ್ ತದೀಯಂ ಸರ್ವಮೇವ ಯತ್।
ತದ್ದತ್ತೇನೈವ ಭುಂಜೀಥಾ ಅತೊ ನಾನ್ಯಂ ಪ್ರಯಾಚಯೇತ್॥
ಇತಿ ಬ್ರಹ್ಮಾಂಡೆ॥

ಈ ಜಗತ್ ಸ್ವತಃ ಪ್ರವರ್ತಿಸಲು ಅಸಮರ್ಥ. ಈ ಕಾರಣದಿಂದ ಅದು ಈಶನ ಆವಾಸವನ್ನು ಅಪೇಕ್ಷಿಸುವುದು. ಪ್ರವೃತ್ತಿಗೋಸ್ಕರ ಅದು ಪ್ರಕೃತಿಯನ್ನು ಆಶ್ರಯಿಸಿದೆ. ಈ ಕಾರಣದ ದೆಶೆಯಿಂದ ಈಶನು ಪ್ರಕೃತಿಗೂ ಈಶ್ವರನು. ಅವನ ಅಧೀನಪ್ರವೃತ್ತಿಯುಳ್ಳುದಾದುದರಿಂದ ಈ ಸರ್ವವೂ (ಪ್ರಕೃತಿ ಮತ್ತು ಅದನ್ನಾಶ್ರಯಿಸಿದ ಜಗತ್ತು) ಅವನ ಸಂಬಂಧವುಳ್ಳುದು. ಈ ಕಾರಣದಿಂದ ಅವನಿಂದ ದತ್ತವಾದ ಧನದಿಂದಲೇ ಭೋಗಿಸ

ಬೇಕು. ಇತರ ಯಾವನನ್ನೂ ಯಾಚಿಸಬಾರದು. ಎಂದು ಬ್ರಹ್ಮಾಂಡದಲ್ಲಿರುವುದು. ॥ ೧ ॥

ಸೂಚನೆ

ಪ್ರವೃತ್ತಿ ಎಂಬ ಶಬ್ದದ ಅರ್ಥವನ್ನು ವಿಚಾರದಿಂದತಿಳಿಯಬೇಕು. ಸಾಮಾನ್ಯವಾಗಿ ಇರುವ ಒಂದು ವಸ್ತುವಿನಲ್ಲುಂಟಾಗುವ ಕ್ರಿಯೆಯನ್ನು ಪ್ರವೃತ್ತಿ ಎಂದು ಕರೆಯುವ ಪದ್ಧತಿ. ಇದು ಪ್ರಕೃತ ವಿಷಯಕ್ಕೆ ಅನ್ವಯಿಸುವುದಿಲ್ಲ. ವಸ್ತು ಇರುವುದೂ ಒಂದು ಪ್ರವೃತ್ತಿ. ಇದು ಈಶನಿಂದ. ಹಾಗಿಲ್ಲದಿದ್ದರೆ ಇರುವಿಕೆಯಲ್ಲಿ ವಸ್ತು ಸ್ವತಂತ್ರವಾದೀತು. ಅದರಿಂದ ಈಶನ ಸ್ವಾತಂತ್ರ್ಯಕ್ಕೆ ಭಂಗ ಬಂದೀತು. ಈ ಕಾರಣದಿಂದ ಜಗತ್ತು ಪ್ರವರ್ತಿಸಲು ಎಂದರೆ ಜಗತ್ತು ತಾನು ಆಗಲು ಎಂದರ್ಥ. ಇದಕ್ಕೆ ಈಶನ ಆವಾಸವೇ ಕಾರಣ. ಜಗತ್ತಿನ ಸತ್ತೆಯೇ ಈಶನಿಂದ ಎಂದು ಇದರರ್ಥ. ಜಗತ್ತು ಪ್ರವರ್ತಿಸಲು ಪ್ರಕೃತಿಯನ್ನಾಶ್ರಯಿಸಿದೆ ಎಂಬುದು ಬ್ರಹ್ಮಾಂಡದಲ್ಲಿ ಉಕ್ತವಾಗಿರುವುದು. ಪ್ರಕೃತಿಗಾದರೂ ಪ್ರವೃತ್ತಿ ಹೇಗೆ? ಈಶನಿಂದಲೇ ಎಂದು ಉಪನಿಷದುತ್ತರ. ಹೀಗೆ ಸ್ವನಿಷ್ಠವಾದ ಜಗತ್ತಿನೊಂದಿಗೆ ಪ್ರಕೃತಿಯು ಈಶಾಧೀನ ಎಂದರೆ ಈಶನ ಆವಾಸದಿಂದ ಪ್ರವೃತ್ತಿಸುವುದು ಎಂದು ಒಟ್ಟು ತಾತ್ಪರ್ಯ. ಈ ಅರ್ಥವು ಉಪನಿಷತ್ತಿನ ಜಗತ್ ಮತ್ತು ಜಗತ್ಯಾಂ ಎಂಬ ಪದಗಳಿಂದ ಸ್ಪಷ್ಟಪಡುವುದು. ನಿತ್ಯ, ಅನಿತ್ಯ, ನಿತ್ಯಾನಿತ್ಯ ಎಲ್ಲವೂ ಈಶನಿಂದಲೇ ಎಂದು ಒಟ್ಟು ಅರ್ಥ. ಇದಕ್ಕನುಗುಣವಾದ ಅರ್ಥ ಇರುವುದು ನಿತ್ಯ ಮೊದಲಾದ ಪದಗಳಿಗೆ. ಪ್ರವೃತ್ತಿಯು ಎಂದರೆ ಸತ್ತೆಯು ಈಶಕೃತ ಎಂಬ ಅರ್ಥಕ್ಕೆ ಪುಷ್ಟಿಕೊಡುವ ರೀತಿಯಲ್ಲಿ ಪದಾರ್ಥವನ್ನು ನಿರ್ವಚನ ಮಾಡಬೇಕು.

ಇದೇ ಜಗತ್ತಿಗಿರುವ ಈಶನ ಸಂಬಂಧದ ಸ್ವರೂಪ. ಸಂಬಂಧಕ್ಕೆ ಎರಡು ವಸ್ತುಗಳು ಅಗತ್ಯ; ಆದುದರಿಂದ ಜಗತ್ತು ಈಶ ಇವೆರಡೂ ನಿತ್ಯಸಂಬಂಧವುಳ್ಳುವು ಎಂದು ವಾದಿಸುವುದು ಉಪನಿಷತ್ತಿನ ಈಶಸ್ವಾತಂತ್ರ್ಯತತ್ತ್ವದಿಂದ ಬಾಧಿತವಾಗುವುದು.

ಭಗವದ್ದತ್ತವಾದ ಧನವೆಂದರೆ ನಮ್ಮ ಪ್ರಯತ್ನವಿಲ್ಲದೆ ಕೇವಲ ಈಶೇಚ್ಛೆಯಿಂದ ಪ್ರಾಪ್ತವಾದ ಧನ. ನಮ್ಮ ಪ್ರಯತ್ನದಿಂದ ಲಬ್ಧವಾದ ಧನ

ಯಾಚನೆಯಿಂದ ಲಬ್ಧವಾದುದರ ಸಮ. ಪ್ರಯತ್ನ ಎಂದರೆ ಪ್ರವೃತ್ತಿ-ಒಂದು ಕಾರ್ಯವನ್ನು ಮಾಡೋಣ ಮುಂತಾದುದು. ಅದು ಫಲೇಚ್ಛಾರಹಿತವಾಗಿರಬೇಕೆಂದು ನಿಷ್ಕಾಮಕರ್ಮ ಮುಂತಾದ ವ್ಯವಹಾರಗಳಿಂದ ಕೇಳಿದ್ದೇವೆ. ಒಟ್ಟಿನಮೇಲೆ ತಿಳಿಯಬೇಕಾದ ಅಂಶವಿದು. ಒಬ್ಬನು ಒಂದು ಸಂಸ್ಥೆಯಲ್ಲಿ ಕೆಲಸಮಾಡಿ ಒಂದು ಸಂಭಾವನೆಯನ್ನು ಹೊಂದುತ್ತಾನೆ. ನನ್ನ ಕೆಲಸಕ್ಕೆ ಇದು ಸಂಭಾವನೆಯೆಂದು ಅವನು ತಿಳಿದರೆ ಅದು ಸಕಾಮಕರ್ಮ. ತಾನು ಮಾಡುವೆನೆಂದು ತಿಳಿದ ಕಾರ್ಯ ಈಶನ ಕಾರ್ಯವೆಂದು ತಿಳಿಯುವುದು ಮತ್ತು ಅದಕ್ಕೆ ಫಲನೆಂದು ತಿಳಿದ ದ್ರವ್ಯ ಈಶೇಚ್ಛೆಯಿಂದ ಪ್ರಾಪ್ತ ಎಂದು ತಿಳಿದರೆ ಅದು ನಿಷ್ಕಾಮಕರ್ಮ. ಸಕಾಮಕರ್ಮ ಯಾಚನಾರೂಪ. ನಿಷ್ಕಾಮಕರ್ಮ ಈಶನ ಸ್ವಾತಂತ್ರ್ಯದ ಉದ್ಘೋಷ.

ಫಲಿತ ಮಂತ್ರಾರ್ಥ

ಈಶನ ಆವಾಸವನ್ನು ಅಪೇಕ್ಷಿಸುವುದು ಈ ಸಮಸ್ತವೂ ಎಂದರೆ ಪ್ರಕೃತಿಯನ್ನು ಆಧಾರಮಾಡಿಕೊಂಡು ಕಂಗೊಳಿಸುವ ಜಗತ್ತು. ಅವನಿಂದ ದತ್ತವಾದುದರಿಂದ ಜೀವಿಸು. ಮತ್ತೊಬ್ಬರ ಧನವನ್ನು ಅಪೇಕ್ಷಿಸಬೇಡ. ॥ ೧ ॥

೨

ಎರಡನೆಯ ಮಂತ್ರಕ್ಕೆ ಪ್ರವರ್ತಕವಾದ ಭಾವವನ್ನು ಹೇಳುವ ಖಂಡಾರ್ಥ—

ತೃಷ್ಣಾವಿಚ್ಛೇದವತ್ ಸ್ವೋಚಿತ ಕರ್ಮಾನುಷ್ಠಾನಮಪಿ ಜ್ಞಾನಾರ್ಥಿನಾಂ ಆವಶ್ಯಕಮಿತ್ಯಾಹ॥ ಕುರ್ವನ್ನೇತಿ॥

ವಿಷಯಲಂಪಟವನ್ನು ಬಿಡುವಂತೆ ತನಗೆ ಉಚಿತವಾದ ಕರ್ಮದ ಅನುಷ್ಠಾನವೂ ಜ್ಞಾನವನ್ನಪೇಕ್ಷಿಸುವವನಿಗೆ ಆವಶ್ಯಕವೆಂದು ಹೇಳಿದನು ಕುರ್ವ ಎಂದಾರಂಭಿಸುವ ಮಂತ್ರದಿಂದ.

ಮಂತ್ರ

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತ ಗ್ಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ ೨ ॥

ಖಂಡಾರ್ಥ

ಶತಂ ಸಮಾಃ—ಶತಂ ವರ್ಷಾಣಿ ಕಾಲಾಧ್ವನೋಽತ್ಯಂತ ಸಂಯೋಗ ಇತಿ

ದ್ವಿತೀಯಾ। ಇಹ-ಮನುಷ್ಯಾದಿ ಜನ್ಮನಿ ಯಾವತ್ ಜಿಜೀವಿಷೇತ್ ತಾವತ್ ಕರ್ಮಾಣಿ ಕುರ್ವನ್ನೇವ ಆಮರಣಂ ಭಗವತ್ಪೂಜಾತ್ಮಕಾನಿ ಸ್ವೋಚಿತಾನಿ ಕರ್ಮಾಣಿ ಕುರ್ಯಾದಿತಿ ಯಾವತ್। ಕುತಃ। ಏವಂ ಕರ್ಮಾಣಿ ಕುರ್ವತಿ ನರೇ- ಮನುಷ್ಯಮಾತ್ರೇಽಪಿ ತ್ವಯಿ ಕರ್ಮ-ಪಾಪಂ ನ ಲಿಪ್ಯತೇ॥ ಸ್ವೋಚಿತೇನಾಸಂಕಲ್ಪಿತಫಲೇನ ಕರ್ಮಣಾ ಭಗವತ್ಪೂಜಾಂ ಕುರ್ವಂತಂ ಅಲ್ಪಾಧಿಕಾರಿಣಮಪಿ ನ ಪ್ರಾಗುತ್ತರಾಣಿ ಪಾಪಾನಿ ಬಾಧಂತೇ। ತತಶ್ಚ ಜ್ಞಾನಾಧಿಕಾರೀ ಸ ಭವತೀತಿ ಯಾವತ್। ಇತಃ- ಕರ್ಮಕರಣಾತ್. ಅನ್ಯಥಾ-ಅಕರಣೇ, ಕರ್ಮ-ಪಾಪಂ. ನ ಲಿಪ್ಯತ ಇತಿ ನಾಸ್ತಿ। ಭಗವತ್ಪೂಜಾಂ ಅಕುರ್ವಂತಂ ಪಾಪಾನಿ ಬಾಧಂತ ಏವ। ತತಶ್ಚಾಸೌ ಜ್ಞಾನೇ ನಾಧಿಕ್ರಿಯತೇ। ಅತಶ್ಚ ಕರ್ಮಾಣಿ ಕುರ್ಯಾದಿತಿ। ಪುರುಷಾರ್ಥನಯೇ ನಿಯಮಾಚ್ಚೇತಿ ಸೂತ್ರಭಾಷ್ಯಾದೌ ನರೇ-ಜ್ಞಾನಿನ್ಯಪಿ ತ್ವಯಿ ಕರ್ಮ ನ ಲಿಪ್ಯತ ಇತಿ ನಾಸ್ತಿ, ಇತ್ಯಪರೋಕ್ಷಜ್ಞಾನಿನೋಽಪಿ ಕರ್ಮಾಕರಣೇ ಮುಕ್ತಾವಾನಂದಹ್ರಾಸರೂಪ ಪಾಪಕರ್ಮಲೇಪೋಽಸ್ತ್ಯೇವೇತಿ ಜ್ಞಾನಿಪರತಯಾ ಮಂತ್ರೋ ವ್ಯಾಖ್ಯಾತಃ ॥ ೨ ॥

ಮಂತ್ರಸ್ಥ ಪದಗಳ ಅನ್ವಯ

ಶತಂ ಸಮಾಃ ಇಹ (ಯಾವತ್) ಜಿಜೀವಿಷೇತ್ (ತಾವತ್) (ಸ್ವೋಚಿತಾನಿ) ಕರ್ಮಾಣಿ ಕುರ್ವನ್ ಏವ. ಏವಂ (ಕರ್ಮಾಣಿ ಕುರ್ವತಿ) ನರೇ ತ್ವಯಿ ಕರ್ಮ ನ ಲಿಪ್ಯತೇ. ಇತಃ ಅನ್ಯಥಾ ಕರ್ಮ ನ ಲಿಪ್ಯತೇ ಇತಿ ನ.

ಖಂಡಾರ್ಥದಂತೆ ಈ ಪದಗಳ ಅರ್ಥ

ಶತಂ ಸಮಾಃ-ನೂರು ವರ್ಷಗಳು. ಕಾಲ ಮತ್ತು ದಾರಿ ಇವುಗಳ ಅತ್ಯಂತಸಂಯೋಗ ಸಂದರ್ಭದಲ್ಲಿ ದ್ವಿತೀಯಾ ವಿಭಕ್ತಿ ಬರುವುದೆಂಬ ವ್ಯಾಕರಣಮರ್ಯಾದೆಗೆ ಪ್ರವರ್ತಕವಾದುದು ಶತಂಸಮಾಃ ಎಂಬ ದ್ವಿತೀಯಾ ವಿಭಕ್ತಿಯುಳ್ಳ ಪದಗಳು. ಇಹ-ಮಾನುಷಾದಿ ಜನ್ಮದಲ್ಲಿ (ಯಾವತ್) ಜಿಜೀವಿಷೇತ್ (ತಾವತ್)-ಎದುವರೆಗೆ ಜೀವಿಸಬೇಕೆಂಬ ಅಪೇಕ್ಷೆಯಿದೆಯೋ ಅದುವರೆಗೆ. (ಸ್ವೋಚಿತಾನಿ) ಕರ್ಮಾಣಿ-ತನಗೆ ಯುಕ್ತವಾದ ಕರ್ಮಗಳನ್ನು. ಆಮರಣಂ-ಮರಣದವರೆಗೆ. ಭಗವತ್ಪೂಜಾತ್ಮಕಾನಿ ಸ್ವೋಚಿತಾನಿ ಕರ್ಮಾಣಿ-ಪರಮಾತ್ಮನ ಪೂಜೆಯ

ರೂಪವಾದ ತನಗೆ ವಿಹಿತವಾದ ಕರ್ಮಗಳನ್ನು. ಕುರ್ಯಾದಿತಿ ಯಾವತ್-ಮಾಡಬೇಕು ಎಂದು ಒಟ್ಟು ಅರ್ಥ. ಕುತಃ-ಏತಕ್ಕೋಸ್ಕರ ? ಏವಂ (ಕರ್ಮಾಣಿ ಕುರ್ವತಿ) ನರೇ-ಹೀಗೆ ಕರ್ಮಗಳನ್ನು ಮಾಡುವ ಮನುಷ್ಯಮಾತ್ರನಾದರೂ. ತ್ವಯಿ-ನಿನ್ನಲ್ಲಿ. ಕರ್ಮ-ಪಾಪವು. ನ ಲಿಪ್ಯತೆ-ಅಂಟುವುದಿಲ್ಲ. ಸ್ವೋಚಿತೇನ-ತನಗೆ ವಿಹಿತವಾದ. ಅಸಂಕಲ್ಪಿತ ಫಲೇನ-ಫಲೇಚ್ಛಾರಹಿತವಾದ. ಕರ್ಮಣಾ-ಕರ್ಮದಿಂದ. ಭಗವತ್ಪೂಜಾಂ-ಪರಮಾತ್ಮನ ಪೂಜೆಯನ್ನು. ಕುರ್ವಂತಂ-ಮಾಡುವ. ಅಲ್ಪಾಧಿಕಾರಿಣಂ ಅಪಿ-ಸಾಮಾನ್ಯ ಅಧಿಕಾರಿಯನ್ನೂ. ಪ್ರಾಗುತ್ತರಾಣಿ-ಈ ಜನ್ಮಕ್ಕೆ ಮೊದಲು ಮತ್ತು ಮರಣಾನಂತರ ಪ್ರಸಕ್ತವಾಗುವ. ಪಾಪಾನಿ-ಪಾಪಗಳು. ನ ಬಾಧಂತೆ-ಬಾಧಿಸುವುದಿಲ್ಲ. ತತಶ್ಚ-ಇದರಿಂದಲಾದರೂ. ಸಃ-ಅವನು. ಜ್ಞಾನಾಧಿಕಾರೀ-ಜ್ಞಾನಕ್ಕೆ ಅರ್ಹನಾದವನು. ಭವತಿ-ಆಗುತ್ತಾನೆ. ಇತಿ ಯಾವತ್-ಹೀಗೆ ಅಭಿಪ್ರಾಯ. ಇತಃ – ಕರ್ಮಕರಣಾತ್ – ಕರ್ಮಮಾಡುವುದರ ದೆಶೆಯಿಂದ. ಅನ್ಯಥಾ-ಅಕರಣೆ-ಕರ್ಮಮಾಡದಿರಲು. ಕರ್ಮ-ಪಾಪವು. ನ ಲಿಪ್ಯತ ಇತಿ ನಾಸ್ತಿ-ಅಂಟುವುದಿಲ್ಲ ಎಂಬುದಿಲ್ಲ. ಭಗವತ್ಪೂಜಾಂ ಅಕುರ್ವಂತಂ ಪಾಪಾನಿ ಬಾಧಂತ ಏವ-ಭಗವತ್ಪೂಜೆಯನ್ನು ಮಾಡದಿರುವವನನ್ನು ಪಾಪಗಳು ಬಾಧಿಸುವುದೇ ನಿಶ್ಚಯ. ತತಶ್ಚ-ಆದರಿಂದಲಾದರೂ. ಅಸೌ- ಇವನು. ಜ್ಞಾನೆ-ಜ್ಞಾನದಲ್ಲಿ ನಾಧಿಕ್ರಿಯತೆ-ಅಧಿಕಾರವನ್ನು ಹೊಂದುವುದಿಲ್ಲ. ಅತಶ್ಚ-ಈ ಕಾರಣದಿಂದಲಾದರೂ. ಕರ್ಮಾಣಿ-ಕರ್ಮಗಳನ್ನು. ಕುರ್ಯಾತ್-ಮಾಡಬೇಕು. ಇತಿ-ಹೀಗೆ ಸಿದ್ಧಾಂತ.

ಪುರುಷಾರ್ಥನಯೆ- ಪುರುಷಾರ್ಥಾಧಿಕರಣ ಬ್ರಹ್ಮಮೀಮಾಂಸಾ ಶಾಸ್ತ್ರದಲ್ಲಿ. ನಿಯಮಾಚ್ಚೇತಿ ಸೂತ್ರಭಾಷ್ಯಾದೌ-ನಿಯಮಾಚ್ಚ ಎಂಬ ಸೂತ್ರ ಮತ್ತು ಅದರ ಭಾಷ್ಯ ಮುಂತಾದ ಗ್ರಂಥಗಳಲ್ಲಿ. ಮುಂದುವರಿದ ವ್ಯಾಖ್ಯಾನವಿರುವುದು. ಆದರಂತೆ ಪದಾರ್ಥವಿವರಣವು ಹೀಗಿದೆ: ನರೆ-ಜ್ಞಾನಿನ್ಯಪಿ, ಜ್ಞಾನಿಯಾದವನಲ್ಲಿಯೂ ಕೂಡ. ಕರ್ಮ-ಕರ್ಮವು. ನ ಲಿಪ್ಯತ ಇತಿ ನಾಸ್ತಿ-ಅಂಟುವುದಿಲ್ಲ ಎಂದಿಲ್ಲ. ಇತಿ-ಹೀಗೆ. ಅಪರೋಕ್ಷ ಜ್ಞಾನಿನೋಽಪಿ-ಅಪರೋಕ್ಷಜ್ಞಾನಿಗೂ ಕೂಡ. ಕರ್ಮಾಕರಣೆ-ಕರ್ಮ ಮಾಡದಿರಲು. ಮುಕ್ತಾ-ಮುಕ್ತಿಯಲ್ಲಿ. ಆನಂದಹ್ರಾಸರೂಪ ಪಾಪ ಕರ್ಮಲೇಪಃ-ಆನಂದವು

ಕಡಮೆ ಬೀಳುವುದೆಂಬ ಪಾಪಕರ್ಮದ ಅಂಟುವಿಕೆಯು. ಅಸ್ತಿ ಏವ–ಇದ್ದೇ ಇರುವುದು. ಇತಿ-ಹೀಗೆ. ಜ್ಞಾನಿಪರತಯಾ–ಜ್ಞಾನಿಯ ಪರವಾಗಿ. ಮಂತ್ರಃ-ಉಪನಿಷನ್ಮಂತ್ರವು. ವ್ಯಾಖ್ಯಾತಃ–ವ್ಯಾಖ್ಯಾನವನ್ನು ಹೊಂದಿರುವುದು.||೨||

ಸೂಚನೆ

ಹೀಗೆ ಮಂತ್ರವು ಪರೋಕ್ಷಜ್ಞಾನಿ ಮತ್ತು ಅಪರೋಕ್ಷಜ್ಞಾನಿಪರವಾದ ಎರಡರ್ಥವುಳ್ಳದು. ಈ ಎರಡರ್ಥಗಳು ಒಂದೇ ಅಧಿಕಾರಿಯ ಸಾಧನದ ಬೆಳವಳಿಗೆಯ ಎರಡು ಅವಸ್ಥೆಗಳು. ಇದರಿಂದ ಪರೋಕ್ಷ ಜ್ಞಾನಿಗೊಂದು ಸಾಧನ, ಅಪರೋಕ್ಷಜ್ಞಾನಿಗೆ ಮತ್ತೊಂದು ಸಾಧನ ಎಂಬ ಸಾಮಾನ್ಯಪ್ರಸಿದ್ಧಿಯು ಬಾಧಿತವಾದುದೆಂದು ವ್ಯಕ್ತವಾಗುವುದು. ನಿಷ್ಕಾಮ ಮತ್ತು ಭಗವತ್ಪೂಜಾತ್ಮಕವಾದ ಕರ್ಮವು ಸರ್ವರಿಗೂ ಸಮಾನ. ಅಧಿಕಾರಿಯ ಪರೋಕ್ಷಾವಸ್ಥೆಯಲ್ಲಿ ಪ್ರಸಕ್ತವಾದ ಸಾಧನವು ಅವನು ಜ್ಞಾನಿಯಾದರೂ ಸಾಧನವೇ ಆಗಿರುವುದು.

ಈ ಅಂಶವನ್ನು ಪರಿಶೀಲನೆ ಮಾಡುವುದರಿಂದಲೇ ಮತ್ತೊಂದು ಸಾಮಾನ್ಯ ಪ್ರತೀತಿಯೂ ಬಾಧಿತವೆಂದು ವ್ಯಕ್ತವಾಗುವುದು. ಸಾಮಾನ್ಯವಾಗಿ ಕರ್ಮವೆಂಬ ಶಬ್ದದಿಂದ ಕರ್ಮಠರ ನಿತ್ಯ ನೈಮಿತ್ತಿಕ ಮುಂತಾದುದನ್ನು ಅರ್ಥ ಮಾಡಿಕೊಳ್ಳುವ ಪದ್ಧತಿ. ಇದು ಎರಡು ವಿಧ ಜ್ಞಾನಿಗಳಿಗೂ ಸಾಧನೆಯಾಗುವುದಿಲ್ಲ. ಈ ನಿತ್ಯ ನೈಮಿತ್ತಿಕ ಮೊದಲಾದುದು ಕರ್ತೃತ್ವಾರೋಪ, ತನ್ಮೂಲಕ ಸರ್ವಕರ್ತೃ ಭಗವನ್ನಿರಾಕರಣ, ಈಮೂಲಕವಾದುದು. ಸರ್ವಕರ್ತೃ ಪರಮಾತ್ಮನ ಪರೋಕ್ಷಜ್ಞಾನ ಅಥವಾ ಅಪರೋಕ್ಷವನ್ನು ಹೊಂದಿದ ಜ್ಞಾನಿಗೆ ಈ ಕರ್ಮಗಳು ಅನ್ವಯಿಸುವುದಿಲ್ಲ. ಈ ಕಾರಣ ಕರ್ಮ ಎಂದರೆ ಈನಿತ್ಯನೈಮಿತ್ತಿಕ ಮುಂತಾದುದಲ್ಲ. ಇವು ವೇದವಿಹಿತವೆಂದು ತಿಳಿಯುವುದೂ ಸರಿಯಲ್ಲ. ಪರಮಾತ್ಮನ ಸರ್ವಕರ್ತೃತ್ವವನ್ನು ಸ್ಥಾಪಿಸಲೋಸುಗವೇ ವೇದದ ಪ್ರವೃತ್ತಿ. ಅದು ಕರ್ತೃತ್ವಾರೋಪವನ್ನು ಅಪೇಕ್ಷಿಸುವ ಕರ್ಮವನ್ನು ಬೊಧಿಸುವುದು ಅಸಂಭವ. ಅದು ಬೋಧಿಸುವುದು ಪರಮಾತ್ಮನ ಸರ್ವಕರ್ತೃತ್ವದ ವಿಸ್ತಾರವನ್ನು. ಈ ತತ್ತ್ವವನ್ನು ಶ್ರವಣಮನನ ನಿದಿಧ್ಯಾಸನಗಳೆಂದು ತಿಳಿಯುವುದೇ ಕರ್ಮ. ಇದೇವಿದ್ಯಾರೂಪವಾದ ಕರ್ಮ. ಈ ಕರ್ಮಕ್ಕೆ ಸಂಗತವಾದ ಜೀವನವೆಂದರೆ ವರ್ಣಾಶ್ರಮೋಚಿತ ಜೀವನ.

ಈ ಜೀವನವೇ ಭಗವತ್ಪೂಜೆ. ಈ ಜೀವನದಲ್ಲಿ ಕಂಡುಬರುವ ವ್ಯಾಪಾರವೇ ನಿಷ್ಕಾಮಕರ್ಮ. ಇದು ನ್ಯಾಯವಾದ ಅಧ್ಯಯನದಿಂದ ತಿಳಿಯಬೇಕಾದ ಅಂಶ. ಯಾವ ರೀತಿಯ ಕರ್ತೃತ್ವಾರೋಪವೂ ಪಾಪವೆ. ವಿದ್ಯಾಕರ್ಮದಿಂದಲೇ ಅದರ ನಾಶ. ಎಂದು ಒಟ್ಟು ಅಭಿಪ್ರಾಯ.

ಈ ವಿದ್ಯಾಕರ್ಮವೆಂಬ ಭಗವತ್ಪೂಜೆ ಮಾಡುವವನನ್ನು ಜ್ಞಾನಾತ್ ಪೂರ್ವದಲ್ಲಿ ಪ್ರಸಕ್ತವಾದ ಪಾಪವಾಗಲಿ ಅನಂತರ ಪ್ರಸಕ್ತವಾಗಬಹುದಾದ ಪಾಪವಾಗಲಿ ಕಾಡುವುದಿಲ್ಲ. ಜ್ಞಾನದ ಬೆಳವಳಿಗೆಯಿಂದ ಈ ಸರ್ವವೂ ನಾಶ ಹೊಂದುವುದೇ ಇದಕ್ಕೆ ಕಾರಣ. ಇದರ ವಿಶೇಷಾಂಶಗಳು ಅಧ್ಯಯನ ಕ್ರಮದಲ್ಲಿ ಗ್ರಂಥಾಂತರಗಳಿಂದ ವ್ಯಕ್ತವಾಗುವುವು. ಒಟ್ಟಿನಮೇಲೆ ಜ್ಞಾನಕ್ಕೆ ಮಾಡುವ ಅಪರಾಧವೇ ಪಾಪ. ಅದಕ್ಕುತ್ತೇಜಕವಾದ ಜೀವನ ವ್ಯಾಪಾರವೇ ಪುಣ್ಯ. ಜ್ಞಾನವೆಂದರೆ ಈಶನು ಸರ್ವಥಾ ಸ್ವತಂತ್ರ, ತದಿತರವಾದ ಪ್ರಕೃತ್ಯಾದಿ ಸರ್ವವೂ ಸರ್ವಥಾ ಪರತಂತ್ರವೆಂದು ಶಾಸ್ತ್ರಾಧ್ಯಯನದಿಂದಲೇ ತಿಳಿಯುವುದು. ಇದೇ ತತ್ತ್ವವನ್ನು ಪ್ರಮೇಯವೆಂಬ ಆಕಾರದಲ್ಲಿ ಖಾಸಗಿಯಾಗಿ ತಿಳಿಯುವುದು ಜ್ಞಾನಕ್ಕೆ ಮಾಡಿದ ಒಂದು ಅಪರಾಧ. ಹೀಗೆ ತಿಳಿದವರಿಗೆ ಶಾಸ್ತ್ರಾಭ್ಯಾಸದಲ್ಲಿ ಪ್ರವೃತ್ತಿ ಹುಟ್ಟದಿರುವುದೇ ಇದನ್ನು ಅಪರಾಧವೆನ್ನಲು ಕಾರಣ. ಶಾಸ್ತ್ರಾಭ್ಯಾಸವಿಲ್ಲದಮೇಲೆ ತತ್ತ್ವವಿಷಯದಲ್ಲಿ ಸಂದೇಹವೂ ಹುಟ್ಟಲವಕಾಶವಿಲ್ಲದ ಮೌಢ್ಯವಿರುವುದು. ಶಾಸ್ತ್ರವಾದರೊ ತತ್ತ್ವವನ್ನು ಪರಿಚಯ ಮಾಡಿಸುವ ಸಂದರ್ಭದಲ್ಲಿ ನಾನಾ ರೀತಿಯ ಸಂದೇಹವನ್ನು ಹುಟ್ಟಿಸಿ, ಅದನ್ನು ಪರಿಹರಿಸಿ, ಪೂರ್ವಪಕ್ಷ ರಹಿತವಾದ ಸಿದ್ಧಾಂತರೂಪವಾದ ಜ್ಞಾನವನ್ನು ಹುಟ್ಟಿಸುವುದು.

ಭಾಷ್ಯ

ಅಕುರ್ವತಃ ಕರ್ಮ ನ ಲಿಪ್ಯತ ಇತಿ ನಾಸ್ತಿ।

ಅಕುರ್ವತಃ–ವಿದ್ಯಾಕರ್ಮವನ್ನು ಮಾಡದಿರುವವನಿಗೆ. ವಿದ್ಯಾಕರ್ಮವೆಂದರೆ ಭಗವತ್ಪೂಜಾತ್ಮಕವಾದ ನಿಷ್ಕಾಮಕರ್ಮ. ಕರ್ಮ–ಪಾಪವು. ನ ಲಿಪ್ಯತೆ–ಲೇಪ ಹೊಂದುವುದಿಲ್ಲ. ಇತಿ–ಹೀಗೆ. ನಾಸ್ತಿ–ಇಲ್ಲ. ಎಂದರೆ ಶಾಸ್ತ್ರೋಕ್ತಕರ್ಮ ಮಾಡದಿರುವವನಿಗೆ ಪಾಪಕರ್ಮ ಲೇಪವು

ತಪ್ಪುವುದೇ ಇಲ್ಲ ಎಂದು ಅಭಿಪ್ರಾಯ.

ಈ ವ್ಯಾಖ್ಯಾನವೇ ಸಾಂಪ್ರದಾಯಿಕವೆಂದು ಉತ್ತರಭಾಷ್ಯವು ಸ್ಪಷ್ಟಗೊಳಿಸುವುದು.

ಭಾಷ್ಯ—ಅಜ್ಞಸ್ಯ ಕರ್ಮ ಲಿಪ್ಯೇತ ಕೃಷ್ಣೋಽಪಾಸ್ತಿಮಕುರ್ವತಃ।
ಜ್ಞಾನಿನೋಽಪಿ ಯತೊ ಹ್ರಾಸ ಆನಂದಸ್ಯ ಭವೇದ್ಧ್ರುವಂ।
ಅತೊ ಅಲೇಪೇಽಪಿ ಲೇಪಸ್ಯಾದತಃ ಕಾರ್ಯೈವ ಸಾ ಸದಾ॥
ಇತಿ ನಾರದೀಯೆ॥

ಅಜ್ಞಸ್ಯ-ಜ್ಞಾನಿಯಲ್ಲದವನಿಗೆ. ಕರ್ಮ-ಪಾಪವು. ಲಿಪ್ಯೇತ-ಅಂಟೀತು. ಅಜ್ಞ ಎಂಬುದರ ಸ್ಪಷ್ಟೀಕರಣ ಕೃಷ್ಣೋಽಪಾಸ್ತಿಮಕುರ್ವತಃ ಎಂಬುದರಿಂದ. ಕೃಷ್ಣೋಽಪಾಸ್ತಿಂ-ಕೃಷ್ಣನ ಉಪಾಸನವನ್ನು. ಅಕುರ್ವತಃ-ಮಾಡದಿರುವವನ ಎಂದರೆ ಅಜ್ಞನ ಎಂದು ತಾತ್ಪರ್ಯ. ಒಟ್ಟಿನ ಮೇಲೆ ಅಜ್ಞನ ಎಂದರೆ ಅಧ್ಯಯನದಿಂದ ಶಾಸ್ತ್ರಜ್ಞಾನವನ್ನು ಪಡೆಯದವನ ಎಂಬ ಅರ್ಥವು ಸಿದ್ಧಿಸುವುದು. ಈ ವಿಷಯದಲ್ಲಿ ಯುಕ್ತಿಯು ಉಳಿದ ಭಾಷ್ಯವಾಕ್ಯದಲ್ಲಿ ಉಕ್ತವಾಗಿರುವುದು.

ಯತಃ-ಯಾವ ಕಾರಣದ ದೆಶೆಯಿಂದ. ಜ್ಞಾನಿನಃ ಅಪಿ-ಜ್ಞಾನಿಗೂ ಕೂಡ. ಆನಂದಸ್ಯ-ಮುಕ್ತಿಯಲ್ಲಿ ಸಂಭವಿಸುವ ಆನಂದದ. ಹ್ರಾಸಃ-ನ್ಯೂನತೆಯು. ಧ್ರುವಂ-ಸಂದೇಹವಿಲ್ಲದೆ. ಭವೇತ್-ಆಗುವುದೊ. ಅತಃ-ಆ ಕಾರಣದ ದೆಶೆಯಿಂದ. ಅಲೇಪೆ ಅಪಿ-ಕರ್ಮಲೇಪರಹಿತನೆಂದು ನಾವು ಸಾಮಾನ್ಯವಾಗಿ ಯಾವನನ್ನು ಭಾವಿಸುತ್ತೇವೆಯೋ ಅವನಿಗೂ ಕೂಡ. ಲೇಪಃ-ಕರ್ಮದ ಅಂಟುವಿಕೆಯು. ಸ್ಯಾತ್-ಆದೀತು.

ಇದೇ ಉಪನಿಷತ್ತಿಗೆ ಸಮ್ಮತವಾದ ಅರ್ಥವೆಂದು ಹೇಳಿ ಭಾಷ್ಯಕಾರರು ಇದಕ್ಕೆ ಪ್ರತಿಷ್ಠಾಪಕವಾದ ಯುಕ್ತಿಯನ್ನು ವಿವರಿಸುವರು.

ಅತಃ-ಈ ಕಾರಣದ ದೆಶೆಯಿಂದ. ಸಾ-ಕೃಷ್ಣೋಽಪಾಸ್ತಿಯು. ಸದಾ-ವಿಚ್ಛೇದವಿಲ್ಲದೆ. ಕಾರ್ಯೈವ-ಮಾಡಲ್ಪಡತಕ್ಕದ್ದೇ ಸರಿ.

ಈ ಕೃಷ್ಣೋಽಪಾಸ್ತಿಯ ಸಂಭಾವನೆಯೇ ಇಲ್ಲದ ಅಜ್ಞನಿಗೆ ಕರ್ಮಲೇಪವಿಲ್ಲದೆ ಹೇಗಾದೀತು ಎಂದು ಅಭಿಪ್ರಾಯ.

ಇದೇ ಶ್ರುತಿಯ ಸಂಪ್ರದಾಯ ಸಿದ್ಧವಾದ ಅರ್ಥ ಎಂದು ಭಾಷ್ಯಕಾರರು ಸೂಚಿಸುತ್ತಾರೆ.

ಇತಿ-ಹೀಗೆ. ನಾರದೀಯೆ-ನಾರದೀಯದಲ್ಲಿ ಉಕ್ತವಾಗಿರುವುದು ಎಂದು.

ಸೂಚನೆ

ಹೀಗೆ ಹೇಳುವ ಭಾಷ್ಯಕಾರರಿಗೆ ಉಪನಿಷತ್ಪದಗಳಿಗೆ ಯಾರು ಅರ್ಥ ಹೇಳಿದರೂ ಶ್ರುತಿ ಸಂಪ್ರದಾಯದ ಕಡೆ ಗಮನವಿರಬೇಕೆಂದು ವಿಧಾನ ಮಾಡುವುದರಲ್ಲಿ ತಾತ್ಪರ್ಯ. ಕೇವಲ ಸಂಸ್ಕೃತಪದಕ್ಕಾಗುವ ಅರ್ಥವನ್ನು ಉಪನಿಷತ್ತಿಗೆ ಹೇಳುವುದು ಸರಿಯಲ್ಲ. ಲೋಕ ವ್ಯವಹಾರದ ಅತಾತ್ತ್ವಿಕತೆಯನ್ನು ಪ್ರಕಾಶಪಡಿಸಿ ಅಲೌಕಿಕ ಮಹಿಮೆಯುಳ್ಳ ಜ್ಞಾನವನ್ನು ಸಮರ್ಥಿಸುವ ಉಪನಿಷತ್ ಪದಗಳು ಲೌಕಿಕಾರ್ಥವನ್ನು ಆಶ್ರಯಿಸಿ ಬಂದಿಲ್ಲ. ಉಪನಿಷತ್ ಶ್ರುತಿ ಭಾಗ. ಶ್ರುತಿ ಅಪೌರುಷೇಯ. ಪದ ಪ್ರಯೋಗವೂ ಅಪೌರುಷೇಯ. ಲೌಕಿಕಾರ್ಥವನ್ನು ಹೇಳುವ ಉದ್ದೇಶದಿಂದ ಅದರ ಪ್ರಯೋಗವಿಲ್ಲ. ಲೌಕಿಕಾರ್ಥವೆಂದರೆ ಪ್ರಪಂಚದಲ್ಲಿ ಬುದ್ಧಿವಂತರು ತಮ್ಮ ಪ್ರತ್ಯಕ್ಷಾನುಮಾನಗಳಿಂದ ಯುಕ್ತವೆಂದು ಭಾವಿಸಿದ ಅರ್ಥ. ಶ್ರುತಿಯ ಅರ್ಥವಾದರೊ ಅಲೌಕಿಕ. ಅದು ಶ್ರುತಿಯಿಂದಲೇ ಸಿದ್ಧವಾಗುವ ಅರ್ಥ. ಈ ಅರ್ಥವನ್ನು ವಿವರಿಸುವ ಉದ್ದೇಶವುಳ್ಳದು ಬ್ರಹ್ಮಸೂತ್ರ ಮತ್ತು ಅದರ ಭಾಷ್ಯ ಮುಂತಾದುದು. ಶ್ರುತ್ಯರ್ಥ ಸಂಪ್ರದಾಯವನ್ನು ಅನುಷ್ಠಾನಕ್ಕೆ ತಂದುದು ಸ್ಮೃತಿ. ಬ್ರಹ್ಮಾಂಡ, ನಾರದೀಯ ಮುಂತಾದುದು ಸ್ಮೃತಿ. ಇವು ಸ್ವತಂತ್ರವಾಗಿ ಜ್ಞಾನಜನಕವಲ್ಲ; ಶ್ರುತ್ಯರ್ಥವನ್ನು ನಿರೂಪಿಸುವುದಾಗಿ ಜ್ಞಾನಜನಕ. ಈ ನಿರೂಪಣೆಯು ನ್ಯಾಯಕ್ಕೊಳಪಟ್ಟಿರುವುದು. ಶ್ರುತ್ಯರ್ಥಸಾಧಕವಾದ ಈ ನ್ಯಾಯವನ್ನು ಭಾಷ್ಯಕಾರರು ಸ್ಮೃತಿಯನ್ನು ಉದಾಹರಿಸುವುದರ ಮೂಲಕ ಪ್ರಕಾಶಪಡಿಸಿ ತಾವು ಮಾಡಿದ ಶ್ರುತ್ಯರ್ಥ ಸಾಧುವೆಂದು ಸೂಚಿಸುವರು.

ಪ್ರಕೃತ ವಿಚಾರಕ್ಕೆ ಈ ವಿಷಯವನ್ನು ಸಂಬಂಧಿಸೋಣ. ಜ್ಞಾನಿ ಎಂದು ಪ್ರಸಿದ್ಧನಾದವನು ಒಂದು ವೇಳೆ ವಿದ್ಯಾಕರ್ಮರಹಿತನಾದರೆ ಅದು ಅವನ ಜ್ಞಾನದ ಅಪೂರ್ಣತೆ. ಆ ಜ್ಞಾನದಿಂದ ಲಭಿಸುವ ಮುಕ್ತಿಯೂ ಅಪೂರ್ಣವೇ. ಇದೇ ಆನಂದಹ್ರಾಸವೆಂಬುದು. ಇದೇ ಜ್ಞಾನಿಗೆ ಸಂಭವಿ

ಸುವ ಕರ್ಮಲೇಪ. ಈ ಲೇಪವು ಅವನಿಗೆ ಇಲ್ಲ ಎಂದರೆ ಅಜ್ಞಾನಿಯು ಕರ್ಮಲೇಪವುಳ್ಳವನೆಂದು ಹೇಳುವುದು ಅಯುಕ್ತವಾಗುವುದು. ಅಜ್ಞಾನಿಗೆ ಕರ್ಮಲೇಪವಿಲ್ಲವೆಂದರೆ ಆದರ ನಾಶಕ್ಕೆ ಅವನಿಗೆ ಜ್ಞಾನದ ಆವಶ್ಯಕತೆಯೇ ಇಲ್ಲ. ಉಪನಿಷತ್ ಪ್ರವೃತ್ತಿ ಪರಮಾತ್ಮ ಜ್ಞಾನಸಾಧನೆಗೋಸ್ಕರ. ಈ ನಿಮಿತ್ತದಿಂದ ಅಜ್ಞಾನಿಯು ಕರ್ಮಲೇಪವುಳ್ಳವನೆಂದು ಹೇಳಬೇಕಾಯಿತು. ಇದಕ್ಕೆ ಸಾಧನವಾಗಿ ಕೃಷ್ಣೋಪಾಸ್ತಿರೂಪವಾದ ವಿದ್ಯಾಕರ್ಮ ನಿಯಮೇನ ಕಾರ್ಯ. ಅದಿಲ್ಲದವನು ಅಜ್ಞಾನಿ. ಅವನಿಗೆ ಕರ್ಮಲೇಪ ತಪ್ಪುವುದಿಲ್ಲ ಎಂದು ಸಾಧನೆ ಪ್ರಕೃತವಾಯಿತು. ಕೃಷ್ಣೋಪಾಸ್ತಿಯೇ ನಿಯಮೇನ ಕಾರ್ಯ ಎಂದರೆ ಮಾಡಲ್ಪಡಬೇಕು ಎಂಬ ಅರ್ಥಕ್ಕೆ ಸಾಧಕವಾಗಿ ಕೃಷ್ಣೋಪಾಸ್ತಿಗೆ ಭಂಗ ಬರುವುದಾದರೆ ಜ್ಞಾನಿಗೂ ಕರ್ಮಲೇಪ ಉಂಟು ಎಂದು ತೋರಿಸಬೇಕಾಯಿತು. ವಿದ್ಯಾಕರ್ಮರಹಿತನಿಗೆ ಕರ್ಮಲೇಪ ತಪ್ಪುವುದಿಲ್ಲ ಎಂಬ ಉಪನಿಷದ್ವಾಕ್ಯಕ್ಕೆ ಮೇಲೆ ಕಂಡ ಎಲ್ಲ ಅರ್ಥವೂ ದೃಷ್ಟಿಯಲ್ಲಿರಬೇಕು ಎಂದು ಪ್ರತಿಪಾದ್ಯ ವಿಷಯದ ಮಹಿಮೆಯಿಂದಲೇ ವ್ಯಕ್ತವಾಗುವುದು. ಈ ಅರ್ಥವನ್ನೇ ನಾರದೀಯವು ಹೇಳುವುದು. ಇದೇ ಅರ್ಥವನ್ನು ಉಪನಿಷತ್ತಿಗೆ ಹೇಳುವ ಭಾಷ್ಯಕಾರರು ನಾರದೀಯವನ್ನು ಉದಹರಿಸುವ ಮೂಲಕ ಶ್ರುತಿ ಸಂಪ್ರದಾಯವನ್ನು ಸ್ಥಾಪಿಸುವರು. ಗ್ರಂಥಾಧ್ಯಯನವನ್ನು ಮಾಡುವವರು ಈ ಯಾವತ್ತೂ ಪ್ರಮೇಯವನ್ನು ದೃಷ್ಟಿಯಲ್ಲಿಟ್ಟಿರಬೇಕು. ಅನ್ಯಥಾ ವಾಕ್ಯಾರ್ಥವಾಗುವುದಿಲ್ಲ.

ಇದೇ ನ್ಯಾಯವನ್ನು ಅರ್ಥನಿರ್ಣಾಯಕವನ್ನಾಗಿ ತೋರಿಸುವ ಉದಾಹೃತ 'ನಿಯಮಾಚ್ಚ' ಎಂಬ ಸೂತ್ರವು ನ್ಯಾಯೋಪಪಾದನೆಗೋಸ್ಕರ ಜ್ಞಾನಿಪರವಾದ ಶ್ರುತ್ಯರ್ಥವನ್ನು ನಿರೂಪಿಸುವುದು.

ಒಟ್ಟಿನ ಮೇಲೆ ಈ ವಿಚಾರಗಳನ್ನು ಮನಸ್ಸಿನಲ್ಲಿಟ್ಟು ಕರ್ಮ, ವಿದ್ಯಾಕರ್ಮ, ಕೃಷ್ಣೋಪಾಸ್ತಿ ಮುಂತಾದ ಶಬ್ದಗಳು ಒಂದೇ ಅರ್ಥದಲ್ಲಿ ಪ್ರಯುಕ್ತವಾಗಿರುವುವು. ಲೋಕಸಿದ್ಧವಾದ ಅರ್ಥವನ್ನು ಈ ಶಬ್ದಗಳಿಗೆ ಮಾಡಿಕೊಂಡು ವ್ಯಾಖ್ಯಾನಮಾಡುವ ಪ್ರಯತ್ನವು ಯುಕ್ತವಲ್ಲ.

ಫಲಿತಮಂತ್ರಾರ್ಥ

ತನಗೆ ಉಚಿತವಾದ ಕರ್ಮವನ್ನು ನಿಷ್ಕಾಮ ಭಗವತ್ಪೂಜಾರೂಪ

ವಾಗಿ ಮಾಡುವವನಾಗಿಯೇ ನೂರುವರ್ಷಗಳು ಎಂದರೆ ಮರಣಾಂತವಾಗಿ ಜೀವಿಸಬೇಕು. ಹೀಗೆ ಕರ್ಮಮಾಡುವ ನೀನು ಮನುಷ್ಯಮಾತ್ರನಾದರೂ ನಿನಗೆ ಪಾಪಲೇಪವಾಗುವುದಿಲ್ಲ. (ಎಂದರೆ ಜ್ಞಾನಾಧಿಕಾರಿಯಾಗುವಿ.) ಹೀಗೆ ಕರ್ಮವನ್ನು ಮಾಡದಿರಲು ನಿನ್ನನ್ನು ಪಾಪಗಳು ಬಾಧಿಸದೆ ಇರುವುದಿಲ್ಲ. ಕರ್ಮಮಾಡದ ನೀನು ಜ್ಞಾನಿ ಎಂದರೂ ನಿನಗೆ ಕರ್ಮಲೇಪ ತಪ್ಪಿದ್ದಲ್ಲ. ॥ ೨ ॥

೩

ಖಂಡಾರ್ಥವು ಮೂರನೆಯ ಮಂತ್ರದ ಆವಶ್ಯಕತೆಯನ್ನು ಹೀಗೆ ನಿರೂಪಿಸುವುದು.

ಏವಂ ಪ್ರಾಪ್ತಾಧಿಕಾರಂ ಪ್ರತಿ ಪರಮಾತ್ಮತತ್ತ್ವಬುಭುತ್ಸಾಜನನಾಯ ವಿಪರೀತ ಜ್ಞಾನಿನೊ ನಿಂದಾಮಾಹ ॥ ಅಸುರ್ಯಾ ಇತಿ ॥

ಏವಂ–ಈ ರೀತಿಯಾಗಿ. ಪ್ರಾಪ್ತಾಧಿಕಾರಂ–ಸಂಪಾದಿಸಿದಂತಹ ಅಧಿಕಾರವುಳ್ಳವನನ್ನು. ಪ್ರತಿ–ಕುರಿತು. ಪರಮಾತ್ಮತತ್ತ್ವಬುಭುತ್ಸಾಜನನಾಯ–ಪರಮಾತ್ಮನ ತತ್ತ್ವವನ್ನು ತಿಳಿಯಬೇಕೆಂಬ ಅಪೇಕ್ಷೆಯನ್ನು ಹುಟ್ಟಿಸುವುದಕ್ಕೋಸ್ಕರ. ವಿಪರೀತಜ್ಞಾನಿನಃ–ವಿರುದ್ಧವಾದ ಜ್ಞಾನವುಳ್ಳವನ. ನಿಂದಾಂ–ನಿಂದೆಯನ್ನು. ಆಹ–ಹೇಳಿದನು. ಅಸುರ್ಯಾ ಇತಿ–ಅಸುರ್ಯಾ ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಮಂತ್ರ

ಅಸುರ್ಯಾ ನಾಮ ತೆ ಲೋಕಾಃ ಅಂಧೇನ ತಮಸಾ ವೃತಾಃ।
ತಾ ಗ್ಂ ಸ್ತೆ ಪ್ರೇತ್ಯಾಭಿಗಚ್ಛಂತಿ ಯೆ ಕೆ ಚಾತ್ಮಹನೊ ಜನಾಃ॥

ಖಂಡಾರ್ಥ

ಸುಷ್ಟು ರಮಣಂ–ಸುರ್ಯಂ। ಸುಪೂರ್ವಸ್ಯ ರಮತೇ ರ್ಯಪ್ರತ್ಯಯಃ। ತದ್ವಿರುದ್ಧಮಸುರ್ಯಂ–ಮಹಾದುಃಖಂ । ಅಸುರ್ಯಮೇಷ್ವಸ್ತೀತ್ಯಸುರ್ಯಾಃ। ಅರ್ಶ ಆದ್ಯಚ್ ಪ್ರತ್ಯಯೋಯಂ। ಮಹಾದುಃಖವತ್ವಾದಸುರ್ಯಾಃ। ಅಸುರಪ್ರಾಪ್ಯತ್ವಾದ್ವಾ ಅಸುರ್ಯಾಃ। ಅಂಧೇನ ತಮಸಾ।

ಅಂಧಯತೀತಿ ವ್ಯುತ್ಪತ್ತ್ಯಾ ನಿಬಿಡಾಂಧಕಾರೇಣೇತ್ಯರ್ಥಃ। ಆವೃತಾಸ್ತೇ ಪ್ರಸಿದ್ಧಾ ಯೆ ಇತಿ ಶೇಷಃ। ಲೋಕಾಂಸ್ತಾನ್ ಪ್ರೇತ್ಯ ಮೃತ್ವಾಭಿಗಚ್ಛಂತಿ। ತೆ ಕೆ ಇತ್ಯತ ಉಕ್ತಂ। ಯ ಇತಿ। ಆತ್ಮಹನಃ। ಯಥಾವದಾತ್ಮಾನಮಜ್ಞಾತ್ವಾ। ವೈಪರೀತ್ಯೇನ ಜಾನಂತೊ ಯೆ ಕೇಚನ ವರ್ತಂತೆ ತೆ ಸರ್ವೇಽಪಿ ಅಭಿಗಚ್ಛಂತೀತಿ ನಾಮ ನಿಶ್ಚಿತಮೇತದಿತ್ಯರ್ಥಃ ॥ ೩ ॥

ಮಂತ್ರಸ್ಥಪದಗಳ ಅನ್ವಯ

ಅಸುರ್ಯಾಃ। ಅಂಧೇನ ತಮಸಾವೃತಾಃ ತೆ ಯೆ ಲೋಕಾಃ (ತಾ)ಪ್ರೇತ್ಯ ಅಭಿಗಚ್ಛಂತಿ. ತೆ ಕೆ ? ಯೆ ಆತ್ಮಹನಃ ಜನಾಃ ತೆ ನಾಮ.

ಖಂಡಾರ್ಥದಂತೆ ಈ ಪದಗಳ ಅರ್ಥ

ಸುಷ್ಟು–ನಿರ್ದೋಷವಾದ. ರಮಣಂ–ಸುಖ. ಇದಕ್ಕೆ ಸುರ್ಯಂ ಎಂದು ಹೆಸರು. ಸುಪೂರ್ವಸ್ಯ–ಸು ಎಂಬುದೇ ಪೂರ್ವವಾಗಿ ಉಳ್ಳ. ರಮ್–ರಮ್ ಧಾತುವಿಗೆ. ಣ್ಯಪ್ರತ್ಯಯಃ–ಣ್ಯ ಎಂಬ ಪ್ರತ್ಯಯವು ಬಂದು ಸುರ್ಯ ಎಂಬ ಪದವಾಗಿರುವುದು. ತದ್ವಿರುದ್ಧಂ–ಅದಕ್ಕೆ (ಸುರ್ಯಕ್ಕೆ) ವಿರುದ್ಧವಾದುದು. ಅಸುರ್ಯಂ–ಅಸುರ್ಯ ಎಂಬ ಪದದಿಂದ ಬೋಧ್ಯವಾದುದು. ಅಸುರ್ಯಂ ಎಂದರೆ ಮಹಾದುಃಖ ಎಂದರ್ಥ. ಅಸುರ್ಯಂ–ಮಹಾದುಃಖವು. ಏಷು–ಇವುಗಳಲ್ಲಿ. ಅಸ್ತಿ–ಇದೆ. ಇತಿ–ಈ ಕಾರಣದಿಂದ ಇವು ಅಸುರ್ಯಾ ಎಂಬ ಪದದಿಂದ ಬೋಧ್ಯವಾಗಿರುವುವು. ಅರ್ಶ ಆದ್ಯಚ್ ಪ್ರತ್ಯಯಃ–ಅರ್ಶ ಆದ್ಯಚ್ ಎಂಬ ವ್ಯಾಕರಣ ಶಾಸ್ತ್ರದ ನಿಯಮದಂತೆ ಈ ಶಬ್ದವು ಅಚ್ ಎಂಬ ಪ್ರತ್ಯಯವುಳ್ಳುದಾಗಿದೆ. ಅಯಂ–ಈ ಅಸುರ್ಯಾಃ ಎಂಬ ಪದವು. ಮಹಾದುಃಖವತ್ವಾತ್-ಇವುಗಳಲ್ಲಿ ಮಹಾದುಃಖವಿರುವುದರಿಂದ. ಅಸುರ್ಯಾಃ-(ಇವು)ಅಸುರ್ಯಾ ಎಂಬ ಪದದಿಂದ ಬೋಧ್ಯರಾಗಿರುವುವು. ಅಸುರಪ್ರಾಪ್ಯತ್ವಾತ್ ವಾ–ಅಸುರರ ಪ್ರಾಪ್ತಿಗೆ ಅರ್ಹಎಂಬ ನಿಮಿತ್ತದಿಂದಲೂ. ಅಸುರ್ಯಾಃ–ಅಸುರ್ಯ ಎಂದು ಈ ಲೋಕಗಳ ಹೆಸರು. ಅಂಧೇನ ತಮಸಾ–ಅಂಧಯತೀತಿ ವ್ಯುತ್ಪತ್ತ್ಯಾ ಎಂದರೆ ಅಂಧನನ್ನು ಮಾಡುತ್ತದೆ ಎಂದು ಅರ್ಥ ಕೊಡೋಣದರಿಂದ. ನಿಬಿಡಾಂಧಕಾರೇಣ–ನಿಬಿಡವಾದ ಅಂಧಕಾರ ಎಂದರೆ ಕತ್ತಲಿನಿಂದ. ಇತಿ–ಹೀಗೆ. ಅರ್ಥಃ–(ಅಂಧೇನ ತಮಸಾ ಎಂಬ ಪದದ) ಅರ್ಥವು.

ಆವೃತಾಃ–ಇದರಿಂದ ಮುಚ್ಚಲ್ಪಟ್ಟ. ತೆ –ಪ್ರಸಿದ್ಧಿಯನ್ನು ಹೊಂದಿದ. ಯೆ–ಯಾವ ಲೋಕಗಳೋ ಅವು. ಇತಿ–ಹೀಗೆ. ಶೇಷಃ–ಪದಸಂಬಂಧದ ಆವಶ್ಯಕತೆಯಿರುವುದು. ಲೋಕಾಃ–ಲೋಕಗಳು, ಸ್ಥಾನ ವಿಶೇಷಗಳು. ತಾ–ಅವುಗಳನ್ನು. ಪ್ರೇತ್ಯ–ಮೃತ್ವಾ, ಮರಣಹೊಂದಿ. ಅಭಿಗಚ್ಛಂತಿ–ಪ್ರವೇಶಿಸುತ್ತಾರೆ. ತೆ –ಅವರು. ಕೆ –ಯಾರು. ಇತಿ–ಹೀಗೆ ಕೇಳೋಣದರ. ಅತಃ–ದೆಶೆಯಿಂದ. ಉಕ್ತಂ–ಉತ್ತರವಾಗಿ ಹೇಳಲ್ಪಟ್ಟಿತು. ಯ ಇತಿ– ಯೆ ಎಂಬ ಪದದಿಂದ. ಆತ್ಮಹನಃ-ಯಥಾವದಾತ್ಮಾನಮಜ್ಞಾತ್ವಾ ವೈಪರೀತ್ಯೇನ ಜಾನಂತಃ– ಯಥಾವತ್ – ಅದಿರುವ ಸ್ಥಿತಿಯಲ್ಲಿ. ಆತ್ಮಾನಂ – ಆತ್ಮತತ್ತ್ವವನ್ನು, ಅಜ್ಞಾತ್ವಾ-ತಿಳಿಯದೆ, ವೈಪರೀತ್ಯೇನ-ವಿರುದ್ಧವಾಗಿ. ಜಾನಂತಃ–ತಿಳಿದವರು. ಯೆ–ಯಾವ. ಕೇಚನ–ಕೆಲವರು. ವರ್ತಂತೆ–ಇರುತ್ತಾರೆಯೋ ತೆ–ಅ. ಸರ್ವೆ–ಸಮಸ್ತರೂ. ಅಪಿ–ಕೂಡ. ಅಭಿಗಚ್ಛಂತಿ–ಪ್ರವೇಶಿಸುತ್ತಾರೆ. ಇತಿ–ಹೀಗೆ. ನಾಮ–ನಿಶ್ಚಿತಮೇತತ್. ಇತ್ಯರ್ಥಃ–ನಿಶ್ಚಿವಾದುದು ಇದು ಎಂದು ಅರ್ಥ ॥ ೩ ॥

ಸೂಚನೆ

ತತ್ತ್ವಜ್ಞಾನವಿಲ್ಲದೆ ಲೋಕದಲ್ಲಿ ಸುಖವಾಗಿ ಬಾಳಬಹುದೆಂದು ಸಾಮಾನ್ಯ ಪ್ರಸಿದ್ಧಿ. ಈ ನಿಮಿತ್ತದಿಂದ ತತ್ತ್ವದ ಅಜ್ಞಾನವೇ ಆತ್ಮನಾಶ ಎಂಬ ಭಾವವನ್ನು ಹೆಚ್ಚು ವಿಚಾರದಿಂದ ತಿಳಿಯಬೇಕಾದ ಆವಶ್ಯಕತೆ ಇದೆ.

ಸರ್ವರಿಗೂ ಮುಕ್ತಿಯಾಗಲೆಂದೂ ಮುಕ್ತಿಯುಂಟೆಂದೂ ಸಾಮಾನ್ಯವಾಗಿ ಶ್ರುತವಾಗುತ್ತಿರುವುದು. ಇದು ಉಪನಿಷತ್ಸಂಪ್ರದಾಯಕ್ಕೆ ವಿರುದ್ಧವೆಂದು ಈ ಮಂತ್ರಾರ್ಥವನ್ನು ತಿಳಿಯುವುದರಿಂದ ವ್ಯಕ್ತವಾಗುವುದು. ವಿಭಿನ್ನ ಸಾಧನ ಮಾಡಿದವರಿಗೆಲ್ಲ ಮುಕ್ತಿಯಾಗುವುದಾದರೆ ಸಾಧನ ನಿಯಮವಿಲ್ಲದೆ ಹೋಗುವುದು. ಈ ಸನ್ನಿವೇಶದಲ್ಲಿ ಸಾಧನ ವಿಚಾರವೇ ಅಪ್ರಯೋಜಕವಾಗುವುದು.

ಮುಂದಿನ ಮಂತ್ರಗಳಲ್ಲಿ ಪ್ರಸಕ್ತವಾಗುವ ಮುಕ್ತಿ ಎಂಬ ಭಾವಕ್ಕೆ ಎದುರಾಗಿ ಅಂಧಂತಮಃ ಎಂಬ ಲೋಕವನ್ನು ಈ ಮಂತ್ರವು ಪ್ರಸ್ತಾಪಿಸುವುದು. ಈ ನಿಮಿತ್ತದಿಂದ ಮುಕ್ತಿ ಹೇಗೆ ನಿತ್ಯವೊ ತಮಸ್ಸೂ ನಿತ್ಯವೆಂದು ಸಿದ್ಧಿಸುವುದು. ಅಜ್ಞಾನವು ಎಂತಹ ಅನರ್ಥಕಾರಿ ಎಂಬುದು ಇದರಿಂದ

ಸ್ಪಷ್ಟಪಡುವುದು. ಇದರಿಂದ ಅರ್ಥಾತ್ ಜ್ಞಾನದ ಮಹಿಮೆಯು ವ್ಯಕ್ತವಾಗುವುದು. ಈ ಜ್ಞಾನವೇ ಪರಮಾತ್ಮಜ್ಞಾನ. ಇದೊಂದೇ ಶ್ರೇಯಸ್ಸಾಧನ. ಅಧಿಕಾರಿಗೇ ಈ ಜ್ಞಾನವು ಸಂಭವಿಸುವುದು. ಇದರ ಸ್ಥಾಪನೆಯೇ ಈ ಮಂತ್ರದ ಉದ್ದೇಶ.

ಜ್ಞಾನ ವಿರೋಧಿಗಳೇ ಅಸುರರು. ವಿರೋಧವೇ ಮಹಾದುಃಖ. ಅರ್ಥಾತ್ ಜ್ಞಾನವೇ ಪರಮಾನಂದ. ಇದೇ ಮುಕ್ತಿ. ಜ್ಞಾನಿಗಳಾದ ಎಲ್ಲರೂ ಮುಕ್ತಿ ಹೊಂದುವರು.

ಭಾಷ್ಯ

ಸುಷ್ಟು ರಮಣವಿರುದ್ಧತ್ವಾತ್
ಅಸುರಾಣಾಂ ಪ್ರಾಪ್ಯತ್ವಾಚ್ಚ ಅಸುರ್ಯಾಃ ॥

ನಿರ್ದೋಷವಾದ ಸುಖಕ್ಕೆ ವಿರುದ್ಧವಾದುದು ಎಂಬ ನಿಮಿತ್ತದಿಂದಲೂ ಅಸುರರಿಗೆ ಪ್ರಾಪ್ಯವಾದುದು ಎಂಬ ನಿಮಿತ್ತದಿಂದಲೂ ಕೂಡ ಅಸುರ್ಯಾಃ ಎಂದು ಆ ಲೋಕಗಳಿಗೆ ಹೆಸರು.

ಇದೇ ಸಂಪ್ರದಾಯಸಿದ್ಧವಾದ ಅರ್ಥವೆಂದು ಭಾಷ್ಯಕಾರರು ತೋರಿಸುತ್ತಾರೆ.

ಭಾಷ್ಯ—ನ ಚ ರಮಂತ್ಯಹೊ ಅಸದುಪಾಸನಯಾತ್ಮಹನ ಇತ್ಯುಕ್ತತ್ವಾತ್।

ಅಸದುಪಾಸನಯಾ– ಅಸತ್–ಅಸಾಧುವಾದ, ಉಪಾಸನಯಾ–ಧ್ಯಾನದಿಂದ, ಎಂದರೆ ತತ್ತ್ವವಿಷಯದಲ್ಲಿ ವಿರುದ್ಧವಾದ ಜ್ಞಾನ ಹೊಂದೋಣದರಿಂದ. ಆತ್ಮಹನಃ – ಆತ್ಮನಾಶಮಾಡಿಕೊಂಡವರು. ನ ಚ ರಮಂತಿ–ಸುಖವನ್ನು ಹೊಂದುವುದೇ ಇಲ್ಲ. ಅಹೊ–ಇದು ಪ್ರಮಾಣ ಪ್ರಸಿದ್ಧವಾದುದು. ಇತಿ–ಹೀಗೆ. ಉಕ್ತತ್ವಾತ್– ಪ್ರಮಾಣಸಿದ್ಧವಾಗಿರುವ ನಿಮಿತ್ತದಿಂದ.

ಭಾಷ್ಯಕಾರರು ಉಕ್ತಾರ್ಥದಲ್ಲಿ ಪ್ರಮಾಣವನ್ನು ವಿವರಿಸುತ್ತಾರೆ.

ಭಾಷ್ಯ—ಮಹಾದುಃಖೈಕ ಹೇತುತ್ವಾತ್ ಪ್ರಾಪ್ಯತ್ವಾದಸುರೈಸ್ತಥಾ ।
ಅಸುರ್ಯಾ ನಾಮ ತೆ ಲೋಕಾಃ ತಾ೯ ಯಾಂತಿ ವಿಮುಖಾ ಹರೌ ॥

॥ ಇತಿ ವಾಮನೆ ॥

ಮಹಾದುಃಖೈಕಹೇತುತ್ವಾತ್–ಅತ್ಯಂತ ದುಃಖಕ್ಕೆ ಕಾರಣವಾದ ನಿಮಿತ್ತದಿಂದ. ತಥಾ–ಹಾಗೆಯೆ. ಅಸುರೈಃ–ಅಸುರರಿಂದ. ಪ್ರಾಪ್ಯತ್ವಾತ್–ಹೊಂದಲ್ಪಡುವ ನಿಮಿತ್ತದಿಂದ. ತೆ – ಆ. ಲೋಕಾಃ – ಲೋಕಗಳು. ಅಸುರ್ಯಾಃ–ಅಸುರ್ಯಾಃ ಎಂಬ. ನಾಮ-ಹೆಸರುಳ್ಳವು. ತಾ೯–ಆ ಲೋಕಗಳನ್ನು. ಹರೌ–ಪರಮಾತ್ಮನಲ್ಲಿ. ವಿಮುಖಾಃ–ವಿಶ್ವಾಸವಿಲ್ಲದವರು ಎಂದರೆ ಪರಮಾತ್ಮಜ್ಞಾನವನ್ನು ಹೊಂದದವರು. ಯಾಂತಿ–ಹೊಂದುತ್ತಾರೆ. ಇತಿ–ಹೀಗೆ. ವಾಮನೆ–ವಾಮನದಲ್ಲಿ ಉಕ್ತವಾಗಿರುವುದು.

ಇವಕ್ಕೆ ವಿನಾಯಿತಿಯು ಸಾಧ್ಯವಲ್ಲವೆಂದು ಭಾಷ್ಯಕಾರರು ಹೇಳುತ್ತಾರೆ.

ಭಾಷ್ಯ—ಯೆ ಕೆ ಚೇತಿ ನಿಯಮ ಉಕ್ತಃ ।

ಯೆ ಕೆ ಚ –ಯೆ ಕೆ ಚ ಎಂಬ ಉಪನಿಷತ್ಪದಗಳು. ಇತಿ–ಇವುಗಳಿಂದ. ನಿಯಮಃ-ನಿಯಮವು ಎಂದರೆ ತತ್ತ್ವವಿರುದ್ಧಜ್ಞಾನವುಳ್ಳವರು ವಿನಾಯಿತಿ ಇಲ್ಲದೆ ಮಹಾದುಃಖವನ್ನು ಹೊಂದುತ್ತಾರೆ ಎಂದು ಉಕ್ತಃ-ಸಿದ್ಧಾಂತಿತವಾಗಿದೆ.

ಈ ಅರ್ಥವೇ ಶ್ರುತಿ ಸಂಪ್ರದಾಯ ಸಿದ್ಧವೆನ್ನುವಲ್ಲಿ ಭಾಷ್ಯಕಾರರು ಪ್ರಮಾಣವನ್ನು ಉದಾಹರಿಸುತ್ತಾರೆ.

ಭಾಷ್ಯ— ನಿಯಮೇನ ತಮೊ ಯಾಂತಿ ಸರ್ವೇಽಪಿ ವಿಮುಖಾ ಹರೌ ಇತಿ ಚ ।

ನಿಯಮೇನ-ವಿನಾಯಿತಿ ಇಲ್ಲದೆ. ಹರೌ-ಪರಮಾತ್ಮನಲ್ಲಿ. ವಿಮುಖಾಃ-ವಿರೋಧ ಬುದ್ಧಿಯುಳ್ಳವರು. ತಮಃ-ಮಹಾದುಃಖವನ್ನು, ಯಾಂತಿ–ಹೊಂದುತ್ತಾರೆ. ಇತಿ ಚ-ಹೀಗೂ (ಅದೇ, ಪ್ರಮಾಣವು ವಿವರಿಸುವುದು.)

ಸೂಚನೆ

ನಿರ್ದೋಷ ಸುಖ ಎಂದರೆ ದುಃಖಮಿಶ್ರವಲ್ಲದ ಸುಖ. ಇದಲ್ಲದುದು ದುಃಖ. ನಾವು ತಾತ್ತ್ವಿಕವಾಗಿ ಸುಖವೆಂದು ತಿಳಿದಿರುವುದೂ ಸದೋಷವಾದುದು. ಅದು ದುಃಖರೂಪವಾದುದು. ಸೂಕ್ಷ್ಮದೃಷ್ಟಿಯುಳ್ಳವರಿಗೆ ಈ ಅಂಶ ತಿಳಿಯದೇ ಇಲ್ಲ. ಸಾಮಗ್ರಿಗಳೆಲ್ಲವೂ ಇದ್ದರೂ ಶಾಂತಿಯಿಲ್ಲದಿರುವುದಕ್ಕೆ ಇದೇ ಕಾರಣ. ಹೊಸ ಹೊಸ ಸುಖವನ್ನು ಕಂಡುಹಿಡಿಯುವ ಪ್ರಯತ್ನವೂ ಈ ಅಶಾಂತಿಯನ್ನು ಸೂಚಿಸುವುದು.

ಸುಖಲೇಶವಿಲ್ಲದುದೇ ಮಹಾ ದುಃಖ. ಇದರ ಪರಮಾವಧಿಯು ಅಂಧಂತಮಸ್ ಎನ್ನುವುದು. ಪರಮಾತ್ಮ ತತ್ತ್ವಕ್ಕೆ ವಿರುದ್ಧವಾದ ತಿಳಿವಳಿಕೆಯಿಂದ ಈ ಮಹಾ ದುಃಖ ಸಂಭವಿಸುವುದು. ಈ ವಿರುದ್ಧಭಾವನೆಯಿರುವವನನ್ನು ಉಪನಿಷತ್ತು ಆತ್ಮಹನನೆಂದು ಕರೆಯುವುದು. ಆತ್ಮಹನ ಎಂಬಲ್ಲಿ ಎರಡರ್ಥ ಅಡಗಿರುವುವು—ತನ್ನನ್ನು ತಾನು ನಾಶಪಡಿಸಿಕೊಂಡವನೆಂದು ಒಂದರ್ಥ. ಪರಮಾತ್ಮನಿರಾಕರಣಮಾಡಿದವನೆಂದು ಮತ್ತೊಂದರ್ಥ. ಈ ಎರಡೂ ಒಂದೇ ಅರ್ಥದ ಆಕಾರವಿಶೇಷಗಳು.

ಪರಮಾತ್ಮನ ಜ್ಞಾನವೆಂದರೆ ಮೊದಲನೆಯ ಮಂತ್ರದಲ್ಲಿ ಸೂಚಿತವಾದಂತೆ ಮತ್ತು ಮುಂದಿನ ಮಂತ್ರಗಳಲ್ಲಿ ವಿಸ್ತೃತವಾಗುವಂತೆ ಸಿದ್ಧಾಂತಸಮ್ಮತವಾದ ಅರ್ಥದಲ್ಲಿ ಪರಮಾತ್ಮ ಸ್ವತಂತ್ರ ಎಂಬ ಜ್ಞಾನ. ಇದರಲ್ಲಿಯೇ ಜಗತ್ತು ಪರತಂತ್ರ ಎಂಬ ಜ್ಞಾನವು ಅಡಗಿರುವುದು.

ಈ ತತ್ತ್ವಕ್ಕೆ ವಿರುದ್ಧವಾದ ಜ್ಞಾನದಲ್ಲಿ ಆಸಕ್ತರಾದವರೇ ಅಸುರರು. ನಾವು ಸಾಮಾನ್ಯವಾಗಿ ಲೋಕರಕ್ಷಕ ಮುಂತಾದ ರೀತಿಯಲ್ಲಿ ಪರಮಾತ್ಮನನ್ನು ತಿಳಿದಿರುವೆವು. ಅವನನ್ನು ಒಲಿಸಲು ಪ್ರಯತ್ನವನ್ನು ಮಾಡುವೆವು. ಇವೇ ನಾವು ಕರೆಯುವ ಪೂಜೆ ಮುಂತಾದುದು. ಈ ಪ್ರಕರಣದಲ್ಲಿ ಶಾಸ್ತ್ರೀಯ ಪದಗಳನ್ನೆಲ್ಲಾ ನಾವು ಮಾಡುವ ಪೂಜೆ ಮುಂತಾದುದಕ್ಕೆ ಅನ್ವಯಿಸುವೆವು. ಪೂರ್ವೋತ್ತರ ವಿಚಾರಗಳಿಂದ ಇವೆಲ್ಲ ತತ್ತ್ವವಿರುದ್ಧವೆಂದು ಸ್ಪಷ್ಟವಾಗಿರುವುದು. ಅಹಂಕಾರ, ಅಭಿಮಾನ ಮುಂತಾದ ದೋಷಗಳನ್ನು ಬಿಟ್ಟು ಯುಕ್ತವಾದ ರೀತಿಯಲ್ಲಿ ವಿಚಾರಮಾಡಿದರೆ ಈ ಲೌಕಿಕ ಭಾವನೆಯೆಲ್ಲವೂ ತತ್ತ್ವವಿರುದ್ಧವೆಂದು ತಿಳಿಯದಿರದು. ಪರಮಾತ್ಮನನ್ನು ಒಲಿಸಿಕೊಂಡು ಅಭೀಷ್ಟವನ್ನು ಪಡೆಯಬೇಕೆಂಬ ಕಾಮನೆ ಇರುವವನಿಗೆ ಅವನು ಮಾಡುವ ಪೂಜೆ ಒಂದು ಲಂಚ.

ಈ ಕಾಮನೆಯುಳ್ಳ ಭಾವನೆ ಎಲ್ಲವೂ ತತ್ತ್ವವಿರುದ್ಧವಾದ ಜ್ಞಾನದ ವಿಸ್ತಾರ. ಅಧಿಕಾರಿಯಾದವನು ಇವುಗಳಲ್ಲಿ ಮೋಹಬಿಟ್ಟು ಶಾಸ್ತ್ರದಿಂದ ಪರಮಾತ್ಮ ತತ್ತ್ವವನ್ನು ತಿಳಿದು ಅದಕ್ಕೆ ಸಂಗತವಾದ ಜೀವನವನ್ನು ಸಾಗಿಸುವುದು ಶ್ರೇಯಸ್ಸಿನ ಒಂದೇ ಸಾಧನ. ಈ ತತ್ತ್ವವನ್ನು ತಿಳಿಯಲು ಕರ್ತೃ

ತ್ವಾಭಿಮಾನತ್ಯಾಗ ಮುಂತಾದುದು ಅಧಿಕಾರ. ಕರ್ತೃತ್ವಾಭಿಮಾನವಿರುವವರೆಗೂ ಕಾಮನಾ ಹೋಗುವುದಿಲ್ಲ.

ಏವಂಚ ಶ್ರೇಯಸ್ಸಿಗೆ ಒಂದೇ ಸಾಧನ. ಅದು ಪರಮಾತ್ಮ ತತ್ತ್ವಜ್ಞಾನ. ಇದಕ್ಕೆ ವಿರುದ್ಧವಾದುದೆಲ್ಲವೂ ಅಜ್ಞಾನ ಎಂದರೆ ವಿಪರೀತಜ್ಞಾನ. ಅಧಿಕಾರಿಗೆ ಜ್ಞಾನಸಂಪಾದನೆಯೊಂದೇ ಧ್ಯೇಯವಾಗಿರಬೇಕೆಂದು ಒತ್ತಿ ಹೇಳುವುದೇ ಈ ಮಂತ್ರದ ಒಂದು ಉದ್ದೇಶ.

ಫಲಿತ ಮಂತ್ರಾರ್ಥ

ನಿಬಿಡವಾದ ಅಂಧಕಾರದಿಂದ ಆವೃತವಾದ ಮಹಾ ದುಃಖಮಯವಾದ ಲೋಕಗಳು ಯಾವುವೊ ಅವನ್ನು ಮರಣಾನಂತರ ಹೊಂದುತ್ತಾರೆ. ಯಾಕೆಂದರೆ ಯಾರು ಆತ್ಮನನ್ನು ಯಥಾರ್ಥವಾಗಿ ತಿಳಿಯಲಿಲ್ಲವೊ ಅವರು. ಇದರಲ್ಲಿ ಸಂದೇಹವಿಲ್ಲ.

೪

ಖಂಡಾರ್ಥವು ನಾಲ್ಕು ಮತ್ತು ಐದನೆಯ ಮಂತ್ರಗಳ ಪ್ರವೃತ್ತಿಯನ್ನು ಈ ರೀತಿ ನಿರೂಪಿಸುವುದು :

ಇದಾನೀಂ ಪರಮಾತ್ಮ ತತ್ತ್ವಮುಪದಿಶತಿ। ಅನೇಜದಿತ್ಯಾದಿ ಮಂತ್ರದ್ವಯೇನ ॥

ಈಗ ಪರಮಾತ್ಮ ತತ್ತ್ವವನ್ನು ಉಪದೇಶಿಸುತ್ತಾನೆ ಅನೇಜತ್ ಎಂದು ಆರಂಭವಾಗುವ ಎರಡು ಮಂತ್ರಗಳಿಂದ.

ಮಂತ್ರ

ಅನೇಜದೇಕಂ ಮನಸೊ ಜವೀಯೊ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ಧಾವತೊ ಅನ್ಯಾನತ್ಯೇತಿ ತಿಷ್ಠ
ತ್ತಸ್ಮಿ್ನ ಅಪೊ ಮಾತರಿಶ್ವಾ ದಧಾತಿ ॥ ೪ ॥

ಖಂಡಾರ್ಥ

ತತ್ಪರಮಾತ್ಮಸ್ವರೂಪಂ । ಅನೇಜತ್ । ಏಜೃ ಕಂಪನೆ । ಅಕಂಪಮಾನಂ ನಿರ್ಭಯತ್ವಾದಿತಿ ಭಾವಃ । ಏಕಂ-ಪ್ರಧಾನಂ । ಮನಸೋಪಿ ಜವೀಯಃ । ವೇಗವತ್ತರಂ । ಏನತ್ಪರಬ್ರಹ್ಮಸ್ವರೂಪಂ ದೇವಾಃ ನಾಪ್ನುವ

ಸಾಕಲ್ಯೇನ ನ ವ್ಯಜಾನ್ನ । ಬ್ರಹ್ಮ ತು ಪೂರ್ವಂ ಅನಾದಿಕಾಲಂ ಸ್ವಭಾವತ ಇತಿ ಯಾವತ್ । ಅರ್ಷತ್ ಋಷಜ್ಞಾನೆ ಸರ್ವಂ ವ್ಯಜಾನಾತ್ । ಆಡಾಗ ಮಾಭಾವಃ ಛಾಂದಸಃ । ತದ್ಬ್ರಹ್ಮ ತಿಷ್ಠತ್ ವಿದ್ಯಮಾನಮೇವ ಸತ್ ಧಾವತೊ ವೇಗೇನ ಗಚ್ಛತೊ ಅನ್ಯಾನ್ ಜನಾನತ್ಯೇತಿ ಅತಿಕ್ರಮ್ಯ ವರ್ತತೆ। ಅಚಿಂತ್ಯ ಶಕ್ತಿತ್ವಾತ್ ಸರ್ವಗತತ್ವಾಚ್ಚೇತಿ ಭಾವಃ । ತಸ್ಮಿನ್ ಹರೌ ಮಾತರಿಶ್ವಾ ಮುಖ್ಯವಾಯುಃ ಆ ಸಮಂತಾತ್ ಪಾಲಯಂತೀತಿ ವ್ಯುತ್ಪತ್ತ್ಯಾ ಅಪಃ ಕರ್ಮಾಣಿ । ಸ್ವಪ್ರೇರಣಯಾ ಪ್ರಾಣಿಭಿಃ ಕ್ರಿಯಮಾಣಾನಿ ಪುಣ್ಯ ಕರ್ಮಾಣಿ ದಧಾತಿ ಸಮರ್ಪಯತೀತಿ ॥ ೪ ॥

ಮಂತ್ರಸ್ಥಪದಗಳ ಅನ್ವಯ

ತತ್ ಅನೇಜತ್ ಏಕಂ ಮನಸಃ (ಅಪಿ)ಜವೀಯಃ. ಏನತ್ ದೇವಾಃ ನಾಪ್ನುವನ್. (ಬ್ರಹ್ಮ ತು) ಪೂರ್ವಂ ಅರ್ಷತ್. (ತದ್ಬ್ರಹ್ಮ) ತಿಷ್ಠತ್ ಧಾವತೋ ಅನ್ಯಾನ್ ಅತ್ಯೇತಿ. ತಸ್ಮಿನ್ ಮಾತರಿಶ್ವಾ ಅಪಃ ದಧಾತಿ ॥

ಖಂಡಾರ್ಥದಂತೆ ಈ ಪದಗಳ ಅರ್ಥ

ತತ್-ಪರಮಾತ್ಮ ಸ್ವರೂಪಂ, ಪರಮಾತ್ಮನ ಸ್ವರೂಪವು. ಅನೇಜತ್-(ಏಜೃಕಂಪನೆ - ಕಂಪನ ಎಂಬ ಅರ್ಥದಲ್ಲಿ ಏಜೃಧಾತು ಪ್ರವೃತ್ತವಾಗಿರುವುದು.) ಅಕಂಪಮಾನಂ–ಕಂಪಮಾನವಿಲ್ಲದಿರುವುದು. ನಿರ್ಭಯತ್ವಾತ್ - ಭಯರಹಿತವಾದುದರ ದೆಶೆಯಿಂದ (ಅದಕ್ಕೆ ಕಂಪನವಿಲ್ಲ.) ಇತಿ ಭಾವಃ–ಹೀಗೆ ಅಭಿಪ್ರಾಯ. ಏಕಂ–ಪ್ರಧಾನಂ, ಮುಖ್ಯವಾದುದು ಎಂದರೆ ಸರ್ವ ನಿಯಾಮಕವಾದುದು. ಮನಸೋಪಿ–ಮನಸ್ಸಿಗಿಂತಲೂ. ಜವೀಯಃ-ವೇಗವತ್ತರಂ-ವೇಗವುಳ್ಳದು. ಏನತ್–ಪರಬ್ರಹ್ಮ ಸ್ವರೂಪಂ–ಪರಬ್ರಹ್ಮನ ಸ್ವರೂಪವನ್ನು. ದೇವಾಃ–ದೇವತೆಗಳು. ನ ಆಪ್ನುವನ್–ಸಾಕಲ್ಯೇನ ನ ವ್ಯಜಾನನ್–ಅದು ಪೂರ್ಣವಾದುದರಿಂದ ಅದನ್ನು ತಿಳಿಯಲಿಲ್ಲ. ಬ್ರಹ್ಮ ತು - ಪರಬ್ರಹ್ಮನಾದರೊ. ಪೂರ್ವಂ - ಅನಾದಿಕಾಲದಿಂದಲೂ. ಸ್ವಭಾವತ ಇತಿ ಯಾವತ್–ಸ್ವಾಭಾವಿಕವಾಗಿಯೇ. ಅರ್ಷತ್-(ಋಷಜ್ಞಾನೆ -ಋಷ ಎಂಬ ಧಾತು ಜ್ಞಾನ ಎಂಬ ಅರ್ಥದಲ್ಲಿ ಪ್ರವೃತ್ತವಾಗಿರುವುದು). ಸರ್ವಂ ವ್ಯಜಾನಾತ್ – ಸರ್ವವನ್ನು ತಿಳಿದಿರುವುದು.

ಆಡಾಗಮಾಭಾವಃ - ಆಡಾಗಮವಿಲ್ಲದಿರುವುದು. ಛಾಂದಸಃ - ಛಂದಸ್ಸಿಗೆ ಸಂಬಂಧಿಸಿದ ವಿಷಯ. ತತ್-ಆ. ಬ್ರಹ್ಮ-ಬ್ರಹ್ಮತತ್ತ್ವವು. ತಿಷ್ಠತ್-ವಿದ್ಯಮಾನಮೇವ ಸತ್–ಇರುವುದಾಗಿಯೆ. ಧಾವತೊ-ವೇಗೇನ ಗಚ್ಛತೊ-ವೇಗದಿಂದ ಹೋಗುವ. ಅನ್ಯಾನ್-ಇತರ. ಜನಾನ್-ಜನರನ್ನು, ಅತ್ಯೇತಿ-ಅತಿಕ್ರಮಿಸಿರುತ್ತದೆ. ಅಚಿಂತ್ಯ ಶಕ್ತಿತ್ವಾತ್-ಗ್ರಹಿಸುವುದಕ್ಕೆ ಸಾಧ್ಯವಲ್ಲದ ಶಕ್ತಿಯಿರುವುದರಿಂದ. ಸರ್ವಗತತ್ವಾಚ್ಚ-ಸರ್ವತ್ರ ವ್ಯಾಪ್ತವಾಗಿರುವುದರಿಂದಲೂ ಕೂಡ. ಇತಿ ಭಾವಃ-ಹೀಗೆಂದು ಅಭಿಪ್ರಾಯ. ತಸ್ಮಿನ್-ಹರೌ-ಹರಿಯಲ್ಲಿ. ಮಾತರಿಶ್ವಾ-ಮುಖ್ಯ ವಾಯುಃ-ಮುಖ್ಯನಾದ ವಾಯುವು. ಆ-ಸಮಂತಾತ್-ಪೂರ್ಣವಾಗಿ. ಪಾಲಯಂತಿ-ಕಾಪಾಡುವುವು. ಇತಿ-ಈ. ವ್ಯುತ್ಪತ್ತ್ಯಾ- ಪದನಿರ್ವಚನದಿಂದ. ಅಪಃ - ಕರ್ಮಾಣಿ- ಕರ್ಮಗಳನ್ನು. ಸ್ವಪ್ರೇರಣಯಾ-ತನ್ನ ಪ್ರೇರಣೆಯಿಂದ. ಪ್ರಾಣಿಭಿಃ- ಪ್ರಾಣಿಗಳಿಂದ. ಕ್ರಿಯಮಾಣಾನಿ-ಮಾಡಲ್ಪಟ್ಟ. ಪುಣ್ಯಕರ್ಮಾಣಿ- ಪುಣ್ಯಕರ್ಮಗಳನ್ನು. ದಧಾತಿ-ಸಮರ್ಪಿಸುತ್ತಾನೆ.

ಸೂಚನೆ

ಖಂಡಾರ್ಥದಲ್ಲಿ 'ಇತಿ ಭಾವಃ' ಎಂಬುದರಿಂದ ಶ್ರುತಿಗೆ ಅಭಿಪ್ರೇತವಾದ ಅರ್ಥವು ಸ್ಪಷ್ಟಪಡುವುದು. ಈ ರೀತಿ ಭಾವ ನಿರ್ಧಾರಣವು ಎಲ್ಲಿ ಕಂಡು ಬರುತ್ತದೆಯೊ ಆ ಸಂದರ್ಭದಲ್ಲಿ ಅಧಿಕಾರಿಯು ಶಾಸ್ತ್ರದೃಷ್ಟಿಯಿಂದ ಪರ್ಯಾಲೋಚಿಸಿ ವಿಷಯಗ್ರಹಣದಲ್ಲಿ ಆದರವುಳ್ಳವನಾಗಬೇಕು. ಒಟ್ಟಿನ ಮೇಲೆ ಪರಮಾತ್ಮನ ಸ್ವರೂಪವಾಗಿ ನಿರ್ಭಯತ್ವ, ಅಚಿಂತ್ಯ ಶಕ್ತಿತ್ವ ಮತ್ತು ಸರ್ವಗತತ್ವ ಎಂಬ ಮಹಿಮೆಯು ಈ ಮಂತ್ರದಲ್ಲಿ ಪ್ರಕಾಶಿತವಾಗಿರುವುದು. ಈ ಪದಗಳಿಗೆ ಲೋಕಸಾಮಾನ್ಯಸಿದ್ಧವಾದ ಅರ್ಥವನ್ನು ಹೇಳಿ ತೃಪ್ತಿಯನ್ನು ಹೊಂದಬಾರದು. ಸರ್ವಶಾಸ್ತ್ರವೂ ಈ ಮಹಿಮೆಯಲ್ಲಿ ಅಡಗಿರುವುದು.

ಅಧಿಕಾರಿಯು ಮಂತ್ರೋಕ್ತವಾದ ಬ್ರಹ್ಮಸ್ವರೂಪವನ್ನು ಹೇಳುವ ವಿಶೇಷಣಗಳಿಗೆ ಪರಸ್ಪರವಿರುವ ಸಂಬಂಧವನ್ನು ಚಿಂತಿಸಬೇಕು. ಇದಕ್ಕೆ ಇಡೀ ಶಾಸ್ತ್ರಾಧ್ಯಯನವು ಆವಶ್ಯಕವಾಗುವುದು.

'ದೇವಾಃ ಸಾಕಲ್ಯೇನ ನ ವ್ಯಜಾನ್ನ' ಎಂಬಲ್ಲಿ ಸಾಕಲ್ಯೇನ-ಪೂರ್ಣವಾಗಿ. ನ ವ್ಯಜಾನ್ನ-ತಿಳಿಯುವುದಿಲ್ಲ. ಎಂದು ಹೇಳಲೂ ಅವಕಾಶವಿದೆ. ಇದಕ್ಕಿಂತಲೂ ಸಾಕಲ್ಯೇನ ಎಂದರೆ ಪರಮಾತ್ಮನು ಪೂರ್ಣ ಎಂಬ ನಿಮಿತ್ತದಿಂದ ನ ವ್ಯಜಾನನ್-ತಿಳಿಯುವುದಿಲ್ಲ ಎಂಬ ಅರ್ಥ ಶ್ರೇಷ್ಠವಾದುದು. ಮೊದಲನೆಯ ಅರ್ಥದಲ್ಲಿ ಪರಮಾತ್ಮನನ್ನು ತಿಳಿದ ಭಾಗದಲ್ಲಿ ಪೂರ್ಣತ್ವ ನಿಷೇಧವಿರುವುದು. ಎರಡನೆಯ ಅರ್ಥದಲ್ಲಿ ಎಂದರೆ ಪರಮಾತ್ಮನು ಪೂರ್ಣನಾದುದರಿಂದ ತಿಳಿಯುವುದಿಲ್ಲ ಎಂಬಲ್ಲಿ ಪೂರ್ಣತ್ವವನ್ನು ಎತ್ತಿಹಿಡಿದಂತಾಗುವುದು. ಅಧಿಕಾರಿಯು ವಿಚಾರಮಾಡಿ ಔಚಿತ್ಯವನ್ನು ಗ್ರಹಿಸಬೇಕು.

ಮುಖ್ಯವಾಯು ತನ್ನ ಪ್ರೇರಣೆಯಿಂದುಂಟಾದ ಪ್ರಾಣಿಗಳ ಪುಣ್ಯಕರ್ಮಗಳನ್ನು ಹರಿಯಲ್ಲಿ ಸಮರ್ಪಿಸುತ್ತಾನೆ ಎಂಬಲ್ಲಿ ಪುಣ್ಯಕರ್ಮವೆಂದರೆ ಎರಡನೆಯ ಮಂತ್ರದಲ್ಲಿ ಸ್ಪಷ್ಟಪಟ್ಟಿರುವಂತೆ ವಿದ್ಯಾಕರ್ಮ, ಅಸಂಕಲ್ಪಿತ ಫಲವುಳ್ಳ ಕರ್ಮ ಅಥವಾ ಭಗತ್ಪೂಜಾರೂಪವಾದ ಕರ್ಮ. ಇದು ಒಬ್ಬ ಅಧಿಕಾರಿಯಲ್ಲಿ ಕಾಣುವುದು ಮುಖ್ಯವಾಯುವಿನ ಪ್ರೇರಣೆಯಿಂದ. ಅಧಿಕಾರಿಯಾದ ಜೀವನಿಗೆ ಇದರ ಕರ್ತೃತ್ವವಿಲ್ಲ. ಮುಖ್ಯವಾಯು ಹರಿಯಲ್ಲಿ ಈ ಕರ್ಮವನ್ನು ಸಮರ್ಪಿಸುತ್ತಾನೆ ಎಂದರೆ ತನ್ನ ಪ್ರೇರಣೆಯಿಂದ ನಡೆದ ಕರ್ಮದ ಕರ್ತಾ ಪರಮಾತ್ಮನೆಂದು ತಿಳಿಯುತ್ತಾನೆ ಎಂದು ಅರ್ಥ.

ಭಾಷ್ಯ

ಭಾಷ್ಯಕಾರರು ಮಂತ್ರಸ್ಥಪದಗಳ ಅರ್ಥವನ್ನು ಶ್ರುತಿಸಂಪ್ರದಾಯವನ್ನು ಸೂಚಿಸುವುದರೊಂದಿಗೆ ವಿವರಿಸುವರು.

ಭಾಷ್ಯ—ಅನೇಜನ್ನಿರ್ಭಯತ್ವಾತ್ತದೇಕಂ ಪ್ರಾಧಾನ್ಯತಸ್ತಥಾ ।
ಸಮ್ಯಜ್ಜ್ಞಾತುಮಶಕ್ಯತ್ವಾದಗಮ್ಯಂ ತತ್ಸುರೈರಪಿ ।
ಸ್ವಯಂ ತು ಸರ್ವಾನಗಮತ್ ಪೂರ್ವಮೇವ ಸ್ವಭಾವತಃ ।
ಅಚಿಂತ್ಯಶಕ್ತಿತಶ್ಚೈವ ಸರ್ವಗತ್ವಾಚ್ಚ ತತ್ಪರಂ ।
ದ್ರವತೋಽತ್ಯೇತಿ ಸಂತಿಷ್ಠತ್ತಸ್ಮಿನ್ ಕರ್ಮಾಣ್ಯಧಾನ್ಮರುತ್ ।
ಮಾರುತ್ಯೇವ ಯತಶ್ಚೇಷ್ಟಾ ಸರ್ವಾ ತಾಂ ಹರಯೇಽರ್ಪಯೇತ್ ।
ಇತಿ ಬ್ರಹ್ಮಾಂಡೇ ॥

ಅನೇಜತ್-ಪರಮಾತ್ಮನು ಅನೇಜತ್. ನಿರ್ಭಯತ್ವಾತ್-ಭಯರಹಿತವಾದುದರಿಂದ. ತತ್-ಪರಮಾತ್ಮವಸ್ತು. ಏಕಂ-ಏಕ ಎನಿಸುವುದು. ಪ್ರಾಧಾನ್ಯತಃ-ಪ್ರಧಾನವಾದುದರಿಂದ. ತಥಾ-ಹಾಗೆಯೆ. ಸಮ್ಯಕ್-ಅದರ ಪೂರ್ಣತ್ವವನ್ನು, ಜ್ಞಾತುಂ-ತಿಳಿಯಲು. ಅಶಕ್ಯತ್ವಾತ್-ಸಾಧ್ಯವಲ್ಲವಾದುದರಿಂದ. ತತ್-ಆ ಪರಮಾತ್ಮವಸ್ತು. ಸುರೈಃ ಅಪಿ-ದೇವತೆಗಳಿಂದಲೂ. ಅಗಮ್ಯಂ-ತಿಳಿಯಲರ್ಹವಲ್ಲ. ಸ್ವಯಂ ತು-ತಾನಾದರೋ. ಸರ್ವಾನ್ - ಎಲ್ಲವನ್ನು. ಅಗಮತ್ - ತಿಳಿದಿರುವುದು. ಪೂರ್ವಂ ಏವ-ಈ ತಿಳಿವಳಿಕೆಗೆ ಆದಿಯಿಲ್ಲ. ಸ್ವಭಾವತಃ – ಸ್ವಭಾವದಿಂದಲೇ. (ಇದು ಅದರ ಸ್ವಭಾವ ಸಿದ್ಧವಾದ ಮಹಿಮೆ.) ಅಚಿಂತ್ಯ ಶಕ್ತಿತಃ ಚೈವ-(ಇತರರ) ಜ್ಞಾನಕ್ಕೆ ಮೀರಿದ ಶಕ್ತಿಯಿರುವುದರಿಂದಲೇ. ಸರ್ವಗತ್ವಾತ್ ಚ–ಸರ್ವದರಲ್ಲಿಯೂ ಅದೇ ಇರುವುದರಿಂದಲೂ ಸಹ. ತತ್-ಆ (ಪರಮಾತ್ಮವಸ್ತು). ಪರಂ-ಸರ್ವೋತ್ತಮವಾದುದು. ದ್ರವತಃ-ಓಡುವವರನ್ನು. ಅತಿ ಏತಿ–ಮೀರಿಸಿ ಮುಂದಿರುವುದು. ಸಂತಿಷ್ಠತ್–(ಆದರೂ) ಒಂದೇ ಎಡೆ ಇರುವುದಾಗಿರುತ್ತೆ. ಮರುತ್–ಮುಖ್ಯವಾಯು. ತಸ್ಮಿನ್–ಆ ಪರಮಾತ್ಮನಲ್ಲಿ. ಕರ್ಮಾಣಿ–(ಪ್ರಾಣಿಗಳ ಪುಣ್ಯ) ಕರ್ಮಗಳನ್ನು. ಅಧಾತ್–ಅರ್ಪಿಸಿದನು. ಮಾರುತಿ ಏವ–ಮರುತ್ ಸಂಬಂಧವಾದುದೇ. ಯತಃ–ಯಾವ ಕಾರಣದ ದೆಶೆಯಿಂದ. ಚೇಷ್ಟಾ–ಕ್ರಿಯೆ ಎಂಬ. ಸರ್ವಾ–ಸರ್ವವೂ. (ಅತಃ-ಆ ಕಾರಣದ ದೆಶೆಯಿಂದ ಅಧಿಕಾರಿಯು) ತಾಂ - ಆ ಕ್ರಿಯೆಯನ್ನು. ಹರಯೆ-ಪರಮಾತ್ಮನಿಗೆ. ಅರ್ಪಯೇತ್ - ಅರ್ಪಿಸಬೇಕು.) ಇತಿ – ಹೀಗೆ. ಬ್ರಹ್ಮಾಂಡದಲ್ಲಿ. (ಉಕ್ತವಾಗಿರುವುದು.)

ಸೂಚನೆ

ಅನೇಜತ್ ಮುಂತಾದ ಪರಮಾತ್ಮತತ್ತ್ವವನ್ನು ನಿರೂಪಿಸುವ ಪದಗಳು ತಮ್ಮಲ್ಲಿಯೇ ಪರಮಾತ್ಮವಿಶೇಷಣವಾಗುವ ಹೇತುವನ್ನು ಒಳಗೊಂಡಿರುವುವು. ಈ ನಿಮಿತ್ತ ಪರಮಾತ್ಮವಿಶೇಷಣ ಮತ್ತಾವ ವಸ್ತುವಿಗೂ ಸಂಬಂಧಿಸುವುದಿಲ್ಲ. ಅಧ್ಯಯನಶೀಲನಾದವನು ಈ ವ್ರತವನ್ನು ಕಾಪಾಡಿಕೊಳ್ಳಬೇಕು. ಈ ವ್ರತವಿಲ್ಲದವನಿಗೆ ಪರಮಾತ್ಮಜ್ಞಾನ ಸಾಧ್ಯವಲ್ಲ.

ಸಮ್ಯಕ್ ಜ್ಞಾತುಂ - ಚೆನ್ನಾಗಿ ತಿಳಿಯಲು ಎಂದು ಅರ್ಥಮಾಡಬಹುದೆಂದು ಶಂಕಿಸಬಹುದು. ಇಂತಹ ಜ್ಞಾನವು ಅಜ್ಞಾನದ ಪ್ರಸ್ತಾರವೇ ಆಗುವುದು. ಈ ಕಾರಣದಿಂದ ಈ ಅರ್ಥವು ಸಾಧುವಲ್ಲ. ಪೂರ್ಣತ್ವವನ್ನು ತಿಳಿಯಲು ಎಂದು ಅರ್ಥಮಾಡುವುದರಲ್ಲಿ ಔಚಿತ್ಯವಿದೆ. ಪೂರ್ಣತ್ವವನ್ನು ತಿಳಿಯಲು ಸಾಮರ್ಥ್ಯವಿಲ್ಲ ಎಂಬುದನ್ನು ಅಧಿಕಾರಿಯು ಯಾವ ಮಟ್ಟದಲ್ಲಿ ತಿಳಿಯುತ್ತಾನೆಯೋ ಆ ಮಟ್ಟಕ್ಕನುಗುಣವಾಗಿರುವುದು ಅವನ ಜ್ಞಾನದ ದೊಡ್ಡತನ. ಪೂರ್ಣತ್ವವನ್ನು ತಿಳಿಯುವುದು ಅಸಾಧ್ಯ ಎಂಬ ಭಾವದಲ್ಲಿ ಅದಕ್ಕೆ ಉಪಪಾದಕವಾದ ಭಾವಗಳೆಲ್ಲವೂ ಅಡಗಿರುವುವು. ಈ ಕಾರಣದಿಂದ ತಿಳಿಯಲು ಸಾಧ್ಯವಲ್ಲ ಎಂಬುದು ಜ್ಞಾನದ ಅಭಾವವಲ್ಲ. ಸ್ವಲ್ಪವನ್ನು ತಿಳಿಯುವುದು ಎನ್ನುವುದೇ ಅಜ್ಞಾನ. ಪೂರ್ಣನಾದ ಪರಮಾತ್ಮನಲ್ಲಿ ಸ್ವಲ್ಪ ಎಂಬ ಭಾಗವಿಲ್ಲ.

ಜಗತ್ತು ಪೂರ್ಣನಾದ ಪರಮಾತ್ಮನನ್ನು ತಿಳಿಯಲಾರದು. ಪರಮಾತ್ಮನಾದರೋ ತನ್ನನ್ನು ತಾನು ಸ್ವಭಾವತಃ ತಿಳಿದಿರುವುದಕ್ಕೆ ಆದಿಯಿಲ್ಲ ಎಂಬ ಭಾವವನ್ನು ಬಹು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳಬೇಕು. ಪರಮಾತ್ಮಜ್ಞಾನ ಎಂಬಲ್ಲಿ ಎರಡು ದಳಗಳಿರುವುವು—ಪರಮಾತ್ಮ ಸ್ವತಂತ್ರ ಜಗತ್ತು ಪರತಂತ್ರ ಎಂದು. ಈ ಎರಡು ಭಾವಗಳಿಗೂ ತಾತ್ಪರ್ಯ ಒಂದೇ. ಪ್ರಪಂಚ ಪರಮಾತ್ಮಜ್ಞಾನ ಎಂಬಲ್ಲಿ ಯಥಾರ್ಥವಾದ ರೀತಿಯಲ್ಲಿ ಪರಮಾತ್ಮಜ್ಞಾನ ಜಗದ್‌ಜ್ಞಾನ ಎರಡೂ ಇರುವುವು. ಇದೇ ಪರಮಾತ್ಮನ ಸರ್ವಜ್ಞತ್ವ. ಪೂರ್ವಂ ಎಂಬ ವಿಶೇಷಣದಿಂದ ಪರಮಾತ್ಮನ ಜ್ಞಾನವು ಲೋಕವಿಲಕ್ಷಣವೆಂದು ಸಿದ್ಧವಾಗುವುದು. ಜಗತ್ತಿನಲ್ಲಿರುವವನಿಗೆ ಜ್ಞಾನಕ್ಕೆ ಮೊದಲು ವಸ್ತುವಿರಬೇಕು. ಇದಕ್ಕೆ ವಸ್ತುವೇ ಆದಿ. ಪರಮಾತ್ಮಜ್ಞಾನವಾದರೋ ಅನಾದಿ. ಅದು ತನಗಿಂತ ಮೊದಲು ವಸ್ತುವನ್ನಪೇಕ್ಷಿಸುವುದಿಲ್ಲ. ಆ ಜ್ಞಾನದ ಮಹಿಮೆಯಿಂದಲೇ ವಸ್ತುವಿನ ಸತ್ತೆ ಏರ್ಪಡುವುದು. ಹೀಗೆ ಸರ್ವ ಸೃಷ್ಟಿಕರ್ತೃವಾದುದು ಈ ಜ್ಞಾನ. ಸೃಷ್ಟವಾದ ವಸ್ತುವಿನಲ್ಲಿ ತಾನೇ ಇರುವನು ಎಂದು ಹಿಂದಿನ ಮಂತ್ರಗಳಲ್ಲಿ ನಿರೂಪಿತವಾದ ಅಂಶವನ್ನೇ ಸರ್ವಗತ ಎಂಬ ವಿಶೇಷಣವು ಸಮರ್ಥಿಸುವುದು. ಈ ಕಾರಣದಿಂದ ಅದನ್ನು ಮೀರುವುದು ಯಾರಿಗೂ ಸಾಧ್ಯವಲ್ಲ. ಅದು ಎಲ್ಲರ ಹಿಂಬದಿಯಲ್ಲಿರುವುದು.

ಜೊತೆಯಲ್ಲಿಯೂ ಅದೇ. ಎಲ್ಲರ ಮುಂಬದಿಯಲ್ಲಿಯೂ ಅದೇ. ಈ ತತ್ತ್ವವನ್ನು ತಿಳಿದವನು ಮುಖ್ಯವಾಯು. ಎಲ್ಲವೂ ಮುಖ್ಯವಾಯುವಿನ ವ್ಯಾಪಾರ. ಪರಮಾತ್ಮ ತತ್ತ್ವವನ್ನು ತಿಳಿದ ಮುಖ್ಯವಾಯು ತಾನು ಮಾಡುವ ಎಲ್ಲವೂ ಎಂದರೆ ತನ್ನ ಪ್ರೇರಣೆಯಿಂದುಂಟಾದ ಎಲ್ಲವೂ ಪರಮಾತ್ಮಕೃತವೆಂದು ತಿಳಿಯುವನು. ಇದಕ್ಕೆ ಸಮರ್ಪಣವೆಂದು ಹೆಸರು. ಇದನ್ನಧ್ಯಯನ ಮಾಡುವ ಅಧಿಕಾರಿಯು ತನ್ನ ಎಲ್ಲ ಸತ್ತಾದಿ ಪ್ರವೃತ್ತಿಯನ್ನು ಪರಮಾತ್ಮನಲ್ಲಿ ಅರ್ಪಿಸುವ ಅರ್ಹತೆಯುಳ್ಳವನಾಗುವನು.

ಚೆನ್ನಾಗಿ ಕಾಪಾಡುವ ಕರ್ಮಗಳೆಂದರೆ ಕರ್ಮಕಾಂಡದ ಕರ್ಮಗಳಲ್ಲ. ಕರ್ತೃತ್ವಾರೋಪದಿಂದ ಬಂದ ಅವು ಪಾಪರೂಪ. ರಕ್ಷಕವಾದ ಕರ್ಮ ಜ್ಞಾನಿಕರ್ಮ. ಅದು ನಿಷ್ಕಾಮ ಮತ್ತು ಭಗವತ್ಪೂಜಾರೂಪ. ಅದರ ಕರ್ತೃ ಜೀವನಲ್ಲ. ಅವನಿಗೆ ಸಾಧನದಲ್ಲಿಯೂ ಸ್ವಾತಂತ್ರ್ಯವಿಲ್ಲ. ಅದೂ ಭಗವತ್ಕೃತ. ಈ ಜ್ಞಾನವೇ ಭಗವದರ್ಪಣೆ ಎಂಬುದರ ಅರ್ಥ. ಇದೇ ಮುಖ್ಯವಾಯುವಿನ ತಪಸ್ಸು. ಇದು ಬಹು ಗಹನವಾದ ಶಾಸ್ತ್ರಾರ್ಥವಿಚಾರ. ನಿರಂತರ ಅಧ್ಯಯನವೇ ಇದನ್ನು ತಿಳಿಯಲು ಸಾಧನ. ಈ ತಿಳಿವಳಿಕೆಯೇ ಪರಮಾತ್ಮನ ಪ್ರಾಪ್ತಿ. ಈ ಅಂಶವು ಅಪ್ಪುರ್ವ–ವ್ಯಜಾರ್ನ ಎಂದು ವ್ಯಾಖ್ಯಾನ ಮಾಡುವ ಖಂಡಾರ್ಥದಲ್ಲಿ ವ್ಯಕ್ತವಾಗಿರುವುದು.

ಭಾಷ್ಯವು ಋಷ ಜ್ಞಾನೇ– ಋಷ್ ಎಂಬ ಧಾತು ಜ್ಞಾನವೆಂಬ ಅರ್ಥದಲ್ಲಿ ಪ್ರಯುಕ್ತವಾಗುವುದು ಎಂದು ಹೇಳಿರುವುದು. ಇದೇ ಖಂಡಾರ್ಥದಲ್ಲಿ ಜ್ಞಾನಪರವಾಗಿ ಈ ಪದವನ್ನು ನಯಿಸಲು ನಿಮಿತ್ತ.

ಫಲಿತ ಮಂತ್ರಾರ್ಥ

ಆ (ಬ್ರಹ್ಮತತ್ತ್ವವು) ನಿರ್ಭಯ, ಪ್ರಧಾನ, ಮನಸ್ಸಿಗಿಂತಲೂ ಅತಿವೇಗವುಳ್ಳದು. ಈ (ಬ್ರಹ್ಮಸ್ವರೂಪವನ್ನು) ದೇವತೆಗಳು ಸಾಕಲ್ಯೇನ ಎಂದರೆ ಅದು ಪೂರ್ಣವಾದುದರಿಂದ ತಿಳಿಯಲಿಲ್ಲ. ಮತ್ತು (ತಿಳಿಯಲಾರರು). ಬ್ರಹ್ಮನಾದರೊ ಅನಾದಿಕಾಲದಿಂದ (ತನ್ನ ಸ್ವಭಾವದಿಂದಲೇ) ತಿಳಿದಿರುವನು. ಆ (ಬ್ರಹ್ಮತತ್ತ್ವವು) ಇರುವಲ್ಲಿಯೇ ಇದ್ದು ಓಡುವ ಇತರರನ್ನು ಮೀರಿರುವುದು. (ಅಚಿಂತ್ಯ ಶಕ್ತಿ ಮತ್ತು ಸರ್ವಗತವಾದುದರಿಂದ). ಆ (ಹರಿಯಲ್ಲಿ) ಮುಖ್ಯವಾಯು (ತನ್ನ ಪ್ರೇರಣೆಯಿಂದಾದ ಪ್ರಾಣಿಗಳ) ಪುಣ್ಯ ಕರ್ಮಗಳನ್ನು ಸಮರ್ಪಿಸುವನು. ॥ ೪ ॥

೫

ಮಂತ್ರ

ತದೇಜತಿ ತನ್ನೇಜತಿ ತದ್ದೂರೆ ತದ್ವಂತಿಕೆ ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯ ಬಾಹ್ಯತಃ ॥ ೫ ॥

ಖಂಡಾರ್ಥ

ತದಿತಿ ಪಂಚಮ್ಯರ್ಥೆ ಅನ್ವಯಂ। ಜಗದಿತಿ ಶೇಷಃ । ತತ್ ತಸ್ಮಾತ್ ಪ್ರಕೃತಾದ್ಧರೇಃ ಜಗದೇಜತಿ । ಬಿಭೇತಿ । ತದ್ಬ್ರಹ್ಮ ನೇಜತಿ ನ ಬಿಭೇತಿ । ಸ್ವತಂತ್ರತ್ವಾದಿತಿ ಭಾವಃ । ತದು ತದೇವ ಬ್ರಹ್ಮ ದೂರೆ । ತದು ತದೇವ ಅಂತಿಕೆ ಸಮೀಪೆ ಚ ಸರ್ವಗತ್ವಾದಿತಿ ಭಾವಃ । ತದ್ಬ್ರಹ್ಮ । ಅಸ್ಯ ಪ್ರಮಿತಸ್ಯ ಸರ್ವಸ್ಯ ಅಂತಃ । ತದು ತದೇವ ಸರ್ವಸ್ಯ ಬಾಹ್ಯತಃ । ಬಹಿರಪಿ । ಸರ್ವವ್ಯಾಪಿತ್ವಾದಿತಿ ಭಾವಃ ॥ ೫ ॥

ಮಂತ್ರಪದವಿಭಾಗ—ತತ್, ಏಜತಿ, ತತ್, ನ, ಏಜತಿ, ತತ್, ದೂರೆ, ತತ್, ಉ, ಅಂತಿಕೆ, ತತ್, ಅಂತರಸ್ಯ, ಸರ್ವಸ್ಯ, ತತ್, ಉ, ಸರ್ವಸ್ಯ ಬಾಹ್ಯತಃ ॥

ಮಂತ್ರಸ್ಥಪದಗಳ ಅನ್ವಯ

ತತ್, (ಜಗತ್), ಏಜತಿ. ತತ್, (ಬ್ರಹ್ಮ)ನ, ಏಜತಿ. ತತ್, ಉ, ದೂರೆ. ತತ್, ಉ, ಅಂತಿಕೆ. ತತ್, ಅಸ್ಯ, ಸರ್ವಸ್ಯ, ಅಂತಃ. ತತ್, ಉ, ಸರ್ವಸ್ಯ, ಬಾಹ್ಯತಃ ॥

ಖಂಡಾರ್ಥದಂತೆ ಈ ಪದಗಳ ಅರ್ಥ

ತತ್ ಇತಿ–ತತ್ ಎಂದು. ಪಂಚಮ್ಯರ್ಥೆ–ದೆಶೆಯಿಂದ ಎಂಬ ಅರ್ಥ ಕೊಡುವ. ಅನ್ವಯಂ–ಅನ್ವಯವು. ಜಗತ್ ಇತಿ–ಜಗತ್ ಎಂದು. ಶೇಷಃ–ಹಿಂದಿನ ಶ್ಲೋಕದಿಂದ ಅನ್ವಯಿಸಿಕೊಳ್ಳಬೇಕು. ತತ್–ತಸ್ಮಾತ್–ಪ್ರಕೃತಾತ್–ಹರೇಃ–ಆ ಹರಿಯ ದೆಶೆಯಿಂದ ಎಂದರೆ ಈಗ ವಿಚಾರ ವಿಷಯನಾದ ಹರಿಯದೆಶೆಯಿಂದ. ಜಗತ್–ಜಗದ್ವಸ್ತು. ಏಜತಿ-ಬಿಭೇತಿ-ಭಯ ಪಡುತ್ತದೆ. ತತ್–ಬ್ರಹ್ಮ - ಬ್ರಹ್ಮವಸ್ತು. ನ ಬಿಭೇತಿ–ಭಯಪಡುವುದಿಲ್ಲ. ಸ್ವತಂತ್ರತ್ವಾತ್ – ಸ್ವತಂತ್ರವಾದುದರ ದೆಶೆಯಿಂದ. ಇತಿ ಭಾವಃ – ಹೀಗೆಂದು ತಾತ್ಪರ್ಯ. ತತ್‌ಉ–ತತ್ ಏವ ಬ್ರಹ್ಮ–ಅದೇ ಬ್ರಹ್ಮನೇ. ದೂರೆ–ದೂರದಲ್ಲಿ. ತತ್ ಉ–ತತ್ ಏವ–ಅದೇ. ಅಂತಿಕೆ–ಸಮೀಪೆ. ಚ–ಸಮೀಪದಲ್ಲಿಯೂ. ಸರ್ವಗತ್ವಾತ್– ಸರ್ವತ್ರ ವ್ಯಾಪ್ತವಾಗಿರೋಣದರಿಂದ. ಇತಿ ಭಾವಃ–ಹೀಗೆಂದು ತಾತ್ಪರ್ಯ. ತತ್–ಬ್ರಹ್ಮ – ಬ್ರಹ್ಮತತ್ತ್ವವು. ಅಸ್ಯ–ಈ. ಪ್ರಮಿತಸ್ಯ-ಪ್ರಮಾಣಸಿದ್ಧವಾದ. ಸರ್ವಸ್ಯ–ಸರ್ವಕ್ಕೂ. ಅಂತಃ–ಒಳಗಿರುವುದು. ತತ್‌ಉ–ತತ್ ಏವ – ಅದೇ. ಸರ್ವಸ್ಯ–ಸರ್ವಕ್ಕೂ. ಬಾಹ್ಯತಃ– ಬಹಿರಪಿ – ಹೊರಗೆ ಕೂಡ. ಸರ್ವವ್ಯಾಪಿತ್ವಾತ್– ಸರ್ವದರಲ್ಲಿಯೂ ವ್ಯಾಪಿಸಿರುವ ನಿಮಿತ್ತದಿಂದ. ಇತಿ ಭಾವಃ–ಹೀಗೆಂದು ತಾತ್ಪರ್ಯ.

ಸೂಚನೆ

ಈ ಮಂತ್ರವು ಪರಮಾತ್ಮನ ಸ್ವತಂತ್ರತ್ವ, ಸರ್ವಗತತ್ವ ಮತ್ತು ಸರ್ವವ್ಯಾಪಿತ್ವವನ್ನು ಸಿದ್ಧಾಂತ ಮಾಡುತ್ತದೆ. ಈ ಮಹಿಮೆಗಳು ಗಹನಾರ್ಥವುಳ್ಳವು. ನಿರ್ಭಯತ್ವವು ಸ್ವಾತಂತ್ರ್ಯಕ್ಕೆ ಉಪಪಾದಕ. ದೂರ ಮತ್ತು ಸಮೀಪದಲ್ಲಿರುವುದು ಸರ್ವಗತತ್ವಕ್ಕೆ ಉಪಪಾದಕ. ಜಗತ್ತಿನ ಒಳಗೆ ಹೊರಗೆ ಇರುವುದು ಸರ್ವವ್ಯಾಪಿತ್ವಕ್ಕೆ ಉಪಪಾದಕ. ಈ ಉಪಪಾದನೆಗೆ ಅವಿರುದ್ಧವಾಗಿ ಶಾಸ್ತ್ರಪ್ರಪಂಚದಲ್ಲಿ ಪರಮಾತ್ಮನ ಮಹಿಮೆಯನ್ನು ಅರ್ಥ ಮಾಡಿಕೊಳ್ಳಬೇಕು.

ಭಾಷ್ಯ

ತದೇಜತಿ ತತ ಏವ ಏಜತ್ಯನ್ಯತ್ । ತತ್ ಸ್ವಯಂ ನೇಜತಿ ।

ತತ್–ತತ ಏವ– ಬ್ರಹ್ಮವಸ್ತುವಿನ ದೆಶೆಯಿಂದಲೇ. ಏಜತಿ–ಅನ್ಯತ್ ಏಜತಿ –ಅದಲ್ಲದಿರುವ ಜಗತ್ತು ಭಯಪಡುವುದು. ತತ್–ಆ ಬಹ್ಮವಸ್ತು. ಸ್ವಯಂ–ತಾನು. ನೇಜತಿ–ಭಯಪಡುವುದಿಲ್ಲ.

ಹೀಗೆ ಅರ್ಥಮಾಡುವುದೇ ಶ್ರುತಿಸಂಪ್ರದಾಯ ವಿಹಿತವೆಂದು ಭಾಷ್ಯಕಾರರು ನಿರೂಪಿಸುತ್ತಾರೆ.

ಭಾಷ್ಯ—ತತೋ ಬಿಭೇತಿ ಸರ್ವೋಽಪಿ ನ ಬಿಭೇತಿ ಹರಿಃ ಸ್ವಯಂ ।
ಸರ್ವಗತ್ವಾತ್ಸ ದೂರೇ ಚ ಬಾಹ್ಯೇಽಂತಶ್ಚ ಸಮೀಪಗಃ ॥
ಇತಿ ತತ್ತ್ವಸಂಹಿತಾಯಾಂ ॥

ತತಃ–ಪರಮಾತ್ಮನ ದೆಶೆಯಿಂದ. ಸರ್ವಃ ಅಪಿ–ಸರ್ವವೂ, ಇಡೀ ಜಗತ್ತು. ಬಿಭೇತಿ–ಭಯಪಡುತ್ತದೆ. ಹರಿಃ–ಪರಮಾತ್ಮನು. ಸ್ವಯಂ–ತಾನು. ನ ಬಿಭೇತಿ–ಭಯಪಡುವುದಿಲ್ಲ. ಸರ್ವಗತ್ವಾತ್–ಸರ್ವತ್ರ ಇರುವುದರ ದೆಶೆಯಿಂದ. ಸಃ–ಹರಿಯು. ದೂರೇ ಚ–ದೂರದಲ್ಲಿಯೂ. ಬಾಹ್ಯೆ–ಜಗತ್ತಿನ ಹೊರಗೂ. ಅಂತಶ್ಚ–ಒಳಗೂ. ಸಮೀಪಗಃ–ಸಮೀಪದಲ್ಲಿಯೂ ಇರುವನು. ಇತಿ–ಹೀಗೆ. ತತ್ತ್ವಸಂಹಿತಾಯಾಂ– ತತ್ತ್ವಸಂಹಿತೆಯಲ್ಲಿ (ಉಕ್ತವಾಗಿರುವುದು.)

ಸೂಚನೆ

ಪರಮಾತ್ಮನ ದೆಶೆಯಿಂದ ಜಗತ್ತು ಭಯಪಡುವುದು ಎಂಬಲ್ಲಿ ಗಂಭೀರವಾದ ಅರ್ಥವಿರುವುದು. ಜಗತ್ತಿನಲ್ಲಿರುವ ವಸ್ತುವಿಗೆ ತನ್ನಂತಿರುವ ಮತ್ತೊಂದು ವಸ್ತುವಿನಿಂದ ಭಯವಿಲ್ಲ. ಅದು ಭಯಪಡಬೇಕಾದುದು ಒಂದೇ ವಸ್ತುವಿನಿಂದ. ಈ ವಸ್ತುವೇ ಪರಮಾತ್ಮ ಎಂದು ಒಂದು ಭಾವ. ಪರಮಾತ್ಮ ವಸ್ತುವನ್ನು ತಿಳಿಯದವನಿಗೆ ಪರಮಾತ್ಮನಿಂದ ಭಯ. ಆ ತತ್ತ್ವವನ್ನು ತಿಳಿದವನಿಗೆ ಪರಮಾತ್ಮನು ಆನಂದದಾಯಕನಾಗಿರುವನು. ಈ ನಿಮಿತ್ತದಿಂದ ಜ್ಞಾನಿಗೆ ಪರಮಾತ್ಮನಿಂದ ಭಯವಿಲ್ಲ. ಏವಂಚ ಪರಮಾತ್ಮಜ್ಞಾನಿಯು ಸರ್ವಾವಸ್ಥೆಯಲ್ಲಿಯೂ ನಿರ್ಭಯ ಎಂದು ಮತ್ತೊಂದು ಭಾವ. ಈ ಅಂಶವು ಜ್ಞಾನಜೀವನದ ಮಹತ್ವವನ್ನು ಉಪಪಾದಿಸುವುದು.

ಪರಮಾತ್ಮನು ಅಂತಃ, ಬಾಹ್ಯ, ಸಮೀಪ, ದೂರ, ಸರ್ವತ್ರ ಇರುವನು. ಇದನ್ನು ತಿಳಿದವನಿಗೆ ಅವನ ಸಂಬಂಧವುಳ್ಳ ವಸ್ತು ಪರಮಾತ್ಮ ಮಾತ್ರ. ಮತ್ತೊಂದು ಅವನಿಗೆ ವ್ಯವಹಿತವಾದುದು. ಈ ತತ್ತ್ವದ ಗ್ರಹಣವು ಪರಮಾತ್ಮನಿಷ್ಠೆಯನ್ನುಂಟುಮಾಡುವುದು.

ಪರಮಾತ್ಮನು ಸರ್ವತ್ರ ಇರುವನು ಎಂಬುದಕ್ಕೆ ಅರ್ಥಗಾಂಭೀರ್ಯವಿರುವುದು. ಅವನು ಸರ್ವಕ್ಕೂ ಆಶ್ರಯ ಕೊಡುವವನಾಗಿ ಇರುವನು ಎಂದು ಇದರ ಪರ್ಯವಸಿತವಾದ ಅರ್ಥ. ಅಧ್ಯಯನ ಕ್ರಮದಲ್ಲಿ ಈ ಅರ್ಥವು ಅಧಿಕಾರಿಯ ಮನಸ್ಸಿಗೆ ಸ್ಪಷ್ಟಪಡುವುದು.

ಫಲಿತ ಮಂತ್ರಾರ್ಥ

ಹರಿಯ ದೆಶೆಯಿಂದ (ಜಗತ್) ಭಯಪಡುವುದು. (ಈ ಹರಿ ಎಂಬ)

ಬ್ರಹ್ಮ ನಿರ್ಭಯ. ದೂರದಲ್ಲಿರುವುದೂ ಬ್ರಹ್ಮ. ಹತ್ತಿರವಿರುವುದೂ ಅದೇ (ಬ್ರಹ್ಮ). ಅದೇ (ಬ್ರಹ್ಮ ತತ್ತ್ವವು) ಸರ್ವ ವಸ್ತುವಿನಲ್ಲಿಯೂ ಒಳಗೆ. ಅದೇ ಸರ್ವಕ್ಕೂ ಹೊರಗೂ ಸಹ. ॥ ೫ ॥

೬

ಖಂಡಾರ್ಥವು ಆರನೆಯ ಮಂತ್ರ ಪ್ರವೃತ್ತಿಯನ್ನು ಈ ರೀತಿ ನಿರೂಪಿಸುವುದು.

ತದ್ದೂರ ಇತ್ಯಾದೌ ಹರೇಃ ಸರ್ವಭೂತಾಶ್ರಯತಯಾ ಸರ್ವ ಭೂತಗತತ್ವಂ ಉಕ್ತಂ। ತದ್‌ಜ್ಞಾನಸ್ಯ ಫಲಮಾಹ। ಯಸ್ತ್ವಿತಿ ॥

ತದ್ದೂರ ಇತ್ಯಾದೌ–ತದ್ದೂರೆ ಎಂಬ ಪದದಿಂದ ಆರಂಭಿಸುವ ಮಂತ್ರಭಾಗದಲ್ಲಿ. ಹರೇಃ–ಪರಮಾತ್ಮನಿಗೆ. ಸರ್ವಭೂತಾಶ್ರಯತಯಾ–ಸಮಸ್ತ ವಸ್ತುಗಳಿಗೂ ಆಶ್ರಯ ಕೊಡುವ ರೂಪದಿಂದ. ಸರ್ವಭೂತಗತತ್ವಂ–ಸಮಸ್ತ ವಸ್ತುಗಳಲ್ಲಿರೋಣವು. ಉಕ್ತಂ – ಸಿದ್ಧಾಂತಿತವಾಯಿತು. ತದ್‌ಜ್ಞಾನಸ್ಯ-ಈ ಜ್ಞಾನಕ್ಕೆ. ಫಲಂ-ಫಲವನ್ನು. ಆಹ–ಹೇಳಿದನು. ಯಸ್ತು ಇತಿ–ಯಸ್ತು ಎಂಬ ಪದದಿಂದ ಆರಂಭಿಸುವ ಆರನೆಯ ಮಂತ್ರದಿಂದ.

ಮಂತ್ರ

ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೊ ನ ವಿಜುಗುಪ್ಸತೆ ॥ ೬॥

ಖಂಡಾರ್ಥ

ಸರ್ವಾಣಿ ಭೂತಾನಿ ಚಿದಚಿದಾತ್ಮಕಂ ಸರ್ವಂ ಜಗತ್ । ಆತ್ಮನ್ಯೇವ ಪರಮಾತ್ಮಾಶ್ರಯತ್ವೇನೈವ ಅಸ್ತೀತಿ ಯಸ್ತು ಅನು ನಿಸ್ಸಂದೇಹಂ ಪಶ್ಯತಿ ಜಾನಾತಿ । ಯದ್ವಾ ಆಶ್ರಿತತ್ವಕ್ರಮಾನುರೋಧೇನ ಇತ್ಯನು ಶಬ್ದಾರ್ಥಃ । ಸರ್ವಭೂತೇಷು ಚಾತ್ಮಾನಂ ಸರ್ವಭೂತೇಷು ನಿಯಂತೃತಯಾ ಸ್ಥಿತಂ ಹರಿಂ ಯೊ ಅನುಪಶ್ಯತೀತ್ಯನ್ವಯಃ । ತತಃ ಪರಮಾತ್ಮಸ್ವರೂಪಜ್ಞಾನಿತ್ವಾತ್ ಹೇತೋಃ ನ ವಿಜುಗುಪ್ಸತೆ । ಸ್ವಾತ್ಮಾನಂ ಗೋಪ್ತುಂ ನೇಚ್ಛತಿ । ಭಯಾಭಾವಾದಿತಿ ಭಾವಃ ॥ ೬ ॥

ಮಂತ್ರಪದವಿಭಾಗ— ಯಃ, ತು, ಸರ್ವಾಣಿ, ಭೂತಾನಿ, ಆತ್ಮನಿ,
ಏವ, ಅನು,ಪಶ್ಯತಿ, ಸರ್ವಭೂತೇಷು, ಚ, ಆತ್ಮಾನಂ,
ತತಃ, ನ,ವಿಜುಗುಪ್ಸತೆ ॥

ಮಂತ್ರಸ್ಥ ಪದಗಳ ಅನ್ವಯ

ಸರ್ವಾಣಿ, ಭೂತಾನಿ, ಆತ್ಮನಿ, ಏವ, ಯಃ, ತು, ಅನು, ಪಶ್ಯತಿ. ಸರ್ವಭೂತೇಷು, ಚ, ಆತ್ಮಾನಂ [ಅನು,ಪಶ್ಯತಿ] ತತಃ ನ ವಿಜುಗುಪ್ಸತೆ॥

ಖಂಡಾರ್ಥದಂತೆ ಈ ಪದಗಳ ಅರ್ಥ

ಸರ್ವಾಣಿ–ಸಮಸ್ತ ಭೂತಾನಿ–ವಸ್ತುಗಳು. (ಎಂದರೆ) ಚಿದಚಿದಾತ್ಮಕಂ ಸರ್ವಂ ಜಗತ್ – ಚಿದಚಿದಾತ್ಮಕಂ–ಚೇತನ ಮತ್ತು ಅಚೇತನರೂಪ ವಾದ.ಸರ್ವಂ-ಸಮಸ್ತವಾದ. ಜಗತ್–ಪ್ರಪಂಚವು (ಎಂದು ಅರ್ಥ). ಆತ್ಮನಿ ಏವ–ಪರಮಾತ್ಮಾಶ್ರಯತ್ವೇನ ಏವ–ಪರಮಾತ್ಮನ ಆಶ್ರಯವನ್ನು ಹೊಂದಿ ರುವುದಾಗಿಯೇ. ಅಸ್ತಿ–ಇದೆ. ಇತಿ–ಹೀಗೆ. ಯಃ ತು–ಯಾವ ಅಧಿಕಾರಿ ಯಾದರೋ. ಅನು–ನಿಸ್ಸಂದೇಹಂ–ಸಂದೇಹರಹಿತವಾಗಿ. ಪಶ್ಯತಿ–ತಿಳಿ ಯುತ್ತಾನೆಯೊ. ಯದ್ವಾ–ಅಥವಾ. ಆಶ್ರಿತತತ್ವಕ್ರಮಾನುರೋಧೇನ–ಆಶ್ರಿತ ವಾಗಿರುವ ಕ್ರಮಕ್ಕನುಗುಣವಾಗಿ. ಇತಿ–ಹೀಗೆ. ಅನು ಶಬ್ದಾರ್ಥಃ–ಅನು ಎಂಬ ಶಬ್ದದ ಅರ್ಥ. ಸರ್ವಭೂತೇಷು ಚ-ಸಮಸ್ತ ವಸ್ತುಗಳಲ್ಲಿಯೂ ಕೂಡ. ಆತ್ಮಾನಂ-ಸರ್ವಭೂತೇಷು ನಿಯಂತೃತಯಾ ಸ್ಥಿತಂ ಹರಿಂ-ಸಮಸ್ತ ಭೂತ ಗಳಲ್ಲಿಯೂ ನಿಯಾಮಕನಾಗಿ ಇರುವ ಹರಿಯನ್ನು. ಅನು-ನಿಸ್ಸಂದೇಹವಾಗಿ. ಪಶ್ಯತಿ–ತಿಳಿಯುತ್ತಾನೆಯೋ. ಇತಿ - ಹೀಗೆ. ಅನ್ವಯಃ - ಸಂಬಂಧವು. ತತಃ - ಪರಮಾತ್ಮಸ್ವರೂಪಜ್ಞಾನಿತ್ವಾತ್ – ಪರಮಾತ್ಮಸ್ವರೂಪಜ್ಞಾನ ವನ್ನು ಹೊಂದಿರೋಣದರಿಂದ. (ಎಂಬ) ಹೇತೋಃ-ನಿಮಿತ್ತದಿಂದ. ನ ವಿಜು ಗುಪ್ಸತೆ-ಸ್ವಾತ್ಮಾನಂ ಗೋಪ್ತುಂ ನೇಚ್ಛತಿ–ತನ್ನನ್ನು ರಕ್ಷಿಸಿಕೊಳ್ಳಲು ಅಪೇ ಕ್ಷಿಸುವುದಿಲ್ಲ. ಭಯಾಭಾವಾತ್–ಭಯವಿಲ್ಲದಿರುವ ದೆಶೆಯಿಂದ. ಇತಿ– ಹೀಗೆ. ಭಾವಃ–ಅಭಿಪ್ರಾಯವು.

ಸೂಚನೆ

ಚಿದಚಿದಾತ್ಮಕ ಸರ್ವವೂ ಆತ್ಮಾಶ್ರಯವುಳ್ಳದು ಎಂಬ ಭಾವವನ್ನು ಎಚ್ಚರಿಕೆಯಿಂದ ಗ್ರಹಿಸಬೇಕು. ಸ್ವರೂಪ ಪ್ರಮಿತಿ ಮತ್ತು ಪ್ರವೃತ್ತಿ ಎಂಬ ಎಲ್ಲ ಧರ್ಮದಿಂದಲೂ ಚೇತನ ಮತ್ತು ಅಚೇತನ ರೂಪವಾದ ಜಗತ್ತು

ಪರಮಾತ್ಮನ ಆಶ್ರಯವನ್ನು ಅಪೇಕ್ಷಿಸುವುದು ಎಂದರೆ ಉಪನಿಷದ್ಭಾಷೆ ಯಲ್ಲಿ ಪರಮಾತ್ಮನ ಆವಾಸವನ್ನು ಅಪೇಕ್ಷಿಸುವುದು ಎಂದರ್ಥ. ಈ ಅರ್ಥ ವಾಗಲು ಯಾವ ಸಂಸ್ಕಾರ ಬೇಕೋ ಅದನ್ನು ಅಧಿಕಾರಿಯು ಸಿದ್ಧಪಡಿಸಿ ಕೊಳ್ಳಬೇಕು. ನ್ಯಾಯವಾದ ಅಧ್ಯಯನದಿಂದಲೇ ಈ ಸಿದ್ಧಿ ಎಂಬುದನ್ನು ಮರೆಯಬಾರದು.

ಅನು ಎಂದರೆ ನಿಸ್ಸಂದೇಹವಾಗಿ ಎಂದು ಅರ್ಥಮಾಡಿಕೊಂಡಿರುವೆವು. ಇದಕ್ಕೆ ದೃಢವಾಗಿ ನಂಬಬೇಕು ಎಂಬ ಅರ್ಥವನ್ನು ಮಾತ್ರ ಮಾಡಬಾರದು. ನಂಬಿದವನಿಗೆ ಸಂದೇಹ ಪರಿಹಾರವಾಗುವುದಿಲ್ಲ. ಗಾಢವಾದ ನಂಬಿಕೆ ಯಿರುವಲ್ಲಿ ಸಂದೇಹ ಹುಟ್ಟಲು ಅವಕಾಶವೇ ಇಲ್ಲ. ನಿಸ್ಸಂದೇಹ ಸ್ಥಿತಿ ಬರುವುದು ಶಾಸ್ತ್ರಾಧ್ಯಯನದಿಂದ. ಶಾಸ್ತ್ರವು, ನಾವು ಇದಕ್ಕೆ ಅಪ್ರೋಹವೇ ಇಲ್ಲವೆಂದು ದೃಢವಾಗಿ ನಂಬಿದ ವಿಷಯದಲ್ಲಿ ಅನುಭವ ಮತ್ತು ಯುಕ್ತಿ ಇವುಗಳ ಪರ್ಯಾಲೋಚನೆಯಿಂದ ನಾನಾ ವಿಧವಾದ ಸಂಭಾವಿತವಾದ ಸಂದೇಹವನ್ನು ಹುಟ್ಟಿಸಿ ಅದರ ಪರಿಹಾರದ ಆವಶ್ಯಕತೆಯನ್ನು ತೋರಿಸಿ ಆ ಸಂದೇಹವನ್ನು ಪರಿಹಾರಮಾಡುವುದು. ಹೀಗೆ ಶಾಸ್ತ್ರಾಧ್ಯಯನವಿಲ್ಲದೆ ಸಂದೇಹ ಪರಿಹಾರವಿಲ್ಲ. ಸಂದೇಹ ಪರಿಹಾರವಿಲ್ಲದೆ ವಿಷಯ ನಿರ್ಣಯ ವಿಲ್ಲ. ವಿಷಯ ನಿರ್ಣಯ ಈ ರೀತಿ ಬಂದರೇ ಅದನ್ನು ಸಿದ್ಧಾಂತವೆಂದು ಕರೆಯುವ ಪದ್ಧತಿ. ವಿಚಾರವಿಲ್ಲದೆ ವಿಷಯವನ್ನು ನಂಬಿದರೆ ನಿರ್ಣಯವೂ ಇಲ್ಲ. ಸಿದ್ಧಾಂತವೂ ಇಲ್ಲ. ಅದು ಜ್ಞಾನವಲ್ಲ. ಅಜ್ಞಾನದ ಪ್ರಸ್ತಾರ. ಏವಂಚ 'ನಿಸ್ಸಂದೇಹವಾಗಿ' ಎಂದು ಹೇಳುವ ಉಪನಿಷತ್ತಿಗೆ 'ನ್ಯಾಯ ವಾದ ಶಾಸ್ತ್ರಾಧ್ಯಯನದಿಂದ' ಎಂದು ಅರ್ಥ.

ಒಂದುವೇಳೆ ವಿಷಯವನ್ನು ನಂಬಿದವರು ಶಾಸ್ತ್ರಾಧ್ಯಯನವನ್ನು ಮಾಡಬಹುದು. ಅದು ಒಂದು ವಿಡಂಬನ ಮಾತ್ರ. ನಂಬಿಕೆಯ ಸನ್ನಿಧಾನ ದಲ್ಲಿ ಶಾಸ್ತ್ರಾಧ್ಯಯನ ಮಾಡುವವರು ತಾವು ನಂಬಿದ ವಿಷಯವನ್ನು ತಿಳಿ ಯುವುದರಲ್ಲಿ ಒಂದು ಹೆಜ್ಜೆಯನ್ನೂ ಮುಂದಿಡುವುದಿಲ್ಲ. ನಂಬಿದ ವಿಷಯ ದಲ್ಲಿಯೇ ಅವರು ಕೆಲವು ಹೊಸ ಭಾಷೆಯನ್ನು ಕಲಿಯಬಹುದು. ಇಂತಹ ಅಧ್ಯಯನವನ್ನು ಅನ್ಯಾಯಾಧ್ಯಯನವೆಂದು ಶಾಸ್ತ್ರದಲ್ಲಿ ಕರೆಯುವರು.

ಅನ್ಯಾಯಾಧ್ಯಯನದಿಂದ ನಂಬಿಕೆಯು ಇನ್ನೂ ಗಾಢತೆಯನ್ನು ಹೊಂದಿ ಜ್ಞಾನವು ದೂರೋತ್ಸಾರಿತವಾಗುವುದು.

ನಂಬಿಕೆಗೂ ಜ್ಞಾನಕ್ಕೂ ಇರುವ ಭೇದವಿದು. ನಂಬಿಕೆ ಜ್ಞಾನದಂತೆ ಭಾಸವಾಗಿ ತನ್ನ ವ್ಯಾಪಾರ ಮಾಡುವುದು. ಜ್ಞಾನವಾದರೊ ನಂಬಿಕೆಯನ್ನು ಅಪೇಕ್ಷಿಸುವುದಿಲ್ಲ. ತಿಳಿದ ವಿಷಯವನ್ನು ನಂಬಬೇಕಾಗಿಲ್ಲ.

ಸರ್ವ ಭೂತಗಳೂ ಪರಮಾತ್ಮನನ್ನು ಆಶ್ರಯಿಸಿವೆ ಎಂಬುದರಿಂದ ಸರ್ವಭೂತಗಳಲ್ಲಿ ಪರಮಾತ್ಮನು ನಿಯಂತೃವಾಗಿರುವನು ಎಂಬ ಅರ್ಥವು ಸಿದ್ಧಿಸುವುದು. ಹೀಗೆ ಯಾವ ವಸ್ತುವೂ ತನಗೆ ತಾನು ನಿಯಾಮಕನಲ್ಲ. ಮತ್ತು ತನ್ನಂತಿರುವ ಮತ್ತೊಂದು ವಸ್ತುವು ತನ್ನನ್ನು ನಿಯಮಿಸುವುದಿಲ್ಲ. ಪರಮಾತ್ಮನೇ ಸರ್ವ ನಿಯಂತೃವಾಗಿ ಸರ್ವ ರಕ್ಷಕ.

ಇದನ್ನು ತಿಳಿದವನು ಜ್ಞಾನಿ. ಅವನು ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನವುಳ್ಳವನಲ್ಲ. ಅವನಿಗೆ ಯಾವುದರಿಂದಲೂ ಭಯವಿಲ್ಲದಿರುವುದೇ ಇದರ ಕಾರಣ. ಸರ್ವ ಭಯ ಕಾರಣನಾದ ಪರಮಾತ್ಮನು ಜ್ಞಾನಿಯಾದವನಿಗೆ ರಕ್ಷಕ. ಈ ಕಾರಣದಿಂದ ಅವನು ಸರ್ವಾವಸ್ಥೆಯಲ್ಲಿಯೂ ರಕ್ಷಿತನಾಗಿರುವನು. ಇದು ಜ್ಞಾನದ ಸಾಮರ್ಥ್ಯವನ್ನು ಎತ್ತಿಹಿಡಿಯುವುದರ ಮೂಲಕ ಜ್ಞಾನವಿಷಯನಾದ ಪರಮಾತ್ಮನ ಮಹಾಮಹಿಮೆಯನ್ನು ಪ್ರಕಾಶಪಡಿಸುವುದು.

ಭಾಷ್ಯ

ಭಾಷ್ಯಕಾರರು ತಾವು ಮಂತ್ರಕ್ಕೆ ಮಾಡುವ ಅರ್ಥವನ್ನು ಅದೇ ಸಾಂಪ್ರದಾಯಿಕವೆಂಬ ಭಾವವನ್ನು ವ್ಯಕ್ತಪಡಿಸುವವರಾಗಿ ವಿವರಿಸುವರು.

ಭಾಷ್ಯ–ಸರ್ವಗಂ ಪರಮಾತ್ಮಾನಂ ಸರ್ವಂ ಚ ಪರಮಾತ್ಮನಿ ।
ಯಃ ಪಶ್ಯೇತ್ ಸ ಭಯಾಭಾವಾತ್ ನಾತ್ಮಾನಂ ಗೋಪ್ತುಮಿಚ್ಛತಿ ॥
ಇತಿ ಸೌಕರಾಯಣ ಶ್ರುತಿಃ ॥ ೬ ॥

ಸರ್ವಗಂ–ಸರ್ವತ್ರ ಇರುವ. ಪರಮಾತ್ಮಾನಂ–ಬ್ರಹ್ಮನನ್ನು. ಸರ್ವಂ ಚ–ಸಮಸ್ತವನ್ನೂ ಕೂಡ. ಪರಮಾತ್ಮನಿ–ಪರಮಾತ್ಮನಲ್ಲಿ. ಯಃ–ಯಾವ ಅಧಿಕಾರಿಯು. ಪಶ್ಯೇತ್–ತಿಳಿಯುತ್ತಾನೆಯೋ. ಸಃ–ಆ ಅಧಿಕಾರಿಯು. ಭಯಾಭಾವಾತ್–ಭಯವಿಲ್ಲದವನಾದ ದೆಶೆಯಿಂದ. ಆತ್ಮಾನಂ–ತನ್ನನ್ನು.

ಗೋಪ್ತುಂ–ಕಾಪಾಡಲು. ನ ಇಚ್ಛತಿ–ಅಪೇಕ್ಷಿಸುವುದಿಲ್ಲ. ಇತಿ–ಹೀಗೆಂದು ಸೌಕರಾಯಣ ಶ್ರುತಿಃ-ಸೌಕರಾಯಣ ಎಂಬ ಶ್ರುತಿಯು(ಸಮರ್ಥಿಸುವುದು).

ಸೂಚನೆ

ಪರಮಾತ್ಮನು ಸರ್ವ ವಸ್ತುವಿನಲ್ಲಿದ್ದು ಸರ್ವಕ್ಕೂ ಆಶ್ರಯನಾಗಿರುವನೆಂದೂ ಸರ್ವಕ್ಕೂ ಆಶ್ರಯನೆಂದರೆ ಸರ್ವ ನಿಯಂತೃ ಎಂದೂ ನಿಸ್ಸಂದೇಹವಾಗಿ ತಿಳಿಯುವುದೇ ಭಯವಿಲ್ಲದಿರುವಿಕೆ. ತಿಳಿಯದಿರುವುದೇ ಭಯ. ಅಜ್ಞಾನಿಯು ಭಯವುಳ್ಳವನು. ಸರ್ವತ್ರವಿರುವ ಪರಮಾತ್ಮನ ಭಯ ಅವನಿಗೆ ತಪ್ಪುವುದಿಲ್ಲ. ಸರ್ವತ್ರವಿರುವ ಪರಮಾತ್ಮನಿಂದ ಭಯವೆಂದರೆ ಸರ್ವವಸ್ತುವಿನಿಂದಲೂ ಅವನಿಗೆ ಭಯ. ಈ ನಿಮಿತ್ತದಿಂದ ಅವನಿಗೆ ಯಾವಾಗಲೂ ತನ್ನನ್ನು ರಕ್ಷಿಸಿಕೊಳ್ಳುವ ಚಿಂತೆ ತಪ್ಪುವುದಿಲ್ಲ. ಜ್ಞಾನಿಯಾದರೋ ನಿರ್ಭಯ. ಸರ್ವತ್ರವಿರುವ ಪರಮಾತ್ಮನು ಅವನಿಗೆ ರಕ್ಷಕ. ಈ ಕಾರಣದಿಂದ ಸರ್ವ ವಸ್ತುವೂ ಅವನಿಗೆ ರಕ್ಷಕ. ಇಂತಹ ಸನ್ನಿವೇಶದಲ್ಲಿ ಅವನಿಗೆ ತನ್ನನ್ನು ರಕ್ಷಿಸಿಕೊಳ್ಳಬೇಕೆಂಬ ಆವಶ್ಯಕತೆಯೇ ಇಲ್ಲ.

ಸರ್ವತ್ರ ಪರಮಾತ್ಮನು ಇದಾನೆ ಎಂದರೆ ಅವನಿರುವುದಕ್ಕೆ ಸರ್ವ ವಸ್ತು ಇರಬೇಕು. ಹೀಗೆ ಪರಮಾತ್ಮನು ಇರುವುದಕ್ಕಿಂತ ಮುಂಚೆ ಸರ್ವ ವಸ್ತುವೂ ಅವನ ಆವಾಸಕ್ಕೆ ಸಿದ್ಧವಾಗಿರಬೇಕಾದರೆ ಅವನನ್ನು ಸರ್ವ ಕಾರಣ ಎನ್ನುವುದು ಹೇಗೆ ಎಂದು ವಾದಿಸುವ ಪದ್ಧತಿಯೂ ಕಂಡುಬರುತ್ತದೆ. ಸರ್ವವೂ ಯಾವ ಆಕಾರದಲ್ಲಿಯೇ ಇರಲಿ ಅದು ಪರಮಾತ್ಮನ ಕಾರ್ಯ. ಪರಮಾತ್ಮನು ಅದರಲ್ಲಿ ವಾಸವಾಗಿರುವನು ಎಂದರೆ ಇದೇ ಅರ್ಥ ಎಂದು ಸಿದ್ಧಾಂತಿಸುವ ಉಪನಿಷತ್ತಿಗೆ ಮೇಲೆ ಕಂಡಂತೆ ವಾದಿಸುವುದು ಅಸಂಗತ. ಹಾಗೆ ಯಾವುದೇ ಆಕಾರದಲ್ಲಿ ಪರಮಾತ್ಮನ ವಾಸಕ್ಕಿಂತ ಮೊದಲು ವಸ್ತುವಿರುವುದಾದರೆ ಅದು ಸ್ವತಂತ್ರವಾಯಿತು. ಎಂದರೆ ಆ ಆಕಾರದಲ್ಲಿಯಾದರೂ ಇರಲು ಅದು ಪರಮಾತ್ಮನ ನಿರ್ಮಾಣವಿಲ್ಲದೆ ಇರಬೇಕಾದುದರಿಂದ ಅಷ್ಟು ಭಾಗದಲ್ಲಿಯಾದರೂ ಸ್ವತಂತ್ರವಾಯಿತು. ಹಿಂದೆ ಹೇಳಿದ ನ್ಯಾಯದಂತೆ ಅದರಿಂದ ಪರಮಾತ್ಮನಿಗೆ ಭಯವೇ ಹೊರತು ಪರಮಾತ್ಮನಿಂದ ಅದಕ್ಕೆ ಭಯವಿಲ್ಲ. ಏವಂಚ ಮೇಲೆ ಕಂಡ ಪ್ರಪಂಚ ವಸ್ತು

ವಿನ ಸ್ವಾತಂತ್ರ್ಯವಾದವು ಪರಮಾತ್ಮ ನಿರಾಕರಣದ ಮಾತಾಗಿ ಈ ವಾದಿಗಳು ಉಪನಿಷದ್ಭಾಷೆಯಲ್ಲಿ ಆತ್ಮಹನರೆನಿಸುವರು.

ಈ ಮಂತ್ರವು ದೋಷಕ್ಕವಕಾಶ ಕೊಡದ ರೀತಿಯಲ್ಲಿ ಸ್ವತಂತ್ರ ಪರತಂತ್ರ ವಸ್ತುಗಳ ವಿವೇಕವು ಆತ್ಮಶ್ರೇಯಸ್ಸಿನ ಒಂದೇ ಸಾಧನ ಎಂದು ನಿರೂಪಿಸುವುದು.

ಫಲಿತ ಮಂತ್ರಾರ್ಥ

ಚೇತನಾಚೇತನಾತ್ಮಕವಾದ ಸಮಸ್ತವೂ ಪರಮಾತ್ಮನನ್ನು ಆಶ್ರಯಿಸಿವೆ ಎಂದು ಯಾವನು ಸಂದೇಹ ಪರಿಹಾರಪೂರ್ವಕವಾಗಿ ತಿಳಿಯುತ್ತಾನೆಯೋ (ಆಶ್ರಯದ ಕ್ರಮವನ್ನು ಅನುಸರಿಸಿ ತಿಳಿಯುತ್ತಾನೆಯೋ) ಮತ್ತು ಸಮಸ್ತ ವಸ್ತುಗಳಲ್ಲಿಯೂ ನಿಯಾಮಕನಾದ ಹರಿಯನ್ನು ಸಂದೇಹ ಪರಿಹಾರಪೂರ್ವಕವಾಗಿ ತಿಳಿಯುತ್ತಾನೆಯೋ ಅವನು ಪರಮಾತ್ಮನನ್ನು ತಿಳಿದವನಾದುದರಿಂದ (ಪ್ರಪಂಚದ ಯಾವ ವಸ್ತುವಿನಿಂದಲೂ) ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಪೇಕ್ಷಿಸುವುದಿಲ್ಲ. (ಅವನಿಗೆ ಸರ್ವರೂಪದಲ್ಲಿಯೂ ಪರಮಾತ್ಮನೇ ರಕ್ಷಕ.) ॥೬॥

೭

ಖಂಡಾರ್ಥವು ಏಳನೆಯ ಮಂತ್ರವನ್ನು ಈರೀತಿ ಪರಿಚಯ ಮಾಡಿಸುವುದು.

ಖಂಡಾರ್ಥ— ಏತಮೇವಾರ್ಥಂ ವಿವೃಣೋತಿ । ಯಸ್ಮಿನ್ ಇತಿ ॥

ಏತಂ ಏವ-ಇದೇ. ಅರ್ಥಂ-ಅರ್ಥವನ್ನು. ವಿವೃಣೋತಿ-ವಿವರಿಸುತ್ತಾನೆ. (ವೇದಪುರುಷನು) ಯಸ್ಮಿನ್ ಇತಿ-ಯಸ್ಮಿನ್ ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಮಂತ್ರ

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ॥
ತತ್ರ ಕೊ ಮೋಹಃ ಕಶ್ಶೋಕಃ ಏಕತ್ವಮನುಪಶ್ಯತಃ ॥೭॥

ಖಂಡಾರ್ಥ

ಯಸ್ಮಿನ್ ಆತ್ಮನಿ ಸರ್ವಾಣಿ ಭೂತಾನಿ ತಿಷ್ಠಂತೀತಿ ಶೇಷಃ । ಆತ್ಮೈವ ತತ್ರ ಸರ್ವಭೂತೇಷ್ವಭೂತ್ ।ಅನಾದಿತೋ ವರ್ತತ ಇತಿ ಶೇಷಃ। ಏವಮಿತಿ ಶೇಷಃ। ಏವಂ ವಿಜಾನತಃ ಸರ್ವಾಧಾರತಯಾ ಸರ್ವೇಷು ಭೂತೇಷು ಆತ್ಮಾನಂ ವಿಶೇಷೇಣ ಜಾನತಃ ಸರ್ವತ್ರ ಸ್ಥಿತಸ್ಯ ಹರೇಃ ಏಕತ್ವಂ ಚ ಅನುಪಶ್ಯತಃ ಜಾನತಃ ಕೊ ಮೋಹಃ ಕಃ ಶೋಕಃ ನ ಕೋಽಪೀತ್ಯರ್ಥಃ ।

ಮಂತ್ರ ಪದವಿಭಾಗ—ಯಸ್ಮಿನ್, ಸರ್ವಾಣಿ, ಭೂತಾನಿ, ಆತ್ಮಾ, ಏವ, ಅಭೂತ್, ವಿಜಾನತಃ, ತತ್ರ, ಕಃ, ಮೋಹಃ ಕಃ, ಶೋಕಃ, ಏಕತ್ವಂ, ಅನು, ಪಶ್ಯತಃ ॥

ಮಂತ್ರಸ್ಥಪದಗಳ ಅನ್ವಯ

ಯಸ್ಮಿನ್, ಸರ್ವಾಣಿ, ಭೂತಾನಿ, (ತಿಷ್ಠಂತಿ), (ಸಃ), ಆತ್ಮಾ, ಏವ. ತತ್ರ (ಸರ್ವಭೂತೇಷು), ಅಭೂತ್, (ಅನಾದಿತೋ ವರ್ತತೆ). (ಏವಂ) ವಿಜಾನತಃ, ಏಕತ್ವಂ,(ಚ), ಅನು, ಪಶ್ಯತಃ, ಕಃ, ಮೋಹಃ? ಕಃ, ಶೋಕಃ?

ಖಂಡಾರ್ಥದಂತೆ ಈ ಪದಗಳ ಅರ್ಥ

ಯಸ್ಮಿನ್—ಯಾವ. ಆತ್ಮನಿ-ಪರಮಾತ್ಮನಲ್ಲಿ. ಸರ್ವಾಣಿ-ಸಮಸ್ತವಾದ. ಭೂತಾನಿ-ಭೂತಗಳು ಅಥವಾ ವಸ್ತುಗಳು. ತಿಷ್ಠಂತಿ-ಆಶ್ರಯವನ್ನು ಹೊಂದಿ ಇವೆಯೋ. ಇತಿ ಶೇಷಃ-ಎಂದು ಅನ್ವಯಿಸಿಕೊಳ್ಳಬೇಕು. ಸಃ-ಅವನು. ಆತ್ಮ ಏವ-ಪರಮಾತ್ಮನೇ. ತತ್ರ-ಸರ್ವಭೂತೇಷು-ಸಮಸ್ತ ಚೇತನಾಚೇತನ ವಸ್ತುಗಳಲ್ಲಿ. ಅಭೂತ್-ಇರುವನು. ಅನಾದಿತಃ ವರ್ತತೆ-ಅನಾದಿಯಿಂದ ಇರುತ್ತಾನೆ ಎಂದು. ಶೇಷಃ-ಅನ್ವಯಮಾಡಿಕೊಳ್ಳಬೇಕು. ಏವಂ-ಹೀಗೆ ಎಂದು. ಶೇಷಃ-ಅನ್ವಯಿಸಿಕೊಳ್ಳಬೇಕು. ಏವಂ-ಹೀಗೆ. ವಿಜಾನತಃ-ಸರ್ವಾಧಾರತಯಾ ಸರ್ವೇಷು ಭೂತೇಷು ಆತ್ಮಾನಂ ವಿಶೇಷೇಣ ಜಾನತಃ - ಸರ್ವಾಧಾರತಯಾ-ಸರ್ವಕ್ಕೂ ಆಧಾರವಾಗಿ. ಸರ್ವೇಷು—ಸಮಸ್ತವಾದ. ಭೂತೇಷು—ವಸ್ತುಗಳಲ್ಲಿ. ಆತ್ಮಾನಂ—ಪರಮಾತ್ಮನನ್ನು. ವಿಶೇಷೇಣ—ಜಗದ್ವಿಲಕ್ಷಣನನ್ನಾಗಿ. ಜಾನತಃ—ತಿಳಿಯುವ ಅಧಿಕಾರಿಗೆ. ಸರ್ವತ್ರ—ಸಮಸ್ತ ವಸ್ತುವಿನಲ್ಲಿಯೂ. ಸ್ಥಿತಸ್ಯ—ಇರುವ. ಹರೇಃ—ಪರಮಾತ್ಮನ. ಏಕತ್ವಂ ಚ— ಅಭೇದವನ್ನು ಕೂಡ ಅಥವಾ ಅಸಹಾಯ ಕರ್ತೃತ್ವ ಕಾರಯಿತೃತ್ವವನ್ನೂ ಸಹ. ಅನು—ನಿಸ್ಸಂದೇಹವಾಗಿ. ಪಶ್ಯತಃ—

ತಿಳಿಯುವ ಅಧಿಕಾರಿಗೆ. ಕಃ–ಯಾವ. ಮೋಹಃ–ಭ್ರಾಂತಿಯು? ಕಃ–ಯಾವ. ಶೋಕಃ–ದುಃಖವು? ನ ಕೋಪಿ-ಯಾವುದೂ ಇಲ್ಲ. ಇತಿ–ಹೀಗೆ. ಅರ್ಥಃ–ಅರ್ಥವು.

ಭಾಷ್ಯ

ಯಸ್ಮಿನ್ ಪರಮಾತ್ಮನಿ ಸರ್ವಭೂತಾನಿ ಸ ಪರಮಾತ್ಮೈವ ತತ್ರ ಸರ್ವ ಭೂತೇಷ್ವಭೂತ್ ॥

ಯಸ್ಮಿನ್–ಯಾವ. ಪರಮಾತ್ಮನಿ–ಪರಮಾತ್ಮನಲ್ಲಿ. ಸರ್ವಭೂತಾನಿ–ಸಮಸ್ತ ಭೂತಗಳೊ. ಸಃ–ಆ. ಪರಮಾತ್ಮೈವ–ಪರಮಾತ್ಮನೇ. ತತ್ರ–ಸರ್ವಭೂತೇಷು–ಸಮಸ್ತ ಭೂತಗಳಲ್ಲಿ. ಅಭೂತ್–ಇರುವನು.

ಸೂಚನೆ

ಅಭೂತ್–ಇರುವನು ಎಂದು ಭಾಷ್ಯಕಾರರು ಉಪನಿಷತ್ಪದವನ್ನು ಅನುಸರಿಸಿ ಹೇಳಿರುವರು. ಇದಕ್ಕೆ ಖಂಡಾರ್ಥಕಾರರು 'ಅನಾದಿತಃ ವರ್ತತ' ಎಂದು ಅನ್ವಯಿಸಿ ಅರ್ಥಮಾಡಿಕೊಳ್ಳಬೇಕು ಎಂದು ಹೇಳಿರುವುದನ್ನು ಮರೆಯಬಾರದು. ಖಂಡಾರ್ಥಕಾರರು ಹೀಗೆ ಅನ್ವಯಿಸಲು ಅವರ ಇಡೀ ಶಾಸ್ತ್ರಾಧ್ಯಯನವೇ ಕಾರಣ. ಅಧಿಕಾರಿಯಾದವನು ಇದನ್ನು ಗ್ರಹಿಸಿ ಶ್ರುತಿ ಅಥವಾ ಭಾಷ್ಯಕ್ಕೆ ಶಾಸ್ತ್ರಾರ್ಥದೃಷ್ಟಿಯಿಂದ ಇದೇ ಅರ್ಥ ಮಾಡಿಕೊಳ್ಳುವುದು ಜ್ಞಾನಕ್ಕೆ ಸಾಧನ. ಹೀಗೆ ಪ್ರತಿ ಮಂತ್ರವೂ ಅರ್ಥಾತ್ ಅಧಿಕಾರಿಯನ್ನು ಕುರಿತು ಶಾಸ್ತ್ರಾಧ್ಯಯನಮಾಡು ಎಂದು ವಿಧಿಸುವುದು.

ಜ್ಞಾನದ ಫಲವನ್ನು ಭಾಷ್ಯಕಾರರು ಹೀಗೆ ವಿವರಿಸುತ್ತಾರೆ.

ಭಾಷ್ಯ—ಏವಂ ಸರ್ವಭೂತೇಷ್ವೇಕತ್ವೇನ ಪರಮಾತ್ಮಾನಂ ವಿಜಾನತಃ ಕೊ ಮೋಹಃ ।

ಏವಂ–ಹೀಗೆ. ಸರ್ವಭೂತೇಷು–ಸರ್ವಭೂತಗಳಲ್ಲಿ. ಏಕತ್ವೇನ–ಸರ್ವನಿಯಾಮಕನಾಗಿ ಒಬ್ಬನೇಆದ. ಪರಮಾತ್ಮಾನಂ–ಪರಮಾತ್ಮನನ್ನು. ವಿಜಾನತಃ–ತಿಳಿಯುವ ಅಧಿಕಾರಿಗೆ. ಕಃ ಮೋಹಃ-ಮೋಹವೆಲ್ಲಿ ಬಂತು?

ಸೂಚನೆ

ಮೋಹವೆಲ್ಲಿ ಬಂತು? ಎಂದು ಮಾತ್ರ ಹೇಳುವ ಭಾಷ್ಯಕಾರರು ಶೋಕವು ಮೋಹದಿಂದ ಹುಟ್ಟುವುದು ಎಂದು ಸೂಚಿಸುವರು. ಏವಂಚ

ದುಃಖವು ಪ್ರಪಂಚಸ್ವಭಾವವಲ್ಲ. ಅದು ಮೋಹದಿಂದ ಹುಟ್ಟುವುದು. ಮೋಹವಿಲ್ಲದವನಿಗೆ ಪ್ರಪಂಚವು ಸರ್ವವಿಧದಲ್ಲಿಯೂ ಅಧಿಕಾರಿಗೆ ರಕ್ಷಕನಾದ ಪರಮಾತ್ಮನ ಕಾರ್ಯವಾಗಿ ಮತ್ತು ಪರಮಾತ್ಮನ ನಿವಾಸ ಸ್ಥಾನವಾಗಿ ಆನಂದ ರೂಪವಾಗಿರುವುದು. ದುಃಖವೆಂದು ಇತರರು ಕರೆಯುವ ಪ್ರಪಂಚವು ಜ್ಞಾನಿಗೆ ಆನಂದ ಅಥವ ಜೀವನ್ಮುಕ್ತಿಸ್ಥಾನ.

ಭಾಷ್ಯಕಾರರು ತಾವು ಹೇಳಿದ ಶ್ರುತ್ಯರ್ಥ ಶ್ರುತಿಸಂಪ್ರದಾಯ ಸಿದ್ಧವಾದುದು ಎಂದು ವಿವರಿಸುವರು.

ಭಾಷ್ಯ— ಯಸ್ಮಿನ್ ಸರ್ವಾಣಿ ಭೂತಾನಿ ಸ ಆತ್ಮಾ ಸರ್ವಭೂತಗಃ ।
ಏವಂ ಸರ್ವತ್ರ ಯೊ ವಿಷ್ಣುಂ ಪಶ್ಯೇತ್ತಸ್ಯ ವಿಜಾನತಃ ।
ಕೊ ಮೋಹಃ ಕೋಽಥವಾ ಶೋಕಃ ಸ ವಿಷ್ಣುಂ
ಪರ್ಯಗಾದ್ಯತಃ ॥ ಇತಿ ಪಿಪ್ಪಲಾದಶಾಖಾಯಾಂ ॥

ಯಸ್ಮಿನ್–ಯಾವ ಪರಮಾತ್ಮನಲ್ಲಿ. ಸರ್ವಾಣಿ–ಸಮಸ್ತವಾದ. ಭೂತಾನಿ–ಭೂತಗಳೋ. ಸ–ಆ. ಆತ್ಮಾ–ಪರಮಾತ್ಮನು. ಸರ್ವಭೂತಗಃ-ಸಮಸ್ತ ಭೂತಗಳಲ್ಲಿರುವನು. ಏವಂ–ಹೀಗೆ. ಸರ್ವತ್ರ–ಸರ್ವ ವಸ್ತುವಿನಲ್ಲಿಯೂ. ಯಃ-ಯಾವ ಅಧಿಕಾರಿಯು. ವಿಷ್ಣುಂ–ಪರಮಾತ್ಮನನ್ನು. ಪಶ್ಯೇತ್–ತಿಳಿಯುತ್ತಾನೆಯೋ. ತಸ್ಯ–ಆ. ವಿಜಾನತಃ-ಜ್ಞಾನಿಗೆ. ಕಃ–ಯಾವ. ಮೋಹಃ–ಭ್ರಾಂತಿಯು? ಅಥವಾ–ಅಲ್ಲದೆ. ಕಃ–ಯಾವ. ಶೋಕಃ–ಶೋಕವು? (ಯಾವುದೂ ಇಲ್ಲ ಎಂದು ಅಭಿಪ್ರಾಯ). ಯತಃ–ಯಾವ ಕಾರಣದ ದೆಶೆಯಿಂದ. ಸಃ–ಆ ಅಧಿಕಾರಿಯು. ವಿಷ್ಣುಂ–ವಿಷ್ಣುವನ್ನು. ಪರ್ಯಗಾತ್-(ಹೊಂದಿರುವನೋ) ತಿಳಿದಿರುವನೋ ಆ ಕಾರಣದ ದೆಶೆಯಿಂದ ಎಂದು ಭಾವ.

ಭಾಷ್ಯ—ಪೂರ್ವೋಕ್ತಾನುವಾದೇನ ಶೋಕ ಮೋಹಾದ್ಯಭಾವೋಪಿ
ವಿಜಾನತಶ್ಚ ಅತ್ರೋಚ್ಯತೆ । ಅಭ್ಯಾಸಶ್ಚ ಸರ್ವಗತತ್ವಸ್ಯ
ತಾತ್ಪರ್ಯದ್ಯೋತನಾರ್ಥಃ ।

ಪೂರ್ವೋಕ್ತಾನುವಾದೇನ–ಹಿಂದೆ ಹೇಳಿದುದರ ಅನುವಾದ ಮಾಡೋಣದರಿಂದ. ವಿಜಾನತಶ್ಚ–ಜ್ಞಾನಿಗೇ. ಶೋಕಮೋಹಾದ್ಯಭಾವೋಪಿ–ಶೋಕ, ಮೋಹ ಇವೇ ಮೊದಲಾದುದರ ಅಭಾವ, ಇದನ್ನೂ ಸಹ. ಅತ್ರ–ಈ

ಮಂತ್ರದಲ್ಲಿ. ಉಚ್ಯತೆ–ಹೇಳಲ್ಪಡುವುದು. ಅಭ್ಯಾಸಶ್ಚ–ಹೇಳಿದುದನ್ನೇ ಪುನಃ ಹೇಳುವುದು. ಸರ್ವಗತತ್ವಸ್ಯ–ಸರ್ವವ್ಯಾಪ್ತಿ ಎಂಬ ಪರಮಾತ್ಮಧರ್ಮದ. ತಾತ್ಪರ್ಯದ್ಯೋತನಾರ್ಥಃ–ದೃಷ್ಟಿ ಏನೆಂಬುದನ್ನು ಹೇಳುವ ಪ್ರಯೋಜನವುಳ್ಳುದು. (ಸರ್ವಗತತ್ತ್ವ ಎಂಬ ಪರಮಾತ್ಮನ ಮಹಿಮೆಯು ಸಿದ್ಧಾಂತದ ಗಹನವಾದ ಭಾವವಿಶೇಷಗಳಿಗೆ ಪ್ರವರ್ತಕ. ಇದು ಅಧ್ಯಯನ ಕ್ರಮದಲ್ಲಿ ವಿಶದವಾಗುವುದು.)

ಸೂಚನೆ

ಸರ್ವ ಭೂತಗಳೂ ಪರಮಾತ್ಮನನ್ನು ಆಶ್ರಯಿಸಿರುವುವು. ಎಂದರೆ ಅವುಗಳ ಪ್ರವೃತ್ತಿಯು ಎಂದರೆ ಅವುಗಳು ಅವುಗಳಾದುದೇ ಪರಮಾತ್ಮನಿಂದ. ಹೀಗೆ ಪರಮಾತ್ಮನು ಸರ್ವಕರ್ತೃ. ಅಷ್ಟೇ ಅಲ್ಲ. ಹುಟ್ಟಿದ ಆ ವಸ್ತುಗಳಲ್ಲಿ ಅನಾದಿಕಾಲದಿಂದ ಪರಮಾತ್ಮನೇ ಇರುವನು. ಅನಾದಿಕಾಲದಿಂದ ಎಂಬ ವಿಶೇಷಣವನ್ನು ಪರಮಾತ್ಮನ ಇರುವಿಕೆಗೆ ಕೊಡುವುದರ ತಾತ್ಪರ್ಯವು ಮೊದಲು ವಸ್ತುವಿದ್ದು ಅನಂತರ ಪರಮಾತ್ಮನು ಅದರಲ್ಲಿ ಪ್ರವೇಶಿಸಿದನು ಎಂದಲ್ಲ. ಈ ಪಕ್ಷದಲ್ಲಿ ಪರಮಾತ್ಮನ ಇರುವು ಸಾದಿಯಾಗುವುದು. ಮೊದಲು ಪರಮಾತ್ಮ ಇರುವುದರಿಂದಲೇ ಆ ವಸ್ತುಗಳುಂಟಾದವು. ಹೀಗೆ ಜಗತ್ತೇ ಸಾದಿ. ಪರಮಾತ್ಮ ಅನಾದಿ. ಪರಮಾತ್ಮನು ಆಶ್ರಯವಾಗಿರುವುದು ಮತ್ತು ವಸ್ತುಗಳಲ್ಲಿರುವುದು ಈ ಎರಡೂ ಪರಮಾತ್ಮಧರ್ಮಗಳಾಗಿ ಭಿನ್ನವಾದುವಲ್ಲ. ಎರಡೂ ಅನಾದಿ. ಪರಮಾತ್ಮನಿಗೆ ಚಲನೆಯಿಲ್ಲ. ಅವನು ಸರ್ವಗತ, ಸರ್ವವ್ಯಾಪ್ತ. ಅವನು ಹತ್ತಿರ, ದೂರ, ಒಳಗೆ, ಹೊರಗೆ ಏಕಕಾಲದಲ್ಲಿರುವನು. ಈ ಅಂಶವನ್ನು ನಿಸ್ಸಂದೇಹವಾಗಿ ವಿರೋಧವಿಲ್ಲದೆ ತಿಳಿಯಲು ಶಾಸ್ತ್ರಾಧ್ಯಯನ ಒಂದೇ ದಾರಿ.

ಶೋಕವುಳ್ಳವನೇ ಸಂಸಾರಿ. ಮೋಹವೇ ಶೋಕ ಕಾರಣ. ಪರಮಾತ್ಮಾಜ್ಞಾನವೇ ಮೋಹದ ಕಾರಣ. ಪರಮಾತ್ಮನನ್ನು ಬಿಡಿಸಿ ವಸ್ತುವನ್ನು ತಿಳಿದರೆ ಅದು ಮೋಹ ಶೋಕ ಕಾರಣ. ಆ ವಸ್ತುವನ್ನು ಒಲಿಸಿಕೊಳ್ಳುವುದೇ ತನ್ನ ರಕ್ಷಣೆಯ ಉಪಾಯವೆಂದು ಅಜ್ಞಾನಿಯಾದವನು ತಿಳಿದು ಅದರಲ್ಲಿ ಅಭಿಮಾನ ಅಥವಾ ಮೋಹವನ್ನು ಹೊಂದುವನು. ಆದರೆ ವಾಸ್ತವವಾಗಿ ಆ ವಸ್ತು ಯಾವುದಕ್ಕೂ ಕಾರಣವಲ್ಲ. ಅದರಿಂದ

ರಕ್ಷಣೆ ಎಂದು ಅಜ್ಞಾನಿಯು ತಿಳಿದರೆ ರಕ್ಷಣೆಕೊಡುವ ಯೋಗ್ಯತೆಯು ಆ ವಸ್ತುವಿಗಿಲ್ಲ. ಆಶಾಭಂಗವೇ ಆ ವಸ್ತುವನ್ನು ನಂಬಿದುದರ ಫಲ. ಅಜ್ಞಾನಿಯ ಈ ಎಲ್ಲ ವ್ಯಾಪಾರವೂ ದುಃಖ. ಮತ್ತು ಅದು ಮುಂದಿನ ದುಃಖದ ಬೀಜ.

ಪರಮಾತ್ಮತತ್ತ್ವವನ್ನು ತಿಳಿದ ಜ್ಞಾನಿಗಾದರೋ ಈ ದುಃಖ ಪರಂಪರೆಯೇ ಇಲ್ಲ. ಇದಕ್ಕೆ ಕಾರಣವಾದ ಮೋಹವೂ ಅವನಿಗಿಲ್ಲ. ಹೀಗೆ ಜ್ಞಾನಿಯು ಸದಾನಂದನು.

ಫಲಿತ ಮಂತ್ರಾರ್ಥ

ಯಾವ ಪರಮಾತ್ಮನಲ್ಲಿ ಸಮಸ್ತ ಭೂತಗಳೂ ಆಶ್ರಯಿಸಿಕೊಂಡಿರುವುವೊ ಆ ಪರಮಾತ್ಮನೇ ಸಮಸ್ತ ಭೂತಗಳಲ್ಲಿಯೂ ಅನಾದಿಕಾಲದಿಂದಲೂ ಇರುವನು. ಹೀಗೆ ತಿಳಿಯುವ ಮತ್ತು ಪರಮಾತ್ಮನ ಏಕತ್ವವನ್ನು ತಿಳಿಯುವ ಅಧಿಕಾರಿಗೆ ಮೋಹವೆಲ್ಲಿ ಮತ್ತು ಶೋಕವೆಲ್ಲಿ? (ಅವನಿಗೆ ಎರಡೂ ಇಲ್ಲ ಎಂದರ್ಥ.) ॥ ೭ ॥

೮

ಖಂಡಾರ್ಥವು ಎಂಟನೆಯ ಮಂತ್ರದ ಪ್ರವೃತ್ತಿಗೆ ನಿಮಿತ್ತವನ್ನು ಹೇಳುವುದು.

ಖಂಡಾರ್ಥ— ಭಗವದ್ ಜ್ಞಾನಮಾತ್ರೇಣ ಕುತೊ ಮೋಹಾದ್ಯಭಾವ ಇತ್ಯತ ಆಹ ॥ ಸ ಇತಿ ॥

ಭಗವದ್‌ಜ್ಞಾನಮಾತ್ರೇಣ – ಪರಮಾತ್ಮನ ಜ್ಞಾನಮಾತ್ರದಿಂದ. ಕುತಃ–ಏಕೆ. ಮೋಹಾದ್ಯಭಾವಃ–ಮೋಹ ಮೊದಲಾದುವುಗಳ ಇಲ್ಲದಿರುವಿಕೆಯು? ಇತಿ–ಹೀಗೆ ಪ್ರಶ್ನಿಸಿದರೆ. ಅತಃ–ಉತ್ತರ ಹೇಳಬೇಕಾದ ಕಾರಣದಿಂದ. ಆಹ–ಹೇಳಿದನು. ಸ ಇತಿ–ಸಃ ಎಂಬ ಪದದಿಂದ ಆರಂಭವಾಗುವ ಮಂತ್ರದಿಂದ.

ಮಂತ್ರ

ಸ ಪರ್ಯಗಾಚ್ಛುಕ್ರಮಕಾಯಮವ್ರಣ
ಮಸ್ನಾವಿರ ಗ್ಂ ಶುದ್ಧಮಪಾಪವಿದ್ಧಂ ।
ಕವಿರ್ಮನೀಷೀ ಪರಿಭೂ ಸ್ಸ್ವಯಂಭೂ ರ್ಯಾಥಾತಥ್ಯತೊ
ಅರ್ಥಾ ವ್ಯದಧಾತ್ ಶಾಶ್ವತೀಭ್ಯಸ್ಸಮಾಭ್ಯಃ ॥ ೮ ॥

ಖಂಡಾರ್ಥ

ಸ ಜ್ಞಾನೀ ಪರ್ಯಗಾತ್ – ಪ್ರಾಪ್ತೋಭೂತ್ ಬ್ರಹ್ಮೇತಿಶೇಷಃ। ತಾವತಾ ಕಥಂ ಶೋಕಾದ್ಯಭಾವ ಇತ್ಯತಸ್ತದ್ವಿಶಿನಷ್ಟಿ। ಶುಕ್ರಮಿತ್ಯಾದಿನಾ। ಶುಚಂ ಶೋಕಂ ರಹತಿ ತ್ಯಜತೀತಿ ಶುಕ್ರಂ ಶೋಕರಹಿತಂ। ಅಕಾಯಂ ಲಿಂಗದೇಹ ರಹಿತಂ। ಅವ್ರಣಂ ವ್ರಣ ಸಂಚೂರ್ಣನ ಇತ್ಯತಃ ಸ್ತೋಕೊ ವ್ರಣಃ। ಕಾಲೇನ ಅಸ್ತೋಕತ್ವಾತ್ ಅವ್ರಣಂ ನಿತ್ಯಂ ಗುಣೈರಸ್ತೋಕ-ತ್ವಾತ್। ಅವ್ರಣಂ ಪೂರ್ಣಮಿತ್ಯರ್ಥಃ। ಅಸ್ನಾವಿರಗ್ಂ ಸ್ನಾವೋಪಲಕ್ಷಿತ ಸಪ್ತಧಾತುಮಯಸ್ಥೂಲದೇಹರಹಿತಂ। ಶುದ್ಧಂ ಪಾವಿತ್ರ್ಯಹೇತುಂ ಶುದ್ಧ-ತ್ವಾದೇವಾಪಾಪವಿದ್ಧಂ। ತತ ಏವ ಹೇತೋಃ ಪಾಪಮೂಲಸ್ಥೂಲಸೂಕ್ಷ್ಮ ಶರೀರಹೀನಂ। ತತ ಏವ ದೇಹನಿಮಿತ್ತ ಶೋಕಾದಿಶೂನ್ಯಮಿತಿ ಶುಕ್ರ-ಮಿತ್ಯುಚ್ಯತೆ। ಏವಂ ಭೂತಂ ಹರಿಂ ಪರ್ಯಗಾದ್ಯತೋಽತಃ ಕಾರಣಾ ಚ್ಛೋಕಾದ್ಯಭಾವಃ। ಏವಂಭೂತ ಹರಿಸಾರೂಪ್ಯ ಲಕ್ಷಣಾಂ ತದ್ಗತಿಂ ಗತಸ್ಯ ಶೋಕಾದ್ಯಭಾವೊ ಯುಕ್ತ ಇತಿ ಭಾವಃ॥

ನನ್ವೇವಮಶರೀರಶ್ಚೇತ್ ಜಗತ್ಸ್ರಷ್ಟಾ ನೇತಿ ಪ್ರಾಪ್ತಂ ಲೋಕೆ ಸದೇಹಸ್ಯೈವ ಸ್ರಷ್ಟೃತಾ ದರ್ಶನಾದಿತ್ಯಾಶಂಕಾಂ ನಿರಾಹ। ಕವಿರಿತಿ। ಕವಿಃ ಸರ್ವಜ್ಞಃ। ಮನೀಷೀ ಪ್ರಕೃತ್ಯಾದಿ ಸರ್ವಮನಸಾಮಿಶಿತೃತ್ವಾನ್ಮನೀಷೀ। ಏತೇನ ಜ್ಞಾನಾವಿನಾಭೂತದೇಹವಾನಿತಿ ಲಭ್ಯತೆ। ಸಚಾಪ್ರಾಕೃತ ಏವೇತಿ ಪ್ರಾಗುಕ್ತಃ। ತನ್ನಿಮಿತ್ತ ಶೋಕಾದ್ಯಭಾವೊ ಯುಕ್ತಃ। ಪ್ರಾಕೃತ-ಸ್ಯೈವ ತದ್ಧೇತುತ್ವಾತ್। ಪರಿಭವತಿ ಸರ್ವಂ ವಶೀಕರೋತೀತಿ ಪರಿಭೂಃ। ಸರ್ವತೊ ವರ ಇತ್ಯರ್ಥಃ। ಸ್ವಯಮೇವ ಪರಮನಪೇಕ್ಷ್ಯ ಭವತೀತಿ ಸ್ವಯಂಭೂಃ। ಸದಾಽನನ್ಯಾಶ್ರಯಃ। ಶಾಶ್ವತೀಭ್ಯಸ್ಸಮಾಭ್ಯ ಇತಿ ಪಂಚಮಿಾ ಸಪ್ತಮ್ಯರ್ಥೆ। ಅನಾದ್ಯನಂತಸಂವತ್ಸರೇಷು ಯಾಥಾತಥ್ಯತೊ ಯಾಥಾರ್ಥ್ಯೇನ ವರ್ತಮಾನಾನರ್ಥಾ್ ವ್ಯದಧಾನ್ನಿರ್ಮಮೆ। ಯಾಥಾ ತಥ್ಯತ ಇತ್ಯುಕ್ತ್ಯಾ ಬ್ರಹ್ಮವಿವರ್ತತ್ವಾದರ್ಥಾನಾಂ ನ ತತ್ಸ್ರಷ್ಟಾ ದೇಹಾ ದ್ಯಪೇಕ್ಷೇತಿ ಚೋದ್ಯಂ ನಿರಸ್ತಂ। ಶಾಶ್ವತೀಭ್ಯಸ್ಸಮಾಭ್ಯ ಇತ್ಯುಕ್ತ್ಯಾ ಸದಾ ದೇಹಹೀನಸ್ಯಾಪಿ ಸೃಷ್ಟಿಸಮಯೆ ದೇಹೋಪಾದಾನೇನ ಅಸ್ತು ಸೃಷ್ಟಿರಿತಿ

ಚೋದ್ಯಂ ನಿರಸ್ತಂ ಜ್ಞೇಯಂ। ಸೃಷ್ಟ್ಯಾದಿ ಪ್ರವಾಹಸ್ಯ ಅನಾದ್ಯನಂತ ಕಾಲೀನತ್ವಾದಿತಿ ॥೮॥

ಮಂತ್ರ ಪದವಿಭಾಗ— ಸಃ, ಪರ್ಯಗಾತ್, ಶುಕ್ರಂ, ಅಕಾಯಂ, ಅವ್ರಣಂ, ಅಸ್ನಾವಿರಗ್ಂ, ಶುದ್ಧಂ, ಅಪಾಪವಿದ್ಧಂ, ಕವಿಃ, ಮನೀಷೀ, ಪರಿಭೂಃ, ಸ್ವಯಂಭೂಃ, ಯಾಥಾತಥ್ಯತಃ, ಅರ್ಥಾ್, ವ್ಯದಧಾತ್, ಶಾಶ್ವತೀಭ್ಯಃ, ಸಮಾಭ್ಯಃ ॥

ಮಂತ್ರಾರ್ಥ ಪದಗಳ ಅನ್ವಯವೂ ಇದರಿಂದ ಚರಿತಾರ್ಥ.

ಖಂಡಾರ್ಥದಂತೆ ಈ ಪದಗಳ ಅರ್ಥ

ಸಃ–ಜ್ಞಾನೀ – ಜ್ಞಾನಿಯು. ಪರ್ಯಗಾತ್– ಪ್ರಾಪ್ತೋಽಭೂತ್– ಹೊಂದಿದವನಾದನು. ಬ್ರಹ್ಮ ಇತಿ ಶೇಷಃ–ಬ್ರಹ್ಮನನ್ನು ಎಂದು ಅನ್ವಯಿಸಿ ಕೊಳ್ಳಬೇಕು. ತಾವತಾ–ಇಷ್ಟು ಮಾತ್ರದಿಂದ. ಕಥಂ–ಹೇಗೆ. ಶೋಕಾದ್ಯ ಭಾವಃ–ಶೋಕ ಮುಂತಾದುದರ ಇಲ್ಲದಿರುವಿಕೆಯು ? ಇತಿ ಅತಃ–ಹೀಗೆ ಪ್ರಶ್ನಿಸಿದರೆ ಉತ್ತರ ಹೇಳಲು. ತತ್–ಇದೇ ವಿಷಯವನ್ನು. ವಿಶಿನಷ್ಟಿ– ಸ್ಪಷ್ಟಪಡಿಸುತ್ತಾನೆ. ಶುಕ್ರಂ ಇತ್ಯಾದಿನಾ–ಶುಕ್ರಂ ಎಂಬೀ ಮುಂತಾದ ಪದಸಂದರ್ಭದಿಂದ.

ಶುಚಂ–ಶೋಕಂ – ದುಃಖವನ್ನು. ರಹತಿ–ತ್ಯಜತಿ–ಬಿಡುತ್ತಾನೆ. ಇತಿ–ಈ ನಿಮಿತ್ತದಿಂದ. ಶುಕ್ರಂ– ಶೋಕರಹಿತಂ - ಶೋಕರಹಿತನಾದ. ಅಕಾಯಂ–ಲಿಂಗದೇಹರಹಿತಂ–ಲಿಂಗದೇಹದಿಂದ ರಹಿತನಾದ. ಅವ್ರಣಂ– ವ್ರಣ ಸಂಚೂರ್ಣನೆ ಇತ್ಯತಃ–ವ್ರಣ ಎಂಬ ಧಾತು ಸಂಚೂರ್ಣನ ಎಂದರೆ ಚೂರು ಮಾಡುವ ಅರ್ಥದಲ್ಲಿ ಪ್ರಯುಕ್ತವಾಗುವುದು ಎಂಬ ನಿಮಿತ್ತದಿಂದ. ಸ್ತೋಕೊ–ಚೂರಾದುದು ವ್ರಣ ಎನಿಸುವುದು. ಕಾಲೇನ–ಕಾಲದಿಂದ ಅಸ್ತೋಕತ್ವಾತ್ – ಸ್ವಲ್ಪವಲ್ಲವಾದುದರಿಂದ. ಅವ್ರಣಂ–ನಿತ್ಯಂ - ನಿತ್ಯ ವಾದುದು. ಗುಣೈಃ–ಗುಣಗಳಿಂದ. ಅಸ್ತೋಕತ್ವಾತ್ – ಸ್ವಲ್ಪವಲ್ಲ ವಾದುದರಿಂದ. ಅವ್ರಣಂ–ಪೂರ್ಣಂ–ಪೂರ್ಣವಾದುದು. ಇತಿ ಅರ್ಥಃ– ಹೀಗೆ ಅರ್ಥ. ಅಸ್ನಾವಿರಂ–ಸ್ನಾವೋಪಲಕ್ಷಿತ ಸಪ್ತಧಾತುಮಯಸ್ಥೂಲ

ದೇಹರಹಿತಂ-ಸ್ನಾವ ಎಂಬುದರಿಂದ ಅರ್ಥಾತ್ ಪ್ರಾಪ್ತವಾದ ಏಳು ಧಾತು ವಿಕಾರವಾದ ಸ್ಥೂಲದೇಹದಿಂದ ರಹಿತವಾದ. ಶುದ್ಧಂ-ಪಾವಿತ್ರ್ಯ ಕಾರಣ ವಾದ. ಶುದ್ಧತ್ವಾತ್ ಏವ-ಶುದ್ಧವಾದ ನಿಮಿತ್ತದಿಂದಲೇ. ಅಪಾಪವಿದ್ಧಂ-ಪಾಪಲೇಪವಿಲ್ಲದ. ತತ ಏವ ಹೇತೋಃ- ಅದೇ ಕಾರಣದಿಂದಲೇ. ಪಾಪ ಮೂಲ ಸ್ಥೂಲಸೂಕ್ಷ್ಮಶರೀರಹೀನಂ - ಪಾಪಕ್ಕೆ ಕಾರಣವಾದ ಸ್ಥೂಲ ಮತ್ತು ಸೂಕ್ಷ್ಮವಾದ ಶರೀರದಿಂದ ರಹಿತವಾದ. ತತ ಏವ - ಅದೇ ಕಾರಣ ದಿಂದಲೇ. ದೇಹನಿಮಿತ್ತ ಶೋಕಾದಿಶೂನ್ಯಂ - ದೇಹವೇ ಕಾರಣವಾಗಿ ಉಳ್ಳ ಶೋಕ ಮೊದಲಾದುದರಿಂದ ರಹಿತನಾದವನು. ಇತಿ- ಎಂಬ ಕಾರಣ ದಿಂದ. ಶುಕ್ರಂ - ಶುಕ್ರನು. ಇತಿ - ಎಂದು. ಉಚ್ಯತೆ - ಹೇಳಲ್ಪಡುತ್ತಾನೆ. ಏವಂ ಭೂತಂ - ಹೀಗಿರುವ. ಹರಿಂ-ಪರಮಾತ್ಮನನ್ನು. ಪರ್ಯಗಾತ್ - ಹೊಂದಿದವನು. ಯತಃ - ಯಾವ ಕಾರಣದಿಂದಲೋ. ಅತಃ - ಕಾರ ಣಾತ್-ಕಾರಣದಿಂದ. ಶೋಕಾದ್ಯಭಾವಃ - ಶೋಕ ಮೊದಲಾದುದರ ಇಲ್ಲ ದಿರುವಿಕೆಯು. ಏವಂಭೂತ ಹರಿಸಾರೂಪ್ಯ ಲಕ್ಷಣಾಂ - ಈ ರೂಪದಲ್ಲಿರುವ ಹರಿಯ ಸಮಾನರೂಪವೆಂಬ ಲಕ್ಷಣವುಳ್ಳ. ತದ್ಗತಿಂ - ಪರಮಾತ್ಮನ ಪ್ರಾಪ್ತಿಯನ್ನು. ಗತಸ್ಯ - ಹೊಂದಿದ ಅಧಿಕಾರಿಗೆ. ಶೋಕಾದ್ಯಭಾವಃ - ಶೋಕ ಮೊದಲಾದುದರ ಇಲ್ಲದಿರುವಿಕೆಯು. ಯುಕ್ತಃ - ಸರಿಯಾದುದೇ. ಇತಿ ಭಾವಃ - ಹೀಗೆಂದು ಅಭಿಪ್ರಾಯ.

ನನು - (ಈ ಪದದಿಂದ ಹೊಸ ಆಶಂಕೆಯನ್ನು ಸೂಚಿಸುತ್ತಾರೆ.) ಏವಂ - ಉಕ್ತ ಪ್ರಕಾರವಾಗಿ. ಅಶರೀರಶ್ಚೇತ್ - ಪರಮಾತ್ಮನು ಶರೀರ ರಹಿತನಾದಲ್ಲಿ. ಜಗತ್ಸ್ರಷ್ಟಾ - ಜಗತ್ತನ್ನು ಸೃಷ್ಟಿಸಿದವನು. ನ ಇತಿ - ಅಲ್ಲ ಎಂದು. ಪ್ರಾಪ್ತಂ - ಸಿದ್ಧವಾಗುವುದು. ಲೋಕೆ-ಪ್ರಪಂಚದಲ್ಲಿ. ಸದೇಹಸ್ಯೈವ-ದೇಹವುಳ್ಳವನಿಗೇ. ಸ್ರಷ್ಟೃತಾದರ್ಶನಾತ್-ಸೃಷ್ಟಿಮಾಡುವ ಸಾಮರ್ಥ್ಯದ ದರ್ಶನವಿರುವುದರಿಂದ. ಇತಿ-ಹೀಗೆಂಬ. ಆಶಂಕಾಂ-ಸಂದೇಹವನ್ನು. ನಿರಾಹ-ನಿರಾಕರಿಸಿದನು. ಕವಿಃ ಇತಿ-ಕವಿ ಎಂಬ ಪದದಿಂದ ಆರಂಭಿಸುವ ಮಂತ್ರಭಾಗದಿಂದ.

ಕವಿಃ-ಸರ್ವಜ್ಞಃ-ಪರಿಪೂರ್ಣ ಜ್ಞಾನವುಳ್ಳವನು, ಸರ್ವ ಪ್ರವರ್ತಕ ವಾದ ಜ್ಞಾನರೂಪನು. ಮನೀಷೀ-ಪ್ರಕೃತ್ಯಾದಿ ಸರ್ವ ಮನಸಾಂ ಈಶಿತೃ-

ತ್ವಾತ್ ಮನೀಷೀ-ಪ್ರಕೃತಿಯೇ ಮೊದಲಾದ ಸರ್ವ ಚೇತನಪ್ರವರ್ತಕ ನಾದುದರಿಂದ ಮನೀಷೀ ಎಂದು ಹೇಳಲ್ಪಟ್ಟಿರುವನು. ಏತೇನ-ಹೀಗೆ ಹೇಳು ವುದರಿಂದ ಅಥವಾ ಪರಮಾತ್ಮನ ಸ್ವರೂಪವು ಹೀಗಿರುವುದರಿಂದ. ಜ್ಞಾನಾ-ವಿನಾಭೂತದೇಹವಾನ್-ನಿಯಮೇನ ಜ್ಞಾನಸ್ವರೂಪವಾದ ದೇಹವುಳ್ಳವನು. ಇತಿ-ಹೀಗೆಂದು. ಲಭ್ಯತೆ-ಸಿದ್ಧಿಸುವುದು. ಸಃ ಚ-ಆ ದೇಹವಾದರೋ ಅಪ್ರಾಕೃತ ಏವೇತಿ-ಪ್ರಕೃತಿ ಸಂಬಂಧವಾದುದಲ್ಲ ಎಂದು. ಪ್ರಾಗುಕ್ತಃ-ಹಿಂದೆಯೇ ನಿರೂಪಿತವಾಗಿದೆ. ತನ್ನಿಮಿತ್ತ ಶೋಕಾದ್ಯಭಾವಃ-ಈ ಕಾರಣ ದಿಂದ ಸಿದ್ಧಿಸುವ ಶೋಕ ಮೊದಲಾದುದರ ಇಲ್ಲದಿರುವಿಕೆಯು. ಯುಕ್ತಃ-ನ್ಯಾಯವಾದುದು. ಪ್ರಾಕೃತಸ್ಯೈವ-ಪ್ರಕೃತಿ ಸಂಬಂಧವುಳ್ಳ ದೇಹಕ್ಕೇ. ತದ್ಧೇತುತ್ವಾತ್-ದುಃಖಕಾರಣತ್ವವಿರುವುದರಿಂದ. ಪರಿಭವತಿ-ಸೋಲಿಸು ತ್ತಾನೆ. ಸರ್ವಂ-ಸಮಸ್ತ ವಸ್ತುವನ್ನೂ. ವಶೀಕರೋತಿ-ವಶಪಡಿಸಿಕೊಳ್ಳು ತ್ತಾನೆ. ಇತಿ-ಈ ಕಾರಣದ ದಶೆಯಿಂದ. ಪರಿಭೂಃ-ಪರಿಭೂ ಎಂದು ಕರೆ ಯಿಸಿಕೊಳ್ಳುವನು. ಸರ್ವತಃ-ಸಮಸ್ತ ಜಗತ್ತಿನ ದೆಶೆಯಿಂದ ಅಥವಾ ಸರ್ವ ರೂಪದಲ್ಲಿಯೂ. ವರಃ-ಉತ್ತಮನಾದವನು. ಇತಿ ಅರ್ಥಃ-ಹೀಗೆ ಅರ್ಥವು. ಸ್ವಯಂ ಏವ-ಪರಂ ಅನಪೇಕ್ಷ್ಯ- ಇತರರ ಅಧೀನವಿಲ್ಲದೆ. ಭವತಿ-ಆಗು ತ್ತಾನೆ. ಇತಿ ಈ ಕಾರಣದಿಂದ. ಸ್ವಯಂಭೂಃ - ಸ್ವಯಂಭೂ ಶಬ್ದವಾಚ್ಯ ನಾದವನು. ಸದಾ-ಯಾವಾಗಲೂ. ಅನನ್ಯಾಶ್ರಯಃ-ಅನ್ಯಾಧೀನನಲ್ಲ ದವನು (ಎಂದು ತಾತ್ಪರ್ಯ). ಶಾಶ್ವತೀಭ್ಯಃ ಸಮಾಭ್ಯಃ ಇತಿ-ಶಾಶ್ವ ತೀಭ್ಯಃ ಸಮಾಭ್ಯಃ ಎಂಬ ಪದಾಂತವಾದ. ಪಂಚಮೀ-ಪಂಚಮೀ ವಿಭಕ್ತಿಯು. ಸಪ್ತಮ್ಯರ್ಥೆ-ಸಪ್ತಮೀವಿಭಕ್ತಿಯ ಅರ್ಥವುಳ್ಳುದು. ಅನಾದ್ಯ ನಂತ ಸಂವತ್ಸರೇಷು-ಆದಿಯಿಲ್ಲದ ಮತ್ತು ಅಂತವಿಲ್ಲದ ಸಂವತ್ಸರಗಳಲ್ಲಿ. ಯಾಥಾತಥ್ಯತಃ-ಯಾಥಾರ್ಥ್ಯೇನ, ಯಥಾರ್ಥವಾಗಿ ಎಂದರೆ ಸತ್ಯವಾಗಿ. ವರ್ತಮಾನಾನ್-ಇರುವ. ಅರ್ಥಾನ್-ವಸ್ತುಗಳನ್ನು. ವ್ಯದಧಾತ್-ನಿರ್ಮಮೆ-ನಿರ್ಮಾಣಮಾಡಿದನು. ಯಾಥಾತಥ್ಯತಃ ಇತಿ ಉಕ್ತ್ಯಾ-ಯಾಥಾತಥ್ಯತಃ ಎಂದು ಹೇಳುವುದರಿಂದ. ಬ್ರಹ್ಮವಿವರ್ತತ್ವಾತ್ ಅರ್ಥಾನಾಂ-ವಸ್ತುಗಳಿಗೆ ಬ್ರಹ್ಮನಲ್ಲಿ ಆರೋಪಿತತ್ವವಿರೋಣದರಿಂದ. ನ ತತ್ಸೃಷ್ಟೌ ದೇಹಾದ್ಯ ಪೇಕ್ಷಾ-ತತ್‌ಸೃಷ್ಟೌ-ಅವುಗಳ ಸೃಷ್ಟಿಮಾಡೋಣದರಲ್ಲಿ. ದೇಹಾದ್ಯ-

ಪೇಕ್ಷಾ–ದೇಹ ಮುಂತಾದುವುಗಳ ಅಪೇಕ್ಷೆಯು, ನ–ಇರುವುದಿಲ್ಲ. ಇತಿ–ಹೀಗೆ. ಚೋದ್ಯಂ–ಆಕ್ಷೇಪವು. ನಿರಸ್ತಂ–ಖಂಡಿತವಾಯಿತು. ಶಾಶ್ವತೀಭ್ಯಃ ಸಮಾಭ್ಯಃ–ಅನಾದ್ಯನಂತವಾದ ವರ್ಷಗಳಿಂದ. ಇತಿ ಉಕ್ತ್ಯಾ–ಹೀಗೆ ಹೇಳೋಣದರಿಂದ. ಸದಾ–ಯಾವಾಗಲೂ. ದೇಹ ಹೀನಸ್ಯ ಅಪಿ–ದೇಹ ಹೀನನಾದರೂ. ಸೃಷ್ಟಿಸಮಯೆ–ಸೃಷ್ಟಿಕಾಲದಲ್ಲಿ. ದೇಹೋಪಾದಾನೇನ–ದೇಹವನ್ನು ಸ್ವೀಕರಿಸುವುದರಿಂದ. ಅಸ್ತು ಸೃಷ್ಟಿಃ-ಸೃಷ್ಟಿಯುಂಟಾಗಲಿ. ಇತಿ-ಹೀಗೆ. ಚೋದ್ಯಂ– ಆಕ್ಷೇಪವು. ನಿರಸ್ತಂ– ಖಂಡಿತವಾಯಿತು ಎಂದು. ಜ್ಞೇಯಂ–ತಿಳಿಯಲ್ಪಡಬೇಕು. ಸೃಷ್ಟ್ಯಾದಿಪ್ರವಾಹಸ್ಯ–ಸೃಷ್ಟಿ ಮೊದಲಾದ ಪರಂಪರೆಗೆ. ಅನಾದ್ಯನಂತ ಕಾಲೀನತ್ವಾತ್-ಆದಿಯಿಲ್ಲದ ಮತ್ತು ಅಂತವಿಲ್ಲದ ಕಾಲಸಂಬಂಧವಿರೋಣದರ ದೆಶೆಯಿಂದ. ಇತಿ–ಹೀಗೆ ಸಿದ್ಧಾಂತವು.

ಸೂಚನೆ

ಜ್ಞಾನರೂಪನಾದ ಪರಮಾತ್ಮನನ್ನು ತಿಳಿದವನಿಗೆ ಶೋಕ ಮೊದಲಾದುದಿಲ್ಲ. ಹೀಗೆ ಉಪಪಾದಿಸುವ ಉಪನಿಷದ್ವಾಕ್ಯವನ್ನು ಚೆನ್ನಾಗಿ ಧ್ಯಾನ ಮಾಡಿ ಅರ್ಥವನ್ನು ತಿಳಿದುಕೊಳ್ಳಬೇಕು. ಇದನ್ನು ತಿಳಿಯಲು ಮುಖ್ಯವಾಗಿ ಗಮನಿಸಬೇಕಾದ ಅಂಶಗಳಿವು – ಅಧಿಕಾರಿಗೆ ದುಃಖ ಮೊದಲಾದುದರ ನಿಮಿತ್ತ ಸ್ಥೂಲಸೂಕ್ಷ್ಮ ದೇಹಗಳು. ಉಕ್ತ ರೂಪದಲ್ಲಿ ಜ್ಞಾನರೂಪನಾದ ಪರಮಾತ್ಮನನ್ನು ತಿಳಿಯುವುದರಿಂದ ಅವನು ಪರಮಾತ್ಮಸ್ವರೂಪನಾಗುವನು ಎಂದರೆ ಜ್ಞಾನರೂಪನಾಗುವನು. ದುಃಖಾದಿಗಳು ಅವನಿಗೆ ಸ್ವಾಭಾವಿಕವಾಗಿಯೇ ಪರಿಹೃತವಾಗುವುವು. ಈ ಸಮಸ್ತ ಸನ್ನಿವೇಶವೂ ಈಶಾವಾಸ್ಯ ಎಂದರೆ ಈಶಾಧೀನ ಎಂಬುದನ್ನು ಮಾತ್ರ ಮರೆಯಬಾರದು.

ಪರಮಾತ್ಮನ ಇತರ ವಿಶೇಷಣಗಳು ಅವನ ಆನಂದರೂಪವನ್ನು ಉಪಪಾದಿಸುವುವು.

ಪ್ರಕೃತ್ಯಾದಿ ಸಮಸ್ತ ಜ್ಞಾನಕ್ಕೆ ಪ್ರವರ್ತಕನಾದ ಪರಮಾತ್ಮನ ವಿಷಯದಲ್ಲಿ ಅವನಿಗೆ ದೇಹವಿಲ್ಲದ ಮೇಲೆ ಸೃಷ್ಟಿಮಾಡುವುದು ಹೇಗೆ ಎಂಬ ಶಂಕೆಯು ಹುಟ್ಟುವುದಿಲ್ಲ. ಈ ಸರ್ವಜ್ಞಾನ ಪ್ರವರ್ತಕತ್ವವೇ ಅವನ ಲೋಕ ವಿಲಕ್ಷಣ ಎಂದರೆ ಅಲೌಕಿಕ ಅಥವಾ ಅಪ್ರಾಕೃತಿಕ ಮಹಿಮೆ. ಪರಿಭೂಃ

ಮತ್ತು ಸ್ವಯಂಭೂಃ ಎಂಬ ಪದಗಳು ಅವನ ಅಪ್ರಾಕೃತ ಮಹಿಮೆಯನ್ನು ಉಪಪಾದಿಸುವುವು. ಈ ಅಂಶವನ್ನು ಧ್ಯಾನಮಾಡಿದರೆ ಲೋಕನ್ಯಾಯದಂತೆ ಪರಮಾತ್ಮನನ್ನು ತಿಳಿಯುವ ಮನೋವೃತ್ತಿಯು ದೂರವಾಗುವುದು.

ಅನಾದ್ಯನಂತಕಾಲದಲ್ಲಿ ಯಥಾರ್ಥ ಅಥವಾ ಸತ್ಯವಾದ ಜಗತ್ತನ್ನು ಪರಮಾತ್ಮನು ನಿರ್ಮಿಸುವನು. ಈ ಯಥಾರ್ಥವಾದ ಜಗತ್ತು ಅವನ ಜ್ಞಾನಾನಂದ ಮಹಿಮೆಯನ್ನು ಎತ್ತಿಹಿಡಿಯುವುದು. ಇದಕ್ಕೆ ಅನ್ಯಥಾ ಜಗತ್ತು ಕಾಣುವುದು ಅಜ್ಞಾನ ಮತ್ತು ಅದರಿಂದುಂಟಾದ ಮೋಹದಿಂದ. ಅದೇ ಶೋಕರೂಪವಾದ ಜಗತ್ತು. ಇದು ಸತ್ಯವಲ್ಲ ಎಂಬ ಅರ್ಥವೂ ಉಪನಿಷತ್ತಿನ ಭಾವದಲ್ಲಿ ಅಡಗಿರುವುದು. ಈ ಅಂಶವನ್ನು ಯೋಚಿಸಿ ತಿಳಿಯಬೇಕು. ಶಾಸ್ತ್ರದಲ್ಲಿ ಜಗತ್ಸತ್ಯತ್ವ ಸಮರ್ಥನ ಮುಂತಾದ ಪ್ರಕರಣವನ್ನು ಅಧ್ಯಯನ ಮಾಡುವಾಗ ಈ ಅಂಶವನ್ನು ಮರೆಯಬಾರದು. ಈ ಮಂತ್ರದಲ್ಲಿ ಸಿದ್ಧವಾದ ಅರ್ಥವನ್ನು ಕೊಡುವ ರೀತಿಯಲ್ಲಿ ದುಃಖಾದಿ ಜಗತ್ತು ಯಥಾರ್ಥವಾಗುವುದಾದರೆ ಅದರ ಪರಿಹಾರ ಸಂಭವವೇ ಇಲ್ಲದೇ ಹೋದೀತು.

ಜ್ಞಾನಿಗೆ ಬ್ರಹ್ಮಸ್ವರೂಪವನ್ನು ಹಾಗೆಯೇ ಶೋಕಾಭಾವವನ್ನು ನಿರೂಪಿಸಲು ಕೆಲವು ವಾದಿಗಳು, ಮಾರ್ಗಾಂತರ ತೋರದೆ, ಪ್ರಪಂಚವು ಪರಬ್ರಹ್ಮನಲ್ಲಿ ಆರೋಪಿತವಾಗಿದೆ,ಆರೋಪಿತವಾದ ಅದು ಶುಕ್ತಿಯಲ್ಲಿ ಆರೋಪಿತವಾದ ರಜತದಂತೆ ಪರಿಹೃತವಾಗುವುದು ಸಹಜವಾದುದರಿಂದ ಆರೋಪಿತವಾದ ಜಗನ್ನಿವೃತ್ತಿಯಿಂದ ಜ್ಞಾನಿಗೆ ಶೋಕಾದ್ಯಭಾವವು ಪ್ರಾಪ್ತವಾಗುವುದೆಂದು ಹೇಳುವರು. ಇದು ಒಂದು ಕಲ್ಪನೆಯೆ ಹೊರತು ಉಪನಿಷದರ್ಥವಲ್ಲ. ಪ್ರಪಂಚವು ಆರೋಪಿತವಲ್ಲ. ಅದು ಬ್ರಹ್ಮನಿರ್ಮಿತ. ಅದು ಯಥಾರ್ಥವಾಗಿ ನಿರ್ಮಿತ. ಅದನ್ನು ತಿಳಿಯುವುದೆಂದರೆ ಪರಮಾತ್ಮನ ಜ್ಞಾನಾನಂದರೂಪವನ್ನು ತಿಳಿಯುವುದು. ಹೀಗೆ ತಿಳಿದ ಅಧಿಕಾರಿಯು ಜ್ಞಾನಾನಂದರೂಪನಾಗುವನು. ಎಂದು ಇದರ ಭಾವ.

ಪರಮಾತ್ಮನ ಸೃಷ್ಟಿ ಮೊದಲಾದ ವ್ಯಾಪಾರವು ಅನಾದಿ ಮತ್ತು ಅನಂತ. ಇದು ಸೃಷ್ಟಿಕಾಲ, ಇದು ಸಂಹಾರಕಾಲ ಎಂಬೀ ಮುಂತಾಗಿ ಉಪಪಾದಿಸುವುದು ಸರ್ವ ಸತ್ತಾಪ್ರದನಾಗಿ ಸ್ವತಂತ್ರವಾದ ಪರಮಾತ್ಮ ತತ್ತ್ವಕ್ಕೆ

ಅನುಗುಣವಲ್ಲ. ಪರಮಾತ್ಮನು ಸೃಷ್ಟಿಮಾಡಲು ದೇಹಾದಿಗಳು ಬೇಕು ಎನ್ನುವುದು ಕೇವಲ ಕಲ್ಪನೆ. ಮಂತ್ರಾರ್ಥವಲ್ಲ.

ಭಾಷ್ಯ

ಭಾಷ್ಯಕಾರರು ತಾವು ಹೇಳುವ ಮಂತ್ರಾರ್ಥವೇ ಅಬಾಧಿತ ಶ್ರುತಿಸಂಪ್ರದಾಯಸಿದ್ಧವಾದುದೆಂದು ತೋರಿಸುವುದರ ಜೊತೆಯಲ್ಲಿಯೇ ಮಂತ್ರಾರ್ಥವನ್ನು ಸಮರ್ಥಿಸುತ್ತಾರೆ.

ಭಾಷ್ಯ—ಶುಕ್ರಂ ತಚ್ಛೋಕರಾಹಿತ್ಯಾತ್ ಅವ್ರಣಂ ನಿತ್ಯಪೂರ್ಣತಃ ।
ಪಾವನತ್ವಾತ್ಸದಾ ಶುದ್ಧಂ ಅಕಾಯಂ ಲಿಂಗವರ್ಜನಾತ್ ।
ಸ್ಥೂಲದೇಹಸ್ಯ ರಾಹಿತ್ಯಾತ್ । ಅಸ್ನಾವಿರಮುದಾಹೃತಂ ।
ಏವಂಭೂತೋಪಿ ಸಾರ್ವಜ್ಞಾತ್ ಕವಿರಿತ್ಯೇವ ಶಬ್ದ್ಯತೆ ।
ಬಹ್ಮಾದಿ ಸರ್ವಮನಸಾಂ ಪ್ರಕೃತೇರ್ಮನಸೋಪಿ ಚ ।
ಈಶಿತೃತ್ವಾತ್ ಮನೀಷೀ ಸಃ ಪರಿಭೂಃ ಸರ್ವತೊ ವರಃ ।
ಸದಾ ಅನನ್ಯಾಶ್ರಯತ್ವಾಚ್ಚ ಸ್ವಯಂಭೂಃ ಪರಿಕೀರ್ತಿತಃ ।
ಸ ಸತ್ಯಂ ಜಗದೇತಾದೃಕ್ ನಿತ್ಯಮೇವ ಪ್ರವಾಹತಃ ।
ಅನಾದ್ಯನಂತಕಾಲೇಷು ಪ್ರವಾಹೈಕಪ್ರಕಾರತಃ ।
ನಿಯಮೇನೈವ ಸಸೃಜೆ ಭಗವಾನ್ ಪುರುಷೋತ್ತಮಃ ।
ಸದ್‌ಜ್ಞಾನಾನಂದ ಶೀರ್ಷೋಽಸೌ ಸದ್‌ಜ್ಞಾನಾನಂದಬಾಹುಕಃ ।
ಸದ್‌ಜ್ಞಾನಾನಂದದೇಹಶ್ಚ ಸದ್‌ಜ್ಞಾನಾನಂದಪಾದವಾನ್ ।
ಏವಂಭೂತೊ ಮಹಾವಿಷ್ಣುಃ ಯಥಾರ್ಥಂ ಜಗದೀದೃಶಂ ।
ಅನಾದ್ಯನಂತಕಾಲೀನಂ ಸಸರ್ಜಾತ್ಮೇಚ್ಛಯಾ ಪ್ರಭುಃ ॥
ಇತಿ ವಾರಾಹೆ ॥ ೮ ॥

ಶುಕ್ರಂ—ಶುಕ್ರನು. ತತ್—ಆ ಬ್ರಹ್ಮನು. ಶೋಕರಾಹಿತ್ಯಾತ್—ಶೋಕರಹಿತವಾದುದರಿಂದ. ಅವ್ರಣಂ—ಅವ್ರಣನು. ನಿತ್ಯಪೂರ್ಣತ್ವಾತ್—ಯಾವಾಗಲೂ ಪೂರ್ಣನಾದುದರಿಂದ. ಪಾವನತ್ವಾತ್ – ಪವಿತ್ರನಾದುದರಿಂದ. ಸದಾ – ಯಾವಾಗಲೂ. ಶುದ್ಧಂ—ನಿರ್ದೋಷನು. ಅಕಾಯಂ— ಅಕಾಯನು. ಲಿಂಗವರ್ಜನಾತ್ – ಲಿಂಗಶರೀರವಿಲ್ಲವಾದುದರಿಂದ. ಸ್ಥೂಲದೇಹಸ್ಯ—ಸ್ಥೂಲವಾದ ದೇಹದ. ರಾಹಿತ್ಯಾತ್ – ಇಲ್ಲದಿರೋಣದರಿಂದ.

ಅಸ್ನಾವಿರಂ—ಅಸ್ನಾವಿರ ಎಂದು. ಉದಾಹೃತಂ—ಉಪಪಾದಿತನಾಗಿರುವನು. ಏವಂಭೂತಃ ಅಪಿ—ಈ ಪ್ರಕಾರವಿದ್ದರೂ. ಸಾರ್ವಜ್ಞಾತ್—ಪೂರ್ಣಜ್ಞಾನವಿರುವುದರಿಂದ, ಅನಾದಿತಃ ಎಲ್ಲವನ್ನೂ ತಿಳಿದಿರುವುದರಿಂದ, ಸರ್ವ ಪ್ರವರ್ತಕವಾದ ಜ್ಞಾನವುಳ್ಳ ನಿಮಿತ್ತ. ಕವಿಃ ಇತಿ ಏವ-ಕವಿ ಎಂಬುದಾಗಿಯೆ. ಶಬ್ದ್ಯತೆ-ಹೇಳಲ್ಪಡುವನು. ಬಹ್ಮಾದಿ ಸರ್ವಮನಸಾಂ-ಬ್ರಹ್ಮನೇ ಮೊದಲಾದ ಸಮಸ್ತರ ಜ್ಞಾನಕ್ಕೆ. ಪ್ರಕೃತೇಃ—ಪ್ರಕೃತಿ ತತ್ತ್ವದ ಎಂದರೆ ಶ್ರೀ ತತ್ತ್ವದ. ಮನಸಃ ಅಪಿ ಚ—ಜ್ಞಾನಕ್ಕು ಕೂಡ. ಈಶಿತೃತ್ವಾತ್—ನಿಯಾಮಕನಾದುದರಿಂದ. ಮನೀಷೀ—ಮನೀಷೀ ಎಂದು. ಸಃ—ಅವನು. ಪರಿಭೂಃ—ಪರಿಭೂ ಎಂದು. ಸರ್ವತಃ—ಎಲ್ಲದಕ್ಕೂ ಎಲ್ಲ ವಿಧಗಳ್ಲಿಯೂ. ವರಃ—ಉತ್ತಮನಾದವನು. ಸದಾ—ಸರ್ವದಾ. ಅನನ್ಯಾಶ್ರಯತ್ವಾತ್ ಚ—ಅನ್ಯರ ಆಶ್ರಯ ಬೇಕಾಗಿಲ್ಲದವನಾದುದರಿಂದಲೂ. ಸ್ವಯಂಭೂಃ – ಸ್ವಯಂಭುವೆಂದು. ಕೀರ್ತಿತಃ—ಹೇಳಲ್ಪಟ್ಟಿರುವನು.

ಸಃ – ಈ ಪರಮಾತ್ಮನು. ಜಗತ್ ಏತಾದೃಕ್— ಈ ರೂಪದಲ್ಲಿ ಕಂಗೊಳಿಸುವ ಜಗತ್ತನ್ನು. ನಿತ್ಯಂ ಏವ—ನಿರಂತರದಲ್ಲಿಯೂ. ಪ್ರವಾಹತಃ—ಪ್ರವಾಹರೂಪದಲ್ಲಿ. ಅನಾದ್ಯನಂತಕಾಲೇಷು- ಅನಾದಿ ಮತ್ತು ಅನಂತವಾದ ಕಾಲಗಳಲ್ಲಿ. ಪ್ರವಾಹೈಕಪ್ರಕಾರತಃ - ಪ್ರವಾಹರೂಪವಾಗಿದ್ದು ಒಂದೇ ಪ್ರಕಾರದಿಂದ ಕಂಗೊಳಿಸುವ ರೀತಿಯಲ್ಲಿ. ನಿಯಮೇನೈವ-ಒಂದು ನಿಯಮವುಳ್ಳುದನ್ನಾಗಿ. ಸಸೃಜೆ—ಸೃಷ್ಟಿಸಿದನು. (ಈ ಸೃಷ್ಟಿಕರ್ತೃವಾದ ಅವನು) ಭಗವಾನ್—ಪೂರ್ಣೈಶ್ವರ್ಯವುಳ್ಳವನು. ಪುರುಷೋತ್ತಮಃ—ಸರ್ವ ಕಾರಣನಾದ ಚೈತನ್ಯಸ್ವರೂಪನು, ಕ್ಷರಾಕ್ಷರ ಪುರುಷರಿಗೆ ಉತ್ತಮನು ಎಂದರೆ ಪ್ರವರ್ತಕನು.

ಸದ್‌ಜ್ಞಾನಾನಂದ ಶೀರ್ಷಃ—ನಿರ್ದೋಷವಾದ ಜ್ಞಾನ ಮತ್ತು ಆನಂದವೇ ತಲೆಯಾಗಿ ಉಳ್ಳವನು. ಅಸೌ—ಇವನು. ಸದ್‌ಜ್ಞಾನಾನಂದ ಬಾಹುಕಃ—ನಿರ್ದೋಷವಾದ ಜ್ಞಾನ ಮತ್ತು ಆನಂದವೇ ಬಾಹುಗಳಾಗಿ ಉಳ್ಳವನು. ಸದ್‌ಜ್ಞಾನಾನಂದ ದೇಹಶ್ಚ—ನಿರ್ದೋಷವಾದ ಜ್ಞಾನ ಮತ್ತು ಆನಂದವೇ ದೇಹವಾಗಿ ಉಳ್ಳವನೂ ಸಹ. ಸದ್‌ಜ್ಞಾನಾನಂದ ಪಾದವಾನ್—ನಿರ್ದೋಷವಾದ ಜ್ಞಾನ ಮತ್ತು ಆನಂದವೇ ಪಾದವಾಗಿ ಉಳ್ಳವನು.

ಏವಂಭೂತಃ–ಹೀಗಿರುವವನು. ಮಹಾವಿಷ್ಣುಃ -ಸರ್ವೋತ್ತಮನಾದ ವಿಷ್ಣುವು. ಯಥಾರ್ಥಂ - ಸತ್ಯವಾದ. ಜಗತ್ - ಜಗತ್ತನ್ನು. ಈದೃಶಂ– ಈ ರೂಪವುಳ್ಳದನ್ನಾಗಿ. ಅನಾದ್ಯನಂತಕಾಲೀನಂ - ಅನಾದಿ ಮತ್ತು ಅನಂತವಾದ ಕಾಲದಲ್ಲಿರುವ ರೀತಿಯಲ್ಲಿ. ಸಸರ್ಜ - ಸೃಷ್ಟಿಮಾಡಿದನು. (ಇದು) ಆತ್ಮೇಚ್ಛಯಾ - ಕೇವಲ ತನ್ನ ಇಚ್ಛೆಯಿಂದ. (ಇದಕ್ಕೆ ಕಾರಣ ಅವನು) ಪ್ರಭುಃ - ಸರ್ವ ಶಕ್ತನು. ಇತಿ - ಹೀಗೆ. ವಾರಾಹೆ - ವರಾಹದಲ್ಲಿ (ಉಕ್ತವಾಗಿರುವುದು.)

ಸೂಚನೆ

ಪರಮಾತ್ಮನ ಒಂದೊಂದು ಹೆಸರು ಒಂದು ಮಹಿಮೆಯನ್ನು ಹೇಳಲು ಪ್ರವೃತ್ತವಾದುದು. ಈ ಕಾರಣ ಒಂದೊಂದು ಹೆಸರಿನ ಅರ್ಥಗಾಂಭೀರ್ಯವನ್ನು ಶಾಸ್ತ್ರಮರ್ಯಾದೆಗನುಗುಣವಾಗಿ ಗ್ರಹಿಸಲು ಶ್ರವಣ, ಮನನ ಮತ್ತು ಧ್ಯಾನವೆಂಬ ಜಿಜ್ಞಾಸಾಮಾಡಬೇಕು.

ನಮಗೆ ಯಥಾರ್ಥವಾಗಿ ಕಂಗೊಳಿಸುವ ಜಗತ್ತು ಹೇಗಿದೆಯೊ ಅದರಂತೆ ಮಾಡಿದವನು ಪರಮಾತ್ಮ. ಸತ್ಯವಾಗಿ, ಪ್ರವಾಹರೂಪದಲ್ಲಿ ನಿತ್ಯವಾಗಿ ಅನಾದ್ಯನಂತಕಾಲೀನವಾಗಿ ಪ್ರಕೃತ್ಯಾದಿ ಜಗತ್ತನ್ನು ಸೃಷ್ಟಿಸಿದವನು ಪರಮಾತ್ಮ. ಅವನು ಸರ್ವಶಕ್ತ. ಒಂದು ವಸ್ತುವಿನ ಸಹಾಯವನ್ನಪೇಕ್ಷಿಸಿ ಅವನು ಸೃಷ್ಟಿವ್ಯಾಪಾರ ಮಾಡುವುದಿಲ್ಲ. ಅವನು ಕೇವಲ ಇಚ್ಛಾಮಾತ್ರದಿಂದಲೇ ಸರ್ವಸೃಷ್ಟಿಕರ್ತೃ. ಅವನ ಇಚ್ಛೆಯು ಅವನ ಜ್ಞಾನರೂಪವಾದುದು. ಅವನು ಸ್ವತಂತ್ರ. ಈ ಅರ್ಥವಿಶೇಷವನ್ನು ಹೇಳುವುದಕ್ಕಾಗಿಯೇ ಅವನ ಪರವಾಗಿ ವಿಷ್ಣು ಎಂಬ ಶಬ್ದದ ಪ್ರವೃತ್ತಿ.

ಅನಾದಿ ಜಗತ್ತಿಗೆ ಸೃಷ್ಟಿ ಹೇಗೆ? ಕಾರಣಸಾಮಗ್ರಿ ಇಲ್ಲದೆ ಪರಮಾತ್ಮನಾದರೂ ಸೃಷ್ಟಿಸುವುದು ಹೇಗೆ? ಈ ರೀತಿಯಾದ ಪ್ರಶ್ನೆಗಳು ಶಾಸ್ತ್ರಾಧ್ಯಯನ ಮಾಡದಿರುವ ನಿಮಿತ್ತ ತೋರುವುವು. ಸರ್ವವೂ ಈಶಾವಾಸ್ಯವೆಂದು ಸಮರ್ಥಿಸುವ ಶಾಸ್ತ್ರವು ಎಂದರೆ ಪ್ರಕೃತ ಉಪನಿಷತ್ ಈ ಜಾತೀಯವಾದ ಪ್ರಶ್ನೆಗೆ ಅವಕಾಶವನ್ನೇ ಕೊಡುವುದಿಲ್ಲ.

ಶಾಸ್ತ್ರಪ್ರಪಂಚವು ಬಹು ವಿಸ್ತಾರ. ಸಂದರ್ಭಾನುಸಾರ ಅನ್ಯದರ್ಶನಗಳ

ಆಧಾರದಿಂದ ಶಾಸ್ತ್ರವಿರುದ್ಧವಾದ ವಾದಮಾಡುವವರನ್ನು ಕುರಿತು ಅವರ ವಾದವು ಸ್ವವ್ಯಾಹತವಾದುದೆಂದು ತೋರಿಸಲು ಈರೀತಿ ಪ್ರಶ್ನೋತ್ತರ ನಡೆಯುವ ಸಂಭವವೂ ಉಂಟು. ಈ ಅಂಶವು ಆಯಾ ಪ್ರಕರಣಗಳಲ್ಲಿ ಸ್ಪಷ್ಟಪಡುವುದು. ಪ್ರಮಾಣವಿಲ್ಲದ ವಿಷಯದಲ್ಲಿ ಆಗ್ರಹಗೊಂಡು ಎಂದರೆ ದುರಾಗ್ರಹದಿಂದ ಈ ಪ್ರಶ್ನೆಗಳು ಹುಟ್ಟುವುವು ಎಂದು ಭಾಷ್ಯಕಾರರು ಅಲ್ಲಲ್ಲಿಯೇ ನಿರೂಪಿಸಿರುವರು.

ಪರಮಾತ್ಮನು ಸೃಷ್ಟಿಸಿದ ಪ್ರಪಂಚವು ಅವನ ತತ್ತ್ವವನ್ನು ಎತ್ತಿ ಹಿಡಿಯುವುದು. ಅಲ್ಲಿ ದುಃಖಕ್ಕೆ ಅವಕಾಶವಿಲ್ಲ. ಕಂಡುಬರುವ ದುಃಖವು ಅಜ್ಞಾನ ಮತ್ತು ಮೋಹಗಳಿಂದ ಹುಟ್ಟುವುದು. ಪರಮಾತ್ಮಜ್ಞಾನಿಗೆ ಪ್ರಪಂಚವು ಆನಂದಪೂರ್ಣ. ಆನಂದರೂಪಿಯಾದ ಪರಮಾತ್ಮನು ಅದರಲ್ಲಿ ಪೂರ್ಣನಾದುದರಿಂದ ಅದು ಬೇರೆ ವಿಧದಲ್ಲಿರುವುದು ಸಂಭಾವಿತವೇ ಅಲ್ಲ. ಇದನ್ನು ತಿಳಿಯಲು ಪ್ರಾಮಾಣಿಕವಾದ ಶಾಸ್ತ್ರಾಧ್ಯಯನ ಒಂದೇ ಮಾರ್ಗ ಎಂದು ಭಾಷ್ಯಕಾರರ ಸಮರ್ಥನೆ. ಶಾಸ್ತ್ರವೆಂದರೆ ಉಪನಿಷತ್. ಇದರಿಂದ ಸಮಸ್ತ ವೇದವೂ, ಅದರ ಅರ್ಥವನ್ನು ನಿರೂಪಿಸುವ ಸ್ಮೃತಿ, ಅದನ್ನು ಸಮರ್ಥಿಸುವ ಭಾಷ್ಯ ಇವೆಲ್ಲವೂ ಶಾಸ್ತ್ರಶಬ್ದ ವಿಷಯವಾದುವು. ಅಬಾಧಿತವಾಗಿ ಈ ನಿಯಮವನ್ನು ಒಳಗೊಂಡಿರುವುದು ಪರಮಾತ್ಮನಿಂದ ಸೃಷ್ಟವಾದ ಜಗತ್. ಈ ಭಾವವನ್ನೇ ಭಾಷ್ಯಕಾರರು 'ನಿಯಮೇನೈವ ಸಸೃಜೆ' ಎಂಬೀ ಮುಂತಾಗಿ ನಿರೂಪಿಸಿರುವರು.

ಪರಮಾತ್ಮನಿಗೆ ಶರೀರವಿದೆಯೇ ? ಇಲ್ಲವೇ ? ಎಂದು ಪ್ರಶ್ನೆ ಹುಟ್ಟದರೆ ಪ್ರಶ್ನೆ ಮಾಡುವವನ ಅಭಿಪ್ರಾಯ ಮನುಷ್ಯನಿಗಿರುವಂತೆ ಸ್ಥೂಲಸೂಕ್ಷ್ಮ ಶರೀರವಿದೆಯೆ? ಇಲ್ಲವೆ? ಎಂದು. ಈ ಪ್ರಶ್ನೆಗೆ ಭಾಷ್ಯಕಾರರ ಉತ್ತರ ಎಂದರೆ ಉಪನಿಷತ್ತಿನ ಉತ್ತರ 'ಇಲ್ಲ'ಎಂದು. ಇದನ್ನೇ ಈ ಮಂತ್ರವು ಸ್ಪಷ್ಟಪಡಿಸುತ್ತಿರುವುದು. ಶರೀರ ರಹಿತನಾದ ಅವನು ಶೂನ್ಯನೇ ಎಂದು ಪ್ರಶ್ನಿಸಿದರೆ ಶೂನ್ಯನಲ್ಲ ಎಂದು ಭಾಷ್ಯಕಾರರ ಉತ್ತರ. ಇದಕ್ಕೆ ಉಪಪಾದಕವಾದುದು ಪರಮಾತ್ಮನು ಜ್ಞಾನಾನಂದಮಯ ಎಂಬ ಭಾವ. ಜ್ಞಾನಾನಂದಮಯ, ಜ್ಞಾನಾನಂದರೂಪ, ಜ್ಞಾನಾನಂದ ದೇಹ ಇವೆಲ್ಲಕ್ಕೂ ಒಂದೇ ಭಾವ. ಅವು ಪರಮಾತ್ಮನ ಲೋಕವಿಲಕ್ಷಣ ಮಹಿಮೆಯನ್ನು ತಿಳಿಸುವುವು.

ಪರಮಾತ್ಮನು ಪ್ರಭು ಎಂದರೆ ಸರ್ವಶಕ್ತ, ಸರ್ವಸಾಮರ್ಥ್ಯವುಳ್ಳವನು ಎಂದು ನಿರೂಪಿತವಾಗಿದೆ. ಈ ಶಕ್ತಿ ಅಥವಾ ಸಾಮರ್ಥ್ಯ ಯಾವುವೆಂದು ವಿಚಾರ ಮಾಡೋಣ. ಇದು ಮನುಷ್ಯನು ಶೀರ್ಷ ಮೊದಲಾದ ಸರ್ವಾವಯವದಿಂದ ವ್ಯಾಪಾರ ಮಾಡಲು ಕಾರಣವಾದ ಸಾಮರ್ಥ್ಯ. ಈ ಸಾಮರ್ಥ್ಯದ ಪೂರ್ಣತೆಗೇ ಸರ್ವ ಶಕ್ತಿ ಎಂದು ಹೆಸರು. ಇಂತಹ ಪೂರ್ಣಸಾಮರ್ಥ್ಯವು ಪರಮಾತ್ಮನಿಗೆ ಎಂದು ಉಪಪಾದಿಸಲು ಶೀರ್ಷ ಮುಂತಾದ ಶಬ್ದಗಳು ಭಾಷ್ಯದಲ್ಲಿವೆ. ವೈದಿಕವಾದ ಈ ಶಬ್ದಗಳು ಆಯಾ ಗುಣಗಳ ಪೂರ್ಣತ್ವವನ್ನು ಬೋಧಿಸುವುವಾಗಿ ಬ್ರಹ್ಮವಾಚಕವಾದುವು. ಈ ಕಾರಣದಿಂದ ಇವು ಕೇವಲ ಅವಯವಗಳನ್ನು ಹೇಳುವುವೆಂದು ಲೋಕೋದಾಹರಣೆಯಿಂದ ತಿಳಿಯಬಾರದು. ಈ ತತ್ತ್ವವನ್ನು ತಿಳಿಯಲು ಶಾಸ್ತ್ರಾಧ್ಯಯನ ಬೇಕು. ಅಧ್ಯಯನವಿಲ್ಲದಿರುವಾಗ ಈ ಶಬ್ದಗಳಿಗೆ ಸರಿಯಾದ ಅರ್ಥವಾಗದೆ ನಮಗಿರುವಂತೆ ಪರಮಾತ್ಮನಿಗೂ ಅವಯವಗಳಿವೆ. ಆ ನಿಮಿತ್ತವಾದ ಭೇದ, ಅಸಾಮರ್ಥ್ಯ ಮುಂತಾದುವೂ ಇವೆ ಎಂಬ ಭ್ರಾಂತಿ ಹುಟ್ಟುವುದು. ಈ ಭ್ರಾಂತಿ ಇರುವಾಗ ಮಂತ್ರಾರ್ಥವಾಗುವುದು ಸಾಧ್ಯವಲ್ಲ. ಶಾಸ್ತ್ರಾಧ್ಯಯನದ ಬಲದಿಂದ ಮಂತ್ರಾರ್ಥಮಾಡಿಕೊಂಡರೆ ಇದೇ ಶಬ್ದಗಳಿಂದ ಅಧಿಕಾರಿಯು ಪರಮಾತ್ಮನ ಪೂರ್ಣತ್ವ, ಸ್ವಾತಂತ್ರ್ಯ, ಸರ್ವಶಕ್ತಿ ಮುಂತಾದ ಮಹಾಮಹಿಮೆಯನ್ನು ತಿಳಿಯಲು ಸಮರ್ಥನಾಗುವನು.

ಅಧಿಕಾರಿಯು ಉಕ್ತರೀತಿಯಲ್ಲಿ ಪರಮಾತ್ಮನನ್ನು ತಿಳಿಯುವುದು ಎಂದರೆ ತಾನೇ ಮೊದಲಾದ ಸರ್ವವಸ್ತುವಿನಲ್ಲಿಯೂ ಜ್ಞಾನಾನಂದಮಯನಾದ ಪರಮಾತ್ಮನನ್ನೇ ನೋಡುವುದು ಎಂದರೆ ತಿಳಿಯುವದು ಎಂದು ಅಭಿಪ್ರಾಯ. ಈ ಜ್ಞಾನವುಳ್ಳವನು ಜ್ಞಾನಾನಂದರೂಪಿಯಾದ ಪರಮಾತ ಸರೂಪನಾಗುವುದು ಯುಕ್ತವೇ ಸರಿ. ಹೀಗೆ ಅವನು ಶೋಕ ಮೋಹಗಳಿಂದ ದೂರನಾಗುವನು ಎಂದು ಮಂತ್ರದ ಅರ್ಥ.

ಈ ವಿಧವಾದ ದರ್ಶನಕ್ಕೆ ಸಾಧಕವಾದುದು ಸರ್ವವೂ ಈಶಾವಾಸ್ಯ ಎಂಬುದರಿಂದ ಸಿದ್ಧವಾದ ಪರಮಾತ್ಮನ ಸರ್ವವಸ್ತುವಿನ ಸೃಷ್ಟಿವ್ಯಾಪಾರ. ಅವನ ಸೃಷ್ಟಿವ್ಯಾಪಾರಕ್ಕೆ ಯಾವುದಾದರೂ ಒಂದು ವಸ್ತು ಯಾವುದಾದರೂ ಒಂದು ಭಾಗ ಅಥವಾ ಆಕಾರದಲ್ಲಿ ವಿನಾಯಿತಿಯನ್ನು ಹೊಂದುವುದಾದರೆ ಈ ಶಾಸ್ತ್ರದ ಪ್ರವೃತ್ತಿಗೇ ಕಾರಣವಿರುತ್ತಿರಲಿಲ್ಲ. ಮತ್ತು ಅದು ವಿನಾಯಿತಿ

ಯನ್ನು ಹೊಂದಲು ಪರಮಾತ್ಮನಿಗಿಂತಲೂ ಅಧಿಕ ಶಕ್ತಿಯುಳ್ಳುದಾಗಬೇಕಲ್ಲವೇ? ಎಂಬೀ ಮುಂತಾದ ನಿರರ್ಥಕ ಪ್ರಶ್ನೆಗಳು ಹುಟ್ಟುವುವು.

ಈ ವಿಚಾರಗಳಿಂದ ಸರ್ವಕ್ಕೂ ಪರಮಾತ್ಮನೇ ಮೂಲ, ತದತಿರಿಕ್ತವಾದ ಮತ್ತೊಂದು ಮೂಲವಿಲ್ಲ ಎಂದು ನಿರರ್ಗಳವಾಗಿ ಸಿದ್ಧಿಸುವುದು.

ಈ ಸಂದರ್ಭದಲ್ಲಿ ಜ್ಞಾನಾಪೇಕ್ಷಿಗಳಾದವರಿಗೂ ನಾನಾ ವಿಧವಾಗಿ ಮನಸ್ಸಿನ ಮೇಲೆ ಪರಿಣಾಮಮಾಡಿ, ಈ ಹೊತ್ತು ಜನರನ್ನು ಜ್ಞಾನದಿಂದ ದೂರಮಾಡುತ್ತಿರುವ ಕೆಲವು ಲೌಕಿಕ ಪದಗಳ ಅರ್ಥವನ್ನು ವಿಚಾರಮಾಡಬೇಕಾದುದು ಅಗತ್ಯವಾಗಿರುವುದು. ಯಾವ ಕಾಲದಲ್ಲಿಯೊ ಯಾರಿಂದಲೊ ಏತಕ್ಕೊ ಮಧ್ವಸಿದ್ಧಾಂತವೆಂದು ಕೆಲವು ವಿಷಯಗಳು ಜನರ ಪರಿಚಯಕ್ಕೆ ಬಂದು ಅವರಿಗೆ ಗ್ರಂಥಗಳ ಸಂಬಂಧವನ್ನೇ ಬಿಡಿಸಿವೆ. ಇವುಗಳಲ್ಲಿ ಮುಖ್ಯವಾದುವು. ೧. ಶಾಸ್ತ್ರ ಪಂಡಿತರಿಗೆ—ನಮಗೆ ಭಕ್ತಿ ಸಾಕು; ಭಕ್ತಿ ಸಾರ್ವಜನಿಕ. ಮುಖ್ಯಪ್ರಮೇಯಗಳನ್ನು ತಿಳಿದರಾಯಿತು ಎಂದು. ಇದರಲ್ಲಿನ ದೋಷ—ಈ ಮಾತು ಮಧ್ವಶಾಸ್ತ್ರಕ್ಕೆ ಸಂಗತವಲ್ಲ. ಭಕ್ತಿಗೆ ಶಾಸ್ತ್ರಜನ್ಯವಾದ ಜ್ಞಾನವೇ ಕಾರಣ. ಆ ಜ್ಞಾನವನ್ನು ಪಡೆಯದವರಿಗೆ ಭಕ್ತಿಯ ಮಾತೇ ಇಲ್ಲ. ಜನರು ಸಾಮಾನ್ಯವಾಗಿ ಭಕ್ತಿ ಎಂದು ಕರೆಯುವುದು ನಂಬಿಕೆಯನ್ನು. ಕೆಲವು ಮುಖ್ಯ ವಿಷಯಗಳನ್ನು ತಿಳಿಯುವುದೇ ಜ್ಞಾನವಲ್ಲ. ಶಾಸ್ತ್ರಾಧ್ಯಯನವನ್ನು ಸಪರಿಕರವಾಗಿ ಮಾಡದವರಿಗೆ ಆ ವಿಷಯಗಳು ಪ್ರಮೇಯವಲ್ಲ. ಅವನ್ನು ತಿಳಿಯಲೂ ಸಾಧ್ಯವಲ್ಲ. ಯಾರಿಂದಲೋ ಆ ಶಬ್ದವನ್ನು ಕಲಿತ ಮಾತ್ರ ಅದು ಜ್ಞಾನವಾಗುವುದಿಲ್ಲ. ಅಂತಹವರಿಗೆ ಬರುವುದು ಶಬ್ದಮಾತ್ರ. ಶಬ್ದದ ಅರ್ಥ ಅವರಿಗೆ ಬಹು ದೂರ.

ಜೀವನ ಸ್ವರೂಪ ಅನಾದಿನಿತ್ಯ; ಅದನ್ನು ಪರಮಾತ್ಮನು ಸೃಷ್ಟಿ ಮಾಡಲಿಲ್ಲ; ಆ ಸ್ವರೂಪಕ್ಕನುಗುಣವಾಗಿ ಅವನು ನಡೆಯದಿದ್ದರೆ ಅವನಿಗೆ ವೈಷಮ್ಯ ನೈರ್ಘೃಣ್ಯವೆಂಬ ದೋಷಗಳು ಬರುವುವು; ಈ ಕಾರಣದಿಂದ ಪರಮಾತ್ಮನು ಸರ್ವ ಕರ್ತೃ ಅಲ್ಲ; ಸರ್ವ ಕರ್ತೃ ಎಂದು ಶಾಸ್ತ್ರ ಹೇಳುವುದು ಉಪಚಾರ ಮಾತ್ರ; ಅದನ್ನು ಸ್ತೋತ್ರಕ್ಕೋಸ್ಕರ ಆಡಿದುದು; ಎಂಬೀ ಮುಂತಾದ ವಾದ. ಇದರಲ್ಲಿನ ದೋಷ—ಜೀವನ ಸ್ವರೂಪವೆಂದು ಶಾಸ್ತ್ರ ತಿಳಿಸುವುದು ಪರ

ಮಾತ್ಮನನ್ನು. ಪರಮಾತ್ಮನು ಅನಾದಿನಿತ್ಯ. ಇದು ಶಾಸ್ತ್ರಸಿದ್ಧ. ಜೀವನವೇ ಆದ ಸ್ವರೂಪವು ಈ ಪದದ ಅರ್ಥ ಎಂದರೆ ಆಗ ಸ್ವರೂಪ ಎಂಬ ಶಬ್ದವು ಚೇತನನಾದ ಜೀವನ ಚೇತನಧರ್ಮ ಎಂದರೆ ಚೈತನ್ಯ ಅಥವಾ ಜ್ಞಾನ ರೂಪತ್ವವನ್ನು ಬೋಧಿಸುವುದು. ಇದಕ್ಕೆ ಪರಮಾತ್ಮನೇ ಪ್ರವರ್ತಕ ಎಂದು ಈಗತಾನೆ ಉಪನಿಷತ್ತು ಸಿದ್ಧಾಂತಿಸಿರುವುದು. ಪರಮಾತ್ಮನು ಅನಾದಿ ಪ್ರವರ್ತಕನಾದುದರಿಂದ ಮತ್ತು ನಿತ್ಯಪ್ರವರ್ತಕನಾದುದರಿಂದ ಜೀವನೂ ಅನಾದಿ ನಿತ್ಯನಾದ. ಹೀಗೆ ಪರಮಾತ್ಮನು ಸರ್ವ ಕರ್ತೃ. ಇದಕ್ಕೆ ಅರ್ಥ ಸಂಕೋಚವಿಲ್ಲ. ಅವನು ಸ್ವತಂತ್ರ. ವಿಧಿಬದ್ಧನಲ್ಲ. ಅವನಲ್ಲಿ ದೋಷ ಬರುವುದು ಎಂದು ಶಂಕಿಸಲೂ ಅವಕಾಶವಿಲ್ಲ. ಸ್ವತಂತ್ರನಾದ ಅವನು ನಿಯಮವಾಗಿ ನಿರ್ದೋಷ. ಇವೆಲ್ಲವೂ ಅವನು ಪೂರ್ಣ ಎಂಬುದರ ಮಹಿಮೆ. ಪರಮಾತ್ಮನ ಸ್ತೋತ್ರವು ರಮಾಬ್ರಹ್ಮಾದಿಗಳಿಗೂ ಶಕ್ಯವಲ್ಲ. ಅದು ಯಾವ ಅರ್ಥದಲ್ಲಿಯೂ ಔಪಚಾರಿಕವಲ್ಲ. ಈ ದುರ್ಲಭವಾದ ಸಾಕಲ್ಯೇನ ಜ್ಞೇಯವಲ್ಲದ ಮಹಿಮೆಯೇ ಅವನ ಸರ್ವೋತ್ತಮತ್ವ. ಇದೇ ಅವನ ಇತರ ಪದಾರ್ಥಗಳಿಂದ ಇರುವ ವೈಲಕ್ಷಣ್ಯ. ಇದಕ್ಕೆ ಭೇದವಾದವೆಂದು ಹೆಸರು. ಇದನ್ನು ತಿಳಿಸುವ ಉದ್ದೇಶದಿಂದ ಬ್ರಹ್ಮಮೀಮಾಂಸಾರೂಪವಾದ ಈ ಸಿದ್ಧಾಂತವನ್ನು ದ್ವೈತವೇದಾಂತವೆಂದು ಕರೆಯುವ ಪದ್ಧತಿ ಇದೆ. ದ್ವೈತವೆಂದರೆ ಭೇದ. ಈ ಭೇದವು ಲೋಕಸಿದ್ಧವಾದ ಘಟಪಟಗಳ ಭೇದದಂತಲ್ಲ. ಅದು ಸ್ವತಂತ್ರ ಪರತಂತ್ರ ವಸ್ತುಗಳ ಭೇದ. ಪರಮಾತ್ಮನ ಸರ್ವಥಾ ಸರ್ವನಿಯಾಮಕತ್ವವನ್ನು ಖ್ಯಾಪಿಸುವ ಉದ್ದೇಶ ಈ ಶಬ್ದಕ್ಕೆ.

ಮೇಲೆ ಕಂಡ ವಿಷಯಗಳನ್ನು ಪರಿಚಯಕ್ಕೆ ತಂದುಕೊಳ್ಳದೆ ಸಿದ್ಧಾಂತವನ್ನು ಇತರರಿಗೆ ಪರಿಚಯಮಾಡಿಸಲು ಹೊರಟ ಕೆಲವರು ದ್ವೈತ, ಭೇದ, ವೈಲಕ್ಷಣ್ಯ ಮುಂತಾದ ಪದಗಳಿಗೆ ಲೋಕಸಿದ್ಧವಾದ ಅರ್ಥವನ್ನು ಮಾಡಿಕೊಂಡರು. ಈ ಭೇದವು ಎರಡು ಸ್ವತಂತ್ರ ವಸ್ತುಗಳಿಗೆ ಮಾತ್ರ ಸಂಭವಿಸುವುದು ಎಂಬ ನಿರ್ಣಯಕ್ಕೆ ಬಂದರು. ಈ ಎರಡು ಸ್ವತಂತ್ರ ವಸ್ತುಗಳನ್ನು ಕಂಡುಹಿಡಿಯಲು ಪ್ರಯತ್ನಿಸಿ ವಿಮುಖರಾದರು. ಕಡೆಗೆ ಜೀವನು ಅನಾದಿ ನಿತ್ಯ, ಅವನ ಸ್ವರೂಪಕ್ಕೆ ಸೃಷ್ಟಿಯಿಲ್ಲ ಎಂದು ಆಪಾತತಃ ಭಾವ ಕೊಡುವ ವಾಕ್ಯಗಳಿಗೆ ಅಸಾಧಾರಣ್ಯವನ್ನು ಕೊಟ್ಟರು. ಪರಮಾತ್ಮ ಮತ್ತು ಸೃಷ್ಟಿಯಿಲ್ಲದ ಜೀವನ ಸ್ವರೂಪ ಇವೆರಡು ಅನಾದಿಯಾಗಿ ಜೊತೆಯಲ್ಲಿಯೇ ಇರುವುವು; ಜೀವನ ಸ್ವರೂಪ ಪರಾಧೀನ ಎಂದು ಪರಿಗಣಿತವಾಗಿದ್ದರೂ ಅದರ ಸತ್ತಾ ಸ್ವತಂತ್ರವಾಗಿ ಅದರದೇ ಆಗಿದೆ; ಅದು ಪರಾಧೀನವೆಂದರೂ ಪರಮಾತ್ಮನು ಅದು ಸೃಷ್ಟಿಸಿದುದಲ್ಲ; ಇದೇ ಭೇದವಾದದ ಅರ್ಥ; ಇದಕ್ಕೆ ಲೋಪ ಬಂದರೆ ಅಭೇದವಾದವಾಗುವುದು. ಎಂದು ವಾದಿಸಿ ಉತ್ಸಾಹಿಗಳಾದವರಿಗೆ ಮೇಲಿನ ಮಂತ್ರದಂತಹ ಶಾಸ್ತ್ರವಾಕ್ಯಗಳನ್ನು ಅರ್ಥ ಮಾಡಿಕೊಳ್ಳುವ ಯೋಗವೇ ಇಲ್ಲದಂತೆ ಮಾಡಿರುವರು.

ಇದರ ಜೊತೆಯಲ್ಲಿ ಇವರು ಒಂದು ಘಟಕ್ಕೆ ಹೇಗೆ ಉಪಾದಾನ, ನಿಮಿತ್ತ ಮುಂತಾದ ಅನೇಕ ಕಾರಣಗಳೊ ಅದರಂತೆ ಜಗತ್ತಿಗೂ ಎಂದು ತಿಳಿದು ಪರಮಾತ್ಮನು ಕುಂಬಾರನಂತೆ ನಿಮಿತ್ತ ಕಾರಣ ಮಾತ್ರ; ಸ್ವಾಮಿಭೃತ್ಯನ್ಯಾಯದಂತೆ ಅವನ ಅಧೀನ ಜಗತ್ತು ಎಂದೂ ವಾದಿಸುವರು.

ಇದರ ಮೇಲೆ ಇಂಗ್ಲೀಷು (English) ಭಾಷೆಯ ದುರುಪಯೋಗ ಬೇರೆ. ಈ ಭಾಷೆಯಲ್ಲಿ ಪ್ರಸಿದ್ಧವಾದ ಗ್ರಂಥಗಳಲ್ಲಿ ತತ್ತ್ವಶಾಸ್ತ್ರಕ್ಕೆ ಸಂಬಂಧಿಸಿದ ಮೂರು ಶಬ್ದಗಳು ಪರಿಚಯಕ್ಕೆ ಬರುವುವು. ೧. ಮೋನಿಸಮ್ (Monism) ಇಡೀ ಪ್ರಪಂಚದ ಸ್ವತಂತ್ರವಾದ ಮೂಲ ಒಂದು ಎಂಬ ವಾದ. ೨. ಡೂಯಲಿಸಮ್ (Dualism) ಇಡೀ ಪ್ರಪಂಚಕ್ಕೆ ಎರಡು ಸ್ವತಂತ್ರ ವಸ್ತುಗಳು ಮೂಲ ಎಂಬ ವಾದ. ೩. ಪ್ಲೂರಲಿಸಮ್ (Pluralism)–ಇಡೀ ಪ್ರಪಂಚಕ್ಕೆ ಅನೇಕ ಸ್ವತಂತ್ರ ವಸ್ತುಗಳು ಮೂಲ ಎಂಬ ವಾದ. ಈ ಮೂರರಲ್ಲಿ ಮೋನಿಸಂ (Monism) ಸರ್ವೋತ್ತಮವೆಂದು ಪ್ರತೀಚ್ಯರ ಸಾಮಾನ್ಯ ನಿರ್ಣಯ. ಈ ಸರ್ವೋತ್ತಮತ್ವವನ್ನು ಅದ್ವೈತ ವೇದಾಂತಕ್ಕೆ ಮಾತ್ರ ಇದೆ ಎಂದು ಹೇಳಲು ಕೆಲವು ಗ್ರಂಥಕಾರರು ದ್ವೈತವೆಂಬ ಶಬ್ದಕ್ಕೆ ಲೌಕಿಕಾರ್ಥವನ್ನು ಕಲ್ಪಿಸಿ ದ್ವೈತ ವೇದಾಂತವನ್ನು ಡೂಯಲಿಸಂ (Dualism) ಎಂದು ಕರೆದರು. ಅದು ಸದೋಷವೆಂದು ಉದ್ಘಾಟಿಸುವುದೇ ಅವರ ಆಶಯ. ಮಧ್ವ ಸಿದ್ಧಾಂತವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡದೆ ಮತ್ತು ಇಂಗ್ಲೀಷ್ ಪದಗಳ ಅರ್ಥಸ್ವಾರಸ್ಯವನ್ನು ಗ್ರಹಿಸದೇ ಮಧ್ವ ಸಿದ್ಧಾಂತವನ್ನು ಜನರಿಗೆ ಪರಿಚಯ ಮಾಡಿಕೊಡುವ ಕೆಲವರು ಮಧ್ವಸಿದ್ಧಾಂತವು ಡೂಯಲಿಸಮ್ ಏಕೆ? ಅದು ವಾಸ್ತವವಾಗಿ

ಪ್ಲೂರಲಿಸಂ ಎಂದು ವಾದಿಸಲಾರಂಭಿಸಿದರು. ಈ ಗೊಂದಲದಲ್ಲಿ ಸಿದ್ಧಾಂತದ ವಾಸ್ತವ ಪ್ರಮೇಯಗಳನ್ನು ನಿರೂಪಿಸುವುದೇ ದುಃಸಾಧ್ಯವಾಗಿರುವುದು. ಮಧ್ವಸಿದ್ಧಾಂತವನ್ನು ಪ್ರವಚನಮಾಡುವವರೂ ಏನು ಕಾರಣವೋ ಪ್ರತಿ ಪಕ್ಷವನ್ನು ಬಲಿಸಲಾರಂಭಿಸಿದರು. ಬಾಯಿಮಾತಲ್ಲದೆ ಗ್ರಂಥಗಳೂ ಪ್ರವೃತ್ತ ವಾದುವು.

ಇದು ಹೇಗೇ ಇರಲಿ ತತ್ತ್ವಜ್ಞಾನ ಮುಖ್ಯ. ಸಾಧುಗಳು ಇದುವರೆಗೆ ಅಧ್ಯಯನಮಾಡಿದ ಮಂತ್ರಗಳನ್ನು ಮನನ ಮಾಡಿ ಪರಮಾತ್ಮ ಸರ್ವಥಾ ಸ್ವತಂತ್ರ, ಜಗತ್ತು ಸರ್ವಾರ್ಥದಲ್ಲಿಯೂ ಅವನ ಕಾರ್ಯವಾಗಿ ಸರ್ವಥಾ ಪರತಂತ್ರವೆಂಬ ಒಂದು ಪ್ರಮೇಯವನ್ನು ಗ್ರಹಿಸಿದರೂ ಮೇಲಿನ ದುರ್ವಾದಗಳು ಮಾಯವಾಗುವುವು. ನಾನಾ ಭಾಷೆಯನ್ನು ಉಪಯೋಗಿಸಿ ಹೇಳುವುದಾದರೆ ಸಿದ್ಧಾಂತವು ನಿರ್ದೋಷವಾದ **ಮೋನಿಸಂ** (Monism) ಎಂದು ಸಿದ್ಧಿಸುವುದು. ಮತ್ತು ಅದು ಸರ್ವೋತ್ತಮ ತತ್ತ್ವಶಾಸ್ತ್ರವಾಗುವುದು.

ಫಲಿತ ಮಂತ್ರಾರ್ಥ

ಆ ಜ್ಞಾನಿಯು ಬ್ರಹ್ಮನನ್ನು ಹೊಂದಿದನು. (ಇಷ್ಟು ಮಾತ್ರದಿಂದ ಅವನಿಗೆ ಶೋಕ ಮೊದಲಾದುದು ಹೋದುದು ಹೇಗೆ? ಇದಕ್ಕೆ ಉತ್ತರ.) ಬ್ರಹ್ಮನು ಶೋಕರಹಿತ, ಲಿಂಗದೇಹರಹಿತ, ನಿತ್ಯ, ಪೂರ್ಣ, ಸ್ಥೂಲದೇಹ ರಹಿತ, ಪಾವನ, ಪಾಪರಹಿತ, ಪಾಪಮೂಲಸ್ಥೂಲಸೂಕ್ಷ್ಮಶರೀರರಹಿತ ಮತ್ತು ಶೋಕಹೀನ. (ಇಂತಹ ಹರಿಗೆ ಸರೂಪನಾದವನಿಗೆ ಶೋಕವಿಲ್ಲ ಎಂಬುದು ಯುಕ್ತ.) ಅವನು ಸರ್ವಜ್ಞ. ಎಲ್ಲರ ಮನಸ್ಸಿಗೆ ಪ್ರವರ್ತಕ. ಜ್ಞಾನಸ್ವರೂಪ. ಸರ್ವವನ್ನೂ ವಶಪಡಿಸಿಕೊಂಡವನು. ಅವನು ಸ್ವತಂತ್ರ. ಅನಾದ್ಯನಂತಕಾಲದಲ್ಲಿಯೂ ಸತ್ಯವಾದ ವಸ್ತುಗಳನ್ನು ಸೃಷ್ಟಿಸುವನು. ||೮||

೯

ಖಂಡಾರ್ಥವು ಒಂಭತ್ತನೆಯ ಮಂತ್ರವನ್ನಾರಂಭಿಸಿ ಮೂರು ಮಂತ್ರಗಳನ್ನು ಈರೀತಿ ಪರಿಚಯಮಾಡಿಸುವುದು.

ವಿಜಾನತೊ ಅನುಪಶ್ಯತ ಇತ್ಯತ್ರ ಯಥಾವತ್ಪರಮಾತ್ಮಜ್ಞಾನಂ ಮುಕ್ತಿಹೇತುರಿತ್ಯುಕ್ತಂ । ತದ್ಜ್ಞಾನಂ ಮಿಥ್ಯಾಜ್ಞಾನನಿಂದಾ

ಸಮುಚಿತಮೇವ ಮುಕ್ತಿಹೇತುಃ ನ ಕೇವಲ ಮಿತ್ಯಾಹ । ಅಂಧಂತಮ ಇತ್ಯಾದಿ ಮಂತ್ರತ್ರಯೇಣ ||

ವಿಜಾನತಃ ಅನುಪಶ್ಯತಃ ಇತಿ ಅತ್ರ–ವಿಜಾನತಃ ಅನುಪಶ್ಯತಃ ಎಂಬ ಹಿಂದಿನ ಮಂತ್ರಭಾಗಗಳಲ್ಲಿ. ಯಥಾವತ್-ಯಥಾರ್ಥವಾದ. ಪರಮಾತ್ಮಜ್ಞಾನಂ- ಪರಮಾತ್ಮನ ಜ್ಞಾನವು. ಮುಕ್ತಿಹೇತುಃ- ಮುಕ್ತಿಯ ಕಾರಣ. ಇತಿ-ಹೀಗೆ. ಉಕ್ತಂ-ಸಿದ್ಧಾಂತಿತವಾಯಿತು. ತದ್ಜ್ಞಾನಂ- ಆ ಜ್ಞಾನವು. ಮಿಥ್ಯಾಜ್ಞಾನನಿಂದಾಸಮುಚಿತಂ ಏವ-ಅಯಥಾರ್ಥಜ್ಞಾನದ ನಿಂದೆಯಿಂದೊಡಗೂಡಿಯೆ. ಮುಕ್ತಿಹೇತುಃ–ಮುಕ್ತಿಗೆ ಕಾರಣ. ನ ಕೇವಲಂ- ಅದೊಂದೇ ಅಲ್ಲ. ಇತಿ ಆಹ–ಹೀಗೆ ಹೇಳಿದನು. ಅಂಧಂತಮ ಇತ್ಯಾದಿ ಮಂತ್ರತ್ರಯೇಣ 'ಅಂಧಂತಮಃ' ಎಂಬ ಪದದಿಂದ ಆರಂಭಿಸುವ ಮೂರು ಮಂತ್ರಗಳಿಂದ.

ಮಂತ್ರ

ಅಂಧಂತಮಃ ಪ್ರವಿಶಂತಿ ಯೆ ಅವಿದ್ಯಾಮುಪಾಸತೆ ।
ತತೊ ಭೂಯ ಇವ ತೆ ತಮೊ ಯ ಉ ವಿದ್ಯಾಯಾ ಗ್ಂ ರತಾಃ
|| ೯ ||

ಖಂಡಾರ್ಥ

ತತ್ರ ತಾವತ್ ಯಥಾವದ್ಜ್ಞಾನಸ್ಯೈವ ಅನ್ಯಥಾಜ್ಞಾನನಿಂದನಸ್ಯ ಆವಶ್ಯಕತ್ವೋಪಪಾದನಾಯ ಅನ್ಯಥಾಜ್ಞಾನಸ್ಯ ಪ್ರಾಗುಕ್ತಂ ಅಸುರ್ಯಲೋಕಸಾಧನತ್ವಂ ಅನೂದ್ಯ ಅನ್ಯಥಾಜ್ಞಾನಾನಿಂದನಸ್ಯ ತತೋಧಿಕಾನರ್ಥಹೇತುತ್ವಂ ಆದ್ಯೇನ ಮಂತ್ರೇಣೋಚ್ಯತೆ । ಅತ್ರಾವಿದ್ಯಾಶಬ್ದೇನ ವಿದ್ಯಾವಿರೋಧಿಮಿಥ್ಯಾಜ್ಞಾನವಾಚಿನಾ ತದ್ವಿಷಯೊ ಅನ್ಯಥಾಪ್ರಕಾರೊ ಗ್ರಾಹ್ಯಃ ತಥಾ ಚ ಅವಿದ್ಯಾಂ ಯಥಾವದಾಕಾರಾತ್ ಅನ್ಯಥಾಕಾರಮುಪಾಸತೆ ಧ್ಯಾಯಂತಿ ಯೆ ತೆ ಅಂಧಂತಮಃ ಪ್ರವಿಶಂತೀತ್ಯುಕ್ತಾನುವಾದಃ । ಯೆ ವಿದ್ಯಾಯಾಂ ಉ ತತ್ತ್ವಜ್ಞಾನ ಏವ ರತಾಃ ಮಿಥ್ಯಾಜ್ಞಾನಾನಿಂದಕಾಃ ಇತಿ ಏವಕಾರಾರ್ಥಃ । ತೆ ತತೊ ಮಿಥ್ಯಾಜ್ಞಾನಿಪ್ರಾಪ್ಯ ತಮಸೋವ ಭೂಯಃ ಅಧಿಕಂ ತಮಃ । ಇವಶಬ್ದಸ್ಯ ವ್ಯಕ್ತಮಿತ್ಯರ್ಥಃ । ಅಸಂಶಯಂ ಇತಿ ಯಾವತ್ । ಪ್ರವಿಶಂತೀತ್ಯನ್ವಯಃ || ೯ ||

ಮಂತ್ರ ಪದವಿಭಾಗ— ಅಂಧಂತಮಃ, ಪ್ರವಿಶಂತಿ, ಯೆ, ಅವಿದ್ಯಾಂ,
ಉಪಾಸತೆ। ತತಃ, ಭೂಯಃ, ಇವ, ತೆ, ತಮಃ, ಯೆ, ಉ,
ವಿದ್ಯಾಯಾ ಗ್ಂ, ರತಾಃ ॥

ಮಂತ್ರಸ್ಥಪದಗಳ ಅನ್ವಯ

ಯೆ, ಅವಿದ್ಯಾಂ, ಉಪಾಸತೆ, ತೆ, ಅಂಧಂತಮಃ, ಪ್ರವಿಶಂತಿ ।
ಯೆ, ವಿದ್ಯಾಯಾಂ, ಉ, ರತಾಃ, ತೆ, ತತೊ, ಭೂಯಃ
ತಮಃ, ಇವ. (ಪ್ರವಿಶಂತಿ) ॥

ಖಂಡಾರ್ಥದಂತೆ ಈ ಪದಗಳ ಅರ್ಥ

ತತ್ರ - ಪ್ರಕೃತಾರ್ಥವನ್ನು ನಿರೂಪಿಸುವ ಸಂದರ್ಭದಲ್ಲಿ. ತಾವತ್– ಮೊದಲು. ಯಥಾವದ್‌ಜ್ಞಾನಸ್ಯ ಇವ-ಯಥಾರ್ಥ ಜ್ಞಾನಕ್ಕೆಹೇಗೊ ಹಾಗೆ ಅನ್ಯಥಾಜ್ಞಾನನಿಂದನಸ್ಯ–ಅಯಥಾರ್ಥಜ್ಞಾನದ ನಿಂದನೆಗೆ ಎಂದರೆ ಇದು ದೋಷಯುಕ್ತವಾದುದು ಎಂಬ ತಿಳಿವಳಿಕೆಗೆ. ಆವಶ್ಯಕತ್ವೋಪಪಾದನಾಯ–ಆವಶ್ಯಕತ್ವವನ್ನು ವಿವರಿಸಲು. ಅನ್ಯಥಾಜ್ಞಾನಸ್ಯ– ಅಯಥಾರ್ಥ ಜ್ಞಾನಕ್ಕೆ. ಪ್ರಾಗುಕ್ತಂ-ಹಿಂದೆ ನಿರೂಪಿತವಾದ. ಅಸುರ್ಯಲೋಕಸಾಧನತ್ವಂ–ದುಃಖಮಯವಾದ ಲೋಕಪ್ರಾಪ್ತಿಗೆ ಸಾಧನವಾಗುವ ರೀತಿಯನ್ನು. ಅನೂದ್ಯ–ಅನುವಾದಮಾಡಿ. ಅನ್ಯಥಾಜ್ಞಾನಾನಿಂದನಸ್ಯ– ಅಯಥಾರ್ಥ ಜ್ಞಾನದ ಅನಿಂದನೆಗೆ. ತತಃ-ಅನ್ಯಥಾಜ್ಞಾನದಿಂದಾಗುವುದಕ್ಕಿಂತಲೂ. ಅಧಿಕಾನರ್ಥಹೇತುತ್ವಂ–ಅಧಿಕವಾದ ಅನರ್ಥ ಕಾರಣತ್ವವನ್ನು. ಆದ್ಯೇನ- ಮೊದಲನೆಯದಾದ. ಮಂತ್ರೇಣ–ಮಂತ್ರದಿಂದ. ಉಚ್ಯತೆ-ಹೇಳಲ್ಪಡುತ್ತದೆ.

ಅತ್ರ–ಈ ಮಂತ್ರದಲ್ಲಿ. ವಿದ್ಯಾವಿರೋಧಿ ಮಿಥ್ಯಾಜ್ಞಾನವಾಚಿನಾ –ವಿದ್ಯೆಗೆ ವಿರುದ್ಧವಾದ ಮಿಥ್ಯಾಜ್ಞಾನವನ್ನು ಹೇಳುವ. ಅವಿದ್ಯಾಶಬ್ದೇನ – ಅವಿದ್ಯಾ ಎಂಬ ಪದದಿಂದ. ತದ್ವಿಷಯಃ – ಅದಕ್ಕೆ ವಿಷಯವಾದ. ಅನ್ಯಥಾಜ್ಞಾನಪ್ರಕಾರಃ–ಅಯಥಾರ್ಥಜ್ಞಾನದ ಪ್ರಕಾರವು. ಗ್ರಾಹ್ಯಃ–ಗ್ರಹಿಸಲ್ಪಡಬೇಕು. ತಥಾ ಚ – ಹೀಗೆ ಗ್ರಹೀತವಾದಮೇಲೆ. ಅವಿದ್ಯಾಂ ಎಂದರೆ ಯಥಾವದಾಕಾರಾತ್–ಹೇಗೆ ಯಥಾರ್ಥ ಜ್ಞಾನದ ಆಕಾರವೊ

ಅದರ ದೆಶೆಯಿಂದ. ಅನ್ಯಥಾಕಾರಂ– ಬೇರೆಯಾದ ಆಕಾರವನ್ನು. ಉಪಾಸತೆ-ಧ್ಯಾಯಂತಿ– ಧ್ಯಾನಮಾಡುವವರು. ಯೆ–ಯಾರೊ. ತೆ- ಅವರು. ಅಂಧಂತಮಃ–ನಿತ್ಯದುಃಖವುಳ್ಳ ಲೋಕವನ್ನು. ಪ್ರವಿಶಂತಿ- ಪ್ರವೇಶಿಸುತ್ತಾರೆ. ಇತಿ-ಹೀಗೆ. ಉಕ್ತಾನುವಾದಃ-ಹಿಂದೆ ನಿರೂಪಿತವಾದ ಸಿದ್ಧಾಂತದ ಪುನರ್ನಿರೂಪಣೆಯು.

ಯೆ–ಯಾರು. ವಿದ್ಯಾಯಾಂ ಉ–ತತ್ತ್ವಜ್ಞಾನ ಏವ–ತತ್ತ್ವಜ್ಞಾನದಲ್ಲಿಯೇ. ರತಾಃ-ಆಸಕ್ತರೋ. ಮಿಥ್ಯಾಜ್ಞಾನಾನಿಂದಕಾಃ - ಅಯಥಾರ್ಥ ಜ್ಞಾನವನ್ನು ನಿಂದಿಸದೆ ಇರುವರೋ. ಇತಿ–ಹೀಗೆ. ಏವಕಾರಾರ್ಥಃ– ಏವ ಶಬ್ದದ ಅರ್ಥ. ತೆ–ಅವರು. (ಅವರಿಗೆ) ತತಃ–ಮಿಥ್ಯಾಜ್ಞಾನಿಪ್ರಾಪ್ಯ ತಮಸಃ–ಅಯಥಾರ್ಥಜ್ಞಾನವುಳ್ಳವನಿಂದ ಹೊಂದಲ್ಪಡತಕ್ಕ ತಮಸ್ಸಿಗಿಂತಲೂ. ಅವಭೂಯಃ–ಅಧಿಕಂ–ಹೀನತೆಯಲ್ಲಿ ಹೆಚ್ಚಾದಂತಹ. ತಮಃ– ತಮಸ್ಸು. ಇವಶಬ್ದಸ್ಯ–ಇವ ಎಂಬ ಶಬ್ದಕ್ಕೆ. ವ್ಯಕ್ತಂ-ಸ್ಪಷ್ಟವಾದುದು. ಇತಿ–ಹೀಗೆ. ಅರ್ಥಃ-ಅರ್ಥವು. ಅಸಂಶಯಂ–ಸಂದೇಹವಿಲ್ಲ. ಇತಿ–ಹೀಗೆ. ಯಾವತ್–ಅಭಿಪ್ರಾಯವು. ಪ್ರವಿಶಂತಿ–ಪ್ರವೇಶಮಾಡುವರು. ಇತಿ–ಹೀಗೆ. ಅನ್ವಯಃ–ಸಂಬಂಧವು.

ಸೂಚನೆ

ಈ ಮಂತ್ರದಲ್ಲಿ ಅನ್ಯಥಾಜ್ಞಾನಕ್ಕೆ ಫಲವಾಗಿ ಯಾವ ತಮಸ್ಸೆಂಬ ಫಲವನ್ನು ಹೇಳಿರುತ್ತಾರೆಯೊ ಅದಕ್ಕಿಂತಲೂ ಹೀನತೆಯಲ್ಲಿ ಹೆಚ್ಚಾದ ಫಲವನ್ನು ಅನ್ಯಥಾ ಜ್ಞಾನದ ಅನಿಂದನೆಗೆ ಸಮರ್ಥಿಸುತ್ತಾರೆ. ನಿಂದನೆ ಎಂದರೆ ಮೊದಲನೆಯದಾಗಿ ದೋಷಗ್ರಹಣ. ಅನ್ಯಥಾಜ್ಞಾನವನ್ನು ನಿಂದಿಸದೇ ಇರುವವರನ್ನು ತ್ತ್ವತಜ್ಞಾನದಲ್ಲಿಯೇ ರತರಾದವರು ಎಂದು ಕರೆದಿರುತ್ತಾರೆ. ಇಂತಹವರಿಗೆ ಹೆಚ್ಚಾದ ತಮಸ್ಸೆಂಬುದನ್ನು ಅರ್ಥಮಾಡಿಕೊಳ್ಳಬೇಕಾದ ಆವಶ್ಯಕತೆ ಇರುವುದು. ಬೇರೆ ಸಂದರ್ಭದಲ್ಲಿ ಈ ಪದಗಳನ್ನು ಉಪಯೋಗಿಸಿದ್ದರೆ ಆ ಪ್ರಕರಣದಲ್ಲಿ ಮಾಡಿಕೊಳ್ಳಬಹುದಾದ ಅರ್ಥವನ್ನು 'ತತ್ತ್ವಜ್ಞಾನ ಏವ ರತಾಃ' ಎಂಬ ಶಬ್ದಕ್ಕೆ ಮಾಡಿಕೊಳ್ಳುವುದು ಪ್ರಕೃತ ವಿಚಾರವನ್ನು ಗ್ರಹಿಸಲು ಉಪಯೋಗಿಸದೆ ಇರಬಹುದು. ಈ ಸಂದರ್ಭದಲ್ಲಿ ವಿವಕ್ಷಿತ

ವಾದ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಬೇಕು. ಅನ್ಯಥಾಜ್ಞಾನಾನಿಂದನೆ ಎಂಬುದರ ಸಹಿತ ಈ ಪದಸಂದರ್ಭವನ್ನು ಅರ್ಥಮಾಡಿಕೊಳ್ಳುವುದು ವಿಹಿತವಾದುದು. ಅನ್ಯಥಾಜ್ಞಾನದಲ್ಲಿ ಈ ದೋಷವಿರುವುದು ಎಂದು ತಿಳಿಯದೆ ಒಂದು ಜ್ಞಾನವನ್ನು ತತ್ತ್ವಜ್ಞಾನ ಎಂದು ಭಾವಿಸಿ ಅದರಲ್ಲಿಯೇ ರತರಾಗಿರುವುದು ಎಂದು ಒಟ್ಟರ್ಥವಾಗುವುದು. ಈ ಒಟ್ಟು ಪದಸಮೂಹಕ್ಕೆ ಅನ್ಯಥಾಜ್ಞಾನ ಮತ್ತು ತತ್ತ್ವಜ್ಞಾನ ಈ ಎರಡಕ್ಕೆ ಭೇದವನ್ನು ನೋಡದಿರುವುದೇ ಈ ಜ್ಞಾನ. ಈ ಜ್ಞಾನವು ತತ್ತ್ವಜ್ಞಾನವಾಗಲಾರದು. ತತ್ತ್ವಜ್ಞಾನವೆಂಬ ಭ್ರಾಂತಿ ಇರುವುದು. ಈ ಭ್ರಾಂತಿಯಲ್ಲಿ ಅನ್ಯಥಾಜ್ಞಾನಕ್ಕಿಂತಲೂ ಮುಂದುವರಿದ ದೋಷವಿರುವುದು. ಅನ್ಯಥಾಜ್ಞಾನವೂ ಇದ್ದು ಇದರ ಜೊತೆಯಲ್ಲಿ ಅನ್ಯಥಾಜ್ಞಾನದ ಒಂದು ಆಕಾರವನ್ನು ತತ್ತ್ವಜ್ಞಾನವೆಂದು ಭಾವಿಸುವ ಭ್ರಾಂತಿಯೂ ಈ ಜ್ಞಾನದಲ್ಲಿ ಅಡಗಿರುವುದು. ಈ ಕಾರಣದಿಂದ ಅನ್ಯಥಾಜ್ಞಾನದಿಂದಾಗುವ ತಮಸ್ಸಿಗಿಂತಲೂ ಅನ್ಯಥಾಜ್ಞಾನಾನಿಂದನೆ ಎಂದರೆ ಕೇವಲ ತತ್ತ್ವಜ್ಞಾನರತಿ ಎಂಬುದಕ್ಕೆ ಅಧಿಕವಾದ ತಮಸ್ಸು ಫಲ ಎಂದು ಮಂತ್ರೋಕ್ತ ಸಿದ್ಧಾಂತ.

ಕೇವಲ ತತ್ತ್ವಜ್ಞಾನರತಿಯು ಜ್ಞಾನವಲ್ಲ ಎಂದು ಸೂಚಿತವಾಗಿದೆ. ಈ ರತಿಯು ಅಭಿಮಾನ ಮಾತ್ರ. ಅದೊಂದು ನಂಬಿಕೆ. ತತ್ತ್ವವಿದೆಂದು ನಂಬುವುದರ ದೋಷ ಇದು ಎಂದು ಮಂತ್ರಾಭಿಪ್ರಾಯ. ಇದನ್ನೇ ಮತದ ಆಗ್ರಹ ಎಂದೂ ಕರೆಯಬಹುದು. ಈ ಆಗ್ರಹವು ಒಂದು ರೋಗ. ಅದು ತಮಸ್ಸಿಗೆ ಸಾಧಕ. ಈ ದೋಷವುಳ್ಳವನು ಹೇಗೆ ತಾನು ತಿಳಿಯದ, ತಿಳಿಯಲು ಪ್ರಯತ್ನವೂ ಇಲ್ಲದ ಒಂದು ಕಲ್ಪನೆಯನ್ನು ಅಜ್ಞಾನ ಪರಂಪರೆಯಿಂದಲೋ, ಅಥವಾ ತನ್ನ ದೋಷದಿಂದಲೋ, ತತ್ತ್ವವೆಂಬ ಭ್ರಾಂತಿಯನ್ನು ಹೊಂದುವನೋ ಅದರಂತೆಯೇ ತನ್ನದೇ ಆದ ಒಂದು ಕಲ್ಪನೆಯನ್ನಾಗಲಿ ವ್ಯವಹಾರ ಪರಂಪರೆಯಿಂದ ಬಂದ ಒಂದು ಕಲ್ಪನೆಯನ್ನಾಗಲಿ ಅನ್ಯಥಾಜ್ಞಾನ ಎಂಬ ಭ್ರಾಂತಿಯನ್ನು ಹೊಂದಿ ತಾನು ತತ್ತ್ವಜ್ಞಾನಿಯಂತೆ ಭಾವಿಸಿ ಆ ಅನ್ಯಥಾಜ್ಞಾನವನ್ನು ನಿಂದಿಸುವನು ಮತ್ತು ಹೀಯಾಳಿಸುವನು. ಅವನಿಗೆ ಅನ್ಯಥಾಜ್ಞಾನದಲ್ಲಿ ದೋಷಗ್ರಹಣವೂ ಇಲ್ಲ; ತತ್ತ್ವಜ್ಞಾನದಲ್ಲಿನ ಗುಣಗ್ರಹಣವೂ ಇಲ್ಲ. ತನ್ನ ಕಲ್ಪನೆಗೆ ಅನುಗುಣವಾದ ಆಗ್ರಹ ಮಾತ್ರ

ಇರುವುದು. ಈ ವಿಚಾರದ ವ್ಯಾಪ್ತಿ ಬಹು ವಿಸ್ತಾರ. ಇದನ್ನು ಸಾಧುವಾದ ಅಧ್ಯಯನದಿಂದಲೇ ತಿಳಿಯಬೇಕಾದ ಅಗತ್ಯವಿರುವುದು.

ಶಾಸ್ತ್ರವು ಜ್ಞಾನಕ್ಕೆ ಸಾಧನವೇ ಹೊರತು ಮತದ ಆಗ್ರಹಕ್ಕಲ್ಲ. ಮತದ ಆಗ್ರಹ ಬಿಟ್ಟು ಶಾಸ್ತ್ರಾಧ್ಯಯನ ಮಾಡುವುದೊಂದೇ ಜ್ಞಾನದ ಸಾಧನ.

ಯಥಾವತ್ತಾದ ಜ್ಞಾನ ಎಂದರೆ ನಾನಾ ವಿಧವಾಗಿ ಅರ್ಥವನ್ನು ನಿರೂಪಿಸಲು ಶಕ್ಯವಾದರೂ ಅದರ ಮುಖ್ಯವಾದ ಅರ್ಥ ಶಾಸ್ತ್ರಾಧ್ಯಯನದಿಂದ ಹುಟ್ಟಿದ ಜ್ಞಾನ ಎಂದು. ಈ ಜ್ಞಾನಕ್ಕೆ ಮತ್ತೆ ಯಾವುದರಿಂದಲೂ ಬಾಧವಿಲ್ಲ. ಇದು ಸ್ವಯಂ ಶಾಸ್ತ್ರಾಧ್ಯಯನಮಾಡುವ ಅಧಿಕಾರಿಗೆ ಮಾತ್ರ ಹುಟ್ಟುವುದು. ಈ ಜ್ಞಾನದಲ್ಲಿ ತನ್ನ ಮಹಿಮೆಯಿಂದಲೇ ಅನ್ಯಥಾ ಜ್ಞಾನನಿಂದನೆಯು ಅಡಗಿರುವುದು. ಈ ಅನ್ಯಥಾ ಜ್ಞಾನವೇ ಪೂರ್ವಪಕ್ಷಕ್ಕೆ ಸಾಧಕವಾದ ಜ್ಞಾನ. ಪೂರ್ವಪಕ್ಷದಲ್ಲಿನ ದೋಷವನ್ನು ಯಥಾವತ್ ಆದ ಎಂದರೆ ಶಾಸ್ತ್ರಜನ್ಯವಾದ ಜ್ಞಾನವು ಹೊರಗೆಡುವುದರ ಮೂಲಕ ಅದಕ್ಕೆ ಕಾರಣವಾದ ಅನ್ಯಥಾ ಜ್ಞಾನದಲ್ಲಿನ ದೋಷವನ್ನು ವ್ಯಕ್ತಮಾಡುವುದು. ಈ ದೋಷಗ್ರಹಣಕ್ಕೆ ನಿಂದನೆ ಅಥವಾ ನಿರಾಕರಣೆ ಎಂದು ಹೆಸರು. ಈ ಶಬ್ದಗಳಿಗೆ ಅಸಾಧುತನಕ್ಕೆ ಕಾರಣವಾದ ಅರ್ಥಮಾಡುವುದು ಶಾಸ್ತ್ರವಿಹಿತವಲ್ಲ.

ಒಟ್ಟನಮೇಲೆ ಯಥಾವತ್ತಾದ ಜ್ಞಾನವೆಂದರೆ ಶಾಸ್ತ್ರಜನ್ಯವಾದ ಜ್ಞಾನವೆಂದು ಅರ್ಥಮಾಡಿಕೊಂಡರೆ ಅದೇ ವಿಷಯವನ್ನೇ ಉಪದೇಶ ಮೊದಲಾದ ಸಾಧನಗಳಿಂದ ತಿಳಿದರೆ ಆ ಜ್ಞಾನವು ಯಥಾರ್ಥಜ್ಞಾನದಿಂದ ಭಿನ್ನವಾದುದೆಂದು ಸ್ವಾಭಾವಿಕವಾಗಿ ಸಿದ್ಧಿಸುವುದು. ಯಥಾರ್ಥ ಜ್ಞಾನದಿಂದ ಭಿನ್ನವಾದುದೇ ಅಯಥಾರ್ಥಜ್ಞಾನ. ಇದರ ಫಲ ಮುಂತಾದ ವಿಚಾರವು ಹಿಂದೆಯೇ ನಿರೂಪಿತವಾಗಿದೆ.

ಈ ಎರಡು ಜ್ಞಾನಗಳನ್ನು ವಿವೇಚಿಸುವುದೇ ಶಾಸ್ತ್ರಾಧ್ಯಯನದ ಫಲ. ಇದೇ ಅನ್ಯಥಾಜ್ಞಾನದ ನಿಂದನೆ ಪೂರ್ವಕವಾದ ಯಥಾರ್ಥಜ್ಞಾನ.

ಫಲಿತ ಮಂತ್ರಾರ್ಥ

ಯಾರು ವಿದ್ಯಾವಿರೋಧಿಯಾದ ಮಿಥ್ಯಾಜ್ಞಾನವನ್ನು ಧ್ಯಾನಿಸು

ವರೋ ಅವರು ಅಂಧಂತಮಸ್ಸನ್ನು ಹೊಂದುವರು. ಯಾರು ತತ್ತ್ವಜ್ಞಾನದಲ್ಲಿಯೇ ರತರೊ ಎಂದರೆ ಮಿಥ್ಯಾಜ್ಞಾನವನ್ನು ನಿಂದಿಸುವುದಿಲ್ಲವೊ ಅವರಿಗೆ ಮಿಥ್ಯಾಜ್ಞಾನಿಯು ಹೊಂದುವ ತಮಸ್ಸಿಗಿಂತಲೂ ಹೆಚ್ಚು ತಮಸ್ಸು. ಇದರಲ್ಲಿ ಸಂದೇಹವಿಲ್ಲ. ॥ ೯ ॥

೧೦

ಸೂಚನೆ

ಒಂಭತ್ತು ಮತ್ತು ಹತ್ತನೇ ಮಂತ್ರಗಳಿಗೆ ಒಟ್ಟು ಭಾಷ್ಯವಿರುವುದು. ಈ ಕಾರಣ ಹತ್ತನೇ ಮಂತ್ರದ ಅರ್ಥಾನುವಾದ ಸಂದರ್ಭದಲ್ಲಿ ಈ ಎರಡು ಮಂತ್ರಗಳ ಭಾಷ್ಯವನ್ನು ಅಧ್ಯಯನ ಮಾಡಬೇಕು.

ಖಂಡಾರ್ಥ

ನ ಕೇವಲಂ ವಿಪಕ್ಷೇನ ಅರ್ಥಪ್ರಾಪ್ತೇರೇವ ಸಮ್ಯಜ್ಞಾನಾಸಮ್ಯಜ್ಞಾನನಿಂದನಯೋಃ ಕಾರ್ಯತ್ವಂ। ಕಿಂತು ಮೋಕ್ಷಫಲಸ್ಯ ಅಂಶತಃ ಉಭಯ ಸಾಧ್ಯತ್ವಾತ್ ಅಪಿ ದ್ವಯೋಃ ಕಾರ್ಯತ್ವಂ ಇತ್ಯಾಹ। ಅನ್ಯದೇವೇತಿ।

ವಿಪಕ್ಷೇನ – ವಿರುದ್ಧವಾದ ಎಂದರೆ ತಮಸ್ಸಿಗೆ ವಿರುದ್ಧವಾದ ಅರ್ಥಪ್ರಾಪ್ತೇಃ -ಪ್ರಯೋಜನ ಪ್ರಾಪ್ತಿಗೋಸ್ಕರ. ಸಮ್ಯಜ್ಞಾನಾಸಮ್ಯಜ್ಞಾನನಿಂದನಯೋಃ–ಯಥಾರ್ಥಜ್ಞಾನ ಮತ್ತು ಅಯಥಾರ್ಥಜ್ಞಾನದ ನಿಂದೆ ಇವುಗಳ. ಕಾರ್ಯತ್ವಂ – ಸಂಪಾದನೆಯು ಎಂದು. ಕೇವಲಂ ನ– ಇಷ್ಟು ಮಾತ್ರವೇ ಅಲ್ಲ. ಕಿಂತು–ಅದರ ಜೊತೆಯಲ್ಲಿಯೆ . ಮೋಕ್ಷಫಲಸ್ಯ–ಮೋಕ್ಷ ಎಂಬ ಫಲಕ್ಕೆ. ಅಂಶತಃ–ಭಾಗದೃಷ್ಟಿಯಿಂದ. ಉಭಯಸಾಧ್ಯತ್ವಾತ್ ಅಪಿ– ಹಿಂದೆ ಹೇಳಿದ ಎರಡರಿಂದಲೂ ಸಾಧ್ಯವಾದ ನಿಮಿತ್ತದಿಂದಲೂ. ದ್ವಯೋಃ–ಎರಡಕ್ಕೂ. ಕಾರ್ಯತ್ವಂ–ಸಂಪಾದಿಸಲ್ಪಡುವಿಕೆಯು ಇರುವುದು. ಇತಿ ಆಹ-ಹೀಗೆ ಹೇಳಿದನು. ಅನ್ಯತ್ ಏವ ಇತಿ – ಅನ್ಯತ್ ಏವ ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಮಂತ್ರ

ಅನ್ಯದೇವಾಹುಃ ವಿದ್ಯಯಾ ಅನ್ಯದಾಹುರವಿದ್ಯಯಾ।
ಇತಿ ಶುಶ್ರುಮ ಧೀರಾಣಾಂ ಯೆ ನಸ್ತದ್ವಿಚಚಕ್ಷಿರೆ ॥ ೧೦ ॥

ಖಂಡಾರ್ಥ

ವಿದ್ಯಯಾ ತತ್ತ್ವಜ್ಞಾನೇನ ಅನ್ಯದೇವ ಮೋಕ್ಷೈಕದೇಶರೂಪಂ ಫಲಂ ಪ್ರಾಪ್ಯಂ ಆಹುಃ ವೃದ್ಧಾಃ। ಅವಿದ್ಯಯಾ ಅನ್ಯಥಾಜ್ಞಾನನಿಂದಯಾ ಚೇತಿ ಯಾವತ್। ಅನ್ಯದೇವ ಮೋಕ್ಷೈಕದೇಶ ಲಕ್ಷಣಂ ಫಲಂ ಪ್ರಾಪ್ಯಂ ಆಹುರ್ವೃದ್ಧಾ ಇತಿ। ಇತ್ಯೇವಂ ವೃದ್ಧವಚನಸಂಮತಿಯುಕ್ತಂ ವಚನಂ ಧೀರಾಣಾಂ ಧೀಮತಾಂ ಸಕಾಶಾತ್ ಶುಶ್ರುಮ ಶ್ರುತವಂತಃ ಸ್ಮ। ಯೆ ಧೀರಾಃ ನೊ ಅಸ್ಮಾಕಂ ಮೋಕ್ಷಸಾಧನಂ ವಿಚಚಕ್ಷಿರೆ ವ್ಯಾಚಚಕ್ಷಿರೆ। ಅತೊ ದ್ವಯಮಪಿ ಆವಶ್ಯಕಮಿತಿ ಭಾವಃ ॥ ೧೦ ॥

ಮಂತ್ರ ಪದವಿಭಾಗ—ಅನ್ಯತ್, ಏವ, ಆಹುಃ, ವಿದ್ಯಯಾ. ಅನ್ಯತ್, ಆಹುಃ, ಅವಿದ್ಯಯಾ. ಇತಿ, ಶುಶ್ರುಮ, ಧೀರಾಣಾಂ, ಯೆ, ನಃ, ತತ್, ವಿಚಚಕ್ಷಿರೆ।

ಮಂತ್ರಸ್ಥ ಪದಗಳ ಅನ್ವಯವು ಸ್ಪಷ್ಟವಾಗಿರುವುದು.

ಖಂಡಾರ್ಥದಂತೆ ಈ ಪದಗಳ ಅರ್ಥ

ವಿದ್ಯಯಾ–ತತ್ತ್ವಜ್ಞಾನೇನ– ತತ್ತ್ವಜ್ಞಾನದಿಂದ. ಅನ್ಯತ್ ಏವ– ಮೋಕ್ಷೈಕದೇಶರೂಪಂ ಫಲಂ –ಮೋಕ್ಷದ ಒಂದು ಭಾಗವಾದ ಫಲವು. ಪ್ರಾಪ್ಯಂ–ಬರುವುದನ್ನಾಗಿ. ಆಹುಃ – ಹೇಳುವರು. ವೃದ್ಧಾಃ – ದೊಡ್ಡವರು. ಅವಿದ್ಯಯಾ – ಅನ್ಯಥಾ ಜ್ಞಾನ ನಿಂದಯಾ – ಅನ್ಯಥಾ ಜ್ಞಾನನಿಂದೆಯಿಂದ. ಚ – ಸಹ. ಇತಿ ಯಾವತ್ – ಹೀಗೆ ಅಭಿಪ್ರಾಯ. ಅನ್ಯತ್ ಏವ – ಮೋಕ್ಷೈಕದೇಶಲಕ್ಷಣಂ – ಮೋಕ್ಷದ ಒಂದು ಭಾಗವಾದ ಫಲವು. ಪ್ರಾಪ್ಯಂ–ಬರುವುದನ್ನಾಗಿ. ಆಹುಃ–ಹೇಳುವರು. ವೃದ್ಧಾಃ–ದೊಡ್ಡವರು. ಇತಿ–ಹೀಗೆ. ಇತ್ಯೇವಂ–ಈ ಪ್ರಕಾರವಾದ ವೃದ್ಧವಚನಸಮ್ಮತಿ ಯುಕ್ತಂ–ದೊಡ್ಡವರ ಹೇಳಿಕೆ ಎಂಬ ಸಮ್ಮತಿ ಸಹಿತವಾದ. ವಚನಂ–ವಾಕ್ಯವನ್ನು. ಧೀರಾಣಾಂ–ಧೀಮತಾಂ–ಜ್ಞಾನಿಗಳ. ಸಕಾಶಾತ್ –ದೆಶೆಯಿಂದ. ಶುಶ್ರುಮ–ಶ್ರುತವಂತಃ ಸ್ಮ–ಕೇಳಿರುತ್ತೇವೆ. ಯೆ–ಯಾವ. ಧೀರಾಃ - ಜ್ಞಾನಿಗಳು. ನಃ–ಅಸ್ಮಾಕಂ–ನಮಗೆ. ಮೋಕ್ಷಸಾಧನಂ–ಮೋಕ್ಷ

ಸಾಧನವನ್ನು. ವಿಚಚಕ್ಷಿರೆ–ವ್ಯಾಚಚಕ್ಷಿರೆ-ಸಿದ್ಧಾಂತ ಮಾಡಿಕೊಟ್ಟಿರುತ್ತಾರೆಯೋ. (ಅಂತಹವರ ದೆಶೆಯಿಂದ) ಅತಃ–ಈ ಕಾರಣದ ದೆಶೆಯಿಂದ. ದ್ವಯಂ ಅಪಿ-(ಸಮ್ಯಜ್ಞಾನಮತ್ತು ಅನ್ಯಥಾಜ್ಞಾನನಿಂದೆ) ಈ ಎರಡೂ. ಆವಶ್ಯಕಂ-ಅಗತ್ಯವಾದುದು. ಇತಿ–ಹೀಗೆ. ಭಾವಃ-ಅಭಿಪ್ರಾಯವು.

ಸೂಚನೆ

ಆಹುಃ, ಧೀರಾಣಾಂ (ಸಕಾಶಾತ್) ಶುಶ್ರುಮಃ, ಯೆ, ನಃ ತತ್, ವಿಚಚಕ್ಷಿರೆ, ಎಂಬೀ ಪದಗಳಿಂದ ವೇದಪುರುಷನು ವೇದವಾಕ್ಯಕ್ಕೆ ಅಪೌರುಷೇಯತ್ವವನ್ನು ಸ್ಥಾಪಿಸುತ್ತಾನೆ. 'ಇತಿ ಶುಶ್ರುಮ' ಎಂಬಲ್ಲಿ 'ಇತಿ' ಎಂಬ ಪದವು ಸಮಾನಾನುಪೂರ್ವಿಕವಾದ ವಚನವನ್ನು ಬೋಧಿಸುವುದು. ಜ್ಞಾನಿಗಳಿಂದ ಅನಾದಿಯಿಂದಲೂ ಈ ವಚನವು ಅವಿಚ್ಛಿನ್ನವಾಗಿ ತತ್ತ್ವಜ್ಞಾನವನ್ನು ಹುಟ್ಟಿಸುವುದಾಗಿ ಪ್ರವೃತ್ತವಾಗುತ್ತಿರುವುದೇ ಅದು ಅಪೌರುಷೇಯ ಎಂಬಲ್ಲಿ ಸಾಕ್ಷಿ.

ಭಾಷ್ಯ

ಒಂಭತ್ತು ಮತ್ತು ಹತ್ತು ಈ ಎರಡು ಮಂತ್ರಗಳಿಗೂ ಅನ್ವಯಿಸುವ ಭಾಷ್ಯವು ಈ ರೀತಿಯಲ್ಲಿರುವುದು.

ಭಾಷ್ಯ—ಅನ್ಯಥೋಪಾಸಕಾ ಯೆ ತು ತಮೋಂಧಂ ಯಾಂತ್ಯಸಂಶಯಂ ।
ತತೊ ಅಧಿಕಮಿವ ವ್ಯಕ್ತಂ ಯಾಂತಿ ತೇಷಾಮನಿಂದಕಾಃ ।

ಅನ್ಯಥೋಪಾಸಕಾಃ – ತತ್ತ್ವವಿರುದ್ಧವಾದ ಉಪಾಸನೆ ಮಾಡುವವರು ಎಂದರೆ ಅನ್ಯಥಾಜ್ಞಾನವುಳ್ಳವರು. ಯೆ ತು–ಯಾರಿರುವರೊ. (ಅವರು) ತಮಃ ಅಂಧಂ–ಅಂಧಂತಮಸ್ಸನ್ನು. ಯಾಂತಿ–ಪ್ರವೇಶಿಸುತ್ತಾರೆ. ಅಸಂಶಯಂ–ಸಂದೇಹವಿಲ್ಲ. ತತಃ–ಆ (ತಮಸ್ಸಿನ) ದೆಶೆಯಿಂದ. ಅಧಿಕಂ ಇವ–ಹೆಚ್ಚಾಗಿಯೆ. ವ್ಯಕ್ತಂ–ಕಂಗೊಳಿಸುವ (ತಮಸ್ಸನ್ನು) ಯಾಂತಿ–ಪ್ರವೇಶಿಸುತ್ತಾರೆ. (ಯಾರು ?) ತೇಷಾಂ–ಅನ್ಯಥಾ ಜ್ಞಾನಿಗಳ. ಅನಿಂದಕಾಃ–ನಿಂದನೆ ಮಾಡದಿರುವವರು.

ಭಾಷ್ಯಕಾರರು ಜ್ಞಾನಿಯ ಕರ್ತವ್ಯವನ್ನು ವಿಧಿಸುತ್ತಾರೆ.

ಭಾಷ್ಯ—ತಸ್ಮಾದ್ಯಥಾಸ್ವರೂಪಂ ತು ನಾರಾಯಣಮನಾಮಯಂ ।
ಅಯಥಾರ್ಥಸ್ಯ ನಿಂದಾಂ ಚ

ತಸ್ಮಾತ್–ಈ ಕಾರಣದ ದೆಶೆಯಿಂದ. ಯಥಾಸ್ವರೂಪಂ ತು–ಯಥಾರ್ಥಸ್ವರೂಪವಿದೆಂಬುದಾಗಿಯೆ. ನಾರಾಯಣಂ–ಗುಣಪೂರ್ಣನಾದ ಪರಮಾತ್ಮನನ್ನು. ಅನಾಮಯಂ–ನಿರ್ದೋಷನನ್ನಾಗಿ. (ತಿಳಿದು) ಅಯಥಾರ್ಥಸ್ಯ–ಅನ್ಯಥಾಭಾವದ. ನಿಂದಾಂ ಚ–ನಿಂದೆಯನ್ನುಕೂಡ ಮಾಡಬೇಕು.

ಸೂಚನೆ

ಮೋಕ್ಷಸಾಧನವನ್ನು ನಿರೂಪಿಸುವ ಈ ಮಂತ್ರಗಳಲ್ಲಿಯೇ ಯಥಾರ್ಥಜ್ಞಾನ ಮತ್ತು ಅನ್ಯಥಾಜ್ಞಾನದ ನಿಂದೆ ಇವೆರಡೂ ಇರುವುದನ್ನು ಅಧಿಕಾರಿಯು ಪರಿಶೀಲಿಸಬೇಕು.

ಅಯಥಾರ್ಥಜ್ಞಾನನಿಂದೆಯೇ ಅಯಥಾರ್ಥಜ್ಞಾನವುಳ್ಳವರ ನಿಂದೆಯೂ ಆಗಿರುತ್ತದೆ.

ಫಲಿತ ಮಂತ್ರಾರ್ಥ

ವೃದ್ಧರು ತತ್ತ್ವಜ್ಞಾನದಿಂದ ಮೋಕ್ಷದ ಒಂದು ಭಾಗವೆನ್ನುವರು. ಅನ್ಯಥಾಜ್ಞಾನದ ನಿಂದನೆಯಿಂದ ಮೋಕ್ಷದ ಮತ್ತೊಂದು ಭಾಗ ಫಲವೆನ್ನುವರು. ನಮಗೆ ಯಾರು ಮೋಕ್ಷಸಾಧನವನ್ನು ತಿಳಿಸಿದರೋ ಅವರಿಂದ ನಾವು ಹೀಗೆ ಕೇಳಿರುತ್ತೇವೆ. ॥ ೧೦ ॥

೧೧

ಖಂಡಾರ್ಥವು ಹನ್ನೊಂದನೆಯ ಮಂತ್ರದ ಪ್ರವೃತ್ತಿಯ ನಿಮಿತ್ತವನ್ನು ಈರೀತಿ ನಿರೂಪಿಸುವುದು.

ಏತನ್ಮಂತ್ರಾರ್ಥಮೇವ ವ್ಯಕ್ತಮಾಹ ।(ವಿದ್ಯಾಂ ಚ ಇತಿ)।

ಏತನ್ಮಂತ್ರಾರ್ಥಂ ಏವ-ಈ ಹಿಂದಿನ ಎರಡು ಮಂತ್ರಗಳ ಅರ್ಥವನ್ನೇ; ವ್ಯಕ್ತಂ–ಸ್ಪಷ್ಟವಾಗಿ. ಆಹ-ಹೇಳಿದನು. ವಿದ್ಯಾಂ ಚ ಇತಿ-'ವಿದ್ಯಾಂ ಚ' ಎಂದು ಆರಂಭಿಸುವ ಮಂತ್ರದಿಂದ.

ಮಂತ್ರ

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತ ಮಶ್ನುತೆ
॥ ೧೧ ॥

ಖಂಡಾರ್ಥ

ವಿದ್ಯಾಂ ವಿಷ್ಣು ಯಾಥಾತ್ಮ್ಯಜ್ಞಾನಂ । ಅವಿದ್ಯಾಂ ಮಿಥ್ಯಾಜ್ಞಾನ ನಿಂದನಂ । ಚ ಶಬ್ದಾವಿತರೇತರಯೋಗೇ । ಸಹ ಏಕಪುರುಷಾರ್ಥಹೇತುತ್ವೇನ ತದುಭಯಂ ಯೊ ವೇದ ಸ ಇತಿ ಶೇಷಃ । ಅವಿದ್ಯಯಾ ಅನ್ಯಥಾಜ್ಞಾನನಿಂದಯಾ ಮೃತ್ಯುಂ ದುಃಖಾಜ್ಞಾನಾದ್ಯನಿಷ್ಟಂ ತೀರ್ತ್ವಾ ವಿದ್ಯಯಾ ವಿಷ್ಣು ಯಾಥಾತ್ಮ್ಯಜ್ಞಾನೇನ ಅಮೃತಂ ಆನಂದಾನುಭವ ಲಕ್ಷಣಂ ಮೋಕ್ಷೈಕದೇಶಂ ಅಶ್ನುತೆ ಪ್ರಾಪ್ನೋತಿ । ಅನಿಷ್ಟನಿವೃತ್ತಿಃ ಮಿಥ್ಯಾಜ್ಞಾನ ನಿಂದನ ಸಾಮರ್ಥ್ಯಲಭ್ಯತ್ವಾತ್ । ಆನಂದಾನುಭವಸ್ಯ ಚ ತತ್ತ್ವಜ್ಞಾನ ಸಾಮರ್ಥ್ಯಲಭ್ಯತ್ವಾತ್ ದಲದ್ವಯಯುಕ್ತ ಮೋಕ್ಷಪ್ರಾಪ್ತಯೆ ದ್ವಯಮಪಿ ಆವಶ್ಯಕಮೇವೇತ್ಯುಕ್ತಂ ಭವತಿ ॥

ಮಂತ್ರಪದವಿಭಾಗ—ವಿದ್ಯಾಂ, ಚ, ಅವಿದ್ಯಾಂ, ಚ, ಯಃ, ತತ್, ವೇದ, ಉಭಯಗ್ಂ, ಸಹ, ಅವಿದ್ಯಯಾ, ಮೃತ್ಯುಂ, ತೀರ್ತ್ವಾ, ವಿದ್ಯಯಾ, ಅಮೃತಂ, ಅಶ್ನುತೆ ।

ಮಂತ್ರಸ್ಥ ಪದಗಳ ಅನ್ವಯ

ವಿದ್ಯಾಂ, ಚ, ಅವಿದ್ಯಾಂ, ಚ, ಸಹ, ಉಭಯಂ, ಯಃ, ವೇದ. (ಸಃ) ಅವಿದ್ಯಯಾ, ಮೃತ್ಯುಂ, ತೀರ್ತ್ವಾ, ವಿದ್ಯಯಾ, ಅಮೃತಂ, ಅಶ್ನುತೆ॥

ಖಂಡಾರ್ಥದಂತೆ ಪದಗಳ ಅರ್ಥ

ವಿದ್ಯಾಂ-ವಿಷ್ಣು ಯಾಥಾತ್ಮ್ಯಜ್ಞಾನಂ-ವಿಷ್ಣುವಿನ ಯಥಾರ್ಥವಾದ ಜ್ಞಾನವನ್ನು. ಅವಿದ್ಯಾಂ—ಮಿಥ್ಯಾಜ್ಞಾನನಿಂದನಂ-ಅನ್ಯಥಾಜ್ಞಾನದ ನಿಂದನೆಯನ್ನು. ಚ ಶಬ್ದೌ-ಎರಡು ಚ ಶಬ್ದಗಳು. ಇತರೇತರಯೋಗೇ—ಒಂದಕ್ಕೆ ಮತ್ತೊಂದರ ಎಂದರೆ ವಿದ್ಯೆಗೆ ಮಿಥ್ಯಾಜ್ಞಾನ ನಿಂದನೆಯ ಮತ್ತು ಮಿಥ್ಯಾಜ್ಞಾನನಿಂದನೆಗೆ ವಿದ್ಯೆಯ ಸಂಬಂಧವನ್ನು ಕೊಡುವ ಅರ್ಥದಲ್ಲಿ (ಪ್ರವೃತ್ತವಾಗಿರುವುವು.) ಸಹ— ಏಕಪುರುಷಾರ್ಥಹೇತುತ್ವೇನ – ಒಂದೇ ಮೋಕ್ಷಕ್ಕೆ ಕಾರಣ ಎಂಬ ರೂಪದಲ್ಲಿ. ಉಭಯಂ—ಎರಡನ್ನು. ಯಃ-ಯಾವನು. ವೇದ-ತಿಳಿಯುತ್ತಾನೆಯೋ. ಸ ಇತಿ ಶೇಷಃ-ಸಃ ಎಂಬ ಪದವನ್ನು ಅನ್ವಯಿಸಿಕೊಳ್ಳಬೇಕು. ಅವಿದ್ಯಯಾ—ಅನ್ಯಥಾಜ್ಞಾನನಿಂದಯಾ— ಮಿಥ್ಯಾಜ್ಞಾನದ ನಿಂದೆಯಿಂದ. ಮೃತ್ಯುಂ-ದುಃಖಾಜ್ಞಾನಾದ್ಯನಿಷ್ಟಂ-ದುಃಖ, ಅಜ್ಞಾನ

ಮುಂತಾದ ಅನಿಷ್ಟವನ್ನು. ತೀರ್ತ್ವಾ-ದಾಟಿ. ವಿದ್ಯಯಾ – ವಿಷ್ಣು ಯಾಥಾತ್ಮ್ಯ ಜ್ಞಾನೇನ-ವಿಷ್ಣುವಿನ ಯಥಾರ್ಥವಾದ ಜ್ಞಾನದಿಂದ ಎಂದರೆ ವಿಷ್ಣುವನ್ನು ಯಥಾವತ್ತಾಗಿ ತಿಳಿಯುವುದರಿಂದ. ಅಮೃತಂ-ಆನಂದಾನುಭವಲಕ್ಷಣಂ-ಆನಂದದ ಅನುಭವವೆಂಬ ಸ್ವರೂಪವುಳ್ಳ. ಮೋಕ್ಷೈಕದೇಶಂ-(ಉಳಿದ) ಮೋಕ್ಷದ ಮತ್ತೊಂದು ಭಾಗವನ್ನು. ಅಶ್ನುತೆ-ಪ್ರಾಪ್ನೋತಿ – ಹೊಂದುತ್ತಾನೆ.

ಅನಿಷ್ಟನಿವೃತ್ತಿಃ—ಅನಿಷ್ಟದ ನಿವೃತ್ತಿಗೆ. ಮಿಥ್ಯಾಜ್ಞಾನನಿಂದನ ಸಾಮರ್ಥ್ಯಲಭ್ಯತ್ವಾತ್—ಮಿಥ್ಯಾಜ್ಞಾನದ ನಿಂದನೆಯ ಸಾಮರ್ಥ್ಯದಿಂದ ಲಬ್ಧವಾಗುವ ಸ್ವಭಾವವಿರುವುದರಿಂದ. ಆನಂದಾನುಭವಸ್ಯಚ—ಆನಂದದ ಅನುಭವಕ್ಕಾದರೊ. ತತ್ತ್ವಜ್ಞಾನಸಾಮರ್ಥ್ಯಲಭ್ಯತ್ವಾತ್—ತತ್ತ್ವಜ್ಞಾನದ ಸಾಮರ್ಥ್ಯದಿಂದ ಲಭ್ಯವಾಗುವ ಸ್ವಭಾವವಿರುವುದರಿಂದ. ದಲದ್ವಯಯುಕ್ತ ಮೋಕ್ಷಪ್ರಾಪ್ತಯೆ—ಎರಡು ದಳಗಳುಳ್ಳ ಮೋಕ್ಷದ ಪ್ರಾಪ್ತಿಗೋಸ್ಕರ. ದ್ವಯಂ ಅಪಿ – ಎರಡೂ ಕೂಡ. ಆವಶ್ಯಕಮೇವೇತಿ – ಆವಶ್ಯಕವಾದುವು ಎಂದೇ. ಉಕ್ತಂ-ಸಿದ್ಧಾಂತಿತವಾದುದು. ಭವತಿ—ಆಗುತ್ತದೆ.

ಸೂಚನೆ

ಮೋಕ್ಷ ಎಂಬ ಫಲದಲ್ಲಿ ದುಃಖ ಮೊದಲಾದ ಅನಿಷ್ಟನಿವೃತ್ತಿ ಮತ್ತು ಆನಂದಾನುಭವವೆಂದು ಎರಡು ದಳಗಳಿರುವುವು. ಇದಕ್ಕನುಗುಣವಾಗಿ ಮೋಕ್ಷಸಾಧನದಲ್ಲಿಯೂ ಅನ್ಯಥಾಜ್ಞಾನನಿಂದನೆ ಮತ್ತು ತತ್ತ್ವಜ್ಞಾನ ಇವೆರಡು ದಳಗಳಿರುವುವು. ಅನ್ಯಥಾಜ್ಞಾನನಿಂದನೆಯಿಂದ ಅನ್ಯಥಾಜ್ಞಾನದಿಂದ ಹುಟ್ಟಿದ ಮೋಹ, ಶೋಕಗಳು ತೊಲಗುವುವು. ಇದೇ ಅನಿಷ್ಟನಿವೃತ್ತಿ. ತತ್ತ್ವಜ್ಞಾನ ಎಂದರೆ ಪರಮಾತ್ಮಜ್ಞಾನದಿಂದ ಪರಮಾತ್ಮಸರೂಪತ್ವವು ಅಧಿಕಾರಿಗೆ ಉಂಟಾಗಿ ಆನಂದಾನುಭವವುಂಟಾಗುವುದು. ಮೋಕ್ಷ ಎಂಬ ಭಾವವನ್ನು ಅರ್ಥಮಾಡಿಕೊಳ್ಳುವಾಗ ಈ ಅಂಶಗಳನ್ನು ಮರೆಯಬಾರದು.

ಈ ಸಂದರ್ಭದಲ್ಲಿ ಖಂಡಾರ್ಥದ 'ಚಶಬ್ದೌ ಇತರೇತರಯೋಗೆ' ಎಂಬ ಪದಗಳ ಭಾವವನ್ನು ಧ್ಯಾನಿಸಬೇಕು. ಯಥಾರ್ಥಜ್ಞಾನ ಮತ್ತು ಅಯಥಾರ್ಥಜ್ಞಾನನಿಂದನೆ ಇವುಗಳ ಪರಸ್ಪರ ಸಂಬಂಧ ಈ ಪದಗಳ ಅರ್ಥ. ಇದಕ್ಕೆ ಸಂಗತವಾಗಿ ಇದು ಯಥಾರ್ಥಜ್ಞಾನ ಎಂದು ನಾವು ತಿಳಿಯುವಾಗ

ಈ ಜ್ಞಾನದಲ್ಲಿ ಅಯಥಾರ್ಥಜ್ಞಾನನಿಂದನೆ ವ್ಯಕ್ತವಾದ ರೂಪದಲ್ಲಿ ಅಡಗಿರಬೇಕು. ಅದರಂತೆಯೇ ಇದು ಅಯಥಾರ್ಥಜ್ಞಾನದ ನಿಂದನೆ ಎಂಬಲ್ಲಿ ಯಥಾರ್ಥಜ್ಞಾನವಿದೆಂದು ವ್ಯಕ್ತವಾದ ರೂಪದಲ್ಲಿ ಅಡಗಿರಬೇಕು. ಇದೇ ಉಪನಿಷತ್ತಿಗೆ ಸಮ್ಮತವಾದ ಜ್ಞಾನ. ಜ್ಞಾನದಲ್ಲಿ ಮೇಲೆ ಹೇಳಿದ ಯಾವ ಅಂಶಕ್ಕೆ ಲೋಪಬಂದರೂ ಅದು ಸದೋಷ, ಉಪನಿಷತ್ತಿಗೆ ವಿರುದ್ಧ.

ಅನ್ಯಥಾಜ್ಞಾನವೆಂದರೆ ಉಪನಿಷದಭಿಪ್ರೇತವಾದ ಭಾವ ಯಾವುದೆಂದು ಚಿಂತಿಸೋಣ. ಸರ್ವವೂ ಈಶಾವಾಸ್ಯವೆಂದೂ ಈಶನು ಸ್ವತಂತ್ರನೆಂದೂ ಜಗತ್ತು ತತ್ತಂತ್ರವೆಂದೂ ಉಪನಿಷತ್ತಿನ ಸಿದ್ಧಾಂತ. ಇದಕ್ಕೆ ಯಾವ ಅಂಶದಲ್ಲಿ ವಿರೋಧಬಂದರೂ ಅದು ಅನ್ಯಥಾಜ್ಞಾನವಾಯಿತು. ಈಶಾವಾಸ್ಯವೆಂದರೆ ಈಶನು ಸೃಷ್ಟಿಸಿದುದಲ್ಲ; ವಸ್ತುವಿನಲ್ಲಿ ಈಶನು ವಾಸಿಸುವನು ಎಂದು ಅರ್ಥ ಎಂದು ತೋರಬಹುದು. ಈಶನು ಸರ್ವಕರ್ತೃ ಎಂಬುದಕ್ಕೆ ಇದು ವಿರುದ್ಧವಾದುದರಿಂದ ಇದು ಅನ್ಯಥಾಜ್ಞಾನ. ಈಶನಂತೆ ಜಗತ್ತು ಈಶನಿಂದ ನಿರ್ಮಿತವಲ್ಲದ ಸ್ವರೂಪ ಒಂದನ್ನು ಹೊಂದಿರುವುದು; ಈ ಸ್ವರೂಪವು ಅನಾದಿ ಎಂದು ತೋರಬಹುದು. ಇದು ಈಶನು ಸ್ವತಂತ್ರ ಎಂಬುದಕ್ಕೆ ಲೋಪವುಂಟುಮಾಡುವುದರಿಂದ ಅನ್ಯಥಾಜ್ಞಾನ. ಜೀವನ ಸ್ವರೂಪವು ಈಶ್ವರನ ಅಪೇಕ್ಷೆಯಿಲ್ಲದೆ ಅನಾದಿಯಾಗಿ ಇರುವುದಾದರೆ ಅದರ ಮೇಲೆ ಈಶಸ್ವಾತಂತ್ರ್ಯ ಬರುವುದಿಲ್ಲವಾದುದರಿಂದ ಈಶ್ವರ ಸೃಷ್ಟವಲ್ಲದ ಸ್ವರೂಪವನ್ನು ವಾದಿಸುವ ಸಂದರ್ಭದಲ್ಲಿ ಈಶ್ವರನಿರಾಕರಣೆಯು ಪ್ರಾಪ್ತವಾಯಿತು. ಈಶ್ವರನಿಂದ ಸೃಷ್ಟವಲ್ಲದ ಕೆಲವು ಭಾಗಗಳು ಎಂದರೆ ಅನಾದಿವಸ್ತುಗಳನ್ನೊಳಗೊಂಡ ಜಗತ್ತು ಪರತಂತ್ರವಾಗುವುದು ಹೇಗೆ? ಇಂತಹ ಜಗತ್ತನ್ನೊಪ್ಪುವುದು ಎಂದರೆ ಜಗತ್ತನ್ನು ಈರೀತಿ ನಿರ್ವಚನಮಾಡುವುದು ಈಶಸ್ವಾತಂತ್ರ್ಯಕ್ಕೆ ಲೋಪ ತರುವುದರ ಮೂಲಕ ಅನ್ಯಥಾಜ್ಞಾನವಾಗುವುದು. ಜಗತ್ತಿನಲ್ಲಿ ಚೇತನರಿಗೆ ಕರ್ತೃತ್ವವನ್ನು ನಮ್ಮ ಪ್ರತ್ಯಕ್ಷವೇ ಪ್ರಮಾಣವೆಂದು ತಿಳಿದು ವಾದಿಸುವುದಾದರೆ ಈಶನ ಸರ್ವ ಕರ್ತೃತ್ವಕ್ಕೆ ಅಷ್ಟು ಮಾತ್ರವಾದರೂ ಲೋಪ ಬಂದು ಈಶ್ವರ ನಿರಾಕರಣವಾಗುವುದು. ಹೀಗೆ ಇದೂ ಅನ್ಯಥಾ ಜ್ಞಾನ. ಒಂದು ವೇಳೆ ಈ ವಿರುದ್ಧವಾದ ಪ್ರಮೇಯವನ್ನು ಒಪ್ಪಿದರೂ ಇಂತಹ ಪ್ರಪಂಚ ಯಾರಿಂದಾಯಿತು? ಎಂಬ ಪ್ರಶ್ನೆ ಉತ್ತರವಿಲ್ಲದೆ

ಹಾಗೆಯೇ ಉಳಿದಿರುವುದು. ಈಶ್ವರನಾದರೂ ಕೆಲವು ವಿಷಯದಲ್ಲಿ ಸ್ವತಂತ್ರನಲ್ಲ ಎಂದು ಹೇಳಿದರೆ ಅಂತಹ ಈಶ್ವರನನ್ನು ಮಾಡಿದವನಾರು? ಎಂಬ ಪ್ರಶ್ನೆಯು ಉಳಿದೇ ಇರುವುದು. ಅದು ಸ್ವಭಾವ ಎಂದು ಹೇಳಿದರೆ ಚಾರ್ವಾಕವಾದವಾಯಿತು. ಹೀಗೆ ಹೇಳುವವರು ಎಲ್ಲ ವಾದವನ್ನು ಸ್ವಭಾವ ಎಂದು ಸಮಾಧಾನಮಾಡಿಕೊಂಡು ಒಪ್ಪಬೇಕಾಯಿತು. ಉಪನಿಷತ್ತನ್ನು ಅಧ್ಯಯನಮಾಡದೆ ಜಗತ್ತು ಈಶಾವಾಸ್ಯ ಎಂಬೀ ಮುಂತಾಗಿ ಉಪದೇಶ ಮೊದಲಾದುವುಗಳಿಂದ ತಿಳಿಯುವುದೇ ಮಿಥ್ಯಾಜ್ಞಾನ. ಇದರಲ್ಲಿ ಸಂದೇಹ ಪರಿಹಾರವೇ ಇಲ್ಲ. ಅಧಿಕಾರಿಯು ಅಧ್ಯಯನದಿಂದ ಅನ್ಯಥಾಜ್ಞಾನಸ್ವರೂಪವನ್ನು ತಿಳಿದು ಜ್ಞಾನಕ್ಕೆ ಅರ್ಹನಾಗುವನು.

ಭಾಷ್ಯ

ಯೆ ವಿದುಃ ಸಹ ಸಜ್ಜನಾಃ ।
ತೆ ನಿಂದಯಾ ಅಯಥಾರ್ಥಸ್ಯ ದುಃಖಾಜ್ಞಾನಾದಿರೂಪಿಣಃ ।
ದುಃಖಾಜ್ಞಾನಾದಿಸಂಕೀರ್ಣಾಃ ಸುಖಜ್ಞಾನಾದಿರೂಪಿಣಃ ।
ಯಥಾರ್ಥಸ್ಯ ಪರಿಜ್ಞಾನಾತ್ ಸುಖಜ್ಞಾನಾದಿರೂಪತಾಂ ।
ಯಾಂತಿ ॥ ೧೧ ॥

ಯೆ–ಯಾರು. ವಿದುಃ–ತಿಳಿಯುವರೊ. ಸಹ–ಜೊತೆಯಲ್ಲಿಯೆ. (ತೆ–ಅವರು) ಸಜ್ಜನಾಃ–ಸಾಧುಜನರು. ದುಃಖಾಜ್ಞಾನಾದಿರೂಪಿಣಃ–ದುಃಖ, ಅಜ್ಞಾನ ಮುಂತಾದ ಸ್ವರೂಪವುಳ್ಳ. ತೆ–ಅವರು. ಅಯಥಾರ್ಥಸ್ಯ-ಅಯಥಾರ್ಥಜ್ಞಾನದ. ನಿಂದಯಾ–ನಿಂದೆಯಿಂದ. ದುಃಖಾಜ್ಞಾನಾದಿ ಸಂಕೀರ್ಣಾಃ–ದುಃಖ, ಅಜ್ಞಾನ ಮುಂತಾದುದನ್ನು ದಾಟಿದವರಾಗಿ. ಸುಖಜ್ಞಾನಾದಿರೂಪಿಣಃ–ಸುಖ, ಜ್ಞಾನ ಮುಂತಾದುದರ ಸ್ವರೂಪವುಳ್ಳವರಾಗಿ. ಯಥಾರ್ಥಸ್ಯ–(ವಿಷ್ಣುವಿನ) ಯಥಾರ್ಥಸ್ವರೂಪದ. ಪರಿಜ್ಞಾನಾತ್–ತಿಳಿಯೋಣದರಿಂದ. ಸುಖಜ್ಞಾನಾದಿರೂಪತಾಂ–ಸುಖ, ಜ್ಞಾನ ಮುಂತಾದುದರ ರೂಪವನ್ನೇ. ಯಾಂತಿ–ಹೊಂದುತ್ತಾರೆ.

ಸೂಚನೆ

ಅಯಥಾರ್ಥ ನಿಂದನೆಗಿಂತ ಮೊದಲು 'ತೆ' ಎಂಬ ಶಬ್ದದಿಂದ ಪ್ರಕೃತರಾದ ಜನರು ದುಃಖ ಅಜ್ಞಾನ ಮುಂತಾದ ಸ್ವರೂಪವುಳ್ಳವರು.

ಇವರು ಅನ್ಯಥಾಜ್ಞಾನದ ನಿಂದನೆಯಿಂದ ದುಃಖ ಮೊದಲಾದುದನ್ನು ದಾಟಿ ಸುಖಜ್ಞಾನ ಮುಂತಾದುದರ ಸ್ವಭಾವವನ್ನು ಹೊಂದುವರು. ಅವರೇ ಯಥಾರ್ಥಜ್ಞಾನವನ್ನು ಪಡೆದು ಸುಖಜ್ಞಾನ ಮುಂತಾದ ರೂಪವನ್ನೇ ಹೊಂದುವರು. ಇದೇ ಪರಮಾತ್ಮನ ಸರೂಪವನ್ನು ಹೊಂದುವುದೆಂದರೆ. ಹೀಗೆ ತಿಳಿದವರೇ ಸಜ್ಜನರು ಎಂಬ ಭಾಷ್ಯದ ಒಟ್ಟು ಅಭಿಪ್ರಾಯವನ್ನು ಶಾಸ್ತ್ರಾಭ್ಯಾಸಮಾಡುವವರು ಮರೆಯಬಾರದು.

ಮೇಲೆ ಕಂಡ ಒಂದೊಂದು ಭಾವವನ್ನು ಹೊಂದುವುದೇ ಪರಮಾತ್ಮನ ಒಂದು ಸೃಷ್ಟಿ. ದುರ್ಜನನು ಸಜ್ಜನನಾಗುವುದು; ದುಃಖ ಅಜ್ಞಾನ ಮುಂತಾದ ರೂಪವುಳ್ಳವನು ಮಿಥ್ಯಾಜ್ಞಾನನಿಂದನೆಯಿಂದ ಅದನ್ನು ದಾಟುವುದು; ಸುಖ, ಜ್ಞಾನ ಮುಂತಾದ ಸರೂಪವುಳ್ಳವನಾಗುವುದು; ಅವನೇ ಯಥಾರ್ಥಜ್ಞಾನವನ್ನು ಹೊಂದಿ, ಸುಖ ಜ್ಞಾನ ಮುಂತಾದ ರೂಪದಲ್ಲಿ ಪರಮಾತ್ಮಸರೂಪನಾಗುವುದು; ಇವೆಲ್ಲ ಪರಮಾತ್ಮನ ಸೃಷ್ಟಿ ಮಹಿಮೆ. ಜಗತ್ತಿನ ಜೀವರಿಗೇ ಇವೆಲ್ಲ ಯಾವ ಸಾಧನವೂ ಇಲ್ಲದೆ ಪರಮಾತ್ಮನ ಸೃಷ್ಟಿಯನ್ನು ಅಪೇಕ್ಷಿಸದೆ ಸ್ವಾಭಾವಿಕವಾಗಿ ಅನಾದಿಯಿಂದಲೂ ಇವೆ ಎಂದು ಹೇಳುವುದು ಪರಮಾತ್ಮನ ಸೃಷ್ಟಿ ಮಹಿಮೆಯನ್ನು ನಿರಾಕರಿಸುವ ಮಾತು. ಅದು ಅನ್ಯಥಾಜ್ಞಾನ ಎಂದು ಪುನಃ ಹೇಳಬೇಕಾದುದಿಲ್ಲ.

ಪರಮಾತ್ಮನ ಸರೂಪನಾಗುವನು ಅಧಿಕಾರಿಯು ಎಂದು ತಿಳಿಯುವ ಸಂದರ್ಭದಲ್ಲಿ ಅವನು ಪರಮಾತ್ಮನ ಸದೃಶ ಎಂದು ಸಮಾನ ಎಂಬ ಅರ್ಥದಲ್ಲಿ ಮಾಡಿಕೊಳ್ಳುವುದು, ಇಡೀ ಜಗತ್ತು ವಿನಾಯತಿ ಇಲ್ಲದೆ ಈಶಾವಾಸ್ಯ ಎಂಬ ಸಿದ್ಧಾಂತಕ್ಕೆ ವಿರುದ್ಧವಾಗುವುದು. ಆದುದರಿಂದ ಈ ಶಬ್ದ ಮತ್ತು ಅದರ ಪರ್ಯಾಯ ಶಬ್ದಗಳು ಜೀವನ ಪರವಾಗಿ ಶಾಸ್ತ್ರದಲ್ಲಿ ಪ್ರಸಕ್ತವಾದರೆ ಅವಕ್ಕೆ ಶಾಸ್ತ್ರೀಯವಾದ ಅರ್ಥವಿರುವುದು. ಅದೇ ಜೀವನು ಪರತಂತ್ರ ಎಂಬ ಅರ್ಥ. ಸಂಸಾರದಲ್ಲಿ ಜೀವನಿಗೆ ಸ್ವಾತಂತ್ರ್ಯಭ್ರಾಂತಿ ಇರುವುದು. ಇದೇ ಅವನ ದುಃಖಕ್ಕೆ ಕಾರಣ. ಈ ಭ್ರಾಂತಿ ಪೂರ್ತಿನಾಶವಾದರೆ ಅವನಿಗೆ ತಾನು ಪರತಂತ್ರ ಎಂದರ್ಥವಾಗುವುದು. ಈ ಪರತಂತ್ರ ಎಂಬ ಭಾವವನ್ನೇ ಸರೂಪ ಮುಂತಾದ ಶಬ್ದಗಳು ಹೇಳುವುವು ಎಂದು ಭಾಷ್ಯಾರ್ಥ.

ಫಲಿತ ಮಂತ್ರಾರ್ಥ

ಪರಸ್ಪರ ಸಂಬಂಧವುಳ್ಳ ವಿಷ್ಣು ಯಾಥಾತ್ಮ್ಯಜ್ಞಾನ ಮತ್ತು ಮಿಥ್ಯಾಜ್ಞಾನನಿಂದನೆ ಇವೆರಡನ್ನೂ ಒಂದೇ ಪುರುಷಾರ್ಥಹೇತುವೆಂದು ಯಾವನು ತಿಳಿಯುತ್ತಾನೆಯೋ (ಅವನು) ಮಿಥ್ಯಾಜ್ಞಾನನಿಂದನೆಯಿಂದ ದುಃಖ ಅಜ್ಞಾನ ಮುಂತಾದ ಅನಿಷ್ಟವನ್ನು ದಾಟಿ, ವಿಷ್ಣು ಯಾಥಾತ್ಮ್ಯಜ್ಞಾನದಿಂದ ಆನಂದಾನುಭವರೂಪವಾದ ಮೋಕ್ಷದ ಮತ್ತೊಂದು ಭಾಗವನ್ನು ಹೊಂದುತ್ತಾನೆ ॥ ೧೧ ॥

೧೨

ಖಂಡಾರ್ಥವು ಹನ್ನೆರಡನೆಯ ಮಂತ್ರವನ್ನು ಈರೀತಿ ಪರಿಚಯ ಮಾಡಿಸುವುದು.

ಖಂಡಾರ್ಥ— ಮಿಥ್ಯಾಜ್ಞಾನಂ ಅನರ್ಥಹೇತುಃ ತತ್ತ್ವಜ್ಞಾನಮೇವ ಮುಕ್ತಿಹೇತುರಿತಿ ಪ್ರಾಗುಕ್ತಸ್ಯ ವಿವರಣಂ ಅಂಧಂತಮ ಇತ್ಯುತ್ತರ ಮಂತ್ರತ್ರಯೇಣ ಕ್ರಿಯತೆ । ತತ್ರ ಆದ್ಯಸ್ಯ ಅಯಮರ್ಥಃ ।

ಮಿಥ್ಯಾಜ್ಞಾನಂ–ಅನ್ಯಥಾಜ್ಞಾನವು. ಅನರ್ಥಹೇತುಃ– ಅನಿಷ್ಟಕ್ಕೆ ಕಾರಣ. ತತ್ತ್ವಜ್ಞಾನಂ ಏವ–ಯಥಾರ್ಥಜ್ಞಾನವೇ. ಮುಕ್ತಿಹೇತುಃ– ಮುಕ್ತಿಗೆ ಕಾರಣ. ಇತಿ–ಹೀಗೆ. ಪ್ರಾಗುಕ್ತಸ್ಯ–ಹಿಂದೆ ನಿರೂಪಿತವಾದುದಕ್ಕೆ. ವಿವರಣಂ–ವಿಶದೀಕರಣವು. ಅಂಧಂತಮಃ ಇತಿ–ಅಂಧಂತಮಃ ಎಂಬ ಶಬ್ದದಿಂದ ಆರಂಭಿಸುವ. ಉತ್ತರಮಂತ್ರತ್ರಯೇಣ– ಮುಂದಿನ ಮೂರು ಮಂತ್ರಗಳಿಂದ. ಕ್ರಿಯತೆ–ಮಾಡಲ್ಪಡುತ್ತದೆ. ತತ್ರ–ಈ ಮೂರು ಮಂತ್ರಗಳಲ್ಲಿ. ಆದ್ಯಸ್ಯ–ಮೊದಲನೆಯದಕ್ಕೆ. ಅಯಂ–ಇದು. ಅರ್ಥಃ– ಅರ್ಥವು.

ಮಂತ್ರ

ಅಂಧಂತಮಃ ಪ್ರವಿಶಂತಿ ಯೇಽಸಂಭೂತಿಮುಪಾಸತೆ ।
ತತೊ ಭೂಯ ಇವ ತೆ ತಮೊ ಯ ಉ ಸಂಭೂತ್ಯಾಗ್ಂ ರತಾಃ
॥ ೧೨ ॥

ಖಂಡಾರ್ಥ

ಅಸಂಭೂತಿಂ ಜಗತ್ಸೃಷ್ಟೇರಕರ್ತಾರಂ ಸೃಷ್ಟಿಕರ್ತಾ ನೇತ್ಯುಪಾಸತ ಇತ್ಯರ್ಥಃ । ಸಂಭೂತ್ಯಾಂ ಉ ಶಬ್ದ ಏವಾರ್ಥೋ ಅನೇನಾನ್ವೇತಿ । ಸಂಭೂತ್ಯಾಂ ಉ ಸೃಷ್ಟಿಕರ್ತೃತ್ವ ಏವ ರತಾಃ । ಭಗರ್ವಾ ಸೃಷ್ಟಿ ಕರ್ತೈವ ನ ಸಂಹಾರಕರ್ತಾ ಇತ್ಯುಪಾಸತ ಇತ್ಯರ್ಥಃ । ಪ್ರಾಗ್ವದೇವಾವ ಶಿಷ್ಟಸ್ಯ ಅರ್ಥೋ ಧ್ಯೇಯಃ ॥ ೧೨ ॥

ಮಂತ್ರಪದವಿಭಾಗ— ಅಂಧಂತಮಃ, ಪ್ರವಿಶಂತಿ, ಯೆ, ಅಸಂಭೂತಿಂ, ಉಪಾಸತೆ, ತತಃ, ಭೂಯಃ, ಇವ, ತೆ, ತಮಃ, ಯೆ, ಉ, ಸಂಭೂತ್ಯಾಗ್ಂ, ರತಾಃ ।

ಮಂತ್ರಸ್ಥ ಪದಗಳ ಅನ್ವಯ

ಅಸಂಭೂತಿಂ, ಯೆ, ಉಪಾಸತೆ, ತೆ, ಅಂಧಂತಮಃ, ಪ್ರವಿಶಂತಿ, ಯೆ, ಸಂಭೂತ್ಯಾಗ್ಂ, ಉ, ರತಾಃ, ತೆ, ತತೊ, ಭೂಯಃ, ಇವ ।

ಖಂಡಾರ್ಥದಂತೆ ಈ ಪದಗಳ ಅರ್ಥ

ಅಸಂಭೂತಿಂ–ಜಗತ್ಸೃಷ್ಟೇರಕರ್ತಾರಂ - ಜಗತ್ತಿನ ಸೃಷ್ಟಿಗೆ ಕರ್ತೃವಲ್ಲ, ಎಂದರೆ, ಸೃಷ್ಟಿಕರ್ತಾ–ಸೃಷ್ಟಿಗೆ ಕರ್ತೃವು. ನ– ಅಲ್ಲ ಎಂದು. ಉಪಾಸತೆ–ಉಪಾಸನ ಮಾಡುತ್ತಾರೆಯೊ ಎಂದರೆ ತಿಳಿಯುತ್ತಾರೆಯೊ. ಇತಿ ಅರ್ಥಃ- ಹೀಗೆ ಅರ್ಥವು. ಸಂಭೂತ್ಯಾಂ–ಸಂಭೂತಿಯಲ್ಲಿ. ಉ ಶಬ್ದ ಏವಾರ್ಥಃ–ಉ ಎಂಬ ಶಬ್ದದಿಂದಾದ ಏವ ಎಂಬ ಅರ್ಥವು. ಅನೇನ– ಇದರಿಂದ ಎಂದರೆ ಈ (ಸಂಭೂತಿ ಎಂಬ) ಶಬ್ದದಿಂದ. ಅನ್ವೇತಿ–ಅನ್ವಯವನ್ನು ಹೊಂದುವುದು. ಸಂಭೂತ್ಯಾಂ ಉ–ಸೃಷ್ಟಿಕರ್ತೃತ್ವ. ಏವ–ಸೃಷ್ಟಿ ಕರ್ತೃತ್ವದಲ್ಲಿಯೆ. ರತಾಃ–ಆಸಕ್ತರಾದವರು. ಎಂದರೆ, ಭಗರ್ವಾ–ಪರಮಾತ್ಮನು. ಸೃಷ್ಟಿಕರ್ತಾ ಏವ–ಕೇವಲ ಸೃಷ್ಟಿಮಾಡುವವನು. ಸಂಹಾರ ಕರ್ತಾ–ಸಂಹಾರ ಮಾಡುವವನು. ನ–ಅಲ್ಲ. ಇತಿ–ಹೀಗೆಂದು. ಉಪಾಸತೆ– ಉಪಾಸನ ಮಾಡುತ್ತಾರೆಯೊ ಎಂದರೆ ತಿಳಿಯುತ್ತಾರೆಯೊ . ಇತಿ– ಹೀಗೆಂದು. ಅರ್ಥಃ–ಅರ್ಥವು. ಪ್ರಾಗ್ವತ್ ಏವ–ಹಿಂದಿನ ಮಂತ್ರದಂತೆಯೇ. ಅವಶಿಷ್ಟಸ್ಯ–ಉಳಿದ ಭಾಗಕ್ಕೆ. ಅರ್ಥಃ–ಅರ್ಥವು. ಧ್ಯೇಯಃ – ತಿಳಿಯಲ್ಪಡತಕ್ಕದ್ದು.

ಸೂಚನೆ

ಇದುವರೆಗೆ ಈಶಾವಾಸ್ಯ ಎಂಬ ಭಾವವನ್ನು ವಿವರಿಸುವ ಸಂದರ್ಭದಲ್ಲಿ ಪರಮಾತ್ಮನು ಸೃಸ್ಟಿಕರ್ತೃ ಎಂದು ನಿರೂಪಿಸಿದ್ದಾಯಿತು. ಸರ್ವ ಸೃಷ್ಟಿಕರ್ತೃತ್ವವು ಅರ್ಥಾತ್ ಸಿದ್ಧವಾದ ಅರ್ಥವಲ್ಲ. ಅದೇ ಈಶಾವಾಸ್ಯ ಎಂಬ ಪದದಿಂದ ವಿವಕ್ಷಿತವಾದ ಅರ್ಥ ಎಂಬುದನ್ನು ಈ ಮಂತ್ರವು ವ್ಯಕ್ತಪಡಿಸುತ್ತದೆ. ಹಿಂದಿನ ಮಂತ್ರದ ಅರ್ಥವನ್ನು ಹೇಳುವ ಸಂದರ್ಭದಲ್ಲಿ ವಿದ್ಯಯಾ ಎಂದರೆ ವಿಷ್ಣುಯಾಥಾತ್ಮ್ಯಜ್ಞಾನದಿಂದ ಎಂದು ನಿರೂಪಿತವಾಯಿತು. ಈ ಮಂತ್ರದಲ್ಲಿ ಸಂಭೂತಿ ಎಂಬ ಪದದಿಂದ ವಿಷ್ಣುವಿನ ಸರ್ವ ಕರ್ತೃತ್ವಜ್ಞಾನವನ್ನು ಹೇಳಿದೆ. ಇದರಿಂದ ವಿಷ್ಣುಯಾಥಾತ್ಮ್ಯಜ್ಞಾನವೆಂದರೂ ವಿಷ್ಣುವಿನ ಸರ್ವಕರ್ತೃತ್ವಜ್ಞಾನವೆಂದರೂ ಒಂದೇ ಭಾವ ಎಂದು ವ್ಯಕ್ತವಾಗುವುದು. 'ವಿದ್ಯಾ ಮತ್ತು ಸಂಭೂತಿ' ಎಂಬ ಪದಗಳು ಒಂದೇ ಭಾವವುಳ್ಳವು. ಈ ಕಾರಣದಿಂದ ಈ ಮಂತ್ರವು ಖಂಡಾರ್ಥದಲ್ಲಿ ನಿರೂಪಿಸಿದಂತೆ ಹಿಂದಿನ ಮಂತ್ರಾರ್ಥಕ್ಕೆ ಉಪಪಾದಕವಾಗುವುದು.

ಹಿಂದಿನ ಮಂತ್ರದಲ್ಲಿ ಹೇಗೆ ವಿದ್ಯೆ ಎಂದರೆ ಯಥಾರ್ಥಜ್ಞಾನದಲ್ಲಿ ಅನ್ಯಥಾಜ್ಞಾನ ನಿಂದನೆ ಅಡಗಿರಬೇಕು ಎಂದು ಸ್ಪಷ್ಟಪಟ್ಟಿತೋ ಅದೇ ರೀತಿಯಲ್ಲಿ ಈ ಮಂತ್ರದಲ್ಲಿ ಪರಮಾತ್ಮನು ಸರ್ವಸೃಷ್ಟಿಕರ್ತೃ ಎಂಬ ಜ್ಞಾನದ ಸರಿಯಾದ ಆಕಾರವು ಸ್ಪಷ್ಟಪಡುವುದು.

ವಿದ್ಯೆಯಲ್ಲಿ ಅವಿದ್ಯಾ ನಿಂದನೆ ಹೇಗೆ ಅಡಗಿರಬೇಕೋ ಅದರಂತೆ ಸೃಷ್ಟಿಕರ್ತೃತ್ವಜ್ಞಾನದಲ್ಲಿ ಸಂಹಾರಕರ್ತೃತ್ವಜ್ಞಾನವೂ ಅಡಗಿರಬೇಕು. ಈ ಎರಡು ಕರ್ತೃತ್ವವೂ ಪೂರ್ಣಾರ್ಥವುಳ್ಳುದಾಗಬೇಕು. ಸೃಷ್ಟಿಕರ್ತೃತ್ವಕ್ಕೆ ವಿನಾಯಿತಿ ಇದ್ದರೆ ಎಂದರೆ ಪ್ರಪಂಚದ ಯಾವುದಾದರೂ ಒಂದು ವಸ್ತು ಮತ್ತು ಅದರ ಯಾವುದಾದರೂ ಒಂದು ಭಾಗ ಸೃಷ್ಟವಲ್ಲ ಎಂದು ತಿಳಿದರೆ ಅದು ಅನ್ಯಥಾಜ್ಞಾನವಾಯಿತು. ತಮಸ್ಸು ಅದರ ಫಲ. ಸೃಷ್ಟಿಕರ್ತೃತ್ವವನ್ನು ಒಪ್ಪಿದರೂ ಸಂಹಾರಕರ್ತೃವಲ್ಲವೆಂದೊಪ್ಪಿದರೆ ಅದು ಮಿಥ್ಯಾಜ್ಞಾನ. ಅದರ ಫಲ ಅಧಿಕ ತಮಸ್ಸು. ಸಂಹಾರಕರ್ತೃವಲ್ಲ ಎಂದು ತಿಳಿಯುವುದರಲ್ಲಿ ಪರಮಾತ್ಮನ ಅಸಾಮರ್ಥ್ಯವು ನಿರೂಪಿತವಾಗುವುದು. ಇದೇ ಈ ಕಲ್ಪದಲ್ಲಿನ ಮಹಾ ದೋಷ.

ಸಂಹಾರ ಕರ್ತೃತ್ವವು ಪರಮಾತ್ಮನ ಸ್ವರೂಪವೆಂದು ತಿಳಿದವರಿಗೆ ಪರಮಾತ್ಮನ ಸಂಹಾರವ್ಯಾಪ ರವು ಆನಂದದಾಯಕವಾಗುವುದು. ಆ ವ್ಯಾಪಾರವು ಅವನ ಸೃಷ್ಟಿಕರ್ತೃತ್ವದ ವಿಸ್ತಾರವಾಗುವುದು.

ಪರಮಾತ್ಮನ ಸೃಷ್ಟಿಕರ್ತೃತ್ವವನ್ನು ತಿಳಿಸಲೋಸುಗವೇ 'ಈಶಾವಾಸ್ಯ' ಇತ್ಯಾದಿ ಮಂತ್ರಗಳ ಪ್ರವೃತ್ತಿ. ಈ ಕಾರಣದಿಂದ ಪರಮಾತ್ಮನ ಸರ್ವಸೃಷ್ಟಿಕರ್ತೃತ್ವವನ್ನು ಸರಿಯಾದ ಅಧ್ಯಯನದಿಂದ ತಿಳಿಯುವುದೊಂದೇ ಮೋಕ್ಷಸಾಧನ. ಸೃಷ್ಟಿಕರ್ತೃ ಎಂಬ ಜ್ಞಾನದಲ್ಲಿ ಸಂಹಾರಕರ್ತೃ ಎಂಬ ಜ್ಞಾನವೂ ಅಡಗಿರುವುದು. ಕೇವಲ ಸೃಷ್ಟಿಕರ್ತೃ ಎಂದು ತಿಳಿದವನು ಸಂಹಾರಕರ್ತೃತ್ವವನ್ನು ದೂಷಿಸಿ ತನಗೆ ಬೇಕಾದ ಲೌಕಿಕ ಸುಖಸಾಮಗ್ರಿಗಳನ್ನು ಅವಕ್ಕೆ ಯಾವ ಅಪಾಯವೂ ಬರದಂತೆ ಸೃಷ್ಟಿಸುವಹಾಗೆ ಪರಮಾತ್ಮನನ್ನು ಪ್ರಾರ್ಥಿಸುವ ರೂಪದಲ್ಲಿ ಅವನಿಗೆ ಅಪ್ಪಣೆಮಾಡುವನು. ಇದು ಜ್ಞಾನವಲ್ಲ. ತನಗೆ ತಾನೇ ನಿಯಾಮಕ ಎಂಬ ಭಾವದ ಪ್ರದರ್ಶನ. ಪರಮಾತ್ಮನ ಸೃಷ್ಟಿಕರ್ತೃತ್ವಜ್ಞಾನದಲ್ಲಿ ಸಂಹಾರಕರ್ತೃತ್ವಜ್ಞಾನವೂ ಅಡಗಿರುವುದನ್ನು ತಿಳಿದರೆ ಮಿಥ್ಯಾಜ್ಞಾನಕ್ಕೆ ಅವಕಾಶವಿಲ್ಲ. ಇದರಿಂದ ಸ್ವಾರ್ಥತ್ಯಾಗ, ಆಮೂಲಕ ಜ್ಞಾನ ಪ್ರಯತ್ನ ಹುಟ್ಟುವುದು.

ಫಲಿತ ಮಂತ್ರಾರ್ಥ

(ಪರಮಾತ್ಮನು) ಜಗತ್‌ಸೃಷ್ಟಿಗೆ ಕರ್ತೃವಲ್ಲ ಎಂದು ಯಾರು ತಿಳಿಯುತ್ತಾರೆಯೋ ಅವರು ಅಂಧಂತಮಸ್ಸನ್ನು ಪ್ರವೇಶಮಾಡುವರು. ಯಾರು (ಪರಮಾತ್ಮನ) ಸೃಷ್ಟಿಕರ್ತೃತ್ವದಲ್ಲಿಯೇ ರತರಾದವರೋ ಎಂದರೆ ಅವನು ಸೃಷ್ಟಿಕರ್ತೃಮಾತ್ರ ಸಂಹಾರಕರ್ತೃವಲ್ಲ ಎಂದು ಯಾರು ತಿಳಿಯುವರೋ ಅವರು ಅದಕ್ಕಿಂತಲೂ ಎಂದರೆ ಸೃಷ್ಟಿಕರ್ತೃ ಅಲ್ಲ ಎಂದು ತಿಳಿದವರಿಗೆ ಆಗುವ ತಮಸ್ಸಿಗಿಂತಲೂ ಅಧಿಕವಾದ ತಮಸ್ಸನ್ನು ಹೊಂದುವರು. ಇದರಲ್ಲಿ ಸಂಶಯವಿಲ್ಲ. || ೧೨ ||

೧೩

ಸೂಚನೆ

೧೨ ಮತ್ತು ೧೩.ನೆಯ ಮಂತ್ರಗಳಿಗೆ ಒಟ್ಟು ಭಾಷ್ಯವಿದೆ. ಇದನ್ನು ೧೩. ನೆಯ ಮಂತ್ರದ ಅರ್ಥಾನುವಾದ ನಂತರ ಅಧ್ಯಯನ ಮಾಡಬಹುದು.

ಖಂಡಾರ್ಥವು ೧೩. ನೆಯ ಮಂತ್ರದ ಪ್ರವೃತ್ತಿಗೆ ನಿಮಿತ್ತವನ್ನು ಹೀಗೆ ಹೇಳುವುದು.

ಖಂಡಾರ್ಥ— ನ ಕೇವಲಂ ವಿಪಕ್ಷೇ ಅನರ್ಥಸತ್ವಾದೇವ ಸೃಷ್ಟಿಸಂಹಾರಯೋಃ ಕರ್ತೃತ್ವಂ ಹರೇಃ ಜ್ಞೇಯಂ। ಕಿಂತು ದಲದ್ವಯಯುಕ್ತ ಮೋಕ್ಷೋಪಯೋಗಿತ್ವಾದಪೀತ್ಯಾಹ। ಅನ್ಯದೇವೇತಿ।

ನ ಕೇವಲಂ – ಇಷ್ಟುಮಾತ್ರವೇ ಅಲ್ಲ. ಎಷ್ಟುಮಾತ್ರ ? ವಿಪಕ್ಷೇ–ಪರಮಾತ್ಮನನ್ನು ಸರಿಯಾಗಿ ತಿಳಿಯದ ಪಕ್ಷದಲ್ಲಿ. ಅನರ್ಥಸತ್ವಾತ್–ಅನಿಷ್ಟವಿರುವುದರಿಂದ. ಸೃಷ್ಟಿಸಂಹಾರಯೋಃ–ಸೃಷ್ಟಿ ಮತ್ತು ಸಂಹಾರ ಇವೆರಡರ. ಕರ್ತೃತ್ವಂ–ಮಾಡೋಣವು. ಹರೇಃ–ಪರಮಾತ್ಮನಿಗೆ (ಸೇರಿದುದು) ಎಂದು ಜ್ಞೇಯಂ–ತಿಳಿಯಲ್ಪಡಬೇಕಾದುದು. ಕಿಂತು –ಅದರ ಜೊತೆಯಲ್ಲಿ ತಿಳಿಯಬೇಕಾದುದು ಯಾವುದು ಎಂದರೆ. ದಲದ್ವಯಯುಕ್ತ ಮೋಕ್ಷೋಪಯೋಗಿತ್ವಾತ್ ಅಪಿ–ಎರಡು ದಳಗಳುಳ್ಳ ಮೋಕ್ಷಕ್ಕೆ ಸಾಧನವಾದುದರಿಂದಲೂ ಕೂಡ. (ಸೃಷ್ಟಿಸಂಹಾರ ಕರ್ತೃತ್ವವು ಪರಮಾತ್ಮನಿಗೆ ಸೇರಿದುದು ಎಂದು ತಿಳಿಯಲ್ಪಡಬೇಕು. ಇತಿ ಆಹ–ಹೀಗೆ ಹೇಳುವನು. ಅನ್ಯತ್‌ಏವ ಇತಿ–ಅನ್ಯತ್‌ಏವ ಎಂಬ ಪದಗಳಿಂದ ಆರಂಭವಾಗುವ ಮಂತ್ರದಲ್ಲಿ.

ಮಂತ್ರ

ಅನ್ಯದೇವಾಹುಸ್ಸಂಭವಾತ್ ಅನ್ಯದಾಹುರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೆ ನಸ್ತದ್ವಿಚಚಕ್ಷಿರೆ ॥ ೧೩ ॥

ಖಂಡಾರ್ಥ

ಸಂಭವಾತ್ ಹರೇಃ ಸೃಷ್ಟಿಕರ್ತೃತ್ವಜ್ಞಾನಾತ್ । ಅಸಂಭವಾತ್ ಸಂಹಾರಕರ್ತೃತ್ವಜ್ಞಾನಾತ್ ಇತ್ಯರ್ಥಃ। ಶಿಷ್ಟಂ ಪ್ರಾಗ್ವತ್ ಜ್ಞೇಯಂ।

ಮಂತ್ರಪದವಿಭಾಗ – ಅನ್ಯತ್, ಏವ, ಆಹುಃ, ಸಂಭವಾತ್. ಅನ್ಯತ್, ಆಹುಃ, ಅಸಂಭವಾತ್, ಇತಿ, ಶುಶ್ರುಮ, ಧೀರಾಣಾಂ, ಯೆ, ನಃ, ತತ್, ವಿಚಚಕ್ಷಿರೆ.

ಮಂತ್ರಸ್ಥ ಪದಗಳ ಅನ್ವಯ

ಸಂಭವಾತ್, ಅನ್ಯತ್, ಆಹುಃ. ಅಸಂಭವಾತ್, ಅನ್ಯತ್, ಆಹುಃ. ಇತಿ, ಧೀರಾಣಾಂ, ಶುಶ್ರುಮ. ಯೆ, ನಃ, ತತ್, ವಿಚಚಕ್ಷಿರೆ.

ಖಂಡಾರ್ಥದಂತೆ ಈ ಪದಗಳ ಅರ್ಥ

ಸಂಭವಾತ್–ಹರೇಃ ಸೃಷ್ಟಿಕರ್ತೃತ್ವಜ್ಞಾನಾತ್ – ಹರಿಗೇ ಸೃಷ್ಟಿಕರ್ತೃತ್ವ ಎಂಬ ಜ್ಞಾನದ ದೆಶೆಯಿಂದ ಎಂದರೆ ಸೃಷ್ಟಿಕರ್ತೃತ್ವವೇ ಹರಿಯ ಲಕ್ಷಣ ಎಂಬ ತಿಳಿಯುವುದರ ದೆಶೆಯಿಂದ. ಅಸಂಭವಾತ್ – ಸಂಹಾರ ಕರ್ತೃತ್ವಜ್ಞಾನಾತ್, (ಹರಿಗೆ) ಸಂಹಾರ ಕರ್ತೃತ್ವವೂ ಲಕ್ಷಣ ಎಂಬ ಜ್ಞಾನದ ದೆಶೆಯಿಂದ. ಇತಿ ಅರ್ಥಃ–ಹೀಗೆ ಅರ್ಥವು. ಶಿಷ್ಟಂ–ಮಿಕ್ಕಮಂತ್ರ ಭಾವವನ್ನು. ಪ್ರಾಗ್ವತ್–ಹಿಂದೆ ವ್ಯಾಖ್ಯಾನ ಮಾಡಿಕೊಂಡಂತೆ ಎಂದರೆ ೧೦ ನೆಯ ಶ್ಲೋಕದಲ್ಲಿ ಅರ್ಥಮಾಡಿಕೊಂಡಂತೆ (ಎಂದು). ಜ್ಞೇಯಂ–ತಿಳಿಯಲ್ಪಡಬೇಕು. (ಹೇಗೆಂದರೆ) ಇತಿ–ಹೀಗೆಂದು–ಧೀರಾಣಾಂ – ಜ್ಞಾನಿಗಳು. ಕಾಶಾತ್–ದೆಶೆಯಿಂದ. ಶುಶ್ರುಮ – ಕೇಳಿರುತ್ತೇವೆ. [ಆ ಧೀರರು ಯಾರು? ಎಂದರೆ] ಯೆ – ಯಾರು. ನಃ – ನಮ್ಮನ್ನು ಕುರಿತು. ತತ್ – ತತ್ತ್ವವನ್ನು. ವಿಚಚಕ್ಷಿರೆ – ವ್ಯಾಖ್ಯಾನಮಾಡಿರುತ್ತಾರೆಯೋ- ಅವರು.

ಸೂಚನೆ

ಧೀರರು ಎಂದರೆ ಜ್ಞಾನಿಗಳು. ಅವರು ಯಾರೆಂದರೆ ಯಾರು ನಮಗೆ ತತ್ತ್ವವನ್ನು ವ್ಯಾಖ್ಯಾನಮಾಡುತ್ತಾರೆಯೋ ಅವರು ಎಂದು ಮಂತ್ರೋಕ್ತವಾಗಿದೆ. ಈ ಮಾತಿನಿಂದ ಅರ್ಥಾತ್ ನಮಗೆ ಗುರುನಿಯಮವು ವ್ಯಕ್ತವಾಗುತ್ತದೆ. ನಮಗೆ ಯಾರು ತತ್ತ್ವವನ್ನು ವ್ಯಾಖ್ಯಾನಮಾಡುತ್ತಾರೆಯೊ ಅವರೇ ನಮಗೆ ಜ್ಞಾನಿಗಳು, ಗುರುಗಳು, ಧೀರರು. ಹೀಗೆ ತಿಳಿಯುವುದರಿಂದ ಹಲವು ಜನಗಳಿಂದ ಹಲವು ವಿಷಯವನ್ನು ತಿಳಿಯುವ ಸಂಭವವಿರುವುದಿಲ್ಲ. ಅಧಿಕಾರಿಗೆ ಗುರುಲಾಭವಾದರೆ ಅವನಿಗೆ ಆ ಗುರು ತತ್ತ್ವವ್ಯಾಖ್ಯಾನಮಾಡುವನು. ತತ್ತ್ವವ್ಯಾಖ್ಯಾನಮಾಡುವವನು ಅವನಿಗೆ ಲಬ್ಧನಲ್ಲದಿದ್ದರೆ ಅವನು ಗುರುರಹಿತನೆಂದು ನಿರ್ಣಯ. ನೋಡಿದವರನ್ನೆಲ್ಲ ಗುರುಗಳು ಎಂದು ವ್ಯವಹರಿಸುವುದು ಮತ್ತು ಅದಕ್ಕನುಗುಣವಾದ ವ್ಯಾಪಾರಮಾಡುವುದು ಮಂತ್ರಸಮ್ಮತವಲ್ಲ. ಒಟ್ಟಿನಮೇಲೆ ಗುರು ಎಂಬ ಪವಿತ್ರ ಶಬ್ದದ ಅರ್ಥವನ್ನರಿತು ತತ್ತ್ವ ವ್ಯಾಖ್ಯಾನವನ್ನು ನಮಗೆ ಯಾರು ಮಾಡುತ್ತಾರೊ ಅವರಿಗೆ ವಿಾಸಲಾಗಿ ಆ ಶಬ್ದವನ್ನು ಕಾಪಾಡಿಕೊಳ್ಳುವುದು ಜ್ಞಾನಸಾಧನವಾಗುವುದು

ನ್ಯಾಯವಾದ ಅಧ್ಯಯನದಿಂದ ಈ ವಿಷಯದ ಔಚಿತ್ಯವು ಸ್ಪಷ್ಟಪಡುವುದು.

ವೃದ್ಧರು ಹೇಳಿರುವರು ಎಂದೂ ಧೀರರಿಂದ ನಮಗೆ ಶ್ರುತವಾಗಿದೆ ಎಂದೂ ಹೇಳುವ ಉಪನಿಷತ್ತು ಗುರುತನದ ಸ್ವರೂಪವನ್ನು ಸ್ಪಷ್ಟಪಡಿಸುವುದು. ಗುರುವಿನಿಂದ ಯಾವ ವಿಷಯವು ವ್ಯಾಖ್ಯಾತವಾಗುವುದೊ ಅದ ವೃದ್ಧರಿಂದ ಹೇಳಲ್ಪಟ್ಟದು ಎಂದರೆ ವ್ಯಾಖ್ಯಾತವಾದುದಾಗಿರಬೇಕು. ಆ ವೃದ್ಧರಿಗೂ ಇದೇ ನ್ಯಾಯವು ಅನ್ವಯಿಸುವುದು. ಈ ಕಾರಣದಿಂದ ವ್ಯಾಖ್ಯಾತವಾದ ವಿಷಯವು ಅನಾದಿಯಿಂದಲೂ ಅನಂತಕಾಲೀನವಾಗಿ ಒಂದೇ ರೀತಿಯ ವ್ಯಾಖ್ಯಾನವುಳ್ಳದಾಗಿರಬೇಕು. ಅದರ ಭಾಷೆಯೂ ಅದರಂತೆ ಕ್ಲೃಪ್ತವಾಗಿರಬೇಕು. ಈ ವಿಚಾರವೆಲ್ಲವೂ ವೇದಾಪೌರುಷೇಯತ್ವಕ್ಕೆ ಉಪಪಾದಕವಾಗುವುದು.

ಇದುವರೆಗೆ ನಿರೂಪಿತವಾದಂತೆ ಯಜಾರ್ಥಜ್ಞಾನ, ತತ್ತ್ವಜ್ಞಾನ, ವಿಷ್ಣುಯಾಥಾತ್ಮ್ಯ ಜ್ಞಾನ, ಪರಮಾತ್ಮಜ್ಞಾನ, ಎಂಬೀ ಮುಂತಾದ ಪದಗಳು ಒಂದೇ ಅರ್ಥವುಳ್ಳವು. ಈ ಅರ್ಥವು ಸರ್ವವೂ ಈಶಾವಾಸ್ಯ ಎಂಬುದರಿಂದ ಉಪಪಾದಿತವಾದ ಪರಮಾತ್ಮನು ಸ್ವತಂತ್ರ ಎಂಬ ಜ್ಞಾನ. ಈ ಜ್ಞಾನವೇ ಸಂಹಾರಕರ್ತೃತ್ವಸಹಿತವಾದ ಸೃಷ್ಟಿಕರ್ತೃತ್ವಜ್ಞಾನ. ಅಧಿಕಾರಿಯು ಶಾಸ್ತ್ರಾಧ್ಯಯನದಿಂದ ಸರ್ವರೀತಿಯಲ್ಲಿಯೂ ಪರಮಾತ್ಮನ ಸರ್ವಸಂಹಾರಕರ್ತೃತ್ವಜ್ಞಾನಸಹಿತವಾಗಿ ಸರ್ವಕರ್ತೃತ್ವಜ್ಞಾನವನ್ನು ಸಂಪಾದಿಸಬೇಕು. ಶಾಸ್ತ್ರಾಧ್ಯಯನ ಕ್ರಮದಲ್ಲಿ ಪರಮಾತ್ಮನು ಯಾವುದಾದರೂ ಒಂದು ವಸ್ತುವನ್ನು ಕುರಿತು ಸೃಷ್ಟಿಕರ್ತೃವಲ್ಲ, ಸಂಹಾರಕರ್ತೃವಲ್ಲ ಎಂಬ ಭಾವವು ತೋರುವುದೋ ಅದನ್ನು ಪರಮಾತ್ಮ ನಿರಾಕರಣವೆಂದು ತಿಳಿದು ಅಧ್ಯಯನ ಕ್ರಮವನ್ನು ಸರಿಪಡಿಸಿಕೊಳ್ಳಬೇಕು ಎಂದು ವೃದ್ಧಾಃ ಎಂಬೀ ಮುಂತಾದ ಭಾವಗಳನ್ನು ಉಪಯೋಗಿಸಿ ಪ್ರವೃತ್ತವಾದುದು ಮಂತ್ರದಭಾವ.

ಇದೇ ಅಂಶವನ್ನು ಭಾಷ್ಯಕಾರರು ಸ್ಪಷ್ಟಪಡಿಸುತ್ತಾರೆ. ೧೨ ಮತ್ತು ೧೩ ನೆಯ ಶ್ಲೋಕಗಳಿಗೆ ಒಟ್ಟು ಭಾಷ್ಯ ಹೀಗಿರುವುದು.

ಭಾಷ್ಯ

ಏವಂ ಸೃಷ್ಟಿಕರ್ತೃತ್ವಂ ನಾಂಗೀಕುರ್ವಂತಿ ಯೆ ಹರೇಃ ।
ತೆ ಪಿ ಯಾಂತಿ ತಮೊ ಘೋರಂ ತಥಾ ಸಂಹಾರಕರ್ತೃತಾಂ ।

ನಾಂಗೀಕುರ್ವಂತಿ ತೇಪ್ಯೇವಂ ತಸ್ಮಾತ್ ಸರ್ವಗುಣಾತ್ಮಕಂ ।
ಸರ್ವಕರ್ತಾರಮೀಶೇಶಂ ಸರ್ವಸಂಹಾರಕಾರಣಂ ॥

ಏವಂ - ಈ ಪ್ರಕಾರವಾದ. ಸೃಷ್ಟಿಕರ್ತೃತ್ವಂ - ಸೃಷ್ಟಿಮಾಡುವಿಕೆಯನ್ನು. ಹರೇಃ-ಪರಮಾತ್ಮನಿಗೆ. ಯೆ-ಯಾರು. ನ ಅಂಗೀಕುರ್ವಂತಿ-ಅಂಗೀಕರಿಸುವುದಿಲ್ಲವೊ. ತೆ ಅಪಿ-ಅವರೂ ಕೂಡ. ಘೋರಂ-ಭಯಂಕರವಾದ. ತಮಃ-ತಮಸ್ಸನ್ನು. ಯಾಂತಿ-ಪ್ರವೇಶಿಸುತ್ತಾರೆ. ತಥಾ-ಹಾಗೆಯೆ. ಸಂಹಾರಕರ್ತೃತಾಂ-ಸರ್ವದರ ಸಂಹಾರ ಮಾಡುವಿಕೆಯನ್ನು. (ಯೆ-ಯಾರು) ನ ಅಂಗೀಕುರ್ವಂತಿ - ಅಂಗೀಕರಿಸುವುದಿಲ್ಲವೊ. ತೆ ಅಪಿ-ಅವರೂ ಕೂಡ. ಏವಂ-ಹೀಗೆಯೇ ಎಂದರೆ ಅಧಿಕವಾದ ತಮಸ್ಸನ್ನು ಪ್ರವೇಶಿಸುವರು. ತಸ್ಮಾತ್-ಈ ಕಾರಣದ ದೆಶೆಯಿಂದ. ಸರ್ವ ಗುಣಾತ್ಮಕಂ-ಪೂರ್ಣಗುಣಸ್ವರೂಪನಾದ. ಸರ್ವ ಕರ್ತಾರಂ-ಸರ್ವಕ್ಕೂ ಕರ್ತೃವಾದ. ಈಶೇಶಂ-ನಿಯಾಮಕರಿಗೂ ನಿಯಾಮಕನಾದ. ಸರ್ವ ಸಂಹಾರ ಕಾರಣಂ-ಸರ್ವವಸ್ತುವಿನ ಸಂಹಾರಕ್ಕೆ ಕಾರಣನಾದ. (ಈ ಭಾಷ್ಯಕ್ಕೆ ಮುಂದಿನ ಮಂತ್ರದ ಭಾಷ್ಯದಲ್ಲಿ ಅನ್ವಯವಿರುವುದು.)

ಸೂಚನೆ

ಈ ವಾಕ್ಯಗಳನ್ನು ಗಮನಿಸಿ ಅರ್ಥಮಾಡಿಕೊಳ್ಳಬೇಕು. ಅದಿಲ್ಲದಿರುವ ಸಂದರ್ಭದಲ್ಲಿ ಅಧಿಕಾರಿಯು ಅನ್ಯದರ್ಶನ ಸಂಪ್ರದಾಯಕ್ಕೆ ಕಟ್ಟುಬೀಳುವ ಸಂಭವವುಂಟು. ಇಂತಹ ಸನ್ನಿವೇಶದಲ್ಲಿ ಪ್ರಪಂಚದಲ್ಲಿ ಸೃಷ್ಟಿಯನ್ನು ಅಪೇಕ್ಷಿಸದಿರುವ ಅನಾದಿ ನಿತ್ಯ ವಸ್ತುಗಳನ್ನು ಅಂಗೀಕರಿಸಿ ಪರಮಾತ್ಮನ ಸರ್ವ ಸೃಷ್ಟಿಕರ್ತೃತ್ವ ಮತ್ತು ಸರ್ವಸಂಹಾರಕರ್ತೃತ್ವ ಇವುಗಳಿಗೆ ಗೌಣಾರ್ಥವೇ ವಿಹಿತ; ಆ ಶಬ್ದಗಳನ್ನು ಯಥಾಯೋಗ್ಯವಾಗಿ ಎಂದರೆ ಲೋಕಪ್ರಸಿದ್ಧಿಗೆ ಅನುಗುಣವಾಗಿ ಅರ್ಥಮಾಡಿಕೊಳ್ಳಬೇಕು ಎಂದು ತಿಳಿಯುವನು. ಈ ಭ್ರಾಂತಿಯ ಸನ್ನಿಧಾನದಲ್ಲಿ ಸರ್ವ ಸೃಷ್ಟಿಸಂಹಾರಕರ್ತೃತ್ವವನ್ನು ಉಪಪಾದಿಸಲು ಬಂದ ಶಾಸ್ತ್ರಪಂಕ್ತಿಗಳಿಗೂ ತನಗೆ ಸಮ್ಮತವಾದ ಅರ್ಥವನ್ನೇ ಕಲ್ಪಿಸುವನು. ಅಧಿಕಾರಿಯು ಈ ದುರ್ದೆಶೆಗೆ ಈಡಾಗಬಾರದೆಂದು ಭಾಷ್ಯಕಾರರು ಎಚ್ಚರ ಕೊಡುತ್ತಿರುವರು.

ಭಾಷ್ಯದಲ್ಲಿ 'ನಾಂಗೀಕುರ್ವಂತಿ' ಎಂಬ ಶಬ್ದಪ್ರಯೋಗವಿರುವುದು. ಪ್ರಪಂಚದಲ್ಲಿ ಅಂಗೀಕಾರವೆಂದರೆ ಒಪ್ಪೋಣ ಎಂಬ ಅರ್ಥವಿರುವುದು. ಈ ಒಪ್ಪೋಣವು ಜ್ಞಾನಮೂಲಕವಾಗಬೇಕಾದುದಿಲ್ಲ. ಇದು ನಂಬೋಣ ಎಂಬುದರ ಪರ್ಯಾಯವಾಗಿ ಬರುವುದು. ಪ್ರಕೃತ ಭಾಷ್ಯದ ಪದಕ್ಕೆ ಈ ಅರ್ಥವನ್ನು ಮಾತ್ರ ಮಾಡಬಾರದು. ಈ ಪ್ರಕರಣದಲ್ಲಿ ಅಂಗೀಕರಿಸುವುದೆಂದರೆ ಶಾಸ್ತ್ರಾಧ್ಯಯನದಿಂದ ತಿಳಿಯೋಣ ಎಂದರ್ಥ. ಇದು ಜ್ಞಾನಪ್ರಕರಣ. ಈ ಕಾರಣದಿಂದ ಜ್ಞಾನವನ್ನು ಬಿಟ್ಟು ಅರ್ಥವು ಯಾವ ಪದಕ್ಕೂ ವಿಹಿತವಲ್ಲ. ಇದು ಹಿಂದೆಯೇ ಸ್ಪಷ್ಟಪಟ್ಟಿರುವುದನ್ನು ಅಧಿಕಾರಿಯು ಸ್ಮರಿಸಬೇಕು.

ಸೃಷ್ಟಿಕರ್ತೃ ಪರಮಾತ್ಮನು ಸಂಹಾರಕರ್ತೃ ಎಂದು ತಿಳಿಯದಮೇಲೆ ಬಂಧವನ್ನು ಸೃಷ್ಟಿಸಿದ ಅವನು ಬಂಧನಾಶಮೂಲಕವಾದ ಮೋಕ್ಷವನ್ನು ಕೊಡಲಾರ ಎಂಬ ಅರ್ಥವಾಗಿ ಅಧಿಕಾರಿಗೆ ಸಾಧನದ ಪ್ರಸಕ್ತಿಯೇ ಇಲ್ಲವಾಗುವುದು.

ಫಲಿತ ಮಂತ್ರಾರ್ಥ

ಪರಮಾತ್ಮನ ಸರ್ವ ಕರ್ತೃತ್ವವನ್ನು ತಿಳಿಯೋಣದರಿಂದ ಮೋಕ್ಷದ ಒಂದು ಭಾಗವೂ ಸರ್ವ ಸಂಹಾರಕರ್ತೃತ್ವವನ್ನು ತಿಳಿಯೋಣದರಿಂದ ಮತ್ತೊಂದು ಭಾಗವೂ (ಪ್ರಾಪ್ತವಾಗುವುದು) ಎಂದು (ಜ್ಞಾನವೃದ್ಧರು) ವೃದ್ಧರು ಹೇಳಿರುವರು. ಹೀಗೆಂದು ಧೀರರ(ಜ್ಞಾನಿಗಳ) ದೆಶೆಯಿಂದ ಕೇಳಿರುತ್ತೀವೆ. ಆ ಜ್ಞಾನಿಗಳು ಯಾರೆಂದರೆ ಯಾರು ನಮಗೆ ಈ ತತ್ತ್ವವನ್ನು ವ್ಯಾಖ್ಯಾನಮಾಡಿರುತ್ತಾರೆಯೊ ಅವರು. ॥ ೧೩ ॥

೧೪

ಖಂಡಾರ್ಥವು ಹದಿನಾಲ್ಕನೆಯ ಮಂತ್ರವನ್ನು ಹೀಗೆ ಪರಿಚಯ ಮಾಡಿಸುವುದು.

ಖಂಡಾರ್ಥ—ಏತನ್ಮಂತ್ರಾರ್ಥಮೇವ ವ್ಯಕ್ತಮಾಹ । ಸಂಭೂತಿಂ ಚ ಇತಿ।

ಏತನ್ಮಂತ್ರಾರ್ಥಂ ಏವ– ಈ ಮಂತ್ರದ ಎಂದರೆ ಹಿಂದೆ ಹೇಳಿದ ಮಂತ್ರದ ಅರ್ಥವನ್ನೇ. ವ್ಯಕ್ತಂ ಆಹ–ಸ್ಪಷ್ಟವಾಗಿ ಹೇಳಿರುವರು. ಸಂಭೂತಿಂ ಚ ಇತಿ –'ಸಂಭೂತಿಂ ಚ' ಎಂಬ ಪದಗಳಿಂದ ಆರಂಭಿಸುವ ಮಂತ್ರದಲ್ಲಿ

ಮಂತ್ರ

ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಗ್ಂ ಸಹ।
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಽಮೃತಮಶ್ನುತೆ
ಖಂಡಾರ್ಥ ||೧೪||

ಸಂಭೂತಿಂ ಸೃಷ್ಟಿಕರ್ತೃತ್ವಂ। ವಿನಾಶಂ ಜಗತ್ಸಂಹಾರಕರ್ತೃತ್ವಂ। ಶಿಷ್ಟಂ ಪ್ರಾಗ್ವತ್ । ಸೃಷ್ಟ್ಯುಪಲಕ್ಷಿತಾನಂತ ಗುಣಾತ್ಮಕತ್ವಜ್ಞಾನಾದಾನಂದಾನುಭವಃ । ವಿನಾಶಕರ್ತೃತ್ವಜ್ಞಾನಾದಖಿಲಕ್ಲೇಶನಿವೃತ್ತಿರಿತ್ಯುಭಯರೂಪಮೋಕ್ಷಾಯೋಭಯಜ್ಞಾನ ಮಾವಶ್ಯಕಮಿತಿ ಭಾವಃ || ೧೪ ||

ಮಂತ್ರಪದವಿಭಾಗ–ಸಂಭೂತಿಂ. ಚ, ವಿನಾಶಂ, ಚ, ಯಃ, ತತ್, ವೇದ, ಉಭಯಗ್ಂ, ಸಹ, ವಿನಾಶೇನ, ಮೃತ್ಯುಂ, ತೀರ್ತ್ವಾ, ಸಂಭೂತ್ಯಾ, ಅಮೃತಂ, ಅಶ್ನುತೆ ||

ಮಂತ್ರಸ್ಥ ಪದಗಳ ಅನ್ವಯ

ಸಂಭೂತಿಂ. ಚ, ವಿನಾಶಂ, ಚ, ಯಃ, ತತ್, ಉಭಯಗ್ಂ, ಸಹ ವೇದ. ವಿನಾಶೇನ, ಮೃತ್ಯುಂ, ತೀರ್ತ್ವಾ, ಸಂಭೂತ್ಯಾ, ಅಮೃತಂ, ಅಶ್ನುತೆ||

ಖಂಡಾರ್ಥದಂತೆ ಈ ಪದಗಳ ಅರ್ಥ

ಸಂಭೂತಿಂ - ಸೃಷ್ಟಿಕರ್ತೃತ್ವಂ - ಸೃಷ್ಟಿಮಾಡೋಣ. ವಿನಾಶಂ - ಜಗತ್‌ಸಂಹಾರಕರ್ತೃತ್ವಂ – ಜಗತ್ತನ್ನು ಸಂಹಾರ ಮಾಡೋಣ. ಶಿಷ್ಟಂ– ಮಿಕ್ಕ ಮಂತ್ರಭಾಗವು. ಪ್ರಾಗ್ವತ್ - ಹಿಂದಿನಂತೆ ಅರ್ಥ ಕೊಡುವುದು. ಸೃಷ್ಟ್ಯುಪಲಕ್ಷಿತಾನಂತಗುಣಾತ್ಮಕತ್ವಜ್ಞಾನಾತ್ - ಸೃಷ್ಟಿ ಎಂಬುದರಿಂದ ಸೂಚಿತವಾದ ಅನಂತವಾದ ಗುಣಸ್ವರೂಪ ಎಂಬ ಪರಮಾತ್ಮ ಜ್ಞಾನದ ದೆಶೆಯಿಂದ. ಆನಂದಾನುಭವಃ – ಆನಂದದ ಅನುಭವವು. ವಿನಾಶ ಕರ್ತೃತ್ವಜ್ಞಾನಾತ್ – ಜಗತ್ಸಂಹಾರಮಾಡುವ ಮಹಿಮೆ ಸಹಿತ ಪರಮಾತ್ಮನ ಜ್ಞಾನದ ದೆಶೆಯಿಂದ. ಅಖಿಲ ಕ್ಲೇಶ ನಿವೃತ್ತಿಃ – ಎಲ್ಲ ದುಃಖದ ನಾಶವು. ಇತಿ – ಹೀಗೆ. ಉಭಯರೂಪ ಮೋಕ್ಷಾಯ – ಎರಡು ವಿಧವಾದ ಮೋಕ್ಷಗಳಿಗೆ. ಉಭಯಜ್ಞಾನಂ - (ಸೃಷ್ಟಿಕರ್ತೃತ್ವ ಮತ್ತು ವಿನಾಶಕರ್ತೃತ್ವ) ಇವೆರಡರ ಜ್ಞಾನವು. ಆವಶ್ಯಕಂ - ಅಗತ್ಯವಾದುದು. ಇತಿ – ಹೀಗೆ. ಭಾವಃ - ಅಭಿಪ್ರಾಯವು.

ಸೂಚನೆ

ಸೃಷ್ಟಿಕರ್ತೃತ್ವದಿಂದ ಸೂಚಿತವಾದುವೇ ಪರಮಾತ್ಮನು ಅನಂತ ಗುಣಸ್ವರೂಪ ಎಂಬುದು. ಇದು ಬಹು ಗಹನಾರ್ಥವುಳ್ಳುದು. ಮೊದಲು ಅನಂತ ಎಂದರೆ ಪೂರ್ಣವಾದ ಗುಣವೇ ಪರಮಾತ್ಮ ವಸ್ತು ಎಂಬುದನ್ನು ಅಧ್ಯಯನದಿಂದ ತಿಳಿಯಬೇಕು. ಇದರಿಂದ ಪರಮಾತ್ಮನಿಗೆ ಗುಣ, ಪರಮಾತ್ಮನ ಗುಣ, ಪರಮಾತ್ಮನಲ್ಲಿ ಗುಣ ಎಂಬೀ ಮುಂತಾದ ಪರಮಾತ್ಮ ಎಂಬ ಧರ್ಮಿಗೂ ಗುಣ ಎಂಬ ಧರ್ಮಕ್ಕೂ ಭೇದವನ್ನು ಕಲ್ಪಿಸುವ ವ್ಯವಹಾರವು ಅಯುಕ್ತವೆಂದು ತಿಳಿಯುವುದು. ಅನಂತಗುಣವೇ ಪರಮಾತ್ಮ ಎಂಬ ಭಾವವು ಪರಮಾತ್ಮನ ಸೃಷ್ಟಿಕರ್ತೃತ್ವದ ಮಹಿಮೆಯಿಂದಲೇ ಸಿದ್ಧಿಸಬೇಕು. ಪರಮಾತ್ಮನ ಸರ್ವ ಸೃಷ್ಟಿಕರ್ತೃತ್ವಜ್ಞಾನವಿದ್ದ ಹೊರತು ಇದು ಸಾಧ್ಯವಲ್ಲ. ಇದಾದರೋ ಸರ್ವ ಸಂಹಾರಕರ್ತೃತ್ವಜ್ಞಾನದ ಜೊತೆಯಲ್ಲಿ ಸಿದ್ಧಿಸಬೇಕು. ನಿರರ್ಗಳವಾಗಿ ಈ ಜ್ಞಾನ ಹುಟ್ಟಲು ಒಂದೇ ಸಾಧನ. ಅದು ಶಾಸ್ತ್ರಾಧ್ಯಯನ ಮತ್ತು ತನ್ನಿಷ್ಠೆ.

ಪರಮಾತ್ಮನ ಸರ್ವ ಕರ್ತೃತ್ವವನ್ನು ಒಪ್ಪುವುದು ಎಂದರೆ ಸರ್ವ ಕರ್ತೃತ್ವವನ್ನು ಗ್ರಹಿಸುವುದು: ಅಧಿಕಾರಿಯು ತನ್ನ ಕರ್ತೃತ್ವವನ್ನು ಗ್ರಹಿಸದಿರುವುದು; ತಾನು ಮಾಡುವ ಕಾರ್ಯ ಎಂದು ಲೋಕ ರೀತಿಯಲ್ಲಿ ಗ್ರಹೀತವಾದ ಕಾರ್ಯವನ್ನು ತಾನು ಹಾಗೆ ಗ್ರಹಿಸದೆ ಪರಮಾತ್ಮ ಕೃತವೆಂದು ಗ್ರಹಿಸುವುದು, ಇದಕ್ಕನುಕೂಲವಾಗಿ ಪ್ರಪಂಚ ವಸ್ತುವನ್ನು ಗ್ರಹಿಸುವುದು, ಎಂದರೆ ಯಾವ ವಸ್ತುವನ್ನೂ ಪರಮಾತ್ಮನ ಸರ್ವಕರ್ತೃತ್ವಕ್ಕೆ ಲೋಪ ತರದ ರೀತಿಯಲ್ಲಿ, ಯಾವುದೊ ಒಂದು ಪ್ರಮಾಣದ ಆಧಾರದ ಮೇಲೆ ಅನಾದಿ ನಿತ್ಯ ಎಂಬೀ ಮುಂತಾಗಿ ಗ್ರಹಿಸುವ ಸಂಭವವಿಲ್ಲದಿರುವುದು. ಇದು ನಿರಂತರ ಶಾಸ್ತ್ರಾಧ್ಯಯನದಿಂದಲೇ ಪ್ರಾಪ್ತವಾಗುವ ಸಾಧನ. ಅಧ್ಯಯನ ರಹಿತರಿಗೆ ಇವೆಲ್ಲ ಬರಿಯ ಮಾತಾಗುವುದು.

ಭಾಷ್ಯ

ಯೊ ವೇದ ಸಂಹೃತಿಜ್ಞಾನಾತ್ ದೇಹಬಂಧಾದ್ವಿಮುಚ್ಯತೆ।
ಸುಖಜ್ಞಾನಾದಿ ಕರ್ತೃತ್ವಜ್ಞಾನಾತ್ತದ್ವ್ಯಕ್ತಿಮಾವ್ರಜೇತ್ ।

ಸರ್ವದೋಷ ವಿನಿರ್ಮುಕ್ತಂ ಗುಣರೂಪಂ ಜನಾರ್ದನಂ ।
ಜಾನೀಯಾನ್ನ ಗುಣಾನಾಂ ಚ ಭಾಗಹಾನಿಂ ಪ್ರಕಲ್ಪಯೇತ್ ।
ನ ಮುಕ್ತಾನಾಂ ಅಪಿ ಹರೇಃ ಸಾಮ್ಯಂ ವಿಷ್ಣೋರಭಿನ್ನತಾಂ ।
ನೈವ ಪ್ರಚಿಂತಯೇತ್ ತಸ್ಮಾತ್ ಬ್ರಹ್ಮಾದೇಃ ಸಾಮ್ಯಮೇವ ವಾ ।
ಮಾನುಷಾದಿ ವಿರಿಂಚಾಂತಂ ತಾರತಮ್ಯಂ ವಿಮುಕ್ತಿಗಂ ।
ತತೋ ವಿಷ್ಣೋಃ ಪರೋತ್ಕರ್ಷಂ ಸಮ್ಯಜ್ಞಾತ್ವಾ ವಿಮುಚ್ಯತೆ ।
ಇತಿ ಕೌರ್ಮೆ ॥ ೧೪ ॥

(೧೨-೧೩ ನೆಯ ಮಂತ್ರಗಳ ಭಾಷ್ಯದ ಕೊನೆಯ ವಾಕ್ಯವಾದ 'ಸರ್ವಕರ್ತಾರ ಮಾಶೇಶಂ ಸರ್ವಸಂಹಾರಕಾರಣಂ, ಎಂಬ ವಾಕ್ಯದ ಜೊತೆಯಲ್ಲಿ ಈ ಪ್ರಕೃತ ಭಾಷ್ಯವನ್ನು ಅನ್ವಯಿಸಿ ಅರ್ಥಮಾಡಿಕೊಳ್ಳಬೇಕು.)

ಭಾಷ್ಯಾರ್ಥ—(ಪರಮಾತ್ಮನನ್ನು ಸರ್ವಕರ್ತೃ, ಈಶರಿಗೆ ಈಶ, ಸರ್ವ ಸಂಹಾರ ಕಾರಣ ಎಂದು.) ಯಃ – ಯಾವ ಅಧಿಕಾರಿಯು. ವೇದ – ತಿಳಿಯುತ್ತಾನೆಯೊ. (ಸಃ – ಅವನು) ಸಂಹೃತಿಜ್ಞಾನಾತ್ – ಸಂಹಾರ ಕಾರಣ ಎಂಬ ಜ್ಞಾನದಿಂದ. ದೇಹಬಂಧಾತ್ – ದೇಹದಿಂದುಂಟಾದ ಬಂಧದ ದೆಶೆಯಿಂದ. ವಿಮುಚ್ಯತೆ–ಮುಕ್ತನಾಗುತ್ತಾನೆ. ಸುಖ ಜ್ಞಾನಾದಿ ಕರ್ತೃತ್ವ ಜ್ಞಾನಾತ್–ಸುಖ, ಜ್ಞಾನ ಮುಂತಾದುದರ ಕರ್ತೃ ಪರಮಾತ್ಮ ಎಂಬ ಜ್ಞಾನದ ದೆಶೆಯಿಂದ. ತದ್ವ್ಯಕ್ತಿಂ – ಆ ಸುಖ, ಜ್ಞಾನ ಮುಂತಾದುದರ ಸ್ಪಷ್ಟಪಡುವಿಕೆಯನ್ನು. ಆವ್ರಜೇತ್–ಹೊಂದುವನು.

ಈ ಅಂಶವನ್ನು ನಿರೂಪಿಸಿದ ಭಾಷ್ಯಕಾರರು ಅಧಿಕಾರಿಯು ಅನುಸರಿಸಬೇಕಾದ ಕಾರ್ಯವನ್ನು ವಿಧಾನಮಾಡುತ್ತಾರೆ.

ಸರ್ವದೋಷ ವಿನಿರ್ಮುಕ್ತಂ – ಸಮಸ್ತದೋಷಗಳಿಂದ ರಹಿತನಾದ. ಗುಣರೂಪಂ–ಗುಣವೇ ಆದ ಎಂದರೆ ಗುಣವುಳ್ಳವನಲ್ಲ, ಗುಣವೇ ಅವನು ಆದ. ಜನಾರ್ದನಂ – ಸರ್ವಸಂಹಾರಕನಾದ ಪರಮಾತ್ಮನನ್ನು. ಜಾನೀಯಾತ್–ತಿಳಿಯಬೇಕು. ಗುಣಾನಾಂ ಚ–ಪರಮಾತ್ಮನ ಗುಣಗಳಿಗಾದರೊ. ಭಾಗಹಾನಿಂ–ಭಾಗವನ್ನಾಗಲಿ, ಹಾನಿಯನ್ನಾಗಲಿ, ಒಂದು ಭಾಗದಿಂದ

ಹಾನಿಯನ್ನಾಗಲಿ. ನ ಪ್ರಕಲ್ಪಯೇತ್-ಕಲ್ಪನೆಮಾಡಬಾರದು. ಮುಕ್ತಾನಾಂ ಅಪಿ–ಮುಕ್ತರಿಗೂ ಕೂಡ. ಹರೇಃ–ಪರಮಾತ್ಮನ. ಸಾಮ್ಯಂ-ಸಮತೆಯನ್ನು. ವಿಷ್ಣೋಃ–ವಿಷ್ಣುವಿನದೆಶೆಯಿಂದ. ಅಭಿನ್ನತಾಂ–ಅಭೇದವನ್ನು. ನ(ಪ್ರಕಲ್ಪಯೇತ್)– ಕಲ್ಪಿಸಬಾರದು. ತಸ್ಮಾತ್ – ಮೇಲೆ ಹೇಳಿದ ಕಾರಣದಿಂದ. ಬ್ರಹ್ಮಾದೇಃ – ಚತುರ್ಮುಖ ಮೊದಲಾದವರ. ಸಾಮ್ಯಂ ಏವ ವಾ – ಸಮತ್ವವನ್ನೂ ಸಹ. ನ ಏವ ಪ್ರಚಿಂತಯೇತ್ – ಖಂಡಿತವಾಗಿಯೂ ಚಿಂತಿಸಬಾರದು. ಮಾನುಷಾದಿ ವಿರಿಂಚಾಂತಂ – ಮಾನುಷನಿಂದ ಆರಂಭಿಸಿ ಚತುರ್ಮುಖನವರೆಗೆ ಇರುವ. ತಾರತಮ್ಯಂ– ತರತಮ ಭಾವವು. ವಿಮುಕ್ತಿಗಂ – ಮುಕ್ತಿಯಲ್ಲಿಯು, ಪರಮ ಮುಕ್ತಿಯಲ್ಲಿಯೂ ಇರುವುದೇ ಸರಿ. ತತಃ – ಈ ಕಾರಣದ ದೆಶೆಯಿಂದ. (ತತಃ - ಆ ಸಮಸ್ತ ಪ್ರಪಂಚದ ದೆಶೆಯಿಂದ.)ವಿಷ್ಣೋಃ – ಪರಮಾತ್ಮನಿಗೆ. ಪರೋತ್ಕರ್ಷಂ - ಅವಧಿಯಿಲ್ಲದ ಉತ್ಕೃಷ್ಟತೆಯನ್ನು ಎಂದರೆ ಆ ಸಮಸ್ತ ಪ್ರಪಂಚವೂ ವಿಷ್ಣ್ವಾವಾಸ್ಯ ಎಂದರೆ ವಿಷ್ಣುವೇ ಆ ಸರ್ವಕ್ಕೂ ಸೃಷ್ಟಿಕರ್ತಾ ಮತ್ತು ಸಂಹಾರಕರ್ತಾ ಎಂದು. ಸಮ್ಯಕ್ - ನಿಸ್ಸಂದೇಹವಾಗಿ. ಜ್ಞಾತ್ವಾ –ತಿಳಿದು ಎಂದರೆ ಶಾಸ್ತ್ರಧ್ಯಯನದಿಂದ ಇದಕ್ಕೆ ಅನ್ಯಥಾ ಗ್ರಹಿಸುವ ಸಂಭವವನ್ನೇ ಇಲ್ಲದಂತೆ ಮಾಡಿಕೊಂಡು. (ಅಧಿಕಾರಿಯು) ವಿಮುಚ್ಯತೆ – ಮುಕ್ತನಾಗುತ್ತಾನೆ. ಇತಿ ಕೌರ್ಮೆ – ಹೀಗೆ ಕೌರ್ಮದ ಉಕ್ತಿ.

ಸೂಚನೆ

ಪರಮಾತ್ಮನ ಸರ್ವಕರ್ತೃತ್ವ ಜ್ಞಾನವೆಂದರೆ ಪರ್ಯವಸಾನದಲ್ಲಿ ಸುಖಜ್ಞಾನಾದಿ ಕರ್ತೃತ್ವಜ್ಞಾನವೆಂದು ಭಾಷ್ಯದಿಂದ ಸೂಚಿತವಾಗಿದೆ. ದುಃಖಾದಿಗಳು ಹಿಂದೆ ನಿರೂಪಿತವಾದಂತೆ ಪ್ರಮಾದಾತ್ಮಕವಾಗಿ ಅಸತ್ಯವಾದರೆ ಎಂದರೆ ಇಲ್ಲದಿರುವ ವಸ್ತುಗಳಾದರೆ ಪ್ರಪಂಚವು ಅರ್ಥಾತ್ ಸುಖ ಜ್ಞಾನಾದಿರೂಪವಾಯಿತು. ಈ ಸನ್ನಿವೇಶವು ಅಧಿಕಾರಿಯ ಮನಸ್ಸಿನಲ್ಲಿ ಮೂಡಿರುವಾಗ ಸರ್ವಕರ್ತೃತ್ವ, ಪ್ರಪಂಚ ಕರ್ತೃತ್ವ ಅಥವಾ ಸುಖ ಜ್ಞಾನಾದಿ ಕರ್ತೃತ್ವ, ಈ ಮೂರೂ ಒಂದೇ ಅರ್ಥ ಉಳ್ಳವುಗಳಾದುವು.

'ಸರ್ವದೋಷವಿನಿರ್ಮುಕ್ತಂ' ಎಂಬ ಭಾಷ್ಯದಲ್ಲಿನ ದೋಷ ಶಬ್ದಕ್ಕೆ ಶಾಸ್ತ್ರೀಯವಾದ ಅರ್ಥವಿರುವುದು. ಪರಮಾತ್ಮನ ಸರ್ವಕರ್ತೃತ್ವ ಎಂದರೆ

ಸರ್ವ ಸೃಷ್ಟಿಕರ್ತೃತ್ವ ಮತ್ತು ಸರ್ವಸಂಹಾರಕರ್ತೃತ್ವ. ಇವಕ್ಕೆ ಅನನುಕೂಲವಾದ ಭಾವನೆಲ್ಲ ದೋಷ. ಈ ದೋಷದಿಂದ ಪರಮಾತ್ಮನು ದೂರನಾದವನು.

ಅನಂತ ಕಲ್ಯಾಣ ಗುಣಪೂರ್ಣ ಎಂದು ಪರಮಾತ್ಮನನ್ನು ವರ್ಣಿಸುವುದು ಯುಕ್ತ ಎಂದು ಭಾವಿಸಬಹುದು. ಇದರ ಅಭಿಪ್ರಾಯ: ಗುಣಗಳು ಎರಡು ವಿಧ 'ಕಲ್ಯಾಣ ಮತ್ತು ಅಕಲ್ಯಾಣ' ಎಂದಿದ್ದರೆ ಈ ಕಲ್ಪದಲ್ಲಿ ಪರಮಾತ್ಮನು ಗುಣಗಳ ಮಧ್ಯೆ ಕಲ್ಯಾಣಗುಣಗಳು ಯಾವುವೊ ಅವನ್ನುಳ್ಳವನು ಎಂದರ್ಥವಾಗುವುದು. ಒಟ್ಟಿನಮೇಲೆ ಪರಮಾತ್ಮನು ಕೆಲವು ಗುಣಗಳುಳ್ಳವನು ಎಂದಂತಾಯಿತೇ ಹೊರತು ಪೂರ್ಣನೆಂದಾಗಲಿಲ್ಲ. ಇದರಿಂದ ಪರಮಾತ್ಮನು ಸದೋಷನೇ ಆಯಿತು. ಈ ಕಾರಣದಿಂದ ಈ ಭಾವನೆಯು ಸರ್ವಕರ್ತೃತ್ವವೇ ಪರಮಾತ್ಮನ ಲಕ್ಷಣವು ಎಂದು ಸಮರ್ಥಿಸುವ ಉಪನಿಷತ್ತಿನಿಂದ ಬಾಧಿತವಾಯಿತು. ಸರ್ವಕರ್ತೃ ಎಂದರೆ ಸರ್ವಭೂತ ಗುಣಪೂರ್ಣ.

ಸರ್ವ ಕರ್ತೃತ್ವದಿಂದ ಗುಣಪೂರ್ಣತ್ವವು ಖ್ಯಾಪಿತವಾಯಿತೆಂದು ಹಿಂದೆಯೆ ನಿರೂಪಿತವಾಗಿದೆ. ಗುಣಪೂರ್ಣತ್ವವೆಂದರೆ ಗುಣಗಳಿಂದ ಪೂರ್ಣ ಎಂದು ಅರ್ಥ ಹೇಳುವುದು ಶಾಸ್ತ್ರಸಮ್ಮತವಲ್ಲ. ಇದು ಗುಣ ಬೇರೆ ಪರಮಾತ್ಮ ಬೇರೆ ಎಂಬ ಅರ್ಥಕ್ಕೆ ಅವಕಾಶ ಕೊಡಬಹುದು. ಅದರ ಅರ್ಥವನ್ನು ಪರಮಾತ್ಮನ ಸರ್ವಕರ್ತೃತ್ವ ನಿರ್ದೋಷತ್ವವನ್ನು ಸಮರ್ಥನ ಮಾಡಿದ ಭಾಷ್ಯಕಾರರು ಹೇಳುತ್ತಾರೆ "ಗುಣರೂಪಂ" ಎಂದು. ಗುಣವೇ ಪರಮಾತ್ಮ ಎಂದು ಇದರ ಅಭಿಪ್ರಾಯ. ಪರಮಾತ್ಮಪರವಾದ ಈ ಗುಣವು ಪೂರ್ಣವಾದುದು. ಹೀಗೆ ಗುಣಪೂರ್ಣ ಎಂದರೆ ಪೂರ್ಣಗುಣ. ಇದನ್ನೆ ಗುಣರೂಪ ಎಂದು ಹೇಳಿರುವುದು. ಈ ಪೂರ್ಣತ್ವವು ಸರ್ವಕರ್ತೃತ್ವ ನಿರ್ದೋಷತ್ವ ಲಕ್ಷಣವುಳ್ಳುದು. ಈ ಭಾವದ ಅರ್ಥದ ವಿಸ್ತಾರ ಗಾಂಭೀರ್ಯಗಳನ್ನು ತಿಳಿಯಲು ಸಪರಿಕರವಾದ ಶಾಸ್ತ್ರಾಧ್ಯಯನ ಒಂದೇ ಸಾಧನ.

ಪೂರ್ಣವಾದ ಯಾವುದೇ ಒಂದು ಗುಣದಲ್ಲಿ ಭಾಗವನ್ನಾಗಲಿ ಹಾನಿಯನ್ನಾಗಲಿ ಕಲ್ಪನೆ ಮಾಡಿದರೆ ಪರಮಾತ್ಮ ಸಿದ್ಧಿಯಿಲ್ಲ. ಭಾಗ, ಹಾನಿ ಮುಂತಾದುದು ಗುಣದ ಪೂರ್ಣತ್ವವನ್ನು ಅರಿಯದಿರುವುದರ ದೋಷ.

ಮುಕ್ತನು ಜ್ಞಾನಾನಂದರೂಪನಾಗುತ್ತಾನೆ ಎಂಬುದನ್ನು ಸರಿಯಾಗಿ

ಅರ್ಥಮಾಡಿಕೊಳ್ಳದೆ ಅವನಿಗೆ ಪರಮಾತ್ಮನ ಸಾಮ್ಯವನ್ನಾಗಲಿ ಅಭೇದವನ್ನಾಗಲಿ ಚಿಂತಿಸಬಾರದು. ಈ ಜಾತೀಯವಾದ ಚಿಂತನೆಯು ಪರಮಾತ್ಮನ ಸ್ವಾತಂತ್ರ್ಯವನ್ನು ಅರಿಯದ ನಿಮಿತ್ತದಿಂದ ಬರುವುದು. ಈ ದೋಷವು ಪರಿಹಾರ ಹೊಂದುವವರೆಗೂ ಶಾಸ್ತ್ರಾಧ್ಯಯನ ಮಾಡಬೇಕು.

ಬ್ರಹ್ಮಾದಿ ದೇವತೆಗಳಿಗೂ ಪರಮಾತ್ಮ ಸಾಮ್ಯವನ್ನು ಚಿಂತಿಸಬಾರದು. ಈ ದೇವತೆಗಳಿಗೂ ಪರಸ್ಪರ ಸಾಮ್ಯಚಿಂತನೆ ಮಾಡಬಾರದು. ಪರಮಾತ್ಮನ ಸ್ವಾತಂತ್ರ್ಯಜ್ಞಾನವಾದ ಮೇಲೆ ಬ್ರಹ್ಮಾದಿ ದೇವತೆಗಳಿಗೆ ಅವನ ಸಾಮ್ಯವಿದೆ ಎಂಬ ಭಾವ ಅಸಂಭಾವಿತ. ಪರಮಾತ್ಮನ ಜ್ಞಾನವೇ ಜೀವನ ಮಹತ್ವಕ್ಕೆ ನಿಮಿತ್ತ ಎಂದು ಅರಿತಮೇಲೆ ಆಯಾ ದೇವತೆಗಳು ಅದಕ್ಕನುಗುಣವಾದ ಪರಮಾತ್ಮಜ್ಞಾನವುಳ್ಳವರಾಗಿ ಆಯಾ ದೇವತೆಗಳಾದರು. ತಾರತಮ್ಯವುಳ್ಳ ಅವರಲ್ಲಿ ಪರಸ್ಪರ ಸಾಮ್ಯವೂ ಇದರಿಂದ ಅಸಂಭಾವಿತವಾಯಿತು.

ಮನುಷ್ಯ ಮೊದಲು ಚತುರ್ಮುಖನವರೆಗೆ ಎಲ್ಲ ವಿಧ ಜೀವರೂ ತರತಮ ಭಾವವುಳ್ಳವರು. ಈ ತಾರತಮ್ಯಕ್ಕೆ ಅವರವರ ಪರಮಾತ್ಮಜ್ಞಾನವೇ ನಿಮಿತ್ತ. ಅವರವರ ಸ್ವರೂಪವೆಂಬುದಕ್ಕೆ ಈ ಪರಮಾತ್ಮಜ್ಞಾನವೇ ಕಾರಣ. ಈ ಅವರವರ ಜ್ಞಾನವೇ ಅವರವರ ಮುಕ್ತಿಗೆ ಕಾರಣವಾದುದರಿಂದ ಈ ತಾರತಮ್ಯವು ಮುಕ್ತಿಯಲ್ಲಿಯೂ ಇರುವುದು. ಇವೆಲ್ಲವನ್ನು ಶಾಸ್ತ್ರಾಧ್ಯಯನದಿಂದ ತಿಳಿಯುವುದೇ ವಿಷ್ಣುವಿನ ಸರ್ವೋತ್ತಮತ್ವಜ್ಞಾನ. ಇದೇ ಮುಕ್ತಿಸಾಧನ.

ಫಲಿತ ಮಂತ್ರಾರ್ಥ

(ಪರಮಾತ್ಮನ) ಸೃಷ್ಟಿಕರ್ತೃತ್ವ ಮತ್ತು ಜಗತ್ಸಂಹಾರ ಕರ್ತೃತ್ವ ಇವೆರಡನ್ನೂ ಜೊತೆಯಲ್ಲಿ ಎಂದರೆ ಒಂದರಲ್ಲಿ ಮತ್ತೊಂದು ಅಡಗಿರುವುದನ್ನಾಗಿ ಯಾವನು ತಿಳಿಯುವನೊ ಅವನು ಸಂಹಾರ ಕರ್ತೃತ್ವಜ್ಞಾನದಿಂದ ಮೃತ್ಯುವನ್ನು ದಾಟಿ ಎಂದರೆ ನಿಖಿಲ ಕ್ಲೇಶದಿಂದ ಮುಕ್ತನಾಗಿ ಸೃಷ್ಟಿಕರ್ತೃತ್ವಜ್ಞಾನದಿಂದ ಅಮೃತತ್ವವನ್ನು ಎಂದರೆ ಆನಂದಾನುಭವನನ್ನು ಹೊಂದುತ್ತಾನೆ. ॥ ೧೪ ॥

೧೫

ಖಂಡಾರ್ಥವು ೧೫ ರಿಂದ ೧೯ ನೆ ಮಂತ್ರಗಳ ಪರಿಚಯವನ್ನು ಹೀಗೆ ಮಾಡಿಸುವುದು.

ಖಂಡಾರ್ಥ—ಏವಮಾದ್ಯಮಂತ್ರದ್ವಯೇನೋಕ್ತದಿಶಾ ಪ್ರಾಪ್ತಾಧಿಕಾರಂ ಶಿಷ್ಯಂಪ್ರತಿ ಅನೇಜದೇಕಮಿತ್ಯಾದಿನಾ ಭಗವತ್‌ಸ್ವರೂಪಂ ನಿರೂಪ್ಯ ಯಸ್ತು ಸರ್ವಾಣೀತ್ಯಾದಿ ಸಾರ್ಧಮಂತ್ರದ್ವಯೇನ ತತ್ಸಾಕ್ಷಾತ್ಕಾರೊ ಮೋಕ್ಷಹೇತುರಿತ್ಯುಕ್ತಂ। ಸ ಚ ಸಾಕ್ಷಾತ್ಕಾರೊ ನ ಶ್ರವಣಾದಿಮಾತ್ರೇಣ। ಕಿಂತೀಶ್ವರ ಪ್ರಸಾದೇನ ಭವತೀತ್ಯತೊ ಅನುಷ್ಠಿತ ಶ್ರವಣಾದಿಕೇನಾಪಿ ತತ್ಸಾಕ್ಷಾತ್ಕಾರಾರ್ಥಂ ಭಗವತ್ಪ್ರಾರ್ಥನಂ ಕಾರ್ಯಮಿತಿ ಭಾವೇನ ಪ್ರಾರ್ಥನಾಪ್ರಕಾರಮಾಹ । ಹಿರಣ್ಮಯೇತ್ಯಾದಿನಾ ಸ್ಮರೇತ್ಯಂತೇನ ಗ್ರಂಥೇನ।

ಸೂಚನೆ

ಶಾಸ್ತ್ರಜನ್ಯವಾದ ಪರಮಾತ್ಮಜ್ಞಾನದಿಂದಲೇ ಪರಮಾತ್ಮ ಪ್ರಾಪ್ತಿ ರೂಪವಾದ ಮೋಕ್ಷ ಎಂದು ಹಿಂದೆ ನಿರೂಪಿತವಾಯಿತು. ಈ ನಿಯಮವು ಪ್ರಾಪ್ತವಾಗುವ ಮಹಿಮೆಯು ಈ ನಿಯಮುದಲ್ಲಿಯೆ ಅಡಗಿರುವುದು. ಇದನ್ನು ತಿಳಿಯುವ ಕ್ರಮ ಹೀಗೆ.

ಶಾಸ್ತ್ರಜನ್ಯಜ್ಞಾನದಿಂದ ಮೋಕ್ಷವಾಗುವುದಾದರೆ ಮೋಕ್ಷ ಕಾರಣತ್ವ ಜ್ಞಾನಕ್ಕೆ ಬಂದಿತೇ ಹೊರತು ಪರಮಾತ್ಮನಿಗಲ್ಲ; ಈ ನಿಮಿತ್ತದಿಂದ ಪರ ಮಾತ್ಮನಿಗೆ ಸರ್ವಕರ್ತೃತ್ವವು ಕೂಡುವುದಿಲ್ಲ; ಎಂಬ ಆಕ್ಷೇಪಕ್ಕೆ ಇದು ವರೆಗೆ ಸಮಾಧಾನ ಬಂದಿಲ್ಲ. ಈ ಆಕ್ಷೇಪ ಪರಿಹಾರಕ್ಕೋಸ್ಕರ ೧೫ ನೆಯ ಮಂತ್ರವು ಪ್ರಸಕ್ತವಾಗಿದೆಯೆಂದು ಖಂಡಾರ್ಥವು ಈರೀತಿ ನಿರೂಪಿಸುವುದು. ಈ ಸಂದರ್ಭದಲ್ಲಿ ಈ ಉಪನಿಷತ್ತಿನ ಮೊದಲಿನಿಂದಲೂ ಸಿದ್ಧಾಂತಿತವಾದ ವಿಷಯವನ್ನು ಸಂಗ್ರಹಿಸುವುದು.

ಏವಂ – ಉಕ್ತಪ್ರಕಾರವಾಗಿ. ಆದ್ಯಮಂತ್ರದ್ವಯೇನ – ಮೊದಲ ನೆಯ ಎರಡು ಮಂತ್ರಗಳಿಂದ. ಉಕ್ತದಿಶಾ – ಸಿದ್ಧಾಂತಿತವಾದ ಮಾರ್ಗ ದಲ್ಲಿ. ಪ್ರಾಪ್ತಾಧಿಕಾರಂ – ಹೊಂದಿದ ಅಧಿಕಾರವುಳ್ಳ. ಶಿಷ್ಯಂಪ್ರತಿ – ಶಿಷ್ಯನನ್ನು ಕುರಿತು. ಅನೇಜದೇಕಂ ಇತ್ಯಾದಿನಾ 'ಅನೇಜ ದೇಕಂ' ಎಂಬ ಪದದಿಂದಾರಂಭಿಸುವ ಮಂತ್ರಸಂದರ್ಭದಿಂದ. ಭಗವತ್ಸ್ವರೂಪಂ – ಪರಮಾತ್ಮನ ಸ್ವರೂಪವನ್ನು. ನಿರೂಪ್ಯ – ಉಪಪಾದಿಸಿ. ಯಸ್ತು ಸರ್ವಾಣೀತ್ಯಾದಿ ಸಾರ್ಧ ಮಂತ್ರ ದ್ವಯೇನ – 'ಯಸ್ತು ಸರ್ವಾಣಿ' ಎಂಬ ಪದದಿಂದ ಆರಂಭಿಸುವ ಅರ್ಧ

ಸಹಿತವಾದ ಎರಡು ಮಂತ್ರಗಳಿಂದ. ತತ್ಸಾಕ್ಷಾತ್ಕಾರಃ – ಆ ಪರಮಾತ್ಮನ ಸಾಕ್ಷಾತ್ಕಾರವು. ಮೋಕ್ಷಹೇತುಃ – ಮೋಕ್ಷಸಾಧನ. ಇತಿ ಉಕ್ತಂ – ಹೀಗೆ ಸಿದ್ಧಾಂತಿತವಾಯಿತು. ಸ ಚ ಸಾಕ್ಷಾತ್ಕಾರಃ – ಆ ಸಾಕ್ಷಾತ್ಕಾರವಾದರೊ. ನ ಶ್ರವಣಾದಿ ಮಾತ್ರೇಣ – ಶ್ರವಣ ಮೊದಲಾದ ರೂಪವುಳ್ಳ ಅಧ್ಯಯನ ಮಾತ್ರದಿಂದಾಗುವುದಿಲ್ಲ. ಕಿಂತು – ಹಾಗಾದರೆ ಯಾವುದರಿಂದ ಎಂದರೆ. ಈಶ್ವರಪ್ರಸಾದೇನ – ಪರಮಾತ್ಮನ ಅನುಗ್ರಹದಿಂದ. ಭವತಿ – ಆಗುತ್ತದೆ. ಇತಿ ಅತಃ – ಈರೀತಿ ವಸ್ತು ತತ್ತ್ವವಿರುವ ಕಾರಣ. ಅನುಷ್ಠಿತ ಶ್ರವಣಾದಿ ಕೇನ ಅಪಿ – ಶ್ರವಣ ಮೊದಲಾದ ರೂಪವುಳ್ಳ ಅಧ್ಯಯನವನ್ನು ಅನು ಷ್ಠಾನಕ್ಕೆ ತಂದ ಅಧಿಕಾರಿಯಿಂದಲೂ ಕೂಡ (ಎಂದರೆ ಅಧಿಕಾರಿಯು ಅಧ್ಯಯನಶೀಲನಾಗಿರುವುದರ ಜೊತೆಯಲ್ಲಿ.) ತತ್ಸಾಕ್ಷಾತ್ಕಾರಾರ್ಥಂ – ಆ ಪರಮಾತ್ಮನ ಸಾಕ್ಷಾತ್ಕಾರಕ್ಕೋಸ್ಕರ. ಭಗವತ್ಪ್ರಾರ್ಥನಂ – ಪರ ಮಾತ್ಮನ ಪ್ರಾರ್ಥನೆಯು. ಕಾರ್ಯಂ – ಮಾಡಲ್ಪಡತಕ್ಕದ್ದು. ಇತಿ – ಈ. ಭಾವೇನ – ಅಭಿಪ್ರಾಯದಿಂದ. ಪ್ರಾರ್ಥನಾಪ್ರಕಾರಂ – ಪ್ರಾರ್ಥನೆಯ ಕ್ರಮವನ್ನು. ಆಹ– ಹೇಳುವನು. ಹಿರಣ್ಮಯೇನೇತ್ಯಾದಿನಾ – 'ಹಿರಣ್ಮಯ' ಎಂಬ ಪದದಿಂದ ಆರಂಭಿಸುವ ಮಂತ್ರದಿಂದ. ಸ್ಮರೇತ ಇತ್ಯಂತೇನ – 'ಸ್ಮರೇತ' ಎಂಬ ಪದವು ಕೊನೆಯಾಗಿ ಉಳ್ಳ. ಗ್ರಂಥೇನ – ಮಂತ್ರ ಗ್ರಂಥದಿಂದ.

ಸೂಚನೆ

ಅಧಿಕಾರವಿಲ್ಲದೆ ಭಗವತ್‌ಸ್ವರೂಪಜ್ಞಾನವಿಲ್ಲ. ಎಂದರೆ ಭಗವತ್ ಸ್ವರೂಪವನ್ನು ಹೇಳುವ ಮಂತ್ರವಾಕ್ಯದ ಅರ್ಥವಾಗುವುದಿಲ್ಲ. ಅಧಿಕಾರ ವಿಲ್ಲದವರಿಗೆ ಪೂರ್ವದಲ್ಲಿಯೆ ಯಾವುದೊ ಒಂದು ರೀತಿಯಲ್ಲಿ ಅವರ ಮನ ಸ್ಸಿನಲ್ಲಿದ್ದ ಕೆಲವು ತತ್ತ್ವವಿಷಯಕ್ಕೆ ಸಂಬಂಧಪಟ್ಟ ಅಭಿಪ್ರಾಯಗಳಂತೆ ಮಂತ್ರಪದಗಳಿಗೆ ವ್ಯಾಖ್ಯಾನವಾಗಿ ತಮಗೆ ಅರ್ಥವಾಯಿತೆಂಬ ತೃಪ್ತಿ ಉಂಟಾಗುವುದೇ ಹೊರತು ನ್ಯಾಯವಾದ ವಾಕ್ಯಾರ್ಥಜ್ಞಾನವಾಗುವುದಿಲ್ಲ.

'ಪಶ್ಯತಿ' ಎಂಬ ಪದಕ್ಕೆ 'ಜ್ಞಾನ' ಎಂದು ಹಿಂದೆ ವ್ಯಾಖ್ಯಾನ ವಾಗಿರುವುದು. ಆ ಜ್ಞಾನವನ್ನೇ ಖಂಡಾರ್ಥದಲ್ಲಿ 'ಸಾಕ್ಷಾತ್ಕಾರ' ಎಂದು ಕರೆದಿರುವುದು. ಇದರಿಂದ ಒಟ್ಟು ಅರ್ಥಜ್ಞಾನದ ಪರಿಪಾಕವೇ ಸಾಕ್ಷಾತ್ಕಾರ

ವೆಂದು ಸಿದ್ಧವಾಗುವುದು. ಈ ಸಾಕ್ಷಾತ್ಕಾರವು ಲೋಕಸಿದ್ಧವಾದ ಪ್ರತ್ಯಕ್ಷದಂತೆ ಎಂದು ತಿಳಿಯಬಾರದು. ಲೋಕಸಿದ್ಧವಾದ ಪ್ರತ್ಯಕ್ಷವು ತನ್ನ ಕಾರಣನನ್ನಾಗಿ ಜ್ಞಾನವನ್ನಪೇಕ್ಷಿಸುವುದಿಲ್ಲ. ಒಂದು ಘಟವನ್ನು ಪ್ರತ್ಯಕ್ಷೀಕರಿಸುವವನಿಗೆ ಅದೇ ಘಟದ ಜ್ಞಾನವಿರಬೇಕಾದುದಿಲ್ಲ. ಆದರೆ ಪರಮಾತ್ಮಸಾಕ್ಷಾತ್ಕಾರವಾದರೂ ಶಾಸ್ತ್ರಜನ್ಯವಾದ ಪರಮಾತ್ಮಸ್ವರೂಪಜ್ಞಾನದ ಪರಿಪಾಕಾವಸ್ಥೆ. ಈ ಸೂಕ್ಷ್ಮಭಾವವನ್ನು ತಿಳಿದು ಪರಮಾತ್ಮಾಪರೋಕ್ಷವುಳ್ಳವರು ಎಂದು ಪ್ರಸಿದ್ಧರಾದವರನ್ನು ಶಾಸ್ತ್ರಾಧ್ಯಯನದಿಂದುಂಟಾದ ಜ್ಞಾನದ ಪರಿಪಾಕಾವಸ್ಥೆಯುಳ್ಳವರು ಎಂದು ಖಚಿತಮಾಡಿಕೊಂಡ ಹೊರತು ನಮ್ಮ ಜ್ಞಾನಕ್ಕೆ ನಿಯಾಮಕರಾದವರನ್ನಾಗಿ ಭಾವಿಸಬಾರದು. ಈ ನಿರ್ಣಯವಿಲ್ಲದವರಿಗೆ ಗುರುನಿಯಮವಿಲ್ಲದೆ ಹೋಗಿ ಈ ಜನ್ಮದಲ್ಲಿ ಶಾಸ್ತ್ರಸಂಬಂಧವೇ ಇಲ್ಲದೇ ಹೋಗುವುದು. ಒಂದು ವೇಳೆ ಶಾಸ್ತ್ರವು ಪರಿಚಿತವಾದಂತೆ ಕಂಡುಬಂದರೂ ಅದು ಅನ್ಯಾಯಾಧ್ಯಯನವಾಗುವುದು.

'ಸಾಕ್ಷಾತ್ಕಾರವು ಕೇವಲ ಅಧ್ಯಯನದಿಂದುಂಟಾಗುವುದಿಲ್ಲ. ಅದು ಈಶ್ವರಪ್ರಸಾದದಿಂದ, ಎಂಬಲ್ಲಿ ಗಂಭೀರಭಾವವಿರುವುದು. ಈಶ್ವರಪ್ರಸಾದವೆಂದರೆ ಈಶ್ವರೇಚ್ಛೆ. ಅಧ್ಯಯನದಿಂದ ಸಾಕ್ಷಾತ್ಕಾರವಾದರೆ ಪರಮಾತ್ಮನ ಸರ್ವಕರ್ತೃತ್ವಕ್ಕೆ ಲೋಪ ಬರುವುದು. ಈಶಾವಾಸ್ಯ' ಎಂಬಲ್ಲಿ ಸರ್ವಕ್ಕೂ ಈಶ್ವರೇಚ್ಛೆಯೇ ನಿಮಿತ್ತ ಎಂದು ಸಿದ್ಧವಾಗಿದೆ. ಇದರಿಂದ ಅಧ್ಯಯನವೂ ಈಶ್ವರೇಚ್ಛೆಯಿಂದಾದುದು ಎಂದು ಅರ್ಥವಾಯಿತು. ಅಧ್ಯಯನ ಈಶ್ವರ ಪ್ರಸಾದ. ಇದರಿಂದ ಸಾಕ್ಷಾತ್ಕಾರವೆಂದರೆ ಈಶ್ವರ ಪ್ರಸಾದದಿಂದ ಸಾಕ್ಷಾತ್ಕಾರ ಎಂದು ಸೂಚಿತವಾಯಿತು. ಅಧ್ಯಯನದಿಂದ ಸಾಕ್ಷಾತ್ಕಾರ ಎಂದು ತಿಳಿಯುವ ಸಂದರ್ಭದಲ್ಲಿ ಅಧ್ಯಯನದಿಂದುಂಟಾದ ಈಶ್ವರಪ್ರಸಾದದಿಂದ ಸಾಕ್ಷಾತ್ಕಾರ ಎಂಬ ಅರ್ಥವಾಗುವುದು.

ಈಶ್ವರಪ್ರಸಾದದಿಂದ ಸಾಕ್ಷಾತ್ಕಾರವಾದ ಮೇಲೆ ಅಧ್ಯಯನದಿಂದೇನು ಎಂದು ಶಂಕಿಸಬಾರದು. ಅಧ್ಯಯನ ವಿಷಯವಾದ ಶಾಸ್ತ್ರವು ಈಶ್ವರ ಸ್ವರೂಪವನ್ನು ತಿಳಿಸುವ ಭಾಷೆ. ಇದಿಲ್ಲದೆ ಈಶ್ವರ ಸ್ವರೂಪ ಸಾಕ್ಷಾತ್ಕಾರವೇ ಸಂಭಾವಿತವಲ್ಲ. ಹೀಗೆ ಈಶ್ವರಪ್ರಸಾದವೇ ಅಧ್ಯಯನರೂಪವಾಯಿತು.

ಅಧ್ಯಯನವೂ ಈಶ್ವರ ಪ್ರಸಾದ. ಸಾಕ್ಷಾತ್ಕಾರವೂ ಈಶ್ವರಪ್ರಸಾದ. ಇವೆರಡರ ಸಾಧ್ಯಸಾಧನಭಾವವೂ ಈಶ್ವರ ಪ್ರಸಾದ. ಸರ್ವವೂ ಈಶಾವಾಸ್ಯ ಎಂದು ಮುಂದಿನ ಮಂತ್ರಗಳಲ್ಲಿ ಪರಮಾತ್ಮನ ಅನುಗ್ರಹಕ್ಕೋಸ್ಕರ ಪ್ರಾರ್ಥನೆಯು ಆವಶ್ಯಕವಾಯಿತು. ಇದನ್ನು ಸಪರಿಕರವಾಗಿ ತಿಳಿಯುವುದೇ ಶ್ರವಣ ಮನನ ನಿದಿಧ್ಯಾಸನಾತ್ಮಕವಾದ ಶಾಸ್ತ್ರಜಿಜ್ಞಾಸಾ ರೂಪವಾದ ಅಧ್ಯಯನ.

ಈ ಪ್ರಾರ್ಥನೆಯು ಲೌಕಿಕ ರೀತಿಯ ಪ್ರಾರ್ಥನೆಯಲ್ಲ. ಅದು ಹಿಂದೆಯೇ ಮಾಡಿದ ಶಾಸ್ತ್ರಾಧ್ಯಯನದ ಪ್ರಕಾರಾಂತರವಾಗಿರುವುದು. ಎಂದರೆ ಅಧಿಕಾರಿಯ ಅಧ್ಯಯನವು ಪ್ರಾರ್ಥನೆ ಪ್ರಧಾನವಾಗಿರುವುದು ಮತ್ತು ಪ್ರಾರ್ಥನೆಯೂ ಅಧ್ಯಯನರೂಪವಾಗಿರುವುದು. ಹೀಗೆ ಅಧ್ಯಯನವೂ ಈಶ್ವರ ಪ್ರಾರ್ಥನೆಯೂ ಒಂದೇ ರೂಪವಾಗುವ ಸಂದರ್ಭದಲ್ಲಿ ಸರ್ವವೂ ಪರಮಾತ್ಮಪ್ರಸಾದಾಯತ್ತ ಎಂಬುದು ಸುಸ್ಪಷ್ಟವಾಗುವುದು.

ಸರ್ವವೂ ಈಶ್ವರಪ್ರಸಾದ ಎಂದು ತಿಳಿಯುವುದರಲ್ಲಿ ಅದಕ್ಕೆ ಉಪಪಾದಕವಾಗಿ ಸರ್ವವೂ ಆನಂದರೂಪವೆಂಬ ಮೋಹ ಶೋಕಗಳಿಂದ ದೂರವಾದ ನಿರ್ಣಯ ಎಂದರೆ ಗ್ರಹಣವಿರುವುದು.

ಈ ಭಾವಗಳನ್ನೆಲ್ಲಾ ಶಾಸ್ತ್ರಾಧ್ಯಯನದಿಂದಲೇ ತಿಳಿಯಬೇಕಾದುದೆಂದು ಖಂಡಾರ್ಥದ ಅಭಿಪ್ರಾಯ.

ಮಂತ್ರ

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ।
ತತ್ತ್ವಂ ಪೂಷರ್ನ ಅಪಾವೃಣು ಸತ್ಯಧರ್ಮಾಯ ದೃಷ್ಟಯೆ
॥ ೧೫ ॥

ಖಂಡಾರ್ಥ

ಹಿರಣ್ಮಯಿನ ಹಿರಣ್ಮಯಂ। ಜ್ಯೋತಿರ್ಮಯಂ। ಪಿಬತಿ ರಸಾನ್ ತ್ರಾಯುತೆ ಜಗತ್ ಇತಿ ಚ ಪಾತ್ರಂ। ತೇನ ಹಿರಣ್ಮಯೇನ ಪಾತ್ರೇಣ ಸೂರ್ಯಮಂಡಲೇನ। ಸತ್ಯಸ್ಯ ಸದ್ಗುಣಪೂರ್ಣಸ್ಯ ಸೂರ್ಯಮಂಡಲಸ್ಥಸ್ಯ ತವ ಮುಖಂ। ಉಪಲಕ್ಷಣಂ ಚೈತತ್। ವಪುಃ ಸರ್ವದಾ ಅಪಿಹಿತಂ ಅಸ್ತಿ

ಹೇ ಪೂರ್ಷ ಪೂರ್ಣ । ಪುಷಪುಷ್ಟಾವಿತಿ ಧಾತೋಃ । ತದ್ವಪುಃ ತ್ವಂ ಸತ್ಯಧರ್ಮಾಯ ಸತ್ಯಂ ಭಗವಂತಂ ಹೃದಯೆ ಧಾರಯತೀತಿ ವ್ಯುತ್ಪತ್ತ್ಯಾ ತ್ವದ್ಧ್ಯಾನಾದಿಮತೆ ಭಕ್ತಾಯ ಮಹ್ಯಂ ದೃಷ್ಟಯೆ ಮಮ ತ್ವದ್ದರ್ಶನಾರ್ಥಂ ಅಪಾವೃಣು ಅಪಗತಾವರಣಂ ಕುರು ॥ ೧೫ ॥

ಮಂತ್ರ ಪದವಿಭಾಗ— ಹಿರಣ್ಮಯೇನ, ಪಾತ್ರೇಣ, ಸತ್ಯಸ್ಯ, ಅಪಿಹಿತಂ, ಮುಖಂ, ತತ್, ತ್ವಂ, ಪೂರ್ಷ, ಅಪಾವೃಣು, ಸತ್ಯಧರ್ಮಾಯ, ದೃಷ್ಟಯೆ ।

ಮಂತ್ರಸ್ಥಪದಗಳ ಅನ್ವಯ

ಹಿರಣ್ಮಯೇನ, ಪಾತ್ರೇಣ, ಸತ್ಯಸ್ಯ, (ತವ), ಮುಖಂ, ಅಪಿಹಿತಂ (ಅಸ್ತಿ.) (ಹೇ) ಪೂರ್ಷ, ತತ್, ತ್ವಂ, ಸತ್ಯಧರ್ಮಾಯ, ದೃಷ್ಟಯೆ ಅಪಾವೃಣು ॥

ಖಂಡಾರ್ಥದಂತೆ ಈ ಪದಗಳ ಅರ್ಥ

ಹಿರಣ್ಮಯಿನ – ಹಿರಣ್ಯದಂತೆ ಇರುವುದು. ಹಿರಣ್ಮಯಂ–ಹಿರಣ್ಮಯ ಎನಿಸುವುದು. ಜ್ಯೋತಿರ್ಮಯಂ – ಪ್ರಕಾಶಮಯ. (ಎಂದು ಅರ್ಥ.) ಪಿಬತಿ – ಕುಡಿಯುತ್ತದೆ. ರಸಾ – ಸಾರಗಳನ್ನು. ತ್ರಾಯತೆ – ಕಾಪಾಡುತ್ತದೆ. ಜಗತ್ –ಪ್ರಪಂಚವನ್ನು. ಇತಿ ಚ– ಈ ನಿಮಿತ್ತದಿಂದಲೂಕೂಡ. ಪಾತ್ರಂ – ಪಾತ್ರವೆನಿಸುವುದು. ತೇನ–ಆ. ಹಿರಣ್ಮಯೇನ – ಜ್ಯೋತಿರ್ಮಯವಾದ. ಪಾತ್ರೇಣ – ಸೂರ್ಯಮಂಡಲೇನ – ಸೂರ್ಯನ ಮಂಡಲದಿಂದ. ಸತ್ಯಸ್ಯ – ಸದ್ಗುಣಪೂರ್ಣಸ್ಯ ನಿರ್ದೋಷನಾದ ಮತ್ತು ಗುಣಪೂರ್ಣನಾದ. ಸೂಯಮಂಡಲಸ್ಥಸ್ಯ – ಸೂರ್ಯನ ಮಂಡಲದಲ್ಲಿರುವ. ತವ – ನಿನ್ನ. ಮುಖಂ – ಮುಖವು. ಏತತ್ – ಇದು. ಉಪಲಕ್ಷಣಂ – ಇಡೀ ಶರೀರಕ್ಕೆ ಸೂಚಕವಾದ ಪದವು. (ಈ ಸೂಚಿತವಾದ ಅರ್ಥ) ವಪುಃ – ಶರೀರ (ಎಂದು) (ಇದು) ಸರ್ವದಾ – ಯಾವಾಗಲೂ. ಅಪಿಹಿತಂ – ಮುಚ್ಚಲ್ಪಟ್ಟದು. ಅಸ್ತಿ – ಆಗಿದೆ. ಹೇ ಪೂರ್ಷ – ಎಲೈ ಪೂರ್ಣನೇ. ಪುಷ್ – ಪುಷ್ ಎಂಬ ಧಾತು. ಪುಷ್ಟಾ – ಪುಷ್ಟಿ ಎಂಬ ಅರ್ಥದಲ್ಲಿ. ಇತಿ ಧಾತೋಃ–ಹೀಗೆ ಧಾತು ವೃತ್ತಿಯಿರುವುದರ ದೆಶೆಯಿಂದ. ತತ್ –ವಪುಃ –ಆ ಶರೀರವನ್ನು. ಸತ್ಯಧರ್ಮಾಯ – ಸತ್ಯಂ–

ಸತ್ಯನಾದ ಎಂದರೆ ಸದ್ಗುಣಪೂರ್ಣನಾದ. ಭಗವಂತಂ – ಪರಮಾತ್ಮನನ್ನು. ಹೃದಯೆ – ಹೃದಯದಲ್ಲಿ. ಧಾರಯತಿ – ಧರಿಸುತ್ತಾನೆ. ಇತಿ – ಈ ಕಾರಣದಿಂದ. (ಎಂಬ) – ವ್ಯುತ್ಪತ್ತ್ಯಾ – ಪದನಿರ್ವಚನದಿಂದ. ತ್ವದ್ಧ್ಯಾನಾದಿಮತೆ – ನಿನ್ನ ಧ್ಯಾನ ಮೊದಲಾದುದುಳ್ಳ. ಭಕ್ತಾಯ – ಭಕ್ತನಾದ ಮಹ್ಯಂ – ನನ್ನ. ದೃಷ್ಟಯೆ ನೋಡುವುದಕ್ಕೋಸ್ಕರ (ಎಂದರೆ) ಮಮ – ನನಗೆ. ತ್ವದ್ದರ್ಶನಾರ್ಥಂ – ನಿನ್ನ ದರ್ಶನಕ್ಕೋಸ್ಕರ. ಅಪಾವೃಣು – ಅಪಗತಾವರಣಂ – ಹೋದ ಆವರಣವುಳ್ಳುದನ್ನಾಗಿ. ಕುರು – ಮಾಡು.

ಸೂಚನೆ

ಸೂರ್ಯಮಂಡಲವು ಜ್ಯೋತಿರ್ಮಯವಾಗಿ ಪಾತ್ರರೆನಿಸಲು ಆ ರೂಪದಲ್ಲಿ ಪರಮಾತ್ಮನು ಅಲ್ಲಿರುವುದೇ ನಿಮಿತ್ತ, ಪರಮಾತ್ಮನ ಶರೀರವು ಜ್ಯೋತಿರ್ಮಯ. ಇದರಿಂದ ಅವನು ಸರ್ವ ಪ್ರಕಾಶಕ ಎಂದು ಅರ್ಥವಾಯಿತು. ಇದರ ಪರ್ಯವಸಾನಾರ್ಥ ಅವನು ಸರ್ವ ಸೃಷ್ಟಿಕರ್ತೃ ಎಂದು. ಸಂಹಾರ ಕರ್ತೃತ್ವವೂ ಈ ಸರ್ವ ಸೃಷ್ಟಿ ಕರ್ತೃತ್ವದ ಜೊತೆಯಲ್ಲಿ ಸಿದ್ಧಿಸುವುದು.

ಪರಮಾತ್ಮನು ಸ್ವತಂತ್ರ. ಅವನು ಸರ್ವ ರಸವನ್ನು ಪಾನಮಾಡುತ್ತಾ ಎಂದರೆ ಪೂರ್ಣನಾದ ಅವನು ಸರ್ವ ವಸ್ತುವಿನಲ್ಲಿಯೂ ಆನಂದರೂಪನಾಗಿ ಸಾರಭಾಗವಾಗಿರುವನು ಎಂದು ಅಭಿಪ್ರಾಯ. ಹೀಗೆ ಅವನು ಸರ್ವದರಲ್ಲಿದ್ದು ಸರ್ವಕ್ಕೂ ರಕ್ಷಕನಾಗಿರುವನು.

ತೇಜೋರೂಪನಾದ ಅವನು ಸೂರ್ಯ ಮಂಡಲದಲ್ಲಿದ್ದು ಸೂರ್ಯನಿಗೆ ಪ್ರವರ್ತಕನಾಗಿರುವನು. ಪ್ರಕಾಶರೂಪನಾದ ಅವನನ್ನು ತಿಳಿಯುವುದೆಂದರೆ ಅವನನ್ನು ಹೃದಯದಲ್ಲಿ ಧರಿಸುವುದು. ಈ ಧರಿಸಿರುವುದರ ಗುರುತೇ ಶ್ರವಣ, ಮನನ, ನಿದಿಧ್ಯಾಸನ ರೂಪವಾದ ಧ್ಯಾನ. ಈ ಧ್ಯಾನವುಳ್ಳವನಿಗೇ ಶಾಸ್ತ್ರದಲ್ಲಿ ಭಕ್ತನೆಂದು ಹೆಸರು. ಸೂರ್ಯಮಂಡಲಸ್ಥನಾದ ಪರಮಾತ್ಮನನ್ನು ನೋಡುವುದೆಂದರೆ ಸರ್ವತ್ರ ಏಕನಾದ ಪರಮಾತ್ಮನನ್ನು ನೋಡುವುದು ಎಂದು ಸಿದ್ಧಿಸುವುದು.

ಹೃದಯದಲ್ಲಿರುವ ಪರಮಾತ್ಮನ ದರ್ಶನವೆಂದರೆ ಸರ್ವತ್ರ ಸರ್ವಪ್ರವರ್ತಕನಾದ, ಜ್ಯೋತಿರ್ಮಯನಾದ, ಪರಮಾತ್ಮನ ದರ್ಶನ. ಇದೇ ಸೂರ್ಯ ಮಂಡಲಸ್ಥನಾದ ಪರಮಾತ್ಮನ ದರ್ಶನ.

ಭಕ್ತನು ಪರಮಾತ್ಮನ ದರ್ಶನವನ್ನು ಹೊಂದಲು ಪರಮಾತ್ಮನೇ ಸಾಧನ. ಅವನೇ ಪ್ರಸನ್ನನಾಗಿ ತನ್ನನ್ನು ತಾನು ತೋರಿಸಿಕೊಳ್ಳಬೇಕು.

ಜ್ಞಾನಿಗೆ ಶಾಸ್ತ್ರದಲ್ಲಿ ಭಕ್ತ ಎಂದು ಹೆಸರು. ಶಾಸ್ತ್ರದಲ್ಲಿ ಪ್ರಯುಕ್ತವಾದ ಭಕ್ತಿ ಅಥವಾ ಭಕ್ತ ಎಂಬ ಶಬ್ದವನ್ನು ಅನ್ಯಪರವಾಗಿ ಮಾಡಬಾರದು ಎಂದು ಖಂಡಾರ್ಥವು ಸೂಚಿಸುವುದು.

ಒಟ್ಟಿನಲ್ಲಿ ಹಿಂದಿನ ಮಂತ್ರಗಳಲ್ಲಿ ನಾವು ಅಧ್ಯಯನ ಮಾಡಿದ ವಿಷಯವೇ ಈ ಮಂತ್ರದಲ್ಲಿ ಪ್ರಾರ್ಥನಾರೂಪವಾಗಿ ಪ್ರಸಕ್ತವಾಗಿದೆ. ಇದರಿಂದ ಶಾಸ್ತ್ರಾತಿರಿಕ್ತವಾದ ಪ್ರಾರ್ಥನೆಯೇ ಇಲ್ಲವೆಂದು ತಿಳಿಯಬೇಕು. ಹಾಗೆ ಪ್ರಾರ್ಥನೆಯ ಸ್ವರೂಪವು ಬೇರೆ ಇರುವುದಾದರೆ ಪರಮಾತ್ಮಜ್ಞಾನ ಜನಕವಾದ ಶಾಸ್ತ್ರದ ಆವಶ್ಯಕತೆಯೇ ಇರುತ್ತಿರಲಿಲ್ಲ. ಈ ಮಂತ್ರದಲ್ಲಿ ನಾವು ನೋಡಿರುವಂತೆ ಇಡೀ ಶಾಸ್ತ್ರದ ಒಟ್ಟು ಜ್ಞಾನ ಪ್ರಾರ್ಥನೆ ಎನಿಸುವುದು.

ಭಾಷ್ಯ

ಪಾತ್ರಂ ಹಿರಣ್ಮಯಂ ಸೂರ್ಯ ಮಂಡಲಂ ಸಮುದಾಹೃತಂ ।
ವಿಷ್ಣೋಃ ಸತ್ಯಸ್ಯ ತೇನೈವ ಸರ್ವದಾ ಅಪಿಹಿತಂ ಮುಖಂ ।
ತತ್ತು ಪೂರ್ಣತ್ವತಃ ಪೂಷಾ ವಿಷ್ಣುರ್ದರ್ಶಯತಿ ಸ್ವಯಂ ।
ಸತ್ಯಧರ್ಮಾಯ ಭಕ್ತಾಯ ।

ಪಾತ್ರಂ – ಸರ್ವಸಾರಭೋಕ್ತೃವಾಗಿ. ಹಿರಣ್ಮಯಂ – ಜ್ಯೋತಿರ್ಮಯವಾದುದು. ಸೂರ್ಯಮಂಡಲಂ – ಸೂರ್ಯ ಮಂಡಲವೆಂದು. ಸಮುದಾಹೃತಂ – ಹೇಳಲ್ಪಟ್ಟಿರುವುದು. ಸತ್ಯಸ್ಯ – ಪೂರ್ಣಗುಣನಾಗಿ ನಿರ್ದೋಷನಾದ. ವಿಷ್ಣೋಃ – ವಿಷ್ಣುವಿನ. ಮುಖಂ – ರೂಪವು, ತೇನ ಏವ – ಆ ಸೂರ್ಯ ಮಂಡಲದಿಂದಲೇ. ಸರ್ವದಾ – ಯಾವಾಗಲೂ. ಅಪಿಹಿತಂ – ಮುಚ್ಚಲ್ಪಟ್ಟಿರುವುದು. ತತ್ ತು – ಈ ರೂಪವಾದರೋ. ಪೂರ್ಣತ್ವತಃ – ಪೂರ್ಣವಾದ ಪ್ರಯುಕ್ತ. ಪೂಷಾ – ಪೂಷಾ ಎಂದು ಹೆಸರುಳ್ಳುದು. ವಿಷ್ಣುಃ – ವಿಷ್ಣುವು. ಸ್ವಯಂ – ತಾನು. ಸತ್ಯಧರ್ಮಾಯ ಪೂರ್ಣನಾದ ಪರಮಾತ್ಮನನ್ನು ಹೃದಯಲ್ಲಿ ಧರಿಸಿದ. ಭಕ್ತಾಯ – ಭಕ್ತನಿಗೆ ಎಂದರೆ ಜ್ಞಾನಿಗೆ. ದರ್ಶಯತಿ – ತೋರಿಸುತ್ತಾನೆ.

(ಇದಕ್ಕೆ ೧೭ನೆಯ ಮಂತ್ರದ ಭಾಷ್ಯದಲ್ಲಿರುವ ಒಂದು ವಾಕ್ಯವನ್ನು ಸೇರಿಸಿಕೊಳ್ಳಬೇಕು.)

ಭಾಷ್ಯ — ಸತ್ಯಂ ಬ್ರಹ್ಮ ಹೃದಯೆ ಧಾರಯತೀತಿ ಸತ್ಯಧರ್ಮಾ ।

(ಸತ್ಯಂ ಬ್ರಹ್ಮ – ಸತ್ಯನಾದ ಬ್ರಹ್ಮನನ್ನು. ಹೃದಯೆ – ಮನಸ್ಸಿನಲ್ಲಿ ಧಾರಯತಿ – ಧರಿಸುತ್ತಾನೆ. ಇತಿ – ಈ ಕಾರಣದಿಂದ. ಸತ್ಯಧರ್ಮಾ – ಸತ್ಯಧರ್ಮನೆನಿಸುವನು. (ಇವನೇ ಭಕ್ತ.)

ಸೂಚನೆ

ಪಾತ್ರ ಮತ್ತು 'ಹಿರಣ್ಮಯ' ಎನಿಸುವ ಪರಮಾತ್ಮನು ಸೂರ್ಯ ಮಂಡಲ ಎಂಬ ಹೆಸರಿನಿಂದ ಮತ್ತು ರೂಪದಿಂದ ಪ್ರಸಿದ್ಧ ಸೂರ್ಯ ಮಂಡಲಕ್ಕೆ ಪ್ರವರ್ತಕನಾಗಿರುವನು.

ಸತ್ಯ ಧರ್ಮನನ್ನು ಎಂದರೆ ಪೂರ್ಣ ವಿಷ್ಣುವನ್ನು ಹೃದಯದಲ್ಲಿ ಧರಿಸಿದವನನ್ನು ಭಕ್ತನೆಂದು ಭಾಷ್ಯದಲ್ಲಿ ಹೇಳುವುದನ್ನು ಅನುಸರಿಸಿ ಖಂಡಾರ್ಥಕಾರರು ಜ್ಞಾನಿಯನ್ನು ಭಕ್ತನೆಂದು ಕರೆದಿರುವರು. ಈ ಭಕ್ತ ಎಂಬ ಪದವನ್ನು ಅಜ್ಞಾನಿಪರಮಾಡಬಾರದೆಂದು ಭಾಷ್ಯದ ಆಶಯ.

ಫಲಿತ ಮಂತ್ರಾರ್ಥ

ಹಿರಣ್ಮಯವಾದ ಎಂದರೆ ಜ್ಯೋತಿರ್ಮಯವಾದ ಸರ್ವ ವಸ್ತುವಿನಲ್ಲಿಯೂ ಸಾರಭೂತವಾಗಿ ಸ್ವರೂಪಾನಂದವನ್ನು ಭೋಗಿಸುತ್ತಾ ಸರ್ವರಕ್ಷಕವಾದ ನಿರ್ದೋಷ ಗುಣನಾದ ನಿನ್ನ ಶರೀರವು ಜ್ಯೋತಿರ್ಮಯವಾದ ಸೂರ್ಯ ಮಂಡಲದಲ್ಲಿ ಇದ್ದು ಅದರಿಂದ ಯಾವಾಗಲೂ ಮುಚ್ಚಲ್ಪಟ್ಟಿರುವುದು. ಆ ಶರೀರವನ್ನು ಪೂರ್ಣನಾದ ಪರಮಾತ್ಮನೆ! ಸದ್ಗುಣಪೂರ್ಣನಾದ ನಿನ್ನನ್ನೇ ಹೃದಯದಲ್ಲಿ ಧರಿಸಿ ನಿನ್ನ ಭಕ್ತನಾದ ನನ್ನ ದೃಷ್ಟಿಗೋಸ್ಕರ ಹೋದ ಆವರಣವುಳ್ಳುದನ್ನಾಗಿ ನೀನೇ ಮಾಡು. ॥ ೧೫ ॥

ಮಂತ್ರ

ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ವ್ಯೂಹ-
ರಶ್ಮೀನ್ಸಮೂಹ
ತೇಜೋಯತ್ತೇರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ
॥ ೧೬ ॥

ಖಂಡಾರ್ಥ

ಹೇಪೂರ್ಷ ಪೂರ್ಣ ಏಕರ್ಷೇ ಸರ್ವ ವಿಷಯಕತ್ವಾದಿನಾ । ಪ್ರಧಾನ ಜ್ಞಾನವತ್ವಹೇತುನಾ ಏಕರ್ಷಿಶಬ್ದವಾಚ್ಯಃ ಸ್ವ ಏಕರ್ಷ್ಯಾಖ್ಯ ಮುನಿಸ್ಥ । ಯಮ ಸರ್ವನಿಯಾಮಕತಯಾ ಯಮಶಬ್ದವಾಚ್ಯಃ ಸ್ವ ಯಮಾಂತ ಗರ್ತ । ಸೂರಿಭಿಃ ಪ್ರಾಪ್ಯತ್ವ ಹೇತುನಾ ಸೂರ್ಯಶಬ್ದವಾಚ್ಯ ಸ್ವ ಸೂರ್ಯಾಂತರ್ಗತ । ಪ್ರಾಜಾಪತ್ಯ ಪ್ರಜಾಪತೇರ್ಹಿರಣ್ಯಗರ್ಭಸ್ಯ ವಿಶೇಷೇಣ ಪ್ರಾಪ್ಯತಯಾ ಪ್ರಾಜಾಪತ್ಯಶಬ್ದವಾಚ್ಯ । ರಶ್ಮೀನ್ ಮದೀಯಂ ಸ್ವರೂಪ ಜ್ಞಾನಂ । ವ್ಯೂಹವಿಸ್ತಾರಯ । ತೇಜೋ ಬಾಹ್ಯಜ್ಞಾನಂಚ ವಿಸ್ತಾರಯ ಇತ್ಯರ್ಥಃ । ತೇಜ ಇತಿ ಸ್ವರೂಪಜ್ಞಾನಂ । ರಶ್ಮೀನಿತಿ ಬಾಹ್ಯ ಜ್ಞಾನಂ ವಾ । ತಥಾ ಚ ಯತ್ತೇರೂಪಂ ಕಲ್ಯಾಣತಮಂ ತದ್ರೂಪಂ ತೇ ಪ್ರಸಾದಾದಹಂ ಪಶ್ಯಾಮೀತಿ । ಆದಿತ್ಯರಶ್ಮ್ಯಾದೀನಾಂ ಅಪಗಮನಾದಿನಾ ತದಂತರ್ಗತ ಪ್ರತೀತ್ಯಸಂಭವಾತ್ ಆದಿತ್ಯರಶ್ಮ್ಯಾದಿ ವಿಷಯಂ ವ್ಯಾಖ್ಯಾನ ಮಯುಕ್ತಂ ॥ ೧೬ ॥

ಮಂತ್ರ ಪದವಿಭಾಗ—ಪೂರ್ಷ, ಏಕರ್ಷೇ, ಯಮ, ಸೂರ್ಯ, ಪ್ರಾಜಾಪತ್ಯ, ವ್ಯೂಹ, ರಶ್ಮೀನ್, ಸಮೂಹ, ತೇಜಃ, ಯತ್, ತೇ, ರೂಪಂ, ಕಲ್ಯಾಣತಮಂ, ತತ್, ತೇ ಪಶ್ಯಾಮಿ.

ಮಂತ್ರಸ್ಥ ಪದಗಳ ಅನ್ವಯ

ಪೂರ್ಷ, ಏಕರ್ಷೇ, ಯಮ, ಸೂರ್ಯ, ಪ್ರಾಜಾಪತ್ಯ, ರಶ್ಮೀನ್, ವ್ಯೂಹ. ತೇಜಃ. ಸಮೂಹ. ಯತ್, ತೇ, ರೂಫಂ, ಕಲ್ಯಾಣತಮಂ, ತತ್, ತೇ, ಪಶ್ಯಾಮಿ ॥

ಖಂಡಾರ್ಥದಂತೆ ಈ ಪದಗಳ ಅರ್ಥ

ಹೇ ಪೂರ್ಷ – ಪೂರ್ಣ – ಪೂರ್ಣನೇ. ಏಕರ್ಷೇ – ಸರ್ವ ವಿಷಯ ಕತ್ವಹೇತುನಾ ಪ್ರಧಾನಜ್ಞಾನವತ್ವಹೇತುನಾ –ಎಲ್ಲ ವಿಷಯಕ್ಕೂ ಪ್ರಕಾಶಕ ವಾಗಿ ಪ್ರಧಾನವಾದ ಜ್ಞಾನವುಳ್ಳ ನಿಮಿತ್ತದಿಂದ. ಏಕರ್ಷಿಶಬ್ದ ವಾಚ್ಯಃ ಸ್ವ –ಏಕರ್ಷಿ ಎಂಬ ಶಬ್ದದಿಂದ ವಾಚ್ಯನಾಗಿ. ಏಕರ್ಷ್ಯಾಖ್ಯ ಮುನಿಸ್ಥ – ಏಕರ್ಷಿ ಎಂದು ಪ್ರಸಿದ್ಧನಾದ ಮುನಿಯಲ್ಲಿರುವವನೇ ಎಂದರೆ ಆ ಮುನಿಗೆ ಪ್ರವರ್ತಕನಾದವನೇ. ಯಮ – ಸರ್ವ ನಿಯಾಮಕತಯಾ ಯಮಶಬ್ದ ವಾಚ್ಯಃ ಸ್ವ – ಸರ್ವನಿಯಾಮಕನಾಗಿ ಯಮ ಎಂಬ ಶಬ್ದದಿಂದ ವಾಚ್ಯ ನಾಗಿ, ಯಮಾಂತರ್ಗತ – ಯಮನಲ್ಲಿ ಅಂತರ್ನಿಯಾಮಕನಾದವನೇ. ಸೂರಿಭಿಃ – ಜ್ಞಾನಿಗಳಿಂದ. ಪ್ರಾಪ್ಯತ್ವಹೇತುನಾ – ಹೊಂದಲ್ಪಡತಕ್ಕವನು ಎಂಬ ಹೇತುವಿನಿಂದ. ಸೂರ್ಯಶಬ್ದ ವಾಚ್ಯಃ ಸ್ವ – ಸೂರ್ಯ ಎಂಬ ಶಬ್ದ ದಿಂದ ವಾಚ್ಯನಾಗಿ. ಸೂರ್ಯಾಂತರ್ಗತ – ಸೂರ್ಯನಿಗೆ ಪ್ರವರ್ತಕ ನಾದವನೇ. ಪ್ರಜಾಪ್ರತ್ಯ – ಪ್ರಜಾಪತೇಃ – ಹಿರಣ್ಯಗರ್ಭಸ್ಯ – ಹಿರಣ್ಯ ಗರ್ಭನಿಗೆ. ವಿಶೇಷೇಣ – ಅತಿಶಯವಾದ ರೀತಿಯಲ್ಲಿ. ಪ್ರಾಪ್ಯತಯಾ – ಹೊಂದಲ್ಪಡುವನಾದುದರಿಂದ. ಪ್ರಾಜಾಪತ್ಯಶಬ್ದ ವಾಚ್ಯ – ಪ್ರಾಜಾಪತ್ಯ ಎಂಬ ಶಬ್ದದಿಂದ ವಾಚ್ಯನಾದವನೇ. ರಶ್ಮೀನ್ – ನನ್ನ ಸ್ವರೂಪಜ್ಞಾನ ವನ್ನು. ವ್ಯೂಹ – ವಿಸ್ತಾರಯ – ಪ್ರಕಟಪಡಿಸು. ತೇಜಃ – ಬಾಹ್ಯವಾದ ಜ್ಞಾನವನ್ನು. ಸಮೂಹ – ವಿಸ್ತಾರಯ – ವಿಸ್ತಾರ ಮಾಡು. ಇತಿ ಅರ್ಥಃ – ಹೀಗೆ ಅರ್ಥ. ತೇಜ ಇತಿ – ತೇಜಸ್ಸೆಂಬ ಪದದಿಂದ. ಸ್ವರೂಪಜ್ಞಾನಂ – ಸ್ವರೂಪಜ್ಞಾನವನ್ನು . ರಶ್ಮೀನ್ ಇತಿ – ರಶ್ಮಿ ಎಂಬ ಶಬ್ದದಿಂದ. ಬಾಹ್ಯ ಜ್ಞಾನಂ ವಾ – ಬಾಹ್ಯಜ್ಞಾನ ಎಂದರೆ ವೃತ್ತಿಜ್ಞಾನವನ್ನಾಗಲಿ (ಅರ್ಥ ಮಾಡಿಕೊಳ್ಳಬೇಕು.) ತಥಾ ಚ – ಹೀಗೆ ಜ್ಞಾನವುವಿಸ್ತಾರ ಹೊಂದಿಮೇಲೆ. ಯುತ್ –ಯಾವುದು. ತೇ – ನಿನ್ನ. ರೂಪಂ–ರೂಪವು. ಕಲ್ಯಾಣ ತಮಂ – ಪರಮ ಕಲ್ಯಾಣರೂಪವೊ. ತದ್ರೂಪಂ – ಆ ರೂಪವನ್ನು. ತೇ – ನಿನ್ನ. ಪ್ರಸಾದಾತ್ – ಅನುಗ್ರಹದಿಂದ. ಅಹಂ – ನಾನು. ಪಶ್ಯಾಮಿ – ತಿಳಿಯುತ್ತೇನೆ. ಇತಿ – ಹೀಗೆಂದು ಅರ್ಥ.

ಆದಿತ್ಯರಶ್ಮ್ಯಾದೀನಾಂ – ಸೂರ್ಯರಶ್ಮಿ ಮುಂತಾದುವುಗಳ. ಅಪಗಮನಾದಿನಾ – ಹೋಗೋಣ ಮೊದಲಾದುದರಿಂದ. ತದಂತರ್ಗತ ಪ್ರತೀತ್ಯಸಂಭವಾತ್ – ಅದರಲ್ಲಿ ಅಂತರ್ಗತವಾದುದರ ಜ್ಞಾನವು ಉಂಟಾಗುವುದಿಲ್ಲ ಎಂಬ ನಿಮಿತ್ತದಿಂದ. ಆದಿತ್ಯರಶ್ಮ್ಯಾದಿ ವಿಷಯಂ – ಸೂರ್ಯನ ರಶ್ಮಿ ಮುಂತಾದುದರ ಪರವಾದ. ವ್ಯಾಖ್ಯಾನಂ – ವ್ಯಾಖ್ಯಾನವು, ಎಂದರೆ ಅರ್ಥಮಾಡೋಣವು. ಅಯುಕ್ತಂ – ಯುಕ್ತವಲ್ಲ.

ಸೂಚನೆ

ಈ ಮಂತ್ರದಲ್ಲಿ ಸರ್ವಪ್ರವರ್ತಕ ಪ್ರಧಾನಜ್ಞಾನರೂಪತ್ವ, ಋಷಿಪ್ರವರ್ತಕತ್ವ, ಸರ್ವನಿಯಾಮಕತ್ವ, ಜ್ಞಾನಿಪ್ರಾಪ್ಯತ್ವ, ವಿಶೇಷಾಕಾರವಾಗಿ ಹಿರಣ್ಯಗರ್ಭ ಪ್ರಾಪ್ಯತ್ವ, ಸ್ವರೂಪಜ್ಞಾನಬಾಹ್ಯಜ್ಞಾನ ಪ್ರವರ್ತಕತ್ವ, ಕಲ್ಯಾಣರೂಪತ್ವ, ತದ್‌ಜ್ಞಾನಸ್ಯ ತತ್ಪ್ರಸಾದೈಕಸಾಧ್ಯತ್ವ ಎಂಬ ಈ ರೂಪವಾದ ಪೂರ್ವಮಂತ್ರಗಳಿಂದ ಸಿದ್ಧಾಂತಿತವಾದ ಪರಮಾತ್ಮನ ಮಹಿಮೆಯು ವ್ಯಕ್ತವಾಗಿರುವುದು.

ಈ ಮಹಿಮೆಯಿಂದ ಆಯಾ ವಸ್ತುಪ್ರವರ್ತಕನಾದ ಪರಮಾತ್ಮನು ತನ್ನ ಸರ್ವ ಕರ್ತೃತ್ವವನ್ನು ಪ್ರಕಾಶಪಡಿಸುತ್ತಿರುವನು. ಈ ರಹಸ್ಯವನ್ನು ತಿಳಿದ ಜ್ಞಾನಿಯು ಯಮ ಮುಂತಾದ ಯಾವ ವಸ್ತುವನ್ನು ನೋಡಿದರೂ ಅಲ್ಲಿ ಪರಮಾತ್ಮನ ಸರ್ವಕರ್ತೃತ್ವ ಮಹಿಮೆಯ ಅನುಭವವನ್ನು ಹೊಂದುವನು.

ಮಂತ್ರೋಕ್ತವಾದ ಸಿದ್ಧಾಂತಾನುಸ್ಮರಣೆಯೇ ಪರಮಾತ್ಮನ ಸ್ತೋತ್ರ ಎಂದು ಈ ಮಂತ್ರಗಳು ಪ್ರಕಟಿಸುವುವು. ತದತಿರಿಕ್ತವಾದ ಸ್ತೋತ್ರವಿಲ್ಲ ಎಂದು ಮಂತ್ರಾಭಿಪ್ರಾಯ.

ಸ್ವರೂಪಜ್ಞಾನ ಮತ್ತು ಬಾಹ್ಯಜ್ಞಾನ ಎಂದು ಜ್ಞಾನವು ಎರಡು ವಿಧ. ಸ್ವರೂಪಜ್ಞಾನವು ಅಧಿಕಾರಿಯ ಸ್ವರೂಪ. ಅದು ಅನಾದಿ ಮತ್ತು ನಿತ್ಯ. ಬಾಹ್ಯಜ್ಞಾನವು ಇಂದ್ರಿಯ ಮುಂತಾದುದರಿಂದ ಜನ್ಯ. ಎರಡಕ್ಕೂ ಪರಮಾತ್ಮನೇ ಪ್ರವರ್ತಕ.

ಸರ್ವ ಪ್ರವರ್ತಕವಾದ ಪರಮಾತ್ಮನರೂಪವು ಕಲ್ಯಾಣತಮ. ಅದನು ತಿಳಿಯುವುದಕ್ಕಿಂತ ಅಧಿಕಾರಿಗೆ ಮತ್ತೊಂದು ಕಲ್ಯಾಣವಿಲ್ಲ.

ಖಂಡಾರ್ಥದಲ್ಲಿ ಹೇಳಿರುವಂತೆ ಇತರರ ವ್ಯಾಖ್ಯಾನವು ಸಂಗತವಲ್ಲ. ಆದಿತ್ಯರಶ್ಮಿಯ ಅಪಗಮನ ಮುಂತಾದ ಅರ್ಥಕ್ಕೆ ಪ್ರಸಕ್ತಿಯಿಲ್ಲ.

ಭಾಷ್ಯ

ಪ್ರಧಾನಜ್ಞಾನರೂಪತಃ ।
ವಿಷ್ಣುರೇಕಋಷಿರ್ಜ್ಞೇಯೋ ಯಮೋ ನಿಯಮನಾದ್ಧರಿಃ ।
ಸೂರ್ಯಸ್ಸ ಸೂರಿಗಮ್ಯತ್ವಾತ್ ಪ್ರಾಜಾಪತ್ಯಃ ಪ್ರಜಾಪತೇಃ ।
ವಿಶೇಷೇಣೈವ ಗಮ್ಯತ್ವಾತ್ ॥ ೧೬ ॥

ಪ್ರಧಾನಜ್ಞಾನರೂಪತಃ – ಸರ್ವನಿಯಾಮಕವಾದ ಜ್ಞಾನರೂಪನಾದುದರಿಂದ. ವಿಷ್ಣುಃ – ವಿಷ್ಣುವು. ಏಕಋಷಿಃ – ಒಬ್ಬನೇ ಜ್ಞಾನಿ ಎಂದು. ಜ್ಞೇಯಃ – ತಿಳಿಯಲ್ಪಡತಕ್ಕದ್ದು. ಹರಿಃ – ಪರಮಾತ್ಮನು. ನಿಯಮನಾತ್ – ಸರ್ವನಿಯಾಮಕನಾದುದರಿಂದ. ಯಮಃ – ಯಮನು. ಸಃ – ಆ (ಹರಿಯು). ಸೂರಿಗಮ್ಯತ್ವಾತ್ – ಜ್ಞಾನಿಗಳಿಂದ ಪ್ರಾಪ್ಯನಾದುದರಿಂದ. ಸೂರ್ಯಃ – ಸೂರ್ಯನು. ಪ್ರಜಾಪತೇಃ – ಚತುರ್ಮುಖನಿಗೆ. ವಿಶೇಷೇಣ – ವಿಶೇಷಾಕಾರದಿಂದ. ಗಮ್ಯತ್ವಾತ್ – ಪ್ರಾಪ್ಯನಾದುದರಿಂದ. ಪ್ರಾಜಾಪತ್ಯಃ – ಪ್ರಾಜಾಪತ್ಯನು.

ಸೂಚನೆ

ಪ್ರಧಾನಜ್ಞಾನರೂಪನಾದ ಪರಮಾತ್ಮನು ಒಬ್ಬನೇ ಋಷಿ ಎಂಬ ಭಾವವು ವೇದಾರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಬಹು ಉಪಕಾರ ಮಾಡುವುದು. ವೇದಋಷಿಯೆ ಪರಮಾತ್ಮ ಎಂಬ ಭಾವದವರೆಗೂ ಈ ಅರ್ಥದ ವ್ಯಾಪ್ತಿಯಿರುವುದು. ಈ ಭಾವವು ವೇದಾಪೌರುಷೇಯತ್ವಕ್ಕೆ ಅತ್ಯಂತ ಸಾಧಕವಾಗುವುದಲ್ಲದೆ ವೇದವು ಪರಮಾತ್ಮೈಕಪರವಾದುದು ಎಂಬ ಭಾವಕ್ಕೆ ಹೆಚ್ಚಾಗಿ ಉಪಪಾದಕವಾಗುವುದು.

ಯಮ ಮುಂತಾದ ಸರ್ವದೇವತೆಗಳಿಗೂ ಪರಮಾತ್ಮನು ಪ್ರವರ್ತಕ ಎಂಬ ಭಾವವು ಪರಮಾತ್ಮನ ದೇವದೇವತ್ವವನ್ನು ಉಪಪಾದಿಸುವುದು. ಇದೇ ಅವನ ಸರ್ವೋತ್ತಮತ್ವ.

ಫಲಿತ ಮಂತ್ರಾರ್ಥ

ಹೇ ಪೂರ್ಣನಾದ, ಪ್ರಧಾನಜ್ಞಾನಿಯಾದ ಸರ್ವನಿಯಾಮಕನಾಗಿ ಯಮಪ್ರವರ್ತಕನಾದ, ಜ್ಞಾನಿಗಮ್ಯನಾದ, ಸೂರ್ಯಪ್ರವರ್ತಕನಾದ, ಚತುರ್ಮುಖನಿಂದ ವಿಶೇಷಾಕಾರದಲ್ಲಿ ಪ್ರಾಪ್ಯನಾದ, ಪರಮಾತ್ಮನೇ! ನನ್ನ ಸ್ವರೂಪಜ್ಞಾನವನ್ನು ಪ್ರಕಟಿಸು; ವೃತ್ತಿಜ್ಞಾನವನ್ನು ವಿಸ್ತರಿಸು. ನಿನ್ನ ಕಲ್ಯಾಣತಮವಾದ ರೂಪ ಯಾವುದೋ ಅದನ್ನು ನಿನ್ನ ಪ್ರಸಾದದಿಂದ ತಿಳಿಯುತ್ತೇನೆ. || ೧೬ ||

೧೭

ಖಂಡಾರ್ಥವು ೧೭ ನೆಯ ಮಂತ್ರವನ್ನು ಈ ರೀತಿ ಪರಿಚಯಮಾಡಿಸುವುದು.

ಖಂಡಾರ್ಥ— ಸರ್ವಜೀವೋತ್ತಮಮುಖ್ಯವಾಯುರೂಪಪ್ರತೀಕಸ್ಥಿತ್ಯಾದಿ ಜ್ಞಾನಮಾವಶ್ಯಕಮಿತಿ ಭಾವೇನ ತತ್ಸ್ಥಿತ್ಯಾದಿಕಮಾಹ ಯ ಇತಿ ||

ಸರ್ವಜೀವೋತ್ತಮ ಮುಖ್ಯವಾಯುರೂಪ ಪ್ರತೀಕ ಸ್ಥಿತ್ಯಾದಿ ಜ್ಞಾನಂ – ಸರ್ವಜೀವರಿಗೂ ಪ್ರವರ್ತಕನಾದ ಮುಖ್ಯವಾಯುವೆಂಬ ಪರಮಾತ್ಮ ಪ್ರತೀಕದಲ್ಲಿ ಪರಮಾತ್ಮನ ಪ್ರವರ್ತಕತ್ವಜ್ಞಾನವು. ಆವಶ್ಯಕಂ – ಅಗತ್ಯವಾದುದು. ಇತಿ – ಹೀಗೆಂಬ. ಭಾವೇನ – ಭಾವದಿಂದ. ತತ್ಸ್ಥಿತ್ಯಾದಿಕಂ – ಆ ಪರಮಾತ್ಮನ ಅಂತರ್ನಿಯಾಮಕತ್ವ ಮುಂತಾದುದನ್ನು. ಆಹ – ಹೇಳುತ್ತಾನೆ. ಯ ಇತಿ – ಯಃ ಎಂಬ ಪದದಿಂದಾರಂಭಿಸುವ ಮಂತ್ರದಿಂದ.

ಮಂತ್ರ

ಯೋಽಸಾವಸೌ ಪುರುಷಃ ಸೋಽಹಮಸ್ಮಿ |

ಖಂಡಾರ್ಥ

ಯೋಸೌ ಪ್ರಸಿದ್ಧಃ ಅಸೌ ಮುಖ್ಯಪ್ರಾಣೇ ಸ್ಥಿತಃ ಇತಿ ಶೇಷಃ | ಸಃ ಅಹೇಯತ್ವಾದಹಮಿತ್ಯುಕ್ತಃ | ಸದಾಸ್ತಿತ್ವೇನ ಮೇಯತ್ವಹೇತುನಾ ಅಸ್ಮೀತಿ

ತಿಙ್ ಪ್ರತಿರೂಪಕಾವ್ಯಯ ಪದವಾಚ್ಯಃ ತಂ ಪಶ್ಯಾಮೀತ್ಯರ್ಥಃ | ಯದ್ವಾ ಅಸಾವಸಾವಿತಿ ದ್ವಯಮಪಿ ಪ್ರಥಮಾಂತಮೇವ | ವೀಪ್ಸಾಯಾಂ ದ್ವಿರುಕ್ತಿಃ | ಪೂರ್ವಂ ಪೂಷಾದಿಶಬ್ದೈಃ ಉಪಲಕ್ಷಣತಯಾ ಪ್ರಾಣಾದ್ಯನೇಕ ಪ್ರತೀಕಸ್ಥತ್ವಂ ವಿಷ್ಣೋರುಕ್ತಂ | ತತ್ರ ಭೇದಶಂಕಾಯಾಂ ಯೋಸಾವಿತಿ ವಾಕ್ಯಮುಚ್ಯತೆ | ಯೋಽಸಾವಸೌ ಪುರುಷಃ (ಪೂಷಾದ್ಯ) ಪ್ರಾಣಾದ್ಯನೇಕ ಪ್ರತೀಕೇಷು ಸ್ಥಿತಃ ಸೋಹಮಸ್ಮಿ ಮದಂತರ್ಯಾಮಿತಯಾ ಅಸ್ತೀತ್ಯರ್ಥಃ| ಸರ್ವಪ್ರತೀಕೇಷು ಮಯಿ ಚ ಸ್ಥಿತ ಏಕ ಏವೇತಿ ಫಲಿತೊ ಅರ್ಥಃ | ಅಹಂ ಪದಸ್ಯ ಪ್ರತ್ಯಗಾತ್ಮ ಜೀವಾಂತರ್ಯಾಮಿಣಿ ಮುಖ್ಯತಯಾ ತತ್ಸಮಭಿವ್ಯಾಹಾರಾತ್ ಅಸ್ಮೀತ್ಯುತ್ತಮಪುರುಷಪ್ರಯೋಗೋಪಿ ಸಾಧುರೇವೇತಿ ಜ್ಞೇಯಂ || ೧೭ ||

ಮಂತ್ರದ ಪದವಿಭಾಗ — ಯಃ, ಅಸೌ, ಅಸೌ, ಪುರುಷಃ, ಸಃ, ಅಹಂ, ಅಸ್ಮಿ |

ಮಂತ್ರಸ್ಥ ಪದಗಳ ಅನ್ವಯ ಸ್ಪಷ್ಟವಾದುದು.

ಖಂಡಾರ್ಥದಂತೆ ಈ ಪದಗಳ ಅರ್ಥ

ಯಃ ಅಸೌ – ಪ್ರಸಿದ್ಧಃ ಅಸೌ – ಪೂರ್ವ ಮಂತ್ರಗಳಲ್ಲಿ ಪರಿಚಿತನಾದ ಈ ಪರಮಾತ್ಮನು. ಮುಖ್ಯ ಪ್ರಾಣೇ – ಮುಖ್ಯವಾಯುವಿನಲ್ಲಿ. ಸ್ಥಿತಃ – ಪ್ರವರ್ತಕನಾಗಿರುವನು. ಇತಿ ಶೇಷಃ – ಹೀಗೆ ಅನ್ವಯಮಾಡಿಕೊಳ್ಳಬೇಕು. ಸಃ – ಆ ಪರಮಾತ್ಮನು. ಅಹೇಯತ್ವಾತ್ – ತ್ಯಾಗಾನರ್ಹನಾದುದರಿಂದ. ಅಹಂ – ನಾನು. ಇತಿ – ಹೀಗೆ. ಉಕ್ತಃ – ಹೇಳಲ್ಪಟ್ಟಿರುವನು. ಸದಾ ಅಸ್ತಿತ್ವೇನ – ನಿರಂತರದಲ್ಲಿಯೂ ಇರುವನೆಂಬ ರೂಪದಿಂದ. ಮೇಯತ್ವ ಹೇತುನಾ – ತಿಳಿಯಲ್ಪಡಬೇಕಾದ ನಿಮಿತ್ತದಿಂದ. ಅಸ್ಮಿ ಇತಿ– ಅಸ್ಮಿ ಎಂಬುದಾಗಿ- ತಿಙ್ಪ್ರತಿರೂಪಕಾವ್ಯಯ ಪದವಾಚ್ಯಃ – ಕ್ರಿಯಾಪದದಂತೆ ಕಾಣುವ ಅವ್ಯಯ ಪದದಿಂದ ವಾಚ್ಯನಾಗಿರುವನು. ತಂ – ಅವನನ್ನು. ಪಶ್ಯಾಮಿ – ತಿಳಿಯುತ್ತೇನೆ. ಇತಿ ಅರ್ಥಃ – ಹೀಗೆ ಅರ್ಥವು.

ಯದ್ವಾ – ಅಥವಾ. ಅಸೌ ಅಸೌ ಇತಿ – ಅಸೌ ಅಸೌ ಎಂದು. ದ್ವಯಮಪಿ – ಎರಡು ಪದಗಳೂ ಕೂಡ. ಪ್ರಥಮಾಂತಮೇವ – ಪ್ರಥಮಾ

ವಿಭಕ್ತಿಯೇ ಅಂತವಾಗಿ ಉಳ್ಳುವು. ವೀಪ್ಸಾಯಾಂ – ವೀಪ್ಸೆಯಲ್ಲಿ. ದ್ವಿರುಕ್ತಿಃ – ಎರಡು ಸಲ ಪ್ರಯೋಗ. ಪೂರ್ವಂ – ಹಿಂದೆ. ಪೂಷಾದಿ ಶಬ್ದೈಃ – ಪೂಷ ಮೊದಲಾದ ಶಬ್ದಗಳಿಂದ. ಉಪಲಕ್ಷಣತಯಾ – ಸೂಚಿತವಾದ ರೀತಿಯಲ್ಲಿ. ಪ್ರಾಣಾದ್ಯನೇಕಪ್ರತೀಕಸ್ಥತ್ವಂ – ಮುಖ್ಯ ವಾಯು ಮುಂತಾದ ಅನೇಕ ಪ್ರತೀಕಗಳಲ್ಲಿ ಇರೋಣವು. ವಿಷ್ಣೋಃ – ಪರಮಾತ್ಮನಿಗೆ. ಉಕ್ತಂ – ಹೇಳಲ್ಪಟ್ಟಿತು. ತತ್ರ – ಆ ವಿಷಯದಲ್ಲಿ. ಭೇದಶಂಕಾಯಾಂ – ಪರಮಾತ್ಮನ ರೂಪಗಳಲ್ಲಿಯೆ ಭೇದವನ್ನು ಶಂಕಿಸಿ ದಲ್ಲಿ. ಯೋಽಸೌ ಇತಿ ವಾಕ್ಯಂ – ಯೋಽಸೌ ಎಂದು ಆರಂಭಿಸುವ ವಾಕ್ಯವು. ಉಚ್ಯತೆ – ಹೇಳಲ್ಪಡುತ್ತದೆ. ಯೋಽಸಾವಸೌ ಪುರುಷಃ – ಯಾವ ಈ ಪರಮಾತ್ಮನು. (ಪೂಷಾದ್ಯ) ಪ್ರಾಣಾದ್ಯನೇಕ ಪ್ರತೀಕೇಷು ಸ್ಥಿತಃ – (ಪೂಷ ಮೊದಲಾದ) ಪ್ರಾಣ ಮೊದಲಾದ ಅನೇಕ ಪ್ರತೀಕ ಗಳಲ್ಲಿ ಇರುವನೊ. ಸೋಽಹಮಸ್ಮಿ – ಮದಂತರ್ಯಾಮಿತಯಾಸ್ತೀತ್ಯರ್ಥಃ– ನನ್ನ ಅಂತರ್ಯಾಮಿಯಾಗಿರುವನು ಎಂದು ಅರ್ಥ. ಸರ್ವ ಪ್ರತೀಕೇಷು – ಎಲ್ಲ ಪ್ರತೀಕಗಳಲ್ಲಿಯೂ. ಮಯಿ ಚ – ನನ್ನಲ್ಲಿಯೂ ಸಹ. ಸ್ಥಿತಃ - ಇರುವನು. ಏಕ ಏವ ಇತಿ - ಒಬ್ಬನೇ ಸರಿ (ಸ್ವತಂತ್ರನಾದ ಅವನೇ ಸರಿ) ಎಂದು. ಫಲಿತಃ - ಒಟ್ಟುಸಿದ್ಧವಾದ. ಅರ್ಥಃ - ಅರ್ಥವು.

ಅಹಂ ಪದಸ್ಯ - ಅಹಂ ಎಂಬ ಪದಕ್ಕೆ. ಪ್ರತ್ಯಗಾತ್ಮ ಜೀವಾಂತ ರ್ಯಾಮಿ - ಪ್ರತಿಬಿಂಬರೂಪನಾದ ಜೀವನಲ್ಲಿ ಅಂತರ್ಯಾಮಿ ಎಂಬ ಅರ್ಥದಲ್ಲಿ. ಮುಖ್ಯತಯಾ - ಮುಖ್ಯವಾದ ಪ್ರಯೋಗವಿರುವುದರಿಂದ. ತತ್ಸಮಭಿವ್ಯಾಹಾರಾತ್ - ಅದರ ಜೊತೆಯಲ್ಲಿರುವ ನಿಮಿತ್ತದಿಂದ. ಅಸ್ಮೀ ತ್ಯುತ್ತಮಪುರುಷಪ್ರಯೋಗಃ ಅಪಿ - ಅಸ್ಮಿ ಎಂದು ಉತ್ತಮ ಪುರುಷದಲ್ಲಿ ರುವ ಕ್ರಿಯಾಪದದ ಪ್ರಯೋಗವೂ ಕೂಡ. ಸಾಧುಃ ಏವ ಇತಿ - ಸಾಧು ವೆಂದೇ. (ಜ್ಞೇಯಂ – ತಿಳಿಯಲ್ಪಡತಕ್ಕದ್ದು.)

ಸೂಚನೆ

ಅಧಿಕಾರಿಯು ಈ ಮಂತ್ರದ ಅಧ್ಯಯನಕ್ಕೆ ಪ್ರಾರಂಭಿಸುವ ಸಂದರ್ಭ ದಲ್ಲಿ ಅಪೂರ್ವವಾದ ಕಠಿಣ ಸಮಸ್ಯೆಯು ಒದಗುವುದು. ಈ ಸಮಸ್ಯೆ ಬರುವುದೇ ಅಧಿಕಾರಿಯ ಲಕ್ಷಣ. ಈ ಸಮಸ್ಯೆ ಬರದೆ ಅಧ್ಯಯನ

ಮುಂದುವರೆಯುವುದು ಅಧಿಕಾರದ ಲಕ್ಷಣವಲ್ಲ. ಅಂತಹ ಅಧ್ಯಯನದಿಂದ ಜ್ಞಾನವೂ ಮುಂದುವರೆಯುವುದಿಲ್ಲ.

ಆರಂಭದ ಮಂತ್ರಗಳಲ್ಲಿ ಅಧಿಕಾರಿಯು ಸರ್ವವೂ ಈಶಾವಾಸ್ಯ ಎಂದರೆ ಸರ್ವ ರೀತಿಯಲ್ಲಿಯೂ ಪರಮಾತ್ಮಾಧೀನ ಎಂದು ತಿಳಿದು, ಸರ್ವ ನಿಯಾಮಕನಾದ ಪರಮಾತ್ಮನ ಸ್ವರೂಪವನ್ನು 'ಅನೇಜದೇಕಂ' ಎಂಬೀ ಮುಂತಾದ ರೀತಿಯಲ್ಲಿ ಗ್ರಹಿಸಿ ಅನ್ಯಥಾಜ್ಞಾನನಿರಾಕರಣ ಪೂರ್ವಕವಾದ ತತ್ತ್ವಜ್ಞಾನದಿಂದಲೇ ಮುಕ್ತಿ ಎಂದು ಗ್ರಹಿಸಿ, ಜ್ಞಾನದಿಂದ ಮುಕ್ತಿ ಎಂದರೆ ಅರ್ಥಾತ್ ಪರಮಾತ್ಮನ ಪ್ರಸಾದದಿಂದ ಮುಕ್ತಿ ಎಂದು ಸಿದ್ಧವಾಗಿ, ಪರಮಾತ್ಮನ ಪ್ರಸಾದಕ್ಕೋಸ್ಕರ ಪ್ರಾರ್ಥಿಸುತ್ತಿರುವ ಅಧಿಕಾರಿಯು ಈ ಮಂತ್ರವನ್ನು ಪರಿಚಯಕ್ಕೆ ತಂದುಕೊಳ್ಳುವುದರಲ್ಲಿಯೇ ಅವನಿಗೆ 'ಸ ಏವಾಹ ಮಸ್ಮಿ' ಎಂಬ ಶಬ್ದ ಶ್ರುತವಾದರೆ ಅವನ ಮನಸ್ಸಿನಲ್ಲಿ ಆಳವಾದ ಸಮಸ್ಯೆ ಹುಟ್ಟದೆ ಇರುವುದು ಹೇಗೆ?

'ಸ ಏವಾಹಮಸ್ಮಿ' ಎಂಬಲ್ಲಿ ಸಾಮಾನ್ಯವಾಗಿ ನಾವು ಲೌಕಿಕರೀತಿ ಯಲ್ಲಿ ಎಂದರೆ ವ್ಯಾಕರಣ ಮುಂತಾದ ಶಾಸ್ತ್ರಗಳ ಮೂಲಕ ನಾವು ಸಂಸ್ಕೃತ ಭಾಷೆಯನ್ನು ಕಲಿತ ರೀತಿಯಲ್ಲಿ ಅರ್ಥಮಾಡಿಕೊಂಡರೆ, 'ಸಃ'- ಇದು ವರೆಗೆ ಜಗನ್ನಿಯಾಮಕ, ಸರ್ವಕರ್ತೃ, ನನಗೆ ಅನುಗ್ರಹಕರ್ತೃ ಮುಂತಾದ ರೀತಿಯಲ್ಲಿ ನಾವು ತಿಳಿದ ಪರಮಾತ್ಮನೇ. ಏವ – ಖಚಿತವಾಗಿ ಈ ವಿಶೇಷಣ ಸಹಿತವಾದ ಅವನೇ. ಅಹಂ – ನಾನು. ಅಸ್ಮಿ – ಆಗಿದ್ದೇನೆ. ಎಂದು ಈ ರೀತಿ ಮಂತ್ರಾರ್ಥವನ್ನು ತಿಳಿಯುವೆವು.

ಅಧಿಕಾರಿಯು ಈ ಜಾತಿಯ ಅರ್ಥವನ್ನು ಪರಿಚಯಕ್ಕೆ ತಂದು ಕೊಂಡ ಮಾತ್ರದಿಂದ ವ್ಯಗ್ರತೆಯನ್ನು ಹೊಂದುವನು. ಇಷ್ಟು ಮಾತ್ರವಲ್ಲ. ಹಿಂದಿನಿಂದ ಒಟ್ಟು ಮಂತ್ರಾರ್ಥವನ್ನು ಅವನು ಗ್ರಹಿಸಿದ್ದರೆ ಈ 'ನಾನೇ ಅವನು' ಅಥವಾ 'ಅವನೇ ನಾನು' ಎಂಬ ಅರ್ಥವನ್ನು ಅವನ ಮನಸ್ಸು ಒಪ್ಪುವುದೇ ಇಲ್ಲ. ಮತ್ತು ಹಿಂದಿನ ಮಂತ್ರಗಳಿಗೆ ಸಂಗತವಾದ ಅರ್ಥ ವಿಶೇಷವು ಉಪನಿಷದ್ವಾಕ್ಯಕ್ಕೆ ಇರುವುದು ಎಂದೂ ಭಾವಿಸಲು ಸಾಕು. ಇಂತಹ ಸಂಗತವಾದ ಅರ್ಥವನ್ನು ತಿಳಿಯಲು ಅವನಿಗೆ ಅನಿವಾರ್ಯವಾದ ಅಪೇಕ್ಷೆಯು ಹುಟ್ಟಬಹುದು. ಇದುವರೆಗೆ ಅವನಿಗೆ ಮಂತ್ರಾರ್ಥಜ್ಞಾನಕ್ಕೆ

ಸಾಧಕವಾದ ಗುರುವೇ ಅವನ ಸಂದೇಹಕ್ಕೆ ಪರಿಹಾರಕನಾಗಬಹುದು. ಅಥವಾ ಅವನು ಸಮರ್ಥನಾದ ಗುರುವನ್ನು ಹೊಂದಲು ಪ್ರಯತ್ನಿಸುವನು. ಅಂತಹ ಅಧಿಕಾರಿಗೆ ಶಾಸ್ತ್ರಾರ್ಥವಾಗುವ ಸಂಭವವಿರುವುದು.

'ಸೋಹಮಸ್ಮಿ' ಎಂಬ ವಾಕ್ಯಕ್ಕೆ ಶಾಸ್ತ್ರದಿಂದ ಲಬ್ಧವಾದ ಅರ್ಥವು ಹಿಂದಿನ ಮಂತ್ರಗಳ ಅರ್ಥಕ್ಕೆ ಸಂಗತವಾಗಿರುವುದು ಮಾತ್ರವೇ ಅಲ್ಲದೆ ಆ ಅರ್ಥವನ್ನು ಅಧಿಕಾರಿಗೆ ಶ್ರೇಯಸ್ಸಾಗುವ ರೀತಿಯಲ್ಲಿ ಮುಂದುವರಿಸುವುದು. ಇಂತಹ ಅರ್ಥವನ್ನು ಖಂಡಾರ್ಥವು ಹೀಗೆ ಸೂಚಿಸುವುದು. ಉಕ್ತ ರೀತಿಯಲ್ಲಿ ಅಸ್ಮಿ ಎಂಬುದು ಅನ್ವಯವಾಗಬಹುದು. ಅಹಂ ಎಂಬ ಕರ್ತೃ ಪದವು ಅಹೇಯನಾದ ಪರಮಾತ್ಮನನ್ನು ಬೋಧಿಸಬಹುದು. ಒಟ್ಟಿನಲ್ಲಿ ಅಹೇಯನಾದ ಪರಮಾತ್ಮ ಸದಾ ಇರುವನು ಎಂಬ ಪರಮಾತ್ಮನ ನಿತ್ಯವಾದ ಅಸ್ತಿತ್ವವನ್ನು ಈ ಪದಗಳು ಹೇಳುವುವು. ಪರಮಾತ್ಮನು ಅಹೇಯನೆಂದರೆ ಯಾವುದನ್ನು ಮರೆತರೂ ಅವನನ್ನು ಮರೆಯಲು ಸಾಧ್ಯವಿಲ್ಲವೆಂದರ್ಥ. ಹೇಗೆ ಅಹಂ ಎಂದರೆ ನಾನು ಎಂದು ಅರ್ಥಮಾಡಿಕೊಳ್ಳುವಾಗ ಎಲ್ಲ ಕ್ರಿಯೆಯಲ್ಲಿಯೂ ನಾನು ಎಂಬ ಕರ್ತೃ ಅಹೇಯವಾಗಿ ಪ್ರಾಪ್ತವಾಗುವುದೋ ಹಾಗೆ ನಾನು ಎಂಬುದಕ್ಕೆ ಪ್ರವರ್ತಕನಾದ ಪರಮಾತ್ಮನು ಮುಖ್ಯಾರ್ಥದಲ್ಲಿ ಅಹೇಯನಾಗುವನು. ಈ ಸಂದರ್ಭದಲ್ಲಿ ಅಹೇಯತ್ವವನ್ನು ಹೇಳುವ 'ಅಹಂ' ಎಂಬ ಪದವು ಸರ್ವನಾಮವಲ್ಲ. 'ಅಸ್ಮಿ' ಎಂಬ ಅನ್ವಯವು ಪರಮಾತ್ಮನ ನಿತ್ಯವಾದ ಸ್ಥಿತಿಯನ್ನು ಹೇಳುವುದು. ಇವನ್ನು ತಿಳಿದ ಅಧಿಕಾರಿಗೆ ಅವನು ನಾನು ಎಂದು ತಿಳಿದುಬರುವ ತನಗಿಂತಲೂ ನಿತ್ಯಾಸ್ತಿತ್ವವುಳ್ಳ ಅಹೇಯನಾದ ಪರಮಾತ್ಮನು ಹತ್ತಿರವಾಗುವನು. ಹೀಗೆ ತನಗಿಂತಲೂ ತನ್ನ ನಿಯಾಮಕನಾದ ಪರಮಾತ್ಮನು ತನಗೆ ಹತ್ತಿರ ಎಂಬ ಭಾವವೇ ಪರಮಾತ್ಮನ ಸ್ತೋತ್ರರೂಪವೆಂದು ಮಂತ್ರಾಭಿಪ್ರಾಯವಾಯಿತು.

ಅಥವಾ 'ಅಹಂ' ಎಂದು ಸರ್ವನಾಮ. 'ಅಸ್ಮಿ' ಎಂಧು ಉತ್ತಮ ಪುರುಷ ಕ್ರಿಯಾಪದ. ಹಿಂದಿನ ಮಂತ್ರದಲ್ಲಿ ಪೂರ್ಷ, ಯನು ಮುಂತಾದ ಶಬ್ದಗಳು ಆಯಾ ದೇವತಾಪರವಾಗಲು ಆ ಶಬ್ದವಾಚ್ಯನಾದ ಹರಿಯು ಆಯಾ ದೇವತೆಯಲ್ಲಿ ಅಂತರ್ನಿಯಾಮಕ ಎಂಬುದೇ ನಿಮಿತ್ತ. ಈ ಕಾರಣ

ದಿಂದ 'ಪೂರ್ಷ' ಶಬ್ದವು ಪರಮಾತ್ಮನಲ್ಲಿ ಮುಖ್ಯ ವೃತ್ತಿಯುಳ್ಳದು. ಪೂರ್ಷ ಎಂಬ ದೇವತೆಯಲ್ಲಿಯಾದರೊ ಅಮುಖ್ಯ ಎಂದರೆ ಆ ಶಬ್ದವುಳ್ಳ ಪರಮಾತ್ಮನು ಅದರಲ್ಲಿ ಇರುವುದರಿಂದ ಅದಕ್ಕೆ ಆ ಶಬ್ದವು ಸಂಭವಿಸಿತು. ಹೀಗೆ ದೇವತೆಗೆ ಶಬ್ದವಿಲ್ಲ. ಇರುವುದೆಂದು ಭಾವಿತವಾದ ಶಬ್ದ ಪರಮಾತ್ಮ ನಿಮಿತ್ತವಾಯಿತು. ಪರಮಾತ್ಮನಿಗಾದರೂ ಅವನ ಯಾವುದೋ ಒಂದು ಮಹಿಮೆಯನ್ನು ಹೇಳಲು ಪ್ರವೃತ್ತವಾದ ಶಬ್ದವು ಮುಖ್ಯವಾಯಿತು. ಇದೇ ನ್ಯಾಯದಿಂದ 'ಅಹಂ' ಎಂಬ ಶಬ್ದವು ಜೀವನಲ್ಲಿ ಅಮುಖ್ಯ ಎಂದರೆ ಅಂತರ್ಯಾಮಿಯಲ್ಲಿ ಮುಖ್ಯ. ಹೀಗೆ 'ಅಹಂ' ಎಂದರೆ ಪರಮಾತ್ಮ. ಅಸ್ಮಿ ಎಂದು ಆ ಕರ್ತೃಪದಕ್ಕೆ ಅನುಗುಣವಾದ ಕ್ರಿಯಾಪದ. ಎಲ್ಲಪ್ರತೀಕದಲ್ಲಿರುವ ಪರಮಾತ್ಮನೇ ನಾನು ಎಂಬಲ್ಲಿಯೂ ಇರುವನು. ಅವನು ಏಕ ಎಂದರೆ ಸ್ವತಂತ್ರ ಭೇದರಹಿತ ಎಂದು ಸಿದ್ಧವಾದ ಅರ್ಥ. ಮಂತ್ರಗಳ ಅರ್ಥವನ್ನು ಇದುವರೆಗೂ ತಿಳಿದ ಅಧಿಕಾರಿಯು ಹೀಗೆ ಪರಮಾತ್ಮನನ್ನು ತಿಳಿಯುವುದು ಪರಮಾತ್ಮನ ಸರ್ವ ನಿಯಾಮಕತ್ವವನ್ನು ತನ್ನ ಪರವಾಗಿಯೂ ತಿಳಿದ ರೀತಿಯಾಗಿರುವುದು. ಇದೇ ಪರಮಾತ್ಮ ಪರವಾದ ಜೀವನ ಪ್ರಾರ್ಥನೆ. ಈ ಪ್ರಾರ್ಥನೆಯ ಮೂಲಕ ದೃಢೀಕೃತವಾದ ಜೀವನ ಜ್ಞಾನವೇ ಆನಂದರೂಪ. ಅದರ ಪಾಕವೇ ಮೋಕ್ಷ. ಇದು ಯಾವತ್ತೂ ಪರಮಾತ್ಮನ ಅನುಗ್ರಹ.

ಒಂದುವೇಳೆ ಒಬ್ಬನಿಗೆ ಇಂತಹ ಸನ್ನಿವೇಶ ಒದಗದೆ ಎಂದರೆ ಅವನು ಪರಮಾತ್ಮನ ಅನುಗ್ರಹಕ್ಕೆ ಪಾತ್ರನಲ್ಲದಿರಲು, 'ಸ ಏವಾಹಮಸ್ಮಿ' ಎಂಬುದಕ್ಕೆ ಲೌಕಿಕ ಸಂಸ್ಕೃತದ ಅರ್ಥವಾದರೆ, ಅದರಲ್ಲಿ ಅವನಿಗೆ ಅಸಹ್ಯಬುದ್ಧಿ ಹುಟ್ಟದಿದ್ದರೆ, ಅದೇ ಅವನ ಮನಸ್ಸಿಗೆ ಒಪ್ಪಿದರೆ, ನಂಬಿಕೆ ದಾರ್ಢ್ಯಗಳು ಧ್ಯಾನಾದಿ ಮೂಲಕ ಉಂಟಾದರೆ, ಅವನು ಹಿಂದಿನ ಮಂತ್ರಗಳಿಗೆ ಇದುವರೆಗೆ ಮಾಡಿಕೊಂಡ ಅರ್ಥವನ್ನು ತ್ಯಾಗಮಾಡಿ ಈ ಹೊಸ ಸನ್ನಿವೇಶಕ್ಕೆ ಅನುಗುಣವಾದ ಅರ್ಥಮಾಡಿಕೊಳ್ಳಬೇಕಾಗುವುದು. ಈ ಕಲ್ಪದಲ್ಲಿ ಹಿಂದಿನ ಮಂತ್ರಗಳ ಅರ್ಥಕ್ಕೆ ಫಲವಾಗಿ ಈವಾಕ್ಯದ ಅರ್ಥವು ಸಿದ್ಧವಾಗುವುದರ ಬದಲು ಈ ವಾಕ್ಯದ ಆಪಾತತಃ ಪ್ರಾಪ್ತವಾದ ಅರ್ಥಕ್ಕೆ ಅನುಗುಣವಾಗಿ ಹಿಂದಿನ ಮಂತ್ರಗಳ ಅರ್ಥವನ್ನು ಬದಲಾಯಿಸಿಕೊಳ್ಳುವ ದುಃಸ್ಥಿತಿಯು ಪ್ರಾಪ್ತ

ವಾಗುವುದು. ಮುಂದೆಯೂ ಇಂತಹ ಸನ್ನಿವೇಶಗಳು ಒದಗಬಹುದೆಂಬ ಸಂದೇಹವೂ ಉಂಟಾಗಿ ಯಾವ ನಿರ್ಣಯವೂ ಇಲ್ಲದೆ ಈ ಸನ್ನಿವೇಶಕ್ಕೆ ಸಿಕ್ಕಿದವನಿಗೆ ಶ್ರೇಯಸ್ಸಿನ ದಾರಿಯೆ ಇಲ್ಲವಾಗುವುದು.

ಇದನ್ನು ನಾವು ಮನಸ್ಸಿಗೆ ತಂದುಕೊಂಡರೆ ಋಜುವಾಗಿ ಮಂತ್ರಾರ್ಥವನ್ನು ಮಾಡಿಕೊಳ್ಳುವ ಅಧಿಕಾರಿಯಲ್ಲಿ ಪರಮಾತ್ಮನು ಎಂತಹ ದೊಡ್ಡದಾದ ಅನುಗ್ರಹ ಮಾಡಿರುವನು ಎಂಬುದು ಮನವರಿಯದೇ ಇರದು.

ಈ ಅಂಶಗಳನ್ನು ಚೆನ್ನಾಗಿ ಪರಿಶೀಲಿಸಬೇಕು. ಇದರಿಂದ ಲೋಕಪ್ರಸಿದ್ಧವಾದ ರೀತಿಯಲ್ಲಿ ಸಂಸ್ಕೃತ ಭಾಷೆ ಇರುವುದೆಂದು ತಿಳಿದು ಅದರಂತೆ ಶಾಸ್ತ್ರ ಪಂಕ್ತಿಗೆ ಅರ್ಥಮಾಡುವುದು ಎಷ್ಟು ಅಪಾಯಕರವೆಂದು ಗೊತ್ತಾಗುವುದು. ಅಧಿಕಾರಿಯು ಇಂತಹ ಲೋಪವು ತನ್ನ ಅಧ್ಯಯನದಲ್ಲಿ ಬರದಂತೆ ಎಚ್ಚರಿಕೆಯಿಂದ ವರ್ತಿಸುವುದು ಎಷ್ಟು ಆವಶ್ಯಕ ಎಂದು ಒತ್ತಿ ಹೇಳಬೇಕಾದುದಿಲ್ಲ. ಶಾಸ್ತ್ರಪ್ರಪಂಚದಲ್ಲಿ ಜನಾನುರಾಗ ಮತ್ತು ಲೋಕಸಮ್ಮತಿಗಳಿಗೆ ನಿರ್ಣಾಯಕತ್ವವಿಲ್ಲ ಎಂದು ಅರಿತು ಶಾಸ್ತ್ರಕ್ಕೇ ಅಸಾಧಾರಣವಾದ ಅರ್ಥವು ಯಾವುದೆಂಬುದನ್ನುಗುರುಗಳ ಮೂಲಕ ಸರ್ವ ಸಂದೇಹ ಪರಿಹಾರಕವಾಗಿ ತಿಳಿಯುವುದೊಂದೇ ಶ್ರೇಯಸ್ಸಿನ ದಾರಿ. ಶಾಸ್ತ್ರವು ಕೇವಲ ಅಧ್ಯಾತ್ಮ. ಆತ್ಮಶ್ರೇಯಸ್ಸನ್ನಪೇಕ್ಷಿಸುವವನು ಅವನ ಪರವಾಗಿಯೆ ತನ್ನ ಅಧ್ಯಯನವನ್ನು ಸಾಗಿಸಬೇಕು. ಅದು ಲೋಕಕ್ಕೆ ಅನ್ವಯಿಸುವುದು ಬಿಡುವುದು ಈಶೇಚ್ಛೆ. ಅದಕ್ಕೆ ಪ್ರಯತ್ನಾಂತರ ಬೇಡ. ಲೋಕಸಂರಕ್ಷಣ ಮಾಡುವವನು ಪರಮಾತ್ಮ ಮತ್ತೊಬ್ಬಗೆ ಸಂರಕ್ಷಕತ್ವವಿಲ್ಲವೆಂಬುದನ್ನು ಮರೆಯಬಾರದು.

ಭಾಷ್ಯ

ಅಹಂ ಚಾಸಾವಹೇಯತಃ ।
ಅಸ್ಮಿ ನಿತ್ಯಾಸ್ತಿತಾ ಮಾನಾತ್ ಸರ್ವಜೀವೇಷು ಸಂಸ್ಥಿತಃ ।
ಸ್ವಯಂ ತು ಸರ್ವಜೀವೇಭ್ಯೋ ವ್ಯತಿರಿಕ್ತಃ ಪರೋ ಹರಿಃ ॥

(ಇತಿ ಬ್ರಹ್ಮಾಂಡೆ)

ಅಸೌ – ಇದುವರೆಗೆ ನಿರೂಪಿತವಾದ ಸ್ವರೂಪವುಳ್ಳ ಪರಮಾತ್ಮನು. ಅಹೇಯತಃ – ತ್ಯಾಗಾನರ್ಹನಾದುದರಿಂದ. ಅಹಂ ಚ–ಅಹಂ ಎಂಬ ಶಬ್ದವಾಚ್ಯನೂ ಹೌದು. ನಿತ್ಯಾಸ್ತಿಮಾನಾತ್ – ನಿರಂತರ ಇರುವನು ಎಂಬ ನಿಮಿತ್ತದಿಂದ. ಅಸ್ಮಿ –ಅಸ್ಮಿ ಎನಿಸುವನು. (ಅವನು) ಸರ್ವ ಜೀವೇಷು–ಸಮಸ್ತ ಜೀವರಲ್ಲಿ. ಸಂಸ್ಥಿತಃ – (ಸರ್ವನಿಯಾಮಕ ಎಂಬ ಅರ್ಥದಲ್ಲಿ) ಅಂತರ್ಯಾಮಿಯಾಗಿರುವನು. ಸ್ವಯಂ ತು – ತಾನಾದರೊ. ಸರ್ವ ಜೀವೇಭ್ಯಃ – ಸಮಸ್ತ ಜೀವರ ದೆಶೆಯಿಂದ. ವ್ಯತಿರಿಕ್ತಃ – ವಿಲಕ್ಷಣನು. (ಹೀಗೆ) ಹರಿಃ – ಹರಿಶಬ್ದವಾಚ್ಯನಾದ ಪರಮಾತ್ಮನು. ಪರಃ – ಸರ್ವೋತ್ತಮನು. (ಇತಿ – ಹೀಗೆ. ಬ್ರಹ್ಮಾಂಡೆ –ಬ್ರಹ್ಮಾಂಡದಲ್ಲಿರುವುದು.)

ಸೂಚನೆ

ಅಹಂ ಶಬ್ದವಾಚ್ಯನಾದವನು ಪರಮಾತ್ಮನು, ಜೀವನಲ್ಲ ಎಂದು ಮಂತ್ರದಿಂದ ಸಿದ್ಧಾಂತಿತವಾಯಿತು. ಇದನ್ನು ತಿಳಿಯಲು ಪರಮಾತ್ಮನು ಜೀವವಿಲಕ್ಷಣನೆಂದು ತಿಳಿಯಬೇಕಾಯಿತು. ಇದೇ ಭಾಷ್ಯೋಕ್ತವಾದ ಭೇದವಾದ. ಇದು ಪರಮಾತ್ಮನು ಸರ್ವೋತ್ತಮನು; ಈಶ ಮತ್ತು ಜಗತ್ತು ಈಶಾವಾಸ್ಯ ಎಂಬ ಉಪನಿಷತ್ತಿನ ಸಿದ್ಧಾಂತವನ್ನು ಎತ್ತಿ ಹಿಡಿಯುವ ಭಾಷೆ. ಇದಕ್ಕೆ ವಿರುದ್ಧವಾದುದು ಅಹಂ ಎಂದರೆ ಜೀವನು ಎಂದು ಅರ್ಥಮಾಡುವುದು. ಅಹಂ ಎಂಬುದು ಜೀವನಾದರೆ ಅವನೇ 'ಸಃ' ಎಂಬ ಪದದ ಅರ್ಥವಾದ ಪರಮಾತ್ಮನಾಗುವನು. ಇದೇ ಅಭೇದವಾದ. ಇದರಲ್ಲಿ ಜೀವಾತಿರಿಕ್ತ ಪರಮಾತ್ಮನಿಲ್ಲ ಎಂಬ ಭಾವವಿರುವುದರಿಂದ ಇದು ಪರಮಾತ್ಮ ನಿರಾಕರಣವಾಗುವುದು. ಹೀಗೆ ಅಭೇದವಾದವು ಪರಮಾತ್ಮನನ್ನು ಪರ್ಯವಸಾನದಲ್ಲಿ ನಿರಾಕರಿಸುವ ವಾದ. ಭೇದವಾದವು ಈಶಾವಾಸ್ಯ ಎಂಬ ತತ್ತ್ವವನ್ನು ಸ್ಥಾಪಿಸುವ ವಾದ. ಸರಿಯಾದ ಅಧ್ಯಯನದಿಂದ ಈ ಎರಡು ವಾದಗಳ ಭೇದವನ್ನು ಅರಿಯಬೇಕು. ಅಧ್ಯಯನವಿಲ್ಲದೆ ಇದು ಸರಿ, ಇದು ತಪ್ಪು ಎಂದು ವಾದಿಸುವುದು ಪರ್ಯವಸಾನದಲ್ಲಿ ಬ್ರಹ್ಮನಿರಾಕರಣವೇ ಆಗುವದು. ಶಾಸ್ತ್ರಾಧ್ಯಯನವಿಲ್ಲದೆ ಪರಮಾತ್ಮನು ಜೀವನಿಂದ ಭಿನ್ನ ಎಂದು ತಿಳಿದರೆ ಆ ಭಾವಕ್ಕೆ ಪರಮಾತ್ಮ ಮತ್ತು ಜೀವ ಇವರಿಬ್ಬರೂ ಪರಸ್ಪರ ಅಧ್ಯಧೀನಭಾವವುಳ್ಳವರಲ್ಲ ಎಂದು ಅರ್ಥವಾಗುವ ಅವಕಾಶವಿರುವುದು.

ಜೀವನು ಪರಮಾತ್ಮನ ಅಧೀನ ಎಂದು ಒಪ್ಪಿದರೂ ಕೆಲವು ವಿಷಯದಲ್ಲಿಯಾದರೂ ಇಬ್ಬರೂ ಸಮಾನತೆಯುಳ್ಳವರಾಗಬೇಕೆಂದು ತೋರಬಹುದು. 'ಇದೇ ಭಾವವು ಜೀವೇಶ್ವರರು ಸತ್ಯತ್ವವನ್ನು ಸಮಾನವಾಗಿ ಹೊಂದಿರಬೇಕು; ಇಬ್ಬರೂ ಅನಾದಿಯಾಗಬೇಕು; ಇಲ್ಲದಿದ್ದರೆ ಇಬ್ಬರಿಗೂ ಭೇದವನ್ನು ಹೇಳುವುದು ಹೇಗೆ ? ಎಂಬ ವಾದದಲ್ಲಿ ಇರುವುದು. ಈ ಕಲ್ಪದಲ್ಲಿ 'ಈಶಾವಾಸ್ಯ' ಎಂದರೆ ಪರಮಾತ್ಮನು ನಿರರ್ಗಳವಾಗಿ ಸರ್ವಕರ್ತೃ ಎಂಬ ಭಾವಕ್ಕೆ ಲೋಪ ಬಂದು ಆ ಉಪನಿಷತ್ತಿಗೆ ತನಗೆ ಉಚಿತ ಎಂದು ತೋರುವ ಯಾವುದೋ ಒಂದು ಅರ್ಥ ಹೇಳುವ ಪ್ರಯತ್ನ ಹುಟ್ಟಿ ಪರ್ಯವಸಾನದಲ್ಲಿ ಸರ್ವ ನಿಯಾಮಕನಾದ ಪರಮಾತ್ಮನ ನಿರಾಕರಣವಾಗುವುದು. ಇದು ನಿಂದಿತವಾದುದೆಂದು 'ತಮೊ ಯ ಉ ವಿದ್ಯಾಯಾಗ್ಂ ರತಾಃ' ಎಂಬಲ್ಲಿ ಸಿದ್ಧಾಂತಿತವಾಗಿರುವುದು.

ಹೀಗೆ ಪರಮಾತ್ಮನು ಜಗದ್ವಿಲಕ್ಷಣ ಎಂಬ ಭೇದವಾದವಿಲ್ಲದೆ ಅವನು ಅಸಹಾಯನಾಗಿ ಜಗನ್ಮೂಲ ಎಂಬ ಜಗತ್ತಿನ ಏಕಮೂಲತತ್ತ್ವವಾದವು ಸಿದ್ಧಿಸುವುದಿಲ್ಲ. ಇದನ್ನೇ ಇಂಗ್ಲೀಷು ಭಾಷೆಯಲ್ಲಿ ಪರಿಭಾಷೆಯನ್ನರಿತವರು ಮೋನಿಸಂ (Monism) ಎಂದು ಕರೆಯುವರು. ಅಭೇದವಾದದಲ್ಲಿ ಜಗತ್ತು ಒಂದೇ ಕಾರಣವುಳ್ಳುದು ಎಂದು ಅರ್ಥ ಹೇಳುವ ಸಂಭವವಿಲ್ಲ. ಅದನ್ನು ಮೋನಿಸಂ ಎಂದು ಕರೆಯುವುದು ಗೌಣ ಕಲ್ಪ. ಈ ಅಂಶಗಳನ್ನು ಆಗ್ರಹವಿಲ್ಲದೆ ತತ್ತ್ವವಿಚಾರವನ್ನು ಜ್ಞಾನಕ್ಕೋಸ್ಕರ ಮಾಡುವವರು ವಿಶೇಷ ವಿಮರ್ಶೆಯಿಂದ ತಿಳಿಯಬೇಕಾದುದು. ಸಂಭಾವಿತವಾದ ಎಲ್ಲ ಪೂರ್ವಪಕ್ಷಗಳ ನಿರಾಕರಣೆಯ ಸಂದರ್ಭದಲ್ಲಿ ಈ ವಿಚಾರವೆಲ್ಲವೂ ಪ್ರಕೃತವಾಗುವುದು. ಸರ್ವ ಪೂರ್ವಪಕ್ಷನಿರಾಕರಣವು ಶಾಸ್ತ್ರಾಧ್ಯಯನದ ಅಂಗವೆಂದು 'ಅವಿದ್ಯಯಾ ಮೃತ್ಯುಂ ತೀರ್ತ್ವಾ' ಎಂಬಲ್ಲಿ ಸಿದ್ಧಾಂತಿತವಾಗಿದೆ.

ಫಲಿತ ಮಂತ್ರಾರ್ಥ

"ಯಾವನು ಪೂರ್ವೋಕ್ತ ಮಂತ್ರಪ್ರತಿಪಾದ್ಯನಾದ ಪುರುಷನೊ ಅವನು ಯಾವಾಗಲೂ ಇರುವನೇ ಆಗಿರುವನು." ಎಂದು ಒಂದು ಅರ್ಥ.

"ಯಾವನು ಪೂರ್ವೋಕ್ತ ಮಂತ್ರಪ್ರತಿಪಾದ್ಯನಾಗಿ ಒಂದೊಂದು

ವಸ್ತುವಿನಲ್ಲಿಯೂ ಅಂತರ್ಯಾಮಿಯಾಗಿರುವನೊ ಅವನೇ ನನ್ನ ಅಂತರ್ಯಾಮಿಯಾಗಿರುವನು." ಎಂದು ಎರಡನೆಯ ಅರ್ಥ.

ಈ ಎರಡರ್ಥವೂ ಮಂತ್ರಕ್ಕೆ ಒಟ್ಟಿಗೆ ಆಗುವುದು ಎಂದು ಮುಂದಿನ ಮಂತ್ರದಲ್ಲಿ ಸೂಚಿತವಾಗುವುದು. ಈ ಕಾರಣದಿಂದ ಇದು ವಿಕಲ್ಪವುಳ್ಳ ಅರ್ಥವಲ್ಲ.

೧೮

ಖಂಡಾರ್ಥವು ೧೮ ನೆಯ ಮಂತ್ರವನ್ನು ಈರೀತಿ ಪರಿಚಯ ಮಾಡಿಸುವುದು.

ಖಂಡಾರ್ಥ

ನನು ಪರಮೇಶ್ವರಸ್ಯ ಯತ್ ಕಲ್ಯಾಣರೂಪತ್ವಮುಕ್ತಂ ಯಚ್ಚ ಸೋಹಮಸ್ಮೀತಿ ಜೀವಾಂತರ್ಗತಸ್ಯ ನಿತ್ಯಾಸ್ತಿತ್ವಮುಕ್ತಂ । ದೇಹನಾಶಸ್ಯ ಪ್ರತ್ಯಕ್ಷಾದಿ ಸಿದ್ಧತಯಾ ತದಂತರ್ಗತ ಜೀವಸ್ಯೇವ ಮರಣಾದ್ಯವಶ್ಯಂ ಭಾವಾತ್ ಇತ್ಯಾಶಂಕಾಂ ಕೈಮುತ್ಯೇನಾಹ । ವಾಯುರಿತಿ ।

ನನು – (ಈ ಅನ್ವಯವು ಹೊಸ ಆಶಂಕೆಯ ಸೂಚಕ). ಪರಮೇಶ್ವರಸ್ಯ – ಸರ್ವೋತ್ತಮನಾದ ಈಶ್ವರನಿಗೆ. ಯತ್ –ಯಾವ. ಕಲ್ಯಾಣರೂಪತ್ವಂ – ಮಂಗಳಸ್ವರೂಪವು. ಉಕ್ತಂ - ಸಿದ್ಧಾಂತಿತವಾಯಿತೋ. ಯತ್ ಚ – ಮತ್ತು ಯಾವ. ಸೋಹಮಸ್ಮೀತಿ – ಸೋಹಮಸ್ಮಿ ಎಂಬ ವಾಕ್ಯದಿಂದ. ಜೀವಾಂತರ್ಗತಸ್ಯ – ಜೀವನಲ್ಲಿ ಅಂತರ್ಗತನಾದವನಿಗೆ. ನಿತ್ಯಾಸ್ತಿತ್ವಂ – ನಿರಂತರ ಅಸ್ತಿತ್ವವು. ಉಕ್ತಂ – ಸಿದ್ಧಾಂತಿತವಾಯಿತೊ. (ಅವನಿಗೆ) ದೇಹನಾಶಸ್ಯ – ದೇಹದ ನಾಶಕ್ಕೆ. ಪ್ರತ್ಯಕ್ಷಾದಿಸಿದ್ಧತಯಾ – ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ಸಿದ್ಧತೆಯಿರುವುದರಿಂದ. ತದಂತರ್ಗತ ಜೀವಸ್ಯ ಇವ – ಆ ದೇಹದಲ್ಲಿ ಅಂತರ್ಗತವಾದ ಜೀವಕ್ಕಿರುವಂತೆಯೇ. ಮರಣಾದ್ಯವಶ್ಯಂ ಭಾವಾತ್ – ಮರಣ ಮೊದಲಾದುದಕ್ಕೆ. ಆವಶ್ಯಕತ್ವವು ಇರುವುದರಿಂದ. ಇತಿ–ಹೀಗೆಂಬ. ಆಶಂಕಾಂ– ಸಂದೇಹವನ್ನು. ಕೈಮುತ್ಯೇನ – ಕೈಮುತ್ಯನ್ಯಾಯದಿಂದ. ಆಹ – ಹೇಳುತ್ತಾನೆ. ವಾಯುಃ ಇತಿ – ವಾಯು ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಮಂತ್ರ

ವಾಯುರನಿಲಮಮೃತಮಥೇದಂ ಭಸ್ಮಾಂತಗ್ಂ ಶರೀರಂ ॥ ೧೮ ॥

ಖಂಡಾರ್ಥ

ಯದ್ಯಪೀದಂ ಶರೀರಂ ಭಸ್ಮಾಂತಂ । ತಥಾಪಿ ತದಂತರ್ಗತಸ್ಯ ಹರೇಃ ನ ಮರಣಾದಿ ದೋಷಪ್ರಸಕ್ತಿಃ । ಕುತಃ ಅನಿಲಂ । ಅಃ ಬ್ರಹ್ಮೈವ ನಿಲಂ ನಿಲಯನಂ ಆಶ್ರಯೊ ಯಸ್ಯ ಸಃ ಅನಿಲಃ । ಪರಮೇಶ್ವರಾಶ್ರಿತೊ ವಾಯುರಪಿ ಯದಾ ಅಮೃತಃ ನಿತ್ಯಃ ಅಥ ತದಾ ಪರಮೇಶ್ವರೊ ಅಮೃತ ಇತಿ ಕಿಮು ವಕ್ತವ್ಯಮಿತ್ಯರ್ಥಃ । ಅನಿಲಾಮೃತಪದಯೋಃ ಲಿಂಗವ್ಯತ್ಯಯೊ ಜ್ಞೇಯಃ । ವಾಯೋರಮೃತತ್ವಂ ನಿತ್ಯಜ್ಞಾನತ್ವೇನ ಜ್ಞೇಯಂ । ಅತಿರೋಹಿತವಿಜ್ಞಾನಾತ್ ವಾಯುರಪ್ಯಮೃತಸ್ಸ್ಮೃತಃ ಇತ್ಯುಕ್ತೇಃ । ಏತೇನ ಮಾತರಿಶ್ವಾ ವ್ಯಾಖ್ಯಾತಃ ಇತ್ಯತ್ರ ಭಾಷ್ಯಾದೌ ತಥಾ ನಿರ್ಣಯಾತ್ ಇತ್ಯರ್ಥಃ ॥ ೧೮ ॥

ಮಂತ್ರಪದವಿಭಾಗ— ವಾಯುಃ, ಅನಿಲಂ, ಅಮೃತಂ, ಅಥ, ಇದಂ, ಭಸ್ಮಾಂತಗ್ಂ, ಶರೀರಂ ।

ಮಂತ್ರಸ್ಥ ಪದಗಳ ಅನ್ವಯ

ಶರೀರಂ, ಭಸ್ಮಾಂತಗ್ಂ. ಅನಿಲಂ, ವಾಯುಃ, ಅಮೃತಂ, ಅಥ ಇದಂ (ಪರಮೇಶ್ವರೊ ಅಮೃತ ಇತಿ ಕಿಮು ವಕ್ತವ್ಯಂ)

ಖಂಡಾರ್ಥದಂತೆ ಈ ಪದಗಳ ಅರ್ಥ

ಇದಂ – ಈ. ಶರೀರಂ – ಶರೀರವು. ಯದ್ಯಪಿ ಭಸ್ಮಾಂತಗ್ಂ – ಭಸ್ಮವೇ ಅಂತವಾಗಿ ಉಳ್ಳದು (ಹೌದು.) ತಥಾಪಿ – ಆದರೂ ಕೂಡ. ತದಂತರ್ಗತಸ್ಯ – ಆ ಶರೀರದಲ್ಲಿ ಅಂತರ್ಗತನಾದ. ಹರೇಃ – ಪರಮಾತ್ಮನಿಗೆ. ನ ಮರಣಾದಿ ದೋಷಪ್ರಸಕ್ತಿಃ – ಮರಣ ಮೊದಲಾದ ದೋಷದ ಪ್ರಸಂಗವು ಇಲ್ಲ. ಕುತಃ – ಏತಕ್ಕೋಸ್ಕರ? ಅನಿಲಂ – ಅಃ – ಬ್ರಹ್ಮೈವ– ಬ್ರಹ್ಮನೇ. ನಿಲಂ – ನಿಲಯನಂ – ಆಶ್ರಯಃ – ಆಧಾರನು. ಯಸ್ಯ –

ಯಾರಿಗೋ. ಸಃ – ಅವನು. ಅನಿಲಃ – ಅನಿಲಶಬ್ದ ವಾಚ್ಯನು. ಪರಮೇಶ್ವರಾಶ್ರಿತಃ – ಪರಮೇಶ್ವರನನ್ನು ಆಶ್ರಯಿಸಿದ. ವಾಯುಃ ಅಪಿ – ವಾಯುವೂ ಕೂಡ. ಯದಾ - ಯಾವಾಗ. ಅಮೃತಃ - ನಿತ್ಯಃ – ನಿರಂತರ ಇರುವನೋ - ಅಥ - ಹಾಗಾದರೆ. ತದಾ - ಆವಾಗ. ಪರಮೇಶ್ವರಃ - ಪರಮೇಶ್ವರನು. ಅಮೃತಃ - ನಿತ್ಯನು. ಇತಿ ಹೀಗೆ. ಕಿಮು ವಕ್ತವ್ಯಂ - ಹೇಳಬೇಕಾದುದೇನು? ಇತಿ ಅರ್ಥಃ - ಹೀಗೆ ಅರ್ಥವು. ಅನಿಲಾಮೃತ ಪದಯೊಃ - ಅನಿಲ ಮತ್ತು ಅಮೃತ ಎಂಬ ಪದಗಳಿಗೆ (ಅನಿಲ ಮತ್ತು ಅಮೃತಂ ಎಂಬ ಪದಗಳು ವಾಯುಃ ಎಂಬುದರ ವಿಶೇಷಣಗಳಾದರೂ) ಲಿಂಗವ್ಯತ್ಯಯಃ- ಲಿಂಗದಲ್ಲಿ ವ್ಯತ್ಯಾಸವಿದೆಯೆಂದು. ಜ್ಞೇಯಃ–ತಿಳಿಯಲ್ಪಡಬೇಕು. ಅತಿರೋಹಿತವಿಜ್ಞಾನಾತ್ - ತಿರೋಧಾನ ಹೊಂದದ ಜ್ಞಾನವನ್ನು ಹೊಂದಿರೋಣದರಿಂದ. ವಾಯುಃ ಅಪಿ – ವಾಯುವೂ ಕೂಡ. ಅಮೃತಃ – ನಿತ್ಯ ಎಂದು. ಸ್ಮೃತಃ – ಶಾಸ್ತ್ರಸಿದ್ಧನಾಗಿರುವನು. ಇತಿ ಉಕ್ತೇಃ - ಹೀಗೆ ಹೇಳಿರೋಣದರಿಂದ. "ಏತೇನ ಮಾತರಿಶ್ವಾ ವ್ಯಾಖ್ಯಾತಃ" ಇತಿ ಅತ್ರ– ಏತೇನ ಮಾತರಿಶ್ವಾವ್ಯಾಖ್ಯಾತಃ ಎಂಬ ಬ್ರಹ್ಮಸೂತ್ರದಲ್ಲಿನ. ಭಾಷ್ಯಾದೌ– ಭಾಷ್ಯ ಮೊದಲಾದುದರಲ್ಲಿ. ತಥಾ -ಹಾಗೆ. ನಿರ್ಣಯಾತ್ ಚ – ನಿರ್ಣಯವಾಗಿರೋಣದರಿಂದಲೂ ಕೂಡ. ಇತಿ - ಹೀಗೆ (ಮಂತ್ರಾರ್ಥವು.)

ಸೂಚನೆ

ಪೂರ್ವಪಕ್ಷದಲ್ಲಿ ಉಕ್ತವಾಗಿರುವುದು ಪರಮಾತ್ಮನಂತೆ ಜೀವನೂ ಶರೀರಾಂತಃ ಇರುವನೆಂದು. ಮಂತ್ರಾರ್ಥವಾದರೋ ಶರೀರ ಎಂಬ ಪದದಿಂದ ಜೀವನನ್ನು ಸಂಗ್ರಹಿಸಿ ಈ ಒಟ್ಟು ವಸ್ತುವಿನಲ್ಲಿ ವಾಯು, ವಾಯುವಿನ ಅಂತಃ ಪರಮಾತ್ಮ ಎಂದು ನಿರೂಪಿಸಿ, ಶರೀರದಂತೆ ಜೀವನಿಗೆ ಮರಣವನ್ನು ಸೂಚಿಸಿ, ಸರ್ವನಿಯಾಮಕನಾದ ಪರಮಾತ್ಮನ ಅನುಗ್ರಹದಿಂದ ವಾಯುವೂ ನಿತ್ಯನೆಂದು ಸಿದ್ಧಾಂತಿಸುವುದು. ಶರೀರಕ್ಕೆ ಹೇಗೆ ಮರಣವು ಗೌಣವಲ್ಲವೊ ಹಾಗೆಯೇ ಜೀವನಿಗೂ ಮರಣವು ಗೌಣವಲ್ಲ ಎಂದು ಸೂಚನೆ ಇರುವುದು. ಇದು ಮಂತ್ರಾಭಿಪ್ರಾಯವಲ್ಲದಿದ್ದರೆ ಶರೀರದ ಜೊತೆಯಲ್ಲಿ ಜೀವನನ್ನು ಸೇರಿಸಿ 'ಭಸ್ಮಾಂತಗ್ಂ' ಎಂದು ಮರಣವನ್ನು ಹೇಳುವುದು

ಅಯುಕ್ತವಾಗುವುದು. ಈ ಸಿದ್ಧಾಂತವನ್ನು ಅಧಿಕಾರಿಯು ಅಧ್ಯಯನ ಕ್ರಮದಲ್ಲಿ ತಿಳಿಯಬೇಕಾದುದು.

ಪರಮಾತ್ಮನ ಅನುಗ್ರಹ ಬಲದಿಂದ ವಾಯುವಿಗೆ ನಿತ್ಯತ್ವವುಂಟಾಗ ಲಾಗಿ ಪರಮಾತ್ಮನಿಗೆ ನಿತ್ಯತ್ವವಿದೆ ಎಂದು ಹೇಳುವುದು ಪರಮಾತ್ಮನಿಗೆ ಜೀವವೈಲಕ್ಷಣ್ಯವನ್ನು ಉಪಪಾದಿಸುವುದು. ಇದರಿಂದ ಜೀವನಂತೆ ಪರ ಮಾತ್ಮನೂ ಮರಣವನ್ನು ಹೊಂದಲಿ ಎಂಬ ಪೂರ್ವಪಕ್ಷವು ದತ್ತೋತ್ತರ ವಾಯಿತು.

ವಾಯುವು ನಿತ್ಯಜ್ಞಾನಸ್ವರೂಪ ಎಂಬೀ ಮುಂತಾಗಿ ಸಿದ್ಧನಾಗಿರುವುದು ಪರಮಾತ್ಮನ ಅನುಗ್ರಹದಿಂದ ಎಂಬುದನ್ನು ಮರೆಯಬಾರದು ಎಂದು ತಿಳಿಸಲು ಖಂಡಾರ್ಥದಲ್ಲಿ ಆ ಯುಕ್ತಿಯು ನಿರೂಪಿತವಾಗಿರುವುದು.

ಈ ಅಂಶಗಳು ಕೇವಲ ಪಾರಿಭಾಷಿಕ. ಲೌಕಿಕ ಪ್ರತೀತಿಯಂತೆ ಇವನ್ನು ತಿಳಿಯಬಾರದು ಎಂದು ಸೂಚಿಸಲು ಖಂಡಾರ್ಥವು ಸೂತ್ರ ಮತ್ತು ಭಾಷ್ಯವನ್ನು ಉದಹರಿಸುವುದು. ಇವು ಶಾಸ್ತ್ರಾಧ್ಯಯನ ದಿಂದ ತಿಳಿಯಬೇಕಾದುವು ಎಂದು ಒಟ್ಟು ಅಭಿಪ್ರಾಯ.

ಭಾಷ್ಯ

ಏಕೋಽಸೌಶಬ್ದಃ ಪ್ರಾಣೆ ಸ್ಥಿತ ಇತಿ ।
ಯಸ್ಮಿನ್ ಅಯಂ ಸ್ಥಿತಃ ಸೋಽಪ್ಯಮೃತಃ ಕಿಮು ಪರಃ
ಅಃ ಬ್ರಹ್ಮೈವ ನಿಲಯನಂ ಯಸ್ಯ ವಾಯೋಃ ಸೊ ಅನಿಲಂ ।
ಅತಿರೋಹಿತವಿಜ್ಞಾನಾತ್ ವಾಯುರಪ್ಯಮೃತಃ ಸ್ಮೃತಃ ।
ಮುಖ್ಯಾಮೃತಃ ಸ್ವಯಂ ರಾಮಃ ಪರಮಾತ್ಮಾ ಸನಾತನಃ ॥

ಇತಿ ರಾಮಸಂಹಿತಾಯಾಂ ॥

ಏಕಃ- (ಹಿಂದಿನ ಮಂತ್ರದಲ್ಲಿನ ಎರಡು ಅಸೌ ಶಬ್ದಗಳಲ್ಲಿ) ಒಂದು. ಅಸೌಶಬ್ದಃ- ಅಸೌ ಎಂಬ ಶಬ್ದವು. ಪ್ರಾಣೆ ಸ್ಥಿತಃ ಇತಿ- ಪ್ರಾಣನಲ್ಲಿ ಎಂದರೆ ಮುಖ್ಯ ವಾಯುವಿನಲ್ಲಿ ಅಂತರ್ಯಾಮಿಯಾಗಿರುವನು ಎಂಬ (ಅರ್ಥವನ್ನು ಕೊಡುವುದು.) (ಈ ಅಂಶದ ಜೊತೆಯಲ್ಲಿ ಈ ಮಂತ್ರದ ವಾಯುಶಬ್ದವನ್ನು ಅರ್ಥಮಾಡಿಕೊಳ್ಳಬೇಕು.) ಯಸ್ಮಿನ್-ಯಾವ ಪರ

ಮಾತ್ಮನಲ್ಲಿ. ಅಯಂ – ಮಂತ್ರೋಕ್ತ ಪರಮಾತ್ಮನು. ಸ್ಥಿತಃ–ಅಂತ ರ್ಯಾಮಿಯಾಗಿರುವನೊ. ಸಃ - ಅವನು. ಅಪಿ - ಕೂಡ. ಅಮೃತಃ- ನಿತ್ಯನು (ಹೀಗಿರುವಲ್ಲಿ). ಅಪರಃ –ಅವನಿಂದ ವಿಲಕ್ಷಣನಾದ ಪರಮಾತ್ಮನು (ನಿತ್ಯನೆಂದು). ಕಿಮು- ಹೊಸದಾಗಿ ಹೇಳಬೇಕಾದ ಅವಶ್ಯಕತೆ ಏನಿದೆ? ಅಃ - ಬ್ರಹ್ಮೈವ - ಬ್ರಹ್ಮವೇ. ನಿಲಯನಂ - ಆಶ್ರಯನು. ಯಸ್ಯ–ಯಾವ. ವಾಯೋಃ - ಮುಖ್ಯಪ್ರಾಣನಿಗೋ. ಸಃ - ಆ ವಾಯುವು. ಅನಿಲಂ - ಅನಿಲಂ ಎಂದು ಉಪನಿಷತ್ಪ್ರತಿಪಾದ್ಯನು. ಅತಿರೋಹಿತ ವಿಜ್ಞಾನಾತ್ – ತಿರೋಧಾನವನ್ನುಹೊಂದದ ವಿಜ್ಞಾನವುಳ್ಳವನಾದುದರಿಂದ. ವಾಯುಃ ಅಪಿ – ವಾಯುವೂ ಕೂಡ. ಅಮೃತಃ – ನಿತ್ಯನೆಂದು. ಸ್ಮೃತಃ – ಶಾಸ್ತ್ರ ಸಿದ್ಧನಾಗಿರುವನು. (ಹೀಗೆ ವಾಯುವು ಪರಾಧೀನವಾದ ನಿತ್ಯತ್ವವುಳ್ಳವ ನಾಯಿತು. ಅವನು ಸ್ವತಃ ನಿತ್ಯನಲ್ಲ. ಸ್ವತಃ.ನಿತ್ಯವಲ್ಲದ ಸ್ವರೂಪವುಳ್ಳವನು ಎಂದು ಅಭಿಪ್ರಾಯ.) ಮುಖ್ಯಾಮೃತಃ-ಮುಖ್ಯಾರ್ಥದಲ್ಲಿ ಎಂದರೆ ಪರಾಧೀನ ವಲ್ಲದ ರೀತಿಯಲ್ಲಿ ನಿತ್ಯತ್ವವುಳ್ಳವನು. ಸ್ವಯಂ – ಸ್ವತಂತ್ರನಾದ ಪ್ರಯುಕ್ತ. ರಾಮಃ – ರಾಮನೆಂದು ಹೆಸರುಳ್ಳ ಪರಮಾತ್ಮನು. (ಇವನೇ ಪರಮಾತ್ಮಾ – ಸರ್ವೋತ್ತಮನಾದ ಆತ್ಮನು.[ಆದುದರಿಂದಲೇ]ಸನಾತನಃ - ಅನಾದಿಯು ಮತ್ತು ಅಪೌರುಷೇಯ ವೇದಪ್ರತಿಪಾದ್ಯನು. [ಶಾಸ್ತ್ರದಲ್ಲಿ 'ಸನಾ ತನಃ' ಎಂಬ ಶಬ್ದಕ್ಕೆ ಈ ಎರಡು ಅರ್ಥಗಳೂ ಪ್ರಸಿದ್ಧವಾಗಿರುವುವು.]

ಸೂಚನೆ

ಹಿಂದಿನ ಮಂತ್ರದಲ್ಲಿ ಪ್ರಾಣಪ್ರವರ್ತಕನು ಪರಮಾತ್ಮ ಎಂದು ಪ್ರಸಿದ್ಧವಾಗಿದೆ. ಪ್ರಾಣನು ಪರಮಾತ್ಮಾಧೀನ ಎಂದು ಇದರಿಂದ ಸಿದ್ಧ ವಾಯಿತು. ಪರಮಾತ್ಮನ ಅನುಗ್ರಹದಿಂದ, ಅವನೇ ತಾನು ಎಲ್ಲಿರುವನೊ ಆ ಜೀವಸಹಿತವಾದ ಶರೀರವು ನಾಶ ಹೊಂದಿದ ಮೇಲೆ, ನಾಶ ಹೊಂದ ಬೇಕಾದ ಸನ್ನಿವೇಶದಲ್ಲಿ ಕೇವಲ ಪರಮಾತ್ಮಾನುಗ್ರಹದಿಂದಲೇ ನಿತ್ಯನಾಗಿ ರುವನು. ಹೀಗೆ ಅನಿತ್ಯವಸ್ತುವನ್ನು ನಿತ್ಯವನ್ನಾಗಿ ಮಾಡುವ ಮಹಾ ಮಹಿಮೆಯುಳ್ಳ ಪರಮಾತ್ಮನು ನಿತ್ಯನೆಂದು ಪುನಃ ಹೊಸದಾಗಿ ಹೇಳ

ಬೇಕಾದ ಆವಶ್ಯಕತೆ ಏನಿರುವುದು? ಆವಶ್ಯಕತೆಯೇ ಇಲ್ಲ. ಪರಮಾತ್ಮನ ನಿತ್ಯತ್ವವು ಸ್ವತಃ ಸಿದ್ಧವಾದುದು.

ಸರ್ವಸತ್ತಾಪ್ರದನಾಗಿ ನಿತ್ಯನಾದ ಪರಮಾತ್ಮನು ನಿತ್ಯನೆಂದು ಸ್ವತಃ ಸಿದ್ಧವಾದ ಅಂಶ. ವಾಯುವು ನಿತ್ಯನೆಂದರೆ ಅದರ ಅರ್ಥವನ್ನು ಬಿಡಿಸಿ ಹೇಳುತ್ತಾರೆ. 'ಅತಿರೋಹಿತ ವಿಜ್ಞಾನಾತ್' ಎಂಬ ಪದದಿಂದ. ವಾಯುವಿನ ಜ್ಞಾನವು ತಿರೋಹಿತವಾಗುವುದಿಲ್ಲ. ಇದಕ್ಕೆ ಪರಮಾತ್ಮನ ಅನುಗ್ರಹವೇ ಕಾರಣ.

ಹೀಗೆ ಸ್ವತಂತ್ರನಾದ ಪ್ರಯುಕ್ತ ಸರ್ವೋತ್ತಮನಾಗಿ, ಆನಂದರೂಪಿಯಾದ ಪ್ರಯುಕ್ತ ರಾಮಶಬ್ದವಾಚ್ಯನಾದ ಪರಮಾತ್ಮನನ್ನು ತಿಳಿಯಲು ಲೌಕಿಕವಾದ ಪ್ರತ್ಯಕ್ಷ ಅನುಮಾನ ಮತ್ತು ಆಗಮ ಈ ಪ್ರಮಾಣಗಳು ಅಸಮರ್ಥ. ಈ ತಿಳಿವಳಿಕೆಗೆ ಸಾಧನ ಅಲೌಕಿಕಪ್ರಮಾಣವಾದ ವೇದ ಒಂದೇ. ಈ ವೇದವೇ ಪ್ರಕೃತವಾದ ಉಪನಿಷತ್ತು. ಸಮಸ್ತ ವೇದಾರ್ಥವೇ ಈ ಉಪನಿಷತ್ತಿನ ಅರ್ಥ. ಈ ಉಪನಿಷತ್ತಿನ ಅರ್ಥವೇ ಸಮಸ್ತ ವೇದದ ಅರ್ಥ. ಇದರ ಅರ್ಥವನ್ನು ಕೇವಲ ಶಬ್ದಪರಿಚಯದಿಂದ ಮಾಡಿಕೊಳ್ಳದೆ ಅಧಿಕಾರಿಯು ಶಾಸ್ತ್ರಾಧ್ಯಯನದಿಂದ ಅವಿದ್ಯಾನಿರಾಕರಣ ಮೂಲಕ ವಿದ್ಯಾಪ್ರಾಪ್ತಿಯುಳ್ಳವನಾಗಬೇಕು ಎಂದು ಭಾಷ್ಯಾಭಿಪ್ರಾಯ.

ಫಲಿತ ಮಂತ್ರಾರ್ಥ

ಜೀವನಿರುವ ಶರೀರವು ಎಂದರೆ ಜೀವಸಹಿತವಾದ ಶರೀರವು ಭಸ್ಮವೇ ಅಂತವಾಗಿ ಉಳ್ಳುದು ಎಂದರೆ ಮರಣವುಳ್ಳುದು. ಆದರೂ ಆ ಶರೀರಕ್ಕೆ ಪ್ರೇರಕನಾದ ವಾಯುವು, ಯಾವ ವಾಯುವಿನಲ್ಲಿ ಪರಮಾತ್ಮನು ಅಂತಃಪ್ರೇರಕನಾಗಿರುವನೋ ಅಂತಹವನು; ಆದುದರಿಂದ ಎಂದರೆ ಪರಮಾತ್ಮನನ್ನೇ ಆಶ್ರಯಮಾಡಿಕೊಂಡಿರುವುದರಿಂದ ನಿತ್ಯನು. ಪರಮಾತ್ಮನ ಆಶ್ರಯವೇ ನಿತ್ಯತ್ವವನ್ನು ಕೊಡುವುದಾದರೆ ಪರಮಾತ್ಮನು ಸ್ವತಂತ್ರ ನಿತ್ಯ ಎಂದು ಸ್ವತಏವ ಸಿದ್ಧವಾಯಿತು ಎಂದು. ॥ ೧೮ ॥

ಖಂಡಾರ್ಥವು ೧೯ ನೆಯ ಮಂತ್ರವನ್ನು ಈ ರೀತಿ ಪರಿಚಯ ಮಾಡಿಸುವುದು.

ಖಂಡಾರ್ಥ—ಅಥ ಪ್ರಣವಪ್ರತೀಕಂ ಪ್ರಾರ್ಥಯತೆ । ಓಂ ಇತಿ । ಅಥ – ಪರಮಾತ್ಮ ಪ್ರಾರ್ಥನಾ ಅನಂತರ. ಪ್ರಣವ ಪ್ರತೀಕಂ – ಪ್ರಣವ- ಎಂಬ. ಪರಮಾತ್ಮನ ಆವಾಸಸ್ಥಾನವನ್ನು. ಪ್ರಾರ್ಥಯತೆ – ಪ್ರಾರ್ಥಿಸುತ್ತಾನೆ. ಓಂ ಇತಿ –ಓಂ ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಮಂತ್ರ

ಓಂ ಕ್ರತೋ ಸ್ಮರ ಕೃತಗ್ಂ ಸ್ಮರ ॥ ಓಂ ಕ್ರತೋ ಸ್ಮರ ಕೃತಗ್ಂ ಸ್ಮರ॥

ಖಂಡಾರ್ಥ

ಓತತ್ವಾದಿ ಗುಣಯುಕ್ತತಯಾ ಓಂ ಇತ್ಯುಚ್ಯಮಾನ । ಕ್ರತೊ ಜ್ಞಾನರೂಪ ಹರೆ । ಮಾಂ ಇತಿ ಶೇಷಃ । ಸ್ಮರ ಅನುಗೃಹಾಣ । ಕೃತಂ ಮದೀಯಂ ಧ್ಯಾನಾದಿಕಂ ಕರ್ಮ ಸ್ಮರ । ಧ್ಯಾನಾದಿನಾ ಮಯಾ ಕೃತೇನ ಮಯ್ಯನುಗ್ರಹೋನ್ಮುಖೋ ಭವ ಇತ್ಯರ್ಥಃ । ನಿತ್ಯಜ್ಞಪ್ತಿಸ್ವರೂಪಸ್ಯ ಸಂಸ್ಕಾರ ಜನ್ಯಸ್ಮರಣಾಯೋಗಾತ್। ಅಭ್ಯಾಸಃ ತಾತ್ಪರ್ಯಾರ್ಥಃ॥ ೧೯ ॥

ಮಂತ್ರ ಪದವಿಭಾಗ—ಓಂ, ಕ್ರತೊ , ಸ್ಮರ, ಕೃತಗ್ಂ, ಸ್ಮರ । ಓಂ, ಕ್ರತೊ, ಸ್ಮರ, ಕೃತಗ್ಂ, ಸ್ಮರ ।

ಮಂತ್ರಸ್ಥಪದಗಳ ಅನ್ವಯವೂ ಇದರಂತೆ

ಖಂಡಾರ್ಥದಂತೆ ಈ ಪದಗಳ ಅರ್ಥ

ಓತತ್ವಾದಿ ಗುಣಯುಕ್ತತಯಾ – ಸರ್ವ ವ್ಯಾಪ್ತತ್ವ ಮೊದಲಾದ ಗುಣವುಳ್ಳೋಣದರಿಂದ. ಓಂ ಇತಿ–ಓಂ ಎಂದು. ಉಚ್ಯಮಾನ –ಹೇಳಲ್ಪಡುವ. ಕ್ರತೊ-ಜ್ಞಾನರೂಪ–ಜ್ಞಾನರೂಪನಾದ ಹರೆ-ಹರಿಯೆ. ಮಾಂ ಇತಿ ಶೇಷಃ– ಮಾಂ–ನನ್ನನ್ನು ಎಂದು ಅನ್ವಯಿಸಿಕೊಳ್ಳಬೇಕು. ಸ್ಮರ ಅನುಗೃಹಾಣ-ಅನುಗ್ರಹಿಸು. ಕೃತಂ – ಮಾಡಲ್ಪಟ್ಟ. ಮದೀಯಂ – ನನ್ನ ಸಂಬಂಧವಾದ. ಧ್ಯಾನಾದಿಕಂ – ಧ್ಯಾನ ಮೊದಲಾದ. ಕರ್ಮ – ವ್ಯಾಪಾರವನ್ನು ಎಂದರೆ

ಜ್ಞಾನರೂಪ ವ್ಯಾಪಾರವನ್ನು. ಸ್ಮರ – ಅನುಗ್ರಹಿಸು. ಮಯಾ – ನನ್ನಿಂದ ಕೃತೇನ – ಮಾಡಲ್ಪಟ್ಟ. ಧ್ಯಾನಾದಿನಾ – ಧ್ಯಾನ ಮೊದಲಾದ ರೂಪವಾದ ತೇನ – ಆ ಸಾಧನದಿಂದ. ಅನುಗ್ರಹೋನ್ಮುಖಃ – ಅನುಗ್ರಹ ಮಾಡಲು ಸಿದ್ಧನಾದವನು. ಭವ – ಆಗು. ಇತಿ – ಹೀಗೆ. ಅರ್ಥಃ – ಅರ್ಥವು. ನಿತ್ಯಜ್ಞಪ್ತಿಸ್ವರೂಪಸ್ಯ – ನಿರಂತರ ಜ್ಞಾನಸ್ವರೂಪನಾದವನಿಗೆ. ಸಂಸ್ಕಾರ ಜನ್ಯಸ್ಮರಣಾಯೋಗಾತ್ – ಸಂಸ್ಕಾರದಿಂದ ಹುಟ್ಟಿದ ಸ್ಮರಣವಿಲ್ಲವಾದುದರಿಂದ. (ಸ್ಮರ ಎಂಬ ಪದಕ್ಕೆ ಲೋಕಸಿದ್ಧವಾದ ಸ್ಮರಣೆಯನ್ನು ಅರ್ಥ ಮಾಡದೆ ಮಂತ್ರಕ್ಕೆ ಸಮ್ಮತವಾದ ಎಂದರೆ ಹೊಂದುವ ಅರ್ಥಮಾಡಿದೆ.) ಅಭ್ಯಾಸಃ – ಒಂದೇ ಉಪನಿಷದ್ವಾಕ್ಯವು ಎರಡು ಸಲ ಪ್ರವೃತ್ತವಾಗಿರುವುದು. ತಾತ್ಪರ್ಯಾರ್ಥಃ – ಆ ವಿಷಯದಲ್ಲಿ ಉಪನಿಷತ್ತಿಗೆ ತಾತ್ಪರ್ಯವಿರುವುದೆನ್ನಲು ಸೂಚಕ.

ಸೂಚನೆ

ಓಂ ಎಂದು ಪ್ರಣವ. ಇದು ವಾಯುವಿನಂತೆ ಭಗವತ್ಪ್ರತೀಕ. ಪರಮಾತ್ಮನು ಅನುಗ್ರಹಿಸುವುದಕ್ಕೆ ಸ್ಮರಿಸುವುದು ಎಂದು ಹೆಸರು.

ಭಾಷ್ಯ

(ಸ ಕ್ರತುಃ ಜ್ಞಾನರೂಪತ್ವಾತ್ । ... ಇತಿ ಬ್ರಹ್ಮಾಂಡೆ)

ಸಃ – ಮಂತ್ರೋಕ್ತನಾದ ಪರಮಾತ್ಮನು. ಕ್ರತುಃ – ಕ್ರತು ಎಂಬ ಶಬ್ದಕ್ಕೆ ವಾಚ್ಯನು. ಜ್ಞಾನರೂಪತ್ವಾತ್ – ಜ್ಞಾನರೂಪನಾದುದರಿಂದ. .... । ಇತಿ ಬ್ರಹ್ಮಾಂಡೆ – ಹೀಗೆ ಬ್ರಹ್ಮಾಂಡವು ಹೇಳುವುದು.
(ಈ ಭಾಗವನ್ನು ೧೭ನೆಯ ಮಂತ್ರದ ಭಾಷ್ಯದಿಂದ ಇಲ್ಲಿಗೆ ಜೋಡಿಸಿದೆ.)

ಉಪನಿಷತ್ತಿನ ಸ್ಮರ ಎಂಬ ಪದಕ್ಕೆ ಭಾಷ್ಯಕಾರರು ಅರ್ಥ ಹೇಳುತ್ತಾರೆ.
ಭಾಷ್ಯ—ಭಕ್ತಾನಾಂ ಸ್ಮರಣಂವಿಷ್ಣೋಃ ನಿತ್ಯಜ್ಞಪ್ತಿಸ್ವರೂಪತಃ ।
ಅನುಗ್ರಹೋನ್ಮುಖತ್ವಂ ತು ನೈವಾನ್ಯತ್ಕ್ವಚಿದಿಷ್ಯತೇ ।
ಇತಿ ಬ್ರಹ್ಮತರ್ಕೆ ॥ ೧೯ ॥

ಭಕ್ತಾನಾಂ – ಭಕ್ತರ ಎಂದರೆ ಶಾಸ್ತ್ರ ಮೂಲಕ ಉಪನಿಷದರ್ಥ ಮಾಡಿಕೊಂಡ ಜ್ಞಾನಿಗಳ. ಸ್ಮರಣಂ – ಸ್ಮರಣೆಯು. ವಿಷ್ಣೋಃ – ವಿಷ್ಣುವಿಗೆ. ನಿತ್ಯಜ್ಞಪ್ತಿಸ್ವರೂಪತಃ – ನಿರಂತರ ಜ್ಞಾನಸ್ವರೂನಾದ ನಿಮಿತ್ತ

ದಿಂದ. ಅನುಗ್ರಹೋನ್ಮುಖತ್ವಂ – ಅನುಗ್ರಹಕ್ಕೆ ಸಿದ್ಧನಾಗಿರುವುದೇ. ತು – ಇದೇ ಸರಿಯಾದ ಅರ್ಥ. ಅನ್ಯತ್ – ಬೇರೆಯಾದ. ಕ್ವಚಿತ್ – ಯಾವ ಅರ್ಥವೂ. ನ ಏವ ಇಷ್ಯತೆ – ವಿವಕ್ಷಿತವಲ್ಲ ಎಂದರೆ ಉಪನಿಷತ್ತಿನ ಸಂದರ್ಭಕ್ಕೆ ಸಂಗತವಲ್ಲ.

ಸೂಚನೆ

ಅನುಗ್ರಹೋನ್ಮುಖನಾಗೆಂದು ಪರಮಾತ್ಮನನ್ನು ಪ್ರಾರ್ಥಿಸುವುದರಲ್ಲಿ ಅಧಿಕಾರಿಯ ಪರವಾಗಿ ನಾನು ಸಾಧನಮಾಡಿಕೊಂಡವನೆಂಬ ಅಹಂಕಾರದ ತ್ಯಾಗವಿರುವುದು. ಇದೇ ಅವನು ನಿತ್ಯ ಪರತಂತ್ರನೆಂಬುದರ ಭಾವ.

ನಿತ್ಯವಾದ ಜ್ಞಾನವೇ ವಿಷ್ಣು. ಅವನು ಸರ್ವಥಾ ಅಭಿನ್ನ. ಆದರೂ ಸವಿಶೇಷಾಭೇದ ಎಂಬ ಪ್ರಕ್ರಿಯೆಯಂತೆ ವಿಶೇಷದ ಮಹಿಮೆಯಿಂದ ವಿಷ್ಣುವನ್ನು ಧರ್ಮಿಯನ್ನಾಗಿಯೂ, ಜ್ಞಾನವನ್ನು ಧರ್ಮವನ್ನಾಗಿಯೂ ಗಣಿಸುವ ಪದ್ಧತಿ ಇದೆ. ವಿಶೇಷಸಹಿತತ್ವವೇ ಅಭೇದದ ಸ್ವರೂಪ. ಶಾಸ್ತ್ರಾಧ್ಯಯನದಿಂದ ಈ ಅಂಶಗಳು ಪರಿಚಯಕ್ಕೆ ಬರುವುವು.

ಉಪನಿಷತ್ತಿನ ಇಷ್ಟು ಅರ್ಥವನ್ನು ಪರಿಚಯಮಾಡಿಕೊಂಡ ಅಧಿಕಾರಿಯು ತನಗೆ ತಿಳಿಯಬೇಕಾದುದೇ ಇಲ್ಲ ಎಂಬ ನಿರ್ಣಯಕ್ಕೆ ಬರುವುದು ಮಂತ್ರಸಮ್ಮತವಲ್ಲ. ಸಪರಿಕರವಾಗಿ ಮಂತ್ರಾರ್ಥವಾಗಲು ನ್ಯಾಯವಾದ ಶಾಸ್ತ್ರಾಧ್ಯಯನ ಬೇಕು. ಶಾಸ್ತ್ರಾಧ್ಯಯನವಿಲ್ಲದೆ ಮೇಲೆ ನಿರೂಪಿತವಾದ ಯಾವ ವಿಷಯವೂ ಜ್ಞಾತವಾಗುವುದಿಲ್ಲ. ಒಂದೊಂದು ವಿಷಯದಲ್ಲಿಯೂ ನಾನಾ ದರ್ಶನಶಾಸ್ತ್ರಗಳು ಸಿದ್ಧಾಂತಿಸಿದ ಪ್ರತಿಪಕ್ಷಗಳು ಅನೇಕ ಇರುವುವು. ಇವುಗಳ ನಿವಾರಣೆಯಾದ ಹೊರತು ಯಾವ ಒಂದು ಉಪನಿಷತ್ತಿನಿಂದ ಪ್ರತಿಪಾದ್ಯವಾದ ವಿಷಯವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಲ್ಲ. ಪ್ರತಿಪಕ್ಷಗಳು ಪರಿಹಾರ ಹೊಂದಲು ಬ್ರಹ್ಮಮೀಮಾಂಸಾ ಶಾಸ್ತ್ರದ ಅಧ್ಯಯನ ಒಂದೇ ಸಾಧನ. ಈ ಗ್ರಂಥದಲ್ಲಿ ಪುನಃ ಪುನಃ ಶಾಸ್ತ್ರಾಧ್ಯಯನದ ಆವಶ್ಯಕತೆಯನ್ನು ಸೂಚಿಸಲು ಇದೇ ನಿಮಿತ್ತ. ಈ ಗ್ರಂಥವನ್ನು ಓದುವವರಿಗೆ ಶಾಸ್ತ್ರಾಧ್ಯಯನ ಮಾಡಬೇಕೆಂಬಾಶೆ ಹುಟ್ಟಿದರೆ ಆಗ ಮಾತ್ರ ಈ ಗ್ರಂಥದ ಉದ್ದೇಶವು ಸಾರ್ಥಕವಾಗುವುದು. ಹೀಗೆ ಇದುವರೆಗೆ ನಿರೂಪಿತವಾದಂತೆ ಮಂತ್ರಾರ್ಥವನ್ನು ತಿಳಿಯುವುದು ಅವಶ್ಯಂ ಶಾಸ್ತ್ರಾಧ್ಯಯನದಲ್ಲಿ

ಪರ್ಯವಸಾನ ಹೊಂದಬೇಕೆಂದು ವಿಭಿನ್ನ ಪ್ರಕ್ರಿಯೆಯನ್ನೊಳಗೊಂಡ ಈ ಉಪನಿಷನ್ಮಂತ್ರದ ಅಭಿಪ್ರಾಯ.

'ಕೃತಗ್‌ಂ ಸ್ಮರ' ಎಂಬುದು 'ಕೃತಂ ಸ್ಮರ' ಎಂಬುದರ ರೂಪ. 'ಗ್‌ಂ' ಎಂದು ಹೇಳುವುದು ಉಕ್ತಾರ್ಥವನ್ನು ಅಧಿಕಪ್ರಮಾಣದಲ್ಲಿ ಗ್ರಹಿಸಬೇಕೆಂಬುದರ ನಿಯಮ. ಹೀಗೆಯೇ 'ಇದಗ್‌ಂ ಸರ್ವಂ' ಮೊದಲಾದ ಮಂತ್ರಭಾಗವನ್ನು ಅರ್ಥಮಾಡಿಕೊಳ್ಳುವಾಗ 'ಗ್‌ಂ' ಎಂಬುದು ಪ್ರಕೃತ ಶಬ್ದಕ್ಕಾಗುವ ಅರ್ಥವನ್ನೇ ಅತ್ಯಧಿಕ ಪ್ರಮಾಣದಲ್ಲಿ ನಿರೂಪಿಸುವುದು. ಇದು ವೈದಿಕ ಪ್ರಕ್ರಿಯೆ. ಇದನ್ನು ಮಂತ್ರಾರ್ಥಮಾಡಿಕೊಳ್ಳುವಾಗ ಜ್ಞಾಪಕದಲ್ಲಿಡಬೇಕು. ಒಟ್ಟಿನಲ್ಲಿ ಈ ಪ್ರಕ್ರಿಯೆಯು ಪ್ರಕೃತ ಪದದ ಪೂರ್ಣಾರ್ಥವನ್ನು ಹೇಳಲು ಪ್ರವೃತ್ತವಾಗಿರುವುದು.

ಫಲಿತ ಮಂತ್ರಾರ್ಥ

ಸರ್ವವ್ಯಾಪ್ತತ್ವ ಮೊದಲಾದ ಗುಣಸ್ವರೂಪನಾದ ಪ್ರಯುಕ್ತ 'ಓಂ' ಎಂಬ ಪ್ರಣವ ಪ್ರತಿಪಾದ್ಯನಾದ, ಜ್ಞಾನರೂಪನಾದ ಹರಿಯೇ! ನನ್ನನ್ನು ಅನುಗ್ರಹಿಸು. ನನ್ನಿಂದ ಕೃತವಾದ ಧ್ಯಾನ ಮೊದಲಾದುದನ್ನು ಸಾಧನವನ್ನಾಗಿ ಅನುಗ್ರಹಿಸಲು ಸಿದ್ಧನಾಗು.

ಪುನಃ ಇದೇ ಅರ್ಥವನ್ನೇ ಅಭ್ಯಾಸಮಾಡಿರುವುದು ಉಪನಿಷತ್ತಿಗೆ ಇದುವರೆಗೆ ನಿರೂಪಿತವಾದ ಅರ್ಥವನ್ನು ಸಿದ್ಧಾಂತ ಮಾಡುವುದರಲ್ಲಿರುವ ಆದರವನ್ನು ಪ್ರಕಟಪಡಿಸುವುದು. ॥ ೧೯ ॥

೨೦

ಖಂಡಾರ್ಥವು ೨೦ ನೆಯ ಮಂತ್ರವನ್ನು ಹೀಗೆ ಪರಿಚಯಕ್ಕೆ ತರುವುದು.

ಖಂಡಾರ್ಥ—ಕೃತಶ್ರವಣಾದಿನಾ ಪುರುಷೇಣ ಸಾಕ್ಷಾತ್ಕಾರಾರ್ಥಂ ಹರೇಃ ಪ್ರಾರ್ಥನಂ ಕಾರ್ಯಂ ಇತ್ಯತಃ ತತ್ಪ್ರಕಾರಂ ಹಿರಣ್ಮಯೇನೇತ್ಯಾದಿನಾ ಉಕ್ತ್ವಾ ಅಧುನಾ ಪ್ರಾಪ್ತಸಾಕ್ಷಾತ್ಕಾರೇಣಾಪಿ ಪುಂಸಾ ಮೋಕ್ಷಾರ್ಥಂ ಭಗವದುಪಾಸನಂ ಕಾರ್ಯಮಿತಿ ಭಾವೇನ ಅಗ್ನಿಪ್ರತೀಕಸ್ಥ ಭಗವತ್ಪ್ರಾರ್ಥನಾಪ್ರಕಾರಮಾಹ । ಅಗ್ನ ಇತಿ ।

ಕೃತಶ್ರವಣಾದಿನಾ – ಮಾಡಲ್ಪಟ್ಟ ಶ್ರವಣ ಮೊದಲಾದುದುಳ್ಳ ಪುರುಷೇಣ – ಅಧಿಕಾರಿಯಿಂದ. ಸಾಕ್ಷಾತ್ಕಾರಾರ್ಥಂ – ಭಗವತ್ಸಾಕ್ಷಾತ್ಕಾರಕ್ಕೋಸ್ಕರ. ಹರೇಃ – ಪರಮಾತ್ಮನ. ಪ್ರಾರ್ಥನಂ – ಪ್ರಾರ್ಥನೆಯು. ಕಾರ್ಯಂ – ಮಾಡಲ್ಪಡಬೇಕು. ಇತಿ – ಹೀಗೆ ಇರುವ. ಅತಃ – ಕಾರಣದ ದೆಶೆಯಿಂದ. ತತ್ಪ್ರಕಾರಂ – ಅದರ ಕ್ರಮವನ್ನು. ಹಿರಣ್ಮಯೇನ – ಹಿರಣ್ಮಯೇನ ಎಂಬ ಪದದಿಂದ. ಇತ್ಯಾದಿನಾ – ಈ ರೂಪದಲ್ಲಿ. ಉಕ್ತ್ವಾ – ಸಮರ್ಥಿಸಿ. ಅಧುನಾ – ಈಗ. ಪ್ರಾಪ್ತ ಸಾಕ್ಷಾತ್ಕಾರೇಣ–ಪ್ರಾಪ್ತವಾದ ಭಗವತ್ಸಾಕ್ಷಾತ್ಕಾರವುಳ್ಳವನಾದ. ಪುಂಸಾ ಅಪಿ-ಅಧಿಕಾರಿಯಿಂದಲೂ ಕೂಡ. ಮೋಕ್ಷಾರ್ಥಂ – ಮೋಕ್ಷಕ್ಕೋಸ್ಕರ. ಭಗವದುಪಾಸನಂ – ಪರಮಾತ್ಮನ ಉಪಾಸನವು. ಕಾರ್ಯಂ – ಮಾಡಲ್ಪಡಬೇಕು. ಇತಿ – ಎಂಬ. ಭಾವೇನ– ಅಭಿಪ್ರಾಯದಿಂದ. ಅಗ್ನಿಪ್ರತೀಕಸ್ಥ ಭಗವತ್ಪ್ರಾರ್ಥನಾಪ್ರಕಾರಂ – ಅಗ್ನಿ ಎಂಬ ಪ್ರತೀಕದಲ್ಲಿರುವ ಪರಮಾತ್ಮನ ಪ್ರಾರ್ಥನೆಯ ಪ್ರಕಾರವನ್ನು. ಆಹ– ಹೇಳುತ್ತಾನೆ. ಅಗ್ನ ಇತಿ – ಅಗ್ನೆ ಎಂಬ ಪದದಿಂದ ಆರಂಭಿಸುವ ಮಂತ್ರದಿಂದ.

ಸೂಚನೆ

ಅಧಿಕಾರಿಯ ಸಾಧನಕ್ರಮದಲ್ಲಿ ಶ್ರವಣ ಮೊದಲಾದುದು ಪರೋಕ್ಷ ಜ್ಞಾನರೂಪವಾದುದು. ಇದನ್ನು ಮಾಡಿದವನು ಪರಮಾತ್ಮನನ್ನು ಪ್ರಾರ್ಥಿಸಿ ಪ್ರಸನ್ನನಾದ ಪರಮಾತ್ಮನಿಂದ ಅವನ ಅಪರೋಕ್ಷವನ್ನು ಪಡೆಯುವನು. ಆದರೂ ಅಷ್ಟು ಮಾತ್ರದಿಂದ ಅವನು ಮುಕ್ತಿಯನ್ನು ಹೊಂದುವುದಿಲ್ಲ. ಪುನಃ ಪರಮಾತ್ಮನನ್ನು ಪ್ರಾರ್ಥಿಸಿ ಅವನ ಅನುಗ್ರಹದಿಂದ ಅವನು (ಅಧಿಕಾರಿಯು) ಮೋಕ್ಷವನ್ನು ಪಡೆಯುವನು.

ಒಟ್ಟಿನ ಮೇಲೆ ಇಡೀ ಸಾಧನವು ಮತ್ತು ಫಲವು ಪರಮಾತ್ಮಪ್ರಸಾದ ರೂಪವಾದುದು. ಅದರ ಯಾವ ಅವಸ್ಥೆಗೂ ತನ್ನದೇ ಆದ ಸಾಧನತ್ವವಿಲ್ಲ ಸಾಧ್ಯತ್ವವಿಲ್ಲ ಎಂದು ಮುಂದಿನ ಮಂತ್ರದಿಂದ ಸಿದ್ಧವಾಗುವ ಅಂಶ.

ಮಂತ್ರ

ಅಗ್ನೆ ನಯ ಸುಪಥಾ ರಾಯೆ ಅಸ್ಮಾನ್ ವಿಶ್ವಾನಿ ವಯುನಾನಿ ವಿದ್ವಾನ್ ।
ಯುಯೋಧ್ಯಸ್ಮಜ್ಜುಹುರಾಣಮೇನೊ ಭೂಯಿಷ್ಠಾಂ ತೆ ನಮ ಉಕ್ತಿಂ ವಿಧೇಮ ॥ ೨೦ ॥

ಖಂಡಾರ್ಥ

ಅಂಗಂ ದೇಹಂ ಗುಣಭೂತಂ ಜಗದ್ವಾ ನಯತಿ ಪ್ರೇರಯತೀತಿ ವ್ಯುತ್ಪತ್ತ್ಯಾ ಅಗ್ನಿಪದ ಮುಖ್ಯಾರ್ಥಸ್ಸ್ವ ಅಗ್ನೌ ವಿದ್ಯಮಾನ ಹರೆ । ಅಸ್ಮಾನ್ ಸುಪಥಾ ಪುನರಾವೃತ್ತಿಹೀನಾರ್ಚಿರಾದಿ ಮಾರ್ಗೇಣ ರಾಯೆ ಮೋಕ್ಷಾಖ್ಯ ವಿತ್ತಾಯ ನಯ । ಕುತಃ । ಹೇ ದೇವ ಅಸ್ಮದನುಷ್ಠಿತಾನಿ ವಿಶ್ವಾನಿ ಸಂಪೂರ್ಣಾನಿ ಮೋಕ್ಷಾಯ ಪರ್ಯಾಪ್ತಾನೀತಿ ಯಾವತ್ । ವಯುನಾನಿ ಜ್ಞಾನಾನಿ ಭವಾನ್ ವಿದ್ವಾನ್ ವೇದ । ಪ್ರಾರಬ್ಧ ಕರ್ಮಯುಕ್ತಸ್ಯ ಕಥಂ ಮೋಕ್ಷ ಇತ್ಯತ ಉಕ್ತಂ । ಯುಯೋಧೀತಿ । ಅಸ್ಮಾನಿತ್ಯತ್ರಾಪ್ಯನುಷಜ್ಯತೆ । ಅಸ್ಮಾನ್ ಜುಹುರಾಣಂ ಅಲ್ಪಾನ್‌ಕುರ್ವತ್ ಸಂಸಾರೆ ಪರಿವರ್ತಯದಿತಿ ಯಾವತ್ । ಏನಃ ಪಾಪಂ ಅನಿಷ್ಟಂ ಕರ್ಮೇತಿ ಯಾವತ್ । ಅಸ್ಮತ್ ಅಸ್ಮತ್ತಃ । ಯುಯೋಧಿ ವಿಯೋಜಯ । ಯುಯು ವಿಯೋಗ ಇತಿ ಧಾತೋರ್ಲುಗ್ವಿಕರಣಂ । ವಯಂ ತು ತೇ ತುಭ್ಯಂ ಭೂಯಿಷ್ಠಾಂ ಭಕ್ತಿಜ್ಞಾನೋಪೇತಾಂ ನಮ ಉಕ್ತಿಂ ನಮ ಇತ್ಯುಕ್ತಿಂ ವಿಧೇಮ. ಕುರ್ಮಃ । ನ ತು ತತ್ಪ್ರತಿ ಕರ್ತುಂ ಶಕ್ನುಮ ಇತಿ ॥ ೨೦ ॥

ಮಂತ್ರ ಪದವಿಭಾಗ — ಅಗ್ನೆ, ನಯ, ಸುಪಥಾ, ರಾಯೆ, ಅಸ್ಮಾನ್, ವಿಶ್ವಾನಿ, ವಯುನಾನಿ, ವಿದ್ವಾನ್, ಯುಯೋಧಿ, ಅಸ್ಮತ್, ಜುಹುರಾಣಂ, ಏನಃ, ಭೂಯಿಷ್ಠಾಂ, ತೆ, ನಮಉಕ್ತಿಂ, ವಿಧೇಮ ।

ಮಂತ್ರಸ್ಥಪದಗಳ ಅನ್ವಯ

ಅಗ್ನೆ, ಅಸ್ಮಾನ್, ಸುಪಥಾ, ರಾಯೆ, ನಯ. ದೇವ, ವಿಶ್ವಾನಿ, ವಯುನಾನಿ, ವಿದ್ವಾನ್. (ಅಸ್ಮಾನ್) ಜುಹುರಾಣಂ, ಏನಃ, ಅಸ್ಮತ್, ಯುಯೋಧಿ. ತೆ, ಭೂಯಿಷ್ಠಾಂ, ನಮ ಉಕ್ತಿಂ ವಿಧೇಮ ॥

ಖಂಡಾರ್ಥದಂತೆ ಈ ಪದಗಳ ಅರ್ಥ

ಅಂಗಂ – ದೇಹಂ – ಗುಣಭೂತಂ ಜಗದ್ ವಾ – ದೇಹವನ್ನು ಅಥವಾ ಪರತಂತ್ರವಾದ ಜಗತ್ತನ್ನು. ನಯತಿ – ಪ್ರೇರಯತಿ – ಪ್ರೇರಿಸುತ್ತಾನೆ. ಇತಿ – ಹೀಗೆಂಬ. ವ್ಯುತ್ಪತ್ತ್ಯಾ – ಪದನಿರ್ವಚನದಿಂದ. ಅಗ್ನಿ ಪದಮುಖ್ಯಾರ್ಥಃ ಸನ್ – ಅಗ್ನಿ ಎಂಬ ಪದದ ಮುಖ್ಯಾರ್ಥನಾಗಿ. ಅಗ್ನೌ– ಅಗ್ನಿಯಲ್ಲಿ. ವಿದ್ಯಮಾನ – ಇರುವ. ಹರೆ – ಪರಮಾತ್ಮನೆ. ಅಸ್ಮಾನ್ – ನಮ್ಮನ್ನು. ಸುಪಥಾ – ಪುನರಾವೃತ್ತಿಹೀನಾರ್ಚಿರಾದಿ ಮಾರ್ಗೇಣ – ಪುನರಾವೃತ್ತಿರಹಿತವಾದ ಅರ್ಚಿರಾದಿ ಮಾರ್ಗದಿಂದ. ರಾಯೆ – ಮೋಕ್ಷಾಖ್ಯ ವಿತ್ತಾಯ – ಮೋಕ್ಷವೆಂಬ ಧನಕ್ಕೋಸ್ಕರ ಎಂದರೆ ಅಂತಹ ಧನವನ್ನು ಕುರಿತು. ನಯ – ಕರೆದುಕೊಂಡು ಹೋಗು. ಕುತಃ – ಏತಕ್ಕೋಸ್ಕರ? ಹೇ ದೇವ – ಎಲೈ ದೇವನೆ. ಅಸದನುಷ್ಠಿತಾನಿ – ನಮ್ಮಿಂದ ಅನುಷ್ಠಿತವಾದ. ವಿಶ್ವಾನಿ – ಸಂಪೂರ್ಣಾನಿ – ಸಂಪೂರ್ಣವಾದ. ಮೋಕ್ಷಾಯ – ಮೋಕ್ಷಕ್ಕೆ. ಪರ್ಯಾಪ್ತಾನಿ – ಸಾಕಷ್ಟು. ಇತಿ ಯಾವತ್ – ಹೀಗೆಂದು ಅಭಿಪ್ರಾಯ. ವಯುನಾನಿ – ಜ್ಞಾನಾನಿ – ಜ್ಞಾನಗಳನ್ನು. ಭವಾನ್ – ನೀನು. ವಿದ್ವಾನ್ – ವೇದ – ತಿಳಿದಿರುವಿ.

ಪ್ರಾರಬ್ಧ ಕರ್ಮಯುಕ್ತಸ್ಯ – ಪ್ರಾರಬ್ಧವೆಂಬ ಕರ್ಮದಿಂದ ಸಹಿತನಾದವನಿಗೆ. ಕಥಂ – ಹೇಗೆ. ಮೋಕ್ಷಃ – ಮೋಕ್ಷವು. ಇತ್ಯತಃ – ಹೀಗೆ ಕೇಳುವ ಪಕ್ಷದಲ್ಲಿ. ಉಕ್ತಂ – ಉತ್ತರವು ದತ್ತವಾಯಿತು. ಯುಯೋಧಿ ಇತಿ –ಯುಯೋಧಿ ಎಂಬ ಪದದಿಂದಾರಂಭಿಸುವ ಮಂತ್ರ ಭಾಗದಿಂದ. ಅಸ್ಮಾನ್ –ಇತಿ – ಅಸ್ಮಾನ್ ಎಂದು. ಅತ್ರಾಪಿ – ಈ ಸಂದರ್ಭದಲ್ಲಿಯೂ. ಅನುಷಜ್ಯತೆ – ಸಂಬಂಧ ಮಾಡಲ್ಪಡುತ್ತದೆ.

ಅಸ್ಮಾನ್ – ನಮ್ಮನ್ನು. ಜುಹುರಾಣಂ – ಅಲ್ಪರನ್ನು ಮಾಡುವ. ಸಂಸಾರೆ ಪರಿವರ್ತಯತ್ ಇತಿ ಯಾವತ್– ಸಂಸಾರದಲ್ಲಿ ತಿರುಗಿಸತಕ್ಕುದು ಎಂದು ಭಾವ. ಏನಃ – ಪಾಪಂ – ಅನಿಷ್ಟಂ ಕರ್ಮ – ಅನಿಷ್ಟವಾದ ಕರ್ಮವು. ಇತಿ ಯಾವತ್ – ಹೀಗೆಂದು ಅಭಿಪ್ರಾಯ. ಅಸ್ಮತ್ತಃ – ನಮ್ಮ ದೆಶೆಯಿಂದ. ಯುಯೋಧಿ–ಬಿಡುಗಡೆ ಹೊಂದಿಸು. ಯುಯು ವಿಯೋಗ ಇತಿ ಧಾತೋಃ – ಯುಯು ಎಂಬ ಧಾತು ವಿಯೋಗ ಎಂಬ ಅರ್ಥದಲ್ಲಿ

ಎಂದು ಧಾತು ಪಾಠವಿರುವುದರಿಂದ. ಲುಗ್ವಿಕರಣಂ – ಲುಕ್ಕಿಗೆ ವಿಕರಣವು.

ವಯಂ ತು – ನಾವಾದರೋ. ತೇ – ತುಭ್ಯಂ–ನಿನಗೆ. ಭೂಯಿಷ್ಠಾಂ – ಭಕ್ತಿ ಜ್ಞಾನೋಪೇತಾಂ. ನಮ ಉಕ್ತಿಂ – ನಮ ಇತಿ ಉಕ್ತಿಂ – ನಮ ಎಂಬ ಉಕ್ತಿಯನ್ನು. ವಿಧೇಮ – ಕುರ್ಮಃ – ಮಾಡುತ್ತೇವೆ. ತತ್ ಪ್ರತಿ ಕರ್ತುಂ – ಅದಕ್ಕೆ ತಕ್ಕ ಉಪಕಾರ ಮಾಡಲು. ನ ತು ಶಕ್ನುಮಃ –ಸರ್ವಥಾ ಸಮರ್ಥರಲ್ಲ. ಇತಿ – ಹೀಗೆಂದು ಅರ್ಥ.

ಸೂಚನೆ

ಭಕ್ತಿಜ್ಞಾನೋಪೇತಾಂ ಎಂಬಲ್ಲಿ ಭಕ್ತಿರೂಪವಾದ ಜ್ಞಾನದಿಂದ ಸಹಿತವಾದ ಎಂದರ್ಥಮಾಡಿಕೊಳ್ಳಬೇಕು. ಭಕ್ತಿ, ಜ್ಞಾನ ಎಂಬಿವು ಭಿನ್ನವಲ್ಲ ಎಂದು ಹಿಂದೆಯೇ ನಿರೂಪಿತವಾಗಿದೆ.

ನಮಗೆ ಮೋಕ್ಷ ಸಾಧನವು ಸಂಪೂರ್ತಿಯಾಗಿದೆ ಎಂದು ತಿಳಿಯಲು ಪರಮಾತ್ಮನು ಸಮರ್ಥನೇ ಹೊರತು ನಾವಲ್ಲ. ಇದು ತಿಳಿಯುವುದು ಸಾಧನ ಮಾಡಿದ್ದೇನೆಂಬ ಅಹಂಭಾವವನ್ನು ಅಧಿಕಾರಿಯ ಪರವಾಗಿ ಪರಿಹರಿಸುವುದು.

ಸರ್ವಪ್ರವರ್ತಕನಾಗಿ ಅಗ್ನಿಶಬ್ದವಾಚ್ಯನಾದ ಪರಮಾತ್ಮನು ನಮಗೆ ಪುನರಾವೃತ್ತಿರಹಿತವಾದ ಮೋಕ್ಷವನ್ನು ಕೊಡಬೇಕು. ಅಧಿಕಾರಿಗೆ ಮೋಕ್ಷವೇ ಧನ ಎಂದು ಹೇಳುವ ಮಂತ್ರಕ್ಕೆ ಪರಮಾತ್ಮನೇ ಮೋಕ್ಷಸಾಧನ ಎಂದು ಅಭಿಪ್ರಾಯ. ನಮ್ಮ ಸರ್ವಶ್ರೇಯಸ್ಸಿಗೆ ನಾಶಕವಾದುದೇ ಪಾಪ. ಈ ಪಾಪಪರಿಹಾರವು ಪರಮಾತ್ಮನಿಂದ ಸಾಧ್ಯವೇ ಹೊರತು ಅನ್ಯಥಾ ಇಲ್ಲ; ಅವನೇ ನಮ್ಮನ್ನು ಶುದ್ಧರನ್ನಾಗಿ ಮಾಡಬೇಕು ಎಂದು ಭಾವ.

ಭಾಷ್ಯ

(ಅಗ್ನಿರಂಗಪ್ರಣೇತೃತಃ ಇತಿ ಬ್ರಹ್ಮಾಂಡೇ ।)
ವಯುನಂ ಜ್ಞಾನಂ । ತ್ವದ್ದತ್ತಯಾ ವಯುನಯೇದಮಚಷ್ಟ
ವಿಶ್ವಮಿತಿ ವಚನಾತ್ । ಜುಹುರಾಣಂ ಅಸ್ಮಾ್ ಅಲ್ಪೀಕುರ್ವತ್ ।
ಯುಯೋಧಿ ವಿಯೋಜಯ । ಯದಸ್ಮಾ್ ಕುರುತೆ ಅಲ್ಪಾ್ ತದೇನೊ
ಅಸ್ಮದ್ವಿಯೋಜಯ । ನಯನೊ ಮೋಕ್ಷವಿತ್ತಾಯ ಇತ್ಯಸ್ತಾ್ದ್ಯಜ್ಞಂ

ಮನುಃ ಸ್ವರಾಡಿತಿ ಸ್ಕಾಂದೇ । ಯುಯು ವಿಯೋಗ ಇತಿ ಧಾತುಃ ।
ಭಕ್ತಿಜ್ಞಾನಾಭ್ಯಾಂ ಭೂಯಿಷ್ಠಾಂ ನಮ ಉಕ್ತಿಂ ವಿಧೇಮ ॥ ೨೦ ॥

(ಅಗ್ನಿಃ –ಅಗ್ನಿ ಶಬ್ದವಾಚ್ಯನು (ಪರಮಾತ್ಮನು)ಅಂಗಪ್ರಣೇತೃತಃ–ಅಂಗ -ದೇಹವನ್ನು ಅಥವಾ ಪರತಂತ್ರವಾದ ಜಗತ್ತನ್ನು. ಪ್ರಣೇತೃತಃ - ಪ್ರೇರಿಸುವುದರಿಂದ. ಇತಿ ಬ್ರಹ್ಮಾಂಡೇ – ಹೀಗೆಂದು ಬ್ರಹ್ಮಾಂಡದಲ್ಲಿ ಹೇಳಿರುವುದು.)

(ಈ ವಾಕ್ಯವು ೧೭ ನೆಯ ಮಂತ್ರದ ಭಾಷ್ಯದಲ್ಲಿರುವುದು. ಇದು ಈ ಮಂತ್ರಕ್ಕೆ ಸಂಬಂಧಿಸಿರುವುದರಿಂದ ಇಲ್ಲಿ ಹೊಂದಿಸಿದೆ. ಬ್ರಹ್ಮಾಂಡವನ್ನು ಅನುಸರಿಸಿ ಈ ಭಾಷ್ಯವಿರುವುದು.)

ವಯುನಂ – ಜ್ಞಾನಂ – ಜ್ಞಾನವು. ತ್ವದ್ದತ್ತಯಾ – ನಿನ್ನಿಂದ ಕೊಡಲ್ಪಟ್ಟ. ವಯುನಯಾ – ಜ್ಞಾನದಿಂದ. ಇದಂ – ಈ. ವಿಶ್ವಂ – ಪ್ರಪಂಚವನ್ನು. ಅಚಷ್ಟ – ಮಾಡಿದನು. ಇತಿ ವಚನಾತ್ – ಹೀಗೆ ವಚನವಿರುವುದರಿಂದ. ಜುಹುರಾಣಂ – ಅಸ್ಮಾ್ ಅಲ್ಪೀಕುರ್ವತ್ – ನಮ್ಮನ್ನು ಅಲ್ಪರನ್ನು ಮಾಡುವ (ಪಾಪವನ್ನು). ಯುಯೋಧಿ – ವಿಯೋಜಯ– ವಿಯೋಗ ಹೊಂದಿಸು. ಯತ್–ಯಾವ (ಪಾಪವು). ಅಸ್ಮಾ್ –ನಮ್ಮನ್ನು. ಅಲ್ಪಾ್– ಹೀನರನ್ನಾಗಿ. ಕುರುತೆ – ಮಾಡುತ್ತದೆಯೋ. ತತ್ – ಆ. ಏನಃ – ಪಾಪವನ್ನು. ಅಸ್ಮದ್ವಿಯೋಜಯ – ನಮ್ಮ ದೆಶೆಯಿಂದ ಬಿಡಿಸು. ಮೋಕ್ಷವಿತ್ತಾಯ – ಮೋಕ್ಷವೆಂಬ ಧನವನ್ನು. ನೊ – ನಮಗೆ. ನಯ – ಹೊಂದಿಸು. ಇತಿ – ಹೀಗೆಂದು ತಿಳಿದು. ಸ್ವರಾಟ್ – ಚಕ್ರವರ್ತಿಯಾದ. ಮನುಃ – ಮನುವು. ಯಜ್ಞಂ – ಯಜ್ಞನಾಮಕ ಪರಮಾತ್ಮನನ್ನು. ಅಸ್ತೌತ್ – ಸ್ತೋತ್ರಮಾಡಿದನು. ಇತಿ ಸ್ಕಾಂದೇ – ಹೀಗೆ ಸ್ಕಾಂದದಲ್ಲಿರುವುದು. ಯುಯು ವಿಯೋಗೇ – ಯುಯು ಎಂಬುದು ವಿಯೋಗ ಎಂಬ ಅರ್ಥದಲ್ಲಿ. ಇತಿ – ಎಂದು. ಧಾತುಃ – ಧಾತುಪಾಠವು. ಭಕ್ತಿ ಜ್ಞಾನಾಭ್ಯಾಂ – ಭಕ್ತಿ ಮತ್ತು ಜ್ಞಾನ ಎಂಬ ಎರಡು ಶಬ್ದಗಳಿಂದ ವಾಚ್ಯವಾದ ಸಾಧನ ಎಂಬ ನಿಮಿತ್ತದಿಂದ. ಭೂಯಿಷ್ಠಾಂ –ಶ್ರೇಷ್ಠವಾದ. ನಮ ಉಕ್ತಿಂ–ನಮಃ ಎಂಬ ಉಕ್ತಿಯನ್ನು. ವಿಧೇಮ –ಹೇಳುತ್ತೇವೆ. ॥ ೨೦ ॥

ಸೂಚನೆ

ಅಂಗ ಎಂದರೆ ಶರೀರಪ್ರೇರಕನಾದ ಹಾಗೆಯೇ ಜಗತ್ ಪ್ರೇರಕನಾದ ನಿಮಿತ್ತದಿಂದ ಅಗ್ನಿಶಬ್ದ ವಾಚ್ಯನಾದ ಪರಮಾತ್ಮನು ಸಂಸಾರಕ್ಕೆ ಮತ್ತು ಮೋಕ್ಷಕ್ಕೆ ಕರ್ತೃ ಎಂದು ಭಾಷ್ಯದಿಂದ ವ್ಯಕ್ತವಾಗುವುದು.

ಮನುವು ಯಜ್ಞನಾಮಕ ಹರಿಯನ್ನು ಸ್ತೋತ್ರಮಾಡಿದನು ಎಂಬುದನ್ನು ಪರ್ಯಾಲೋಚಿಸಿ ವೇದದಲ್ಲಿ ಬರುವ ಯಜ್ಞ ಶಬ್ದವು ಪರಮಾತ್ಮವಾಚಕವೆಂದು ತಿಳಿದು ಸಮಸ್ತ ವೇದವನ್ನು ಅದಕ್ಕೆ ಆಪಾತತಃ ತೋರುವ ಕರ್ಮಪರತೆಯನ್ನು ಬಿಡಿಸಿ ಪರಮಾತ್ಮಪರವನ್ನಾಗಿ ಮಾಡುವುದನ್ನು ಶಾಸ್ತ್ರಮುಖದಿಂದ ಜ್ಞಾನಿಯು ಅರಿಯಬೇಕು. ಮನುವಿನ ಸ್ತೋತ್ರ ಉಪಚಾರವಲ್ಲ.

'ಭಕ್ತಿಜ್ಞಾನಾಭ್ಯಾಂ' ಎಂದು ದ್ವಿವಚನವಿರುವುದು. ಇದರಿಂದ ಆಪಾತತಃ ಭಕ್ತಿ ಮತ್ತು ಜ್ಞಾನ ಇವೆರಡೂ ಭಿನ್ನವಾದುದು ಎಂಬ ಅರ್ಥ ಮಾಡಬಾರದು. ಉಪನಿಷತ್ಸಿದ್ಧವಾದ ಸಾಧನವು ಜ್ಞಾನ ಎಂದು ಸಿದ್ಧಾಂತಿತವಾಗಿದೆ. ಇದನ್ನೇ ಭಾಷ್ಯಕಾರರು ಭಾಷ್ಯವನ್ನನುಸರಿಸಿ ಖಂಡಾರ್ಥಕಾರರು ಭಕ್ತಿ ಎಂದು ಕರೆದಿರುತ್ತಾರೆ. ಜ್ಞಾನಾತಿರಿಕ್ತವಾದ ಭಕ್ತಿಯಿಲ್ಲವೆಂದು ಅವರ ಅಭಿಪ್ರಾಯ. ಹೀಗೆ ಒಂದೇ ಸಾಧನವು ಭಕ್ತಿ, ಜ್ಞಾನ ಎಂಬ ಎರಡು ಶಬ್ದಗಳಿಂದ ಶಾಸ್ತ್ರದಲ್ಲಿ ವ್ಯವಹೃತವಾಗಿರುವುದು. ॥ ೨೦ ॥

ಭಾಷ್ಯದ ಉಪಸಂಹಾರ

ಪೂರ್ಣಶಕ್ತಿ ಚಿದಾನಂದ ಶ್ರೀತೇಜಃ ಸ್ಪಷ್ಟಮೂರ್ತಯೆ ।
ಮಮಾಭ್ಯಧಿಕಮಿತ್ರಾಯ ನಮೊ ನಾರಾಯಣಾಯ ತೆ ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಂ ಈಶಾವಾಸ್ಯೋಪನಿಷದ್ಭಾಷ್ಯಂ ಸಮಾಪ್ತಂ ॥

ಪೂರ್ಣಶಕ್ತಿ ಚಿದಾನಂದ ಶ್ರೀತೇಜಃ ಸ್ಪಷ್ಟಮೂರ್ತಯೆ – ಪೂರ್ಣವಾದ ಶಕ್ತಿ, ಜ್ಞಾನ, ಆನಂದ, ಸಂಪತ್ತು, ತೇಜಸ್ಸು ಇವುಗಳಿಂದ ಸ್ಪಷ್ಟವಾದ ಆಕಾರವುಳ್ಳ. ಮಮ – ನನಗೆ. ಅಭ್ಯಧಿಕ ಮಿತ್ರಾಯ – ಸರ್ವತೋ ಅಧಿಕನಾಗಿ ಮಿತ್ರ ಎಂದರೆ ಹಿತವನ್ನು ಮಾಡುವ. ನಾರಾಯಣಾಯ – ನಾರಾಯಣ ಎಂದು ಹೆಸರುಳ್ಳ. ತೆ – ನಿನಗೆ. ನಮಃ – ನಮಸ್ಕಾರವು.

ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಈಶಾವಾಸ್ಯೋಪನಿಷತ್ತಿನ ಭಾಷ್ಯವು ಸಮಾಪ್ತವಾಯಿತು.

ಸೂಚನೆ

ಶಕ್ತಿ, ಜ್ಞಾನ, ಆನಂದ, ಸಂಪತ್ತು, ತೇಜಸ್ಸು ಇವುಗಳನ್ನು ಪೂರ್ಣ ಎಂಬ ಅರ್ಥದಲ್ಲಿ ತಿಳಿದರೆ ಅದು ಪರಮಾತ್ಮನ ಜ್ಞಾನವಾಗುವುದು. ಪರಮಾತ್ಮನನ್ನು ನಾರಾಯಣ ಎಂದು ಕರೆಯುವುದರಲ್ಲಿ ಈ ಅರ್ಥ ಇರುವುದು. ಈ ಪರಮಾತ್ಮನೇ 'ಈಶಾವಾಸ್ಯ' ಎಂಬಲ್ಲಿ ಪ್ರಕೃತನಾದ ಈಶನು. ಈ ಪರವಾಗಿ ಭಾಷ್ಯಕಾರರು ಪೂರ್ಣತ್ವವನ್ನು ಉಪಪಾದಿಸುವ ಪರಮಾತ್ಮನ ನಾಮಗಳನ್ನು ಹರಿ, ವಿಷ್ಣು, ರಾಮ ಮುಂತಾದ ರೀತಿಯಲ್ಲಿ ವರ್ಣಿಸಿರುವರು. ಈ ಸಂದರ್ಭದಲ್ಲಿ ಅಧಿಕಾರಿಯು ಇದಾವುದೋ ಒಂದು ವೈಷ್ಣವ ಎಂಬ ಆಗ್ರಹದಿಂದ ಪ್ರಸಕ್ತವಾದುದು ಎಂದು ತಿಳಿಯುವುದು ಜ್ಞಾನ ಪ್ರತಿಬಂಧಕವಾಗುವುದು. ಈ ಪದಗಳು ತತ್ತ್ವದೃಷ್ಟಿಯಿಂದ, ತತ್ತ್ವನಿರೂಪಣೆಯ ಆವಶ್ಯಕತೆಯಿಂದ ಬಂದುವು ಎಂಬುದನ್ನು ಅಧ್ಯಯನದಿಂದ ತಿಳಿಯಬೇಕು.

'ಮಮಾಭ್ಯಧಿಕಮಿತ್ರಾಯ' ಎಂಬ ಭಾಷ್ಯವು ಪ್ರತಿ ಅಧಿಕಾರಿಯೂ ಪರಮಾತ್ಮನನ್ನು ಈರೀತಿ ತಿಳಿದು ಅದೇ ಭಾವವನ್ನು ಅಪರೋಕ್ಷೀಕರಿಸಬೇಕು ಎಂದು ಸೂಚಿಸುವುದು. 'ತೆ' ಎಂಬ ಪದವು ಪರಮಾತ್ಮನೇ ನಮಗೆ ಸರ್ವಸ್ವ ಎಂಬುದನ್ನು ವಿಶೇಷಾಕಾರವಾಗಿ ಅನುಸಂಧಾನಕ್ಕೆ ತರುವುದು. ನಮಃ ಎಂದು 'ನಮ ಉಕ್ತಿಂ' ಎಂಬುದರ ಅನುಷ್ಠಾನ.

ಖಂಡಾರ್ಥದ ಉಪಸಂಹಾರ

ಸಮಸ್ತ ಗುಣಪೂರ್ಣಾಯ ದೋಷದೂರಾಯ ವಿಷ್ಣವೆ ।
ನಮಃ ಶ್ರೀ ಪ್ರಾಣನಾಥಾಯ ಭಕ್ತಾಭೀಷ್ಟಪ್ರದಾಯಿನೆ ॥
ಈಶಾವಾಸ್ಯೋಪನಿಷದೊ ಭಾಷ್ಯಾದ್ಯುಕ್ತಾರ್ಥ ಸಂಗ್ರಹಃ ।
ರಾಘವೇಂದ್ರೇಣ ಯತಿನಾ ಕೃತೋಽಯಂ ಶಿಷ್ಯಯಾಚ್ಞಯಾ ।
ಇತಿ ಶ್ರೀಮದೀಶಾವಾಸ್ಯೋಪನಿಷತ್ ಖಂಡಾರ್ಥಃ ಸಂಪೂರ್ಣಃ ॥

ಸಮಸ್ತ ಗುಣಪೂರ್ಣಾಯ–ಎಲ್ಲ ಗುಣಗಳ ಪೂರ್ಣತೆಯಿರುವ. ದೋಷದೂರಾಯ –ದೋಷದಿಂದ ದೂರನಾದ. ವಿಷ್ಣವೆ–ವಿಷ್ಣುವಿಗೆ. ಶ್ರೀ ಪ್ರಾಣ

ನಾಥಾಯ – ಶ್ರೀ ಮತ್ತು ಪ್ರಾಣ ಇವರ ಸ್ವಾಮಿಯೂದ. ಭಕ್ತಾಭೀಷ್ಟಪ್ರದಾಯಿನೆ – ಜ್ಞಾನಿಗೆ ಅಭೀಷ್ಟವನ್ನು ಕೊಡುವ. ವಿಷ್ಣವೆ – ವಿಷ್ಣುವಿಗೆ. ನಮಃ – ನಮಸ್ಕಾರ.

ಈಶಾವಾಸ್ಯೋಪನಿಷದಃ – ಈಶಾವಾಸ್ಯೋಪನಿಷತ್ತಿನ. ಭಾಷ್ಯಾದ್ಯುಕ್ತಾರ್ಥಸಂಗ್ರಹಃ – ಭಾಷ್ಯಾದಿಗಳಲ್ಲಿ ನಿರೂಪಿತವಾದ ಅರ್ಥದ ಸಂಗ್ರಹವು ಎಂಬ. ಅಯಂ – ಈ ಗ್ರಂಥವು. ರಾಘವೇಂದ್ರೇಣ – ರಾಘವೇಂದ್ರನೆಂಬ. ಯತಿನಾ – ಯತಿಯಿಂದ. ಶಿಷ್ಯಯಾಚ್ಞಯಾ – ಶಿಷ್ಯರ ಅಪೇಕ್ಷೆಯಂತೆ ಕೃತಃ – ರಚಿತವಾಗಿದೆ. (ಶಿಷ್ಯಾಪೇಕ್ಷೆ ಈ ತಪಸ್ಸಿನ ನಿಮಿತ್ತ. 'ಭಾಷ್ಯಾದಿ' ಎಂಬಲ್ಲಿ ' 'ಆದಿ' ಎಂಬ ಪದದಿಂದ ಟೀಕಾ ಮುಂತಾದುದರ ಸಂಗ್ರಹ.)

ಹೀಗೆ ಈಶಾವಾಸ್ಯೋಪನಿಷತ್ತಿನ ಖಂಡಾರ್ಥವು ಸಂಪೂರ್ಣ

ಸೂಚನೆ

'ಭಾಷ್ಯಾದ್ಯುಕ್ತಾರ್ಥಸಂಗ್ರಹಃ' ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಯಾವ ವ್ಯಾಖ್ಯಾನವಾಗಲಿ ಅದು ಭಾಷ್ಯ ಟೀಕಾದಿಗಳಲ್ಲಿ ಸಿದ್ಧವಾದ ಅರ್ಥವನ್ನು ಹೇಳಬೇಕು. ತನ್ನದೇ ಆದ ಅರ್ಥವನ್ನು ಹೇಳುವುದು ಕಲ್ಪನೆ. ಅದು ಅನಾದಿ ವೈದಿಕ ಸಂಪ್ರದಾಯಕ್ಕೆ ವಿರುದ್ಧವಾಗುವುದು. ಈ ನಿಮಿತ್ತ ಯುಕ್ತವಾದ ರೀತಿಯಲ್ಲಿ ವೇದವಾಕ್ಯಾರ್ಥ ಮಾಡಿಕೊಳ್ಳುವುದೇ ಜ್ಞಾನ. ಇದಕ್ಕೆ ಭಾಷ್ಯಾದ್ಯಧ್ಯಯನ ಸಾಧನ.

'ಭಾಷ್ಯಾದಿ' ಎಂಬಲ್ಲಿ ಆದಿ ಪದದಿಂದ ಜಯತೀರ್ಥರ ಟೀಕಾ ಮುಂತಾದ ಗ್ರಂಥಗಳು ಸಂಗೃಹೀತವಾಗುವುವು. ಈ ಪುಟ್ಟ ಗ್ರಂಥದಲ್ಲಿ ಟೀಕಾಗ್ರಂಥದ ವ್ಯಾಖ್ಯಾನವನ್ನು ಸಂಗ್ರಹಿಸಿಲ್ಲ. ಗ್ರಂಥವಿಸ್ತಾರದ ಭಯವೇ ಇದಕ್ಕೆಕಾರಣ. ಇಂತಹ ಪ್ರಸಂಗದಿಂದ ಪ್ರಕೃತವಾದ ಉಪನಿಷತ್ತು ಅನಂತವಾದ ಅರ್ಥವಿಸ್ತಾರವುಳ್ಳುದು; ನಾವು ತಿಳಿಯುತ್ತಿರುವುದು ಅತ್ಯಲ್ಪ ಎಂದು ಗ್ರಹಿಸಬೇಕು. ಇದರಿಂದ ಅರ್ಥಾತ್ ಶಾಸ್ತ್ರಪ್ರತಿಪಾದ್ಯನಾದ ಪರಮಾತ್ಮನ ಪೂರ್ಣತ್ವವು ಅನುಸಂಧಾನಕ್ಕೆ ಬರುವುದು.

ಈಶಭಾಷ್ಯಾರ್ಥ ಖಂಡಾರ್ಥ ವ್ಯಾಖ್ಯಾನಂ ಶ್ರೀಶತುಷ್ಟಯೆ ।
ರಾಘವೇಂದ್ರೇಣ ವಿದುಷಾ ಸ್ಮೃತಂ ಧರ್ಮಾಧಿಕಾರಿಣಾ ॥

ಈಶಾವಾಸ್ಯಮಿದಗ್ಂ ಸರ್ವಂ

ಈ ಲೇಖಕರ ಇತರ ಗ್ರಂಥಗಳು

೧. ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ.
(Mysore University Pnblication.)

೨. The Dvaita philosophy and its place in the Vedanta. (M. U. P.)

೩. ಮಧ್ವಸಿದ್ಧಾಂತ.

೪. Madhva (Dvaita)
Published by Govt of India in the History of philosophy Eastern and Western Vol. I p 322-337.

೫. Brahma Mimamsa.
Cultural Heritage of India
Published by Ramakrishna Research Institute.

೬. Conception of Svatantra.
Mysore University Journal.

೭. Vedic Monism (M. U. J.)

೮. Madhva's Absolutism
(Indian Philosophical Congress, Lahore)

೯. ತಲವಕಾರ [ಅಚ್ಚಿನಲ್ಲಿದೆ]

—o—